ಗುರುವಾರ, ಮಾರ್ಚ್ 31, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani


ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಮುಂಬೈನಲ್ಲಿ ಬುಧವಾರ ಹಮ್ಮಿಕೊಂಡಿದ್ದ ‘ಅಟ್ಯಾಕ್’ ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಬಾಲಿವುಡ್ ನಟ ರಕುಲ್ ಪ್ರೀತ್ ಸಿಂಗ್






ಗುರುವಾರ, ಮಾರ್ಚ್ 31, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 90 | ಪುಟ 18
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಸಿವಿಲ್ ಸರ್ವೀಸಸ್ ಪೂರ್ವಭಾವಿ ಪರೀಕ್ಷೆಗೂ ಮುನ್ನ ಅಣಕು ಪರೀಕ್ಷೆಗಳನ್ನು ಎದುರಿಸಬೇಕು. ಇದರಿಂದ ವೇಗವಾಗಿ ಉತ್ತರಿಸುವುದು ಅಭ್ಯಾಸವಾಗುತ್ತದೆ.



ಆಳ-ಅಗಲ — ಪ್ರಚೋದನಕಾರಿ ಜಾಹೀರಾತಿಗೇ ಒತ್ತು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
58,693 ▲	17,498 ▲	₹53,320 (ಬೆಂಗಳೂರು)	₹69,300 (ಬೆಂಗಳೂರು)	75.94 ▼

‘ಭಯೋತ್ಪಾದಕ’ ಹೇಳಿಕೆ: ಪರಿಷತ್‌ನಲ್ಲಿ ಗದ್ದಲ 8

ಆಯ್ಕೆ ಸಮಿತಿ ಸದಸ್ಯರಾಗಿರುವಾಗಲೇ ಕೆಇಆರ್‌ಸಿ ಅಧ್ಯಕ್ಷ ಸ್ಥಾನಕ್ಕೆ ಅರ್ಜಿ

ಹಿತಾಸಕ್ತಿ ಸಂಘರ್ಷದಲ್ಲಿ ಸಿ.ಎಸ್?

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆಇಆರ್‌ಸಿ) ಅಧ್ಯಕ್ಷರ ಆಯ್ಕೆ ಸಮಿತಿಯ ಸದಸ್ಯರೂ ಆಗಿರುವ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್, ತಾವೇ ಆ ಹುದ್ದೆ ಬಯಸಿ ಅರ್ಜಿಯನ್ನೂ ಸಲ್ಲಿಸಿದ್ದಾರೆ.

ಕೆಇಆರ್‌ಸಿ ಅಧ್ಯಕ್ಷರ ನೇಮಕಾತಿಗೆ ಜನವರಿಯಲ್ಲಿ ಆರಂಭವಾಗಿದ್ದ ಪ್ರಕ್ರಿಯೆ ಬಹುತೇಕ ಅಂತಿಮ ಘಟ್ಟ ತಲುಪಿದೆ. ತಾವೇ ಆಯ್ಕೆ ಸಮಿತಿಯ ಸದಸ್ಯರಾಗಿದ್ದುಕೊಂಡು, ಅದೇ ಹುದ್ದೆಗಾಗಿ ಅರ್ಜಿಯನ್ನೂ ಸಲ್ಲಿಸುವ ಮೂಲಕ ಮುಖ್ಯ ಕಾರ್ಯದರ್ಶಿ ಹಿತಾಸಕ್ತಿ ಸಂಘರ್ಷಕ್ಕೆ ಸಿಲುಕಿದ್ದಾರೆ ಎಂಬ ಚರ್ಚೆ ಅಧಿಕಾರಿಗಳಲ್ಲಿ ನಡೆಯುತ್ತಿದೆ.

‘ಕೆಇಆರ್‌ಸಿ ಅಧ್ಯಕ್ಷ ಹುದ್ದೆಗೆ ಅರ್ಹ ವ್ಯಕ್ತಿಯನ್ನು ಆಯ್ಕೆ ಮಾಡಲು ನೇಮಿಸಿರುವ ಸಮಿತಿಯಲ್ಲಿ ರವಿಕುಮಾರ್ ಸದಸ್ಯರು. ಅವರೇ ಆ ಹುದ್ದೆಗೆ ನೇಮಕ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುವುದು ಕಾನೂನು ಉಲ್ಲಂಘನೆ’ ಎಂದು ನಗರದ ವಕೀಲ ರವಿಕುಮಾರ್ ಎಂಬುವವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ದೂರು ಸಲ್ಲಿಸಿದ್ದಾರೆ.

ಕೆಇಆರ್‌ಸಿ ಅಧ್ಯಕ್ಷರಾಗಿದ್ದ ನಿವೃತ್ತ ಐಎಎಸ್ ಅಧಿಕಾರಿ ಶಂಭು ದಯಾಳ್ ಮೀನಾ 2022ರ ಜನವರಿ 3ರಂದು ನಿವೃತ್ತರಾಗಿದ್ದರು. ಆಯೋಗದ ಅಧ್ಯಕ್ಷರ ಹುದ್ದೆಗೆ ಅರ್ಹ ವ್ಯಕ್ತಿಯನ್ನು ಆಯ್ಕೆಮಾಡಲು ಪ್ರಕ್ರಿಯೆ ಆರಂಭಿಸುವಂತೆ ಕೆಇಆರ್‌ಸಿ ಕಾರ್ಯದರ್ಶಿಯು ಇಂಧನ ಇಲಾಖೆಗೆ 2021ರ ಜುಲೈ 9ರಂದು ಪತ್ರ ಬರೆದಿದ್ದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಬಿ.ಎ. ಪಾಟೀಲ, ಪಿ. ರವಿಕುಮಾರ್ ಮತ್ತು ಕೇಂದ್ರೀಯ ವಿದ್ಯುತ್ ನಿಯಂತ್ರಣ ಆಯೋಗದ (ಸಿಇಆರ್‌ಸಿ) ಮುಖ್ಯ ಕಾರ್ಯದರ್ಶಿ ಪಿ.ಕೆ. ಪೂಜಾರಿ ಅವರನ್ನೊಳಗೊಂಡ ಸಮಿತಿಯನ್ನು ನೇಮಕ ಮಾಡಿ 2021ರ ಡಿಸೆಂಬರ್ 27ರಂದು ಆದೇಶ ಹೊರಡಿಸಲಾಗಿತ್ತು. ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರನ್ನು ಆಯ್ಕೆ ಸಮಿತಿಯ ಸಂಯೋಜಕರನ್ನಾಗಿ ನೇಮಿಸಲಾಗಿತ್ತು.

‘ಸಮಿತಿಯು ನೇಮಕಗೊಂಡ ಮೂರು ತಿಂಗಳ ಒಳಗಾಗಿ ಕೆಇಆರ್‌ಸಿ ಅಧ್ಯಕ್ಷರ ಹುದ್ದೆಗೆ ನೇಮಕಗೊಳ್ಳಲು ಅರ್ಹರಾದ ವ್ಯಕ್ತಿಗಳ ಹೆಸರುಗಳನ್ನು ಶಿಫಾರಸು ಮಾಡಬೇಕು. ವಿದ್ಯುತ್ ಕಾಯ್ದೆಯಲ್ಲಿ ನಿಗದಿಪಡಿಸಿರುವ ಅರ್ಹತೆಗಳು ಈ ವ್ಯಕ್ತಿಗಳಲ್ಲಿವೆ ಎಂಬುದು ಖಾತರಿಯಾದ ಬಳಿಕವೇ ಶಿಫಾರಸು ಸಲ್ಲಿಸಬೇಕು’ ಎಂದು ಆಯ್ಕೆ ಸಮಿತಿಗೆ ನಿರ್ದೇಶನ ನೀಡಲಾಗಿತ್ತು.

ಸಭೆಯಲ್ಲಿ ಭಾಗಿ: 2022ರ ಜನವರಿ 19ರಂದು ನಗರದ ಕೆ.ಆರ್. ವೃತ್ತದಲ್ಲಿರುವ ಬೆಸ್ಕಾಂ ಆಡಳಿತ ಮಂಡಳಿಯ ಸಭಾಂಗಣದಲ್ಲಿ ಕೆಇಆರ್‌ಸಿ ಅಧ್ಯಕ್ಷರ ಆಯ್ಕೆ ಸಮಿತಿಯ ಸಭೆ ನಡೆದಿತ್ತು.

4ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

‘ಆಯ್ಕೆ ಸಮಿತಿಯಿಂದ ಹೊರ ಬಂದಿದ್ದೇನೆ’



‘ಕೆಇಆರ್‌ಸಿ ಅಧ್ಯಕ್ಷರ ನೇಮಕಾತಿಯ ಆಯ್ಕೆ ಸಮಿತಿಯಲ್ಲಿ ನಾನು ಸದಸ್ಯನಾಗಿದ್ದುದು ನಿಜ. ಈಗ ಅದೇ ಹುದ್ದೆಗೆ ನೇಮಕಾತಿ ಬಯಸಿ ಅರ್ಜಿ ಸಲ್ಲಿಸಿರುವುದೂ ಸತ್ಯ. ಅರ್ಜಿ ಸಲ್ಲಿಸಿದ ಬಳಿಕ ಆಯ್ಕೆ ಸಮಿತಿಯಿಂದ ನನ್ನನ್ನು ಕೈಬಿಡುವಂತೆ ಪತ್ರ ನೀಡಿದ್ದೇನೆ. ಮುಂದಿನ ಸಭೆಗಳಿಗೆ ಆಹ್ವಾನ ನೀಡದಂತೆಯೂ ಕೋರಿದ್ದೇನೆ. ಈಗ ಹಿತಾಸಕ್ತಿ ಸಂಘರ್ಷದ ಪ್ರಶ್ನೆ ಉದ್ಭವಿಸುವುದಿಲ್ಲ ’ ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಆದರೆ, ಕೆಇಆರ್‌ಸಿ ಅಧ್ಯಕ್ಷರ ಆಯ್ಕೆ ಸಮಿತಿಯ ಸದಸ್ಯರ ಸ್ಥಾನದಿಂದ ರವಿಕುಮಾರ್ ಅವರನ್ನು ಕೈಬಿಟ್ಟು ಇತರರನ್ನು ನೇಮಿಸುವ ಕುರಿತು ಈವರೆಗೂ ಯಾವುದೇ ಅಧಿಸೂಚನೆ ಪ್ರಕಟವಾಗಿಲ್ಲ.

ಬೊಕ್ಕಸಕ್ಕೆ ನಷ್ಟ ಮಾಡಿರುವ ಆರೋಪ

‘ರವಿಕುಮಾರ್ ಅವರು ಇಂಧನ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ನಾಗಾರ್ಜುನ ಮತ್ತು ಅದಾನಿ ಕಂಪನಿಗಳಿಂದ ವಿದ್ಯುತ್ ಖರೀದಿಯಲ್ಲಿ ಹೆಚ್ಚಿನ ದರ ನಿಗದಿ ಮಾಡುವ ಮೂಲಕ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ್ದಾರೆ. ಈ ವಿಚಾರವನ್ನೂ ಕೆಇಆರ್‌ಸಿ ಅಧ್ಯಕ್ಷರ ನೇಮಕದ ಮುನ್ನ ಪರಿಶೀಲಿಸಬೇಕು’ ಎಂದು ರಾಜ್ಯಪಾಲರಿಗೆ ನೀಡಿದ ದೂರಿನಲ್ಲಿ ಒತ್ತಾಯಿಸಲಾಗಿದೆ.

ವಿಶ್ವಾಸಾರ್ಹ ಸುದ್ದಿ ಮಾಧ್ಯಮವಾಗಿ ಜನಪ್ರೀತಿ ಗಳಿಸಿರುವ ಪ್ರಜಾವಾಣಿಯ ಟ್ವಿಟರ್ (Twitter.com/prajavani) ಅನುಯಾಯಿಗಳ ಸಂಖ್ಯೆ **2.05** ಲಕ್ಷ ದಾಟಿದೆ.


ಹೊಸ ದಾಖಲೆಗೆ ಕಾರಣರಾದ ಓದುಗರಿಗೆ ಧನ್ಯವಾದಗಳು

ಯಾವುದಕ್ಕೆ ಪ್ರತಿಕ್ರಿಯೆ ಕೊಡಬೇಕು ಗೊತ್ತಿದೆ: ಬೊಮ್ಮಾಯಿ

ಹಲಾಲ್: ನಿಲುವಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಹಲಾಲ್‌ಗೆ ವಿರೋಧ ವ್ಯಕ್ತವಾಗುತ್ತಿರುವ ಬಗ್ಗೆ ಸರ್ಕಾರದ ನಿಲುವು ಸ್ಪಷ್ಟಪಡಿಸಲು ನಿರಾಕರಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಯಾವುದಕ್ಕೆ ಪ್ರತಿಕ್ರಿಯೆ ಕೊಡಬೇಕೊ ಅದಕ್ಕೆ ಕೊಡುತ್ತೇವೆ. ಯಾವುದಕ್ಕೆ ಕೊಡಬೇಕು, ಕೊಡಬಾರದು ಎಂದು ಗೊತ್ತಿದೆ’ ಎಂದರು.



ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಹಲಾಲ್ ವಿರುದ್ಧ ಅಭಿಯಾನ ವಿಚಾರವಾಗಿ ಸರ್ಕಾರದ ನಿಲುವು ಏನೆಂದು ಮುಂದೆ ತಿಳಿಸುತ್ತೇವೆ. ಎಲ್ಲ ಸಂಘಟನೆಗಳು ಹಲವಾರು ವಿಚಾರದಲ್ಲಿ ವಿರೋಧ ಮಾಡುತ್ತಲೇ ಇರುತ್ತವೆ. ಆದರೆ, ಇದಕ್ಕೆಲ್ಲ ಸರ್ಕಾರ ತನ್ನ ನಿಲುವು ಹೇಳುತ್ತಾ ಇರಲು ಆಗುವುದಿಲ್ಲ. ಯಾವಾಗ ನಿಲುವು ವ್ಯಕ್ತಪಡಿಸಬೇಕೊ ಆಗ ವ್ಯಕ್ತಪಡಿಸುತ್ತೇವೆ’ ಎಂದು ಹೇಳಿದರು.

ಪ್ರಗತಿಪರರು, ಸಾಹಿತಿಗಳು ಪತ್ರ ಬರೆದಿರುವ ಕುರಿತು ಕೇಳಿದ ಪ್ರಶ್ನೆಗೆ, ‘ಪತ್ರದಲ್ಲಿರುವ ಅಂಶಗಳನ್ನು ಅಧ್ಯಯನ ಮಾಡಿ ಯಾವ ವಿಚಾರದ ಬಗ್ಗೆ ಏನು ಹೇಳಿದ್ದಾರೆ, ವಾಸ್ತವಾಂಶ ಏನಿದೆ? ಅವರು ಹೇಳಿರುವ ವಿಚಾರವನ್ನು ಪರಿಗಣಿಸಿ, ಎತ್ತಿರುವ ವಿಚಾರಗಳನ್ನು ಯಾವ ರೀತಿ ನಿಭಾಯಿಸಬೇಕು ಎಂದು ತೀರ್ಮಾನ ಮಾಡುತ್ತೇವೆ’ ಎಂದರು.

ಬಲಪಂಥೀಯ ಸಂಘಟನೆಗಳಿಂದ ಪ್ರಚೋದನೆ ವಿಚಾರವಾಗಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ನಮ್ಮ ಸರ್ಕಾರ ಅಭಿವೃದ್ಧಿ ಕಡೆಗೆ ಮಾತ್ರ ಗಮನ ಕೊಡುತ್ತಿದೆ. ಬಲಪಂಥೀಯ, ಎಡಪಂಥೀಯ ಎನ್ನುವುದು ಇಲ್ಲ. ನಾವು ಶಾಂತಿ, ಸಾಮಾನ್ಯ ಜನರ ಭದ್ರತೆ, ಅಭಿವೃದ್ಧಿಗಳಂಥ ಸಿದ್ಧಾಂತಗಳನ್ನು ನಂಬುತ್ತೇವೆ’ ಎಂದು ತಿಳಿಸಿದರು.

ಪಠ್ಯಪುಸ್ತಕದಿಂದ ಟಿಪ್ಪು ಸುಲ್ತಾನ್ ಕೈಬಿಡುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಮುಖ್ಯಮಂತ್ರಿ, ಪ್ರಶ್ನೆ ಕೇಳಿಸಿಕೊಂಡರೂ ಕೇಳಿಸಿಕೊಳ್ಳದಂತೆ ತೆರಳಿದರು.

‘ಇದುವರೆಗೆ ಬಜೆಟ್ ಅನುಷ್ಠಾನಕ್ಕೆ ಅನುಮೋದನೆ ಸೆಪ್ಟೆಂಬರ್, ಅಕ್ಟೋಬರ್ ಆಗುತ್ತಿತ್ತು. ಇದರಿಂದ ಯೋಜನೆಗಳ ಅನುಷ್ಠಾನ ವಿಳಂಬವಾಗುತ್ತಿತ್ತು. ಹೀಗಾಗಬಾರದು ಎಂದು ಏಪ್ರಿಲ್ ತಿಂಗಳಾಂತ್ಯದಲ್ಲಿ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ’ ಎಂದು ತಿಳಿಸಿದರು.

ಯಶಸ್ವಿನಿ ಯೋಜನೆ ಮರುಜಾರಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹಕಾರ ಸಂಸ್ಥೆಗಳ ಸದಸ್ಯರು ಮತ್ತು ಅವರ ಕುಟುಂಬದ ಸದಸ್ಯರಿಗೆ ಆರೋಗ್ಯ ವಿಮೆ ಒದಗಿಸುವ ಯಶಸ್ವಿನಿ ಯೋಜನೆಯನ್ನು ಮರು ಜಾರಿಗೊಳಿಸಲು ಸಹಕಾರ ಇಲಾಖೆ ಬುಧವಾರ ಆದೇಶ ಹೊರಡಿಸಿದೆ.

2003ರಲ್ಲಿ ಯಶಸ್ವಿನಿ ಯೋಜನೆಯನ್ನು ಆರಂಭಿಸಲಾಗಿತ್ತು. 14 ವಿಭಾಗಗಳಲ್ಲಿ 823 ವಿಧದ ಶಸ್ತ್ರಚಿಕಿತ್ಸೆಗಳಿಗೆ ನಗದುರಹಿತ ಸೌಲಭ್ಯ ಇತ್ತು. 2018ರಲ್ಲಿ ಈ ಯೋಜನೆಯನ್ನು ಸಹಕಾರ ಇಲಾಖೆಯಿಂದ ಆರೋಗ್ಯ ಇಲಾಖೆಗೆ ವಹಿಸಲಾಗಿತ್ತು. ಆರೋಗ್ಯ ಇಲಾಖೆಯು 2018ರ ಮೇ 31ರಂದು ಯಶಸ್ವಿನಿ ಯೋಜನೆಯನ್ನು ಆರೋಗ್ಯ ಕರ್ನಾಟಕ ಯೋಜನೆಯಲ್ಲಿ ವಿಲೀನಗೊಳಿಸಿತ್ತು. ಆ ಬಳಿಕ ಸಹಕಾರ ಸಂಘಗಳ ಸದಸ್ಯರಿಗೆ ಪ್ರತ್ಯೇಕ ಆರೋಗ್ಯ ವಿಮೆ ಸ್ಥಗಿತವಾಗಿತ್ತು.

ಯಶಸ್ವಿನಿ ಯೋಜನೆಯನ್ನು ಪುನಃ ಜಾರಿಗೊಳಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಸಕ್ತ ವರ್ಷದ ಬಜೆಟ್‌ನಲ್ಲಿ ಪ್ರಕಟಿಸಿದ್ದರು. ಅದರಂತೆ ಯೋಜನೆಯ ಜಾರಿಗೆ ಆದೇಶ ಹರಡಿಸಿದ್ದು, ‘ಯಶಸ್ವಿನಿ ಟ್ರಸ್ಟ್’ ಪುನರ್‌ರಚನೆ, ಆಡಳಿತ ನಿಯಂತ್ರಣ, ಸದಸ್ಯತ್ವ ನೋಂದಣಿ, ಚಿಕಿತ್ಸೆಗಳ ಪಟ್ಟಿ ಹಾಗೂ ದರ ಪಟ್ಟಿ ಸಿದ್ಧಪಡಿಸುವುದು, ಸೇವಾ ಸಮಾಲೋಚಕರ ನೇಮಕ ಮತ್ತಿತರ ಪ್ರಕ್ರಿಯೆಗಳನ್ನು ಆರಂಭಿಸುವಂತೆ ಸಹಕಾರ ಸಂಘಗಳ ರಿಜಿಸ್ಟ್ರಾರ್‌ಗೆ ನಿರ್ದೇಶನ ನೀಡಲಾಗಿದೆ.

‘ರೈತರ ಆರೋಗ್ಯದ ದೃಷ್ಟಿಯಿಂದ ಯಶಸ್ವಿನಿ ಯೋಜನೆಯನ್ನು ಮತ್ತೆ ಆರಂಭಿಸಿದೆ. ಈ ಯೋಜನೆಗೆ ₹ 300 ಕೋಟಿ ಮೀಸಲಿಡಲಾಗಿದೆ. ಯೋಜನೆಯಲ್ಲಿ ಕೆಲವು ಬದಲಾವಣೆ ತರಲು ಉದ್ದೇಶಿಸಲಾಗಿದೆ. ಎರಡರಿಂದ ಮೂರು ವಾರಗಳಲ್ಲಿ ಯಶಸ್ವಿನಿ ಯೋಜನೆ ಜಾರಿ ಮಾಡುತ್ತೇವೆ’ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೇಂದ್ರ ನೌಕರರ ತುಟ್ಟಿಭತ್ಯೆ ಶೇ 3ರಷ್ಟು ಹೆಚ್ಚಳ

ನವದೆಹಲಿ(ಪಿಟಿಐ): ಕೇಂದ್ರ ಸರ್ಕಾರಿ ನೌಕರರಿಗೆ ನೀಡುವ ತುಟ್ಟಿಭತ್ಯೆಯನ್ನು (ಡಿಎ) ಈ ವರ್ಷದ ಜನವರಿ ಒಂದರಿಂದ ಅನ್ವಯವಾಗುವಂತೆ ಶೇಕಡ 3ರಷ್ಟು ಹೆಚ್ಚಿಸಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಪ್ರಸ್ತುತ ಮೂಲ ವೇತನದ ಶೇಕಡ 31ರಷ್ಟು ತುಟ್ಟಿಭತ್ಯೆ ನೀಡಲಾಗುತ್ತಿದ್ದು, ಇದನ್ನು ಈಗ 34ಕ್ಕೆ ಹೆಚ್ಚಿಸಲಾಗಿದೆ. ಕೇಂದ್ರ ಸರ್ಕಾರದ 47.68 ಲಕ್ಷ ನೌಕರರು ಮತ್ತು 68.62 ಲಕ್ಷ ಪಿಂಚಣಿದಾರರಿಗೆ ಇದರಿಂದ ಅನುಕೂಲವಾಗಲಿದೆ.

ಏಳನೇ ವೇತನ ಆಯೋಗದ ಶಿಫಾರಸುಗಳನ್ನು ಆಧರಿಸಿ ತುಟ್ಟಿಭತ್ಯೆಯನ್ನು ಪರಿಷ್ಕರಿಸಲಾಗಿದೆ. ಇದರಿಂದಾಗಿ ಕೇಂದ್ರ ಸರ್ಕಾರ ವಾರ್ಷಿಕ ₹9,544.50 ಕೋಟಿಯನ್ನು ಹೆಚ್ಚುವರಿಯಾಗಿ ಭರಿಸಬೇಕಾಗುತ್ತದೆ.

‘ಸೂಪರ್‌ನ್ಯೂಮರಿ ಸೀಟು ಕಲ್ಪಿಸಿ’

ನವದೆಹಲಿ (ಪಿಟಿಐ): ಕೋವಿಡ್ ಕಾರಣದಿಂದ ಪೋಷಕರನ್ನು ಕಳೆದುಕೊಂಡು ಅನಾಥರಾಗಿರುವ ವಿದ್ಯಾರ್ಥಿಗಳಿಗೆ ಎಲ್ಲ ವಿಶ್ವವಿದ್ಯಾಲಯಗಳು ಸೂಪರ್‌ನ್ಯೂಮರಿ ಸೀಟುಗಳನ್ನು ಸೃಷ್ಟಿಸಬೇಕು ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸೂಚಿಸಿದೆ.

ಈ ಕುರಿತು ದೇಶದ ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ಯುಜಿಸಿ ಪತ್ರ ಬರೆದಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪಾಕಿಸ್ತಾನ: ಮಿತ್ರ ಪಕ್ಷ ದೂರ ಇಮ್ರಾನ್ ಭವಿಷ್ಯ ಅತಂತ್ರ

ಇಸ್ಲಾಮಾಬಾದ್(ಎಎಫ್‌ಪಿ/ಪಿಟಿಐ): ವಿರೋಧ ಪಕ್ಷಗಳು ಮಂಡಿಸಿರುವ ಅವಿಶ್ವಾಸ ನಿರ್ಣಯದ ಮೇಲೆ ಮತದಾನ ನಡೆಯುವ ಮುನ್ನವೇ, ಎಂಕ್ಯೂಎಂ–ಪಿ ಹಾಗೂ ಬಿಎಪಿ ಪಕ್ಷಗಳು ಆಡಳಿತಾರೂಢ ಮೈತ್ರಿಕೂಟದಿಂದ ಹೊರನಡೆದಿವೆ. ಹೀಗಾಗಿ ಪಾಕಿಸ್ತಾನ ಪ್ರಧಾನಿ ಇಮ್ರಾನ್ ಖಾನ್ ಅವರ ಭವಿಷ್ಯ ಮತ್ತಷ್ಟು ಅತಂತ್ರವಾಗಿದೆ.



ಈ ನಡುವೆ, ರಾಷ್ಟ್ರವನ್ನು ಉದ್ದೇಶಿಸಿ ಬುಧವಾರ ಮಾತನಾಡುವುದಾಗಿ ಪ್ರಕಟಿಸಿದ್ದ ಇಮ್ರಾನ್ ಖಾನ್, ದಿಢೀರನೇ ಈ ಕಾರ್ಯಕ್ರಮವನ್ನು ರದ್ದು ಪಡಿಸಿದರು. ಅವರು ಸೇನೆ ಮತ್ತು ಗುಪ್ತಚರ ಇಲಾಖೆ ಮುಖ್ಯಸ್ಥರೊಂದಿಗೆ ಚರ್ಚೆ, ರಾಷ್ಟ್ರೀಯ ಭದ್ರತಾ ಮಂಡಳಿಯ ಸಭೆಯನ್ನೂ ನಡೆಸಿದರು.

ಈ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅವರು ಸಂಪುಟ ಸಭೆಯನ್ನು ನಡೆಸಿದರು. ‘ಅವರ ಪದಚ್ಯುತಿಗೆ ವಿದೇಶಗಳು ಪಿತೂರಿ ನಡೆಸಿವೆ’ ಎಂಬುದಕ್ಕೆ ಸಂಬಂಧಿಸಿದ್ದು ಎನ್ನಲಾದ ಪತ್ರದಲ್ಲಿನ ಮಾಹಿತಿಯನ್ನು ಅವರು ಸಂಪುಟದ ಸಹೋದ್ಯೋಗಿಗಳಿಗೆ ವಿವರಿಸಿದರು. ಹಿರಿಯ ಪತ್ರಕರ್ತರೊಂದಿಗೆ ನಂತರ ನಡೆಸಿದ ಸಭೆಯಲ್ಲಿಯೂ ಈ ಮಾಹಿತಿ ಹಂಚಿಕೊಂಡರು ಎಂದು ಮೂಲಗಳು ಹೇಳಿವೆ.

ಆತಿಥೇಯ ರಾಷ್ಟ್ರವೊಂದರ ಅಧಿಕಾರಿಗಳೊಂದಿಗೆ ಪಾಕಿಸ್ತಾನ ರಾಯಭಾರ ಕಚೇರಿ ಅಧಿಕಾರಿಗಳು ನಡೆಸಿದ್ದ ಸಭೆಯಲ್ಲಿ ಚರ್ಚೆಯಾದ ವಿಷಯಗಳು ‘ಪತ್ರ’ದಲ್ಲಿವೆ ಎಂದು ‘ಎಆರ್‌ವೈ ನ್ಯೂಸ್’ ಚಾನೆಲ್ ವರದಿ ಮಾಡಿದೆ.

‘ಉಕ್ರೇನ್‌ಗೆ ಸಂಬಂಧಿಸಿ ಪಾಕಿಸ್ತಾನದ ನಿಲುವು ಹಾಗೂ ರಷ್ಯಾದೊಂದಿಗಿನ ಮೈತ್ರಿ ಬಗ್ಗೆ ಆತಿಥೇಯ ರಾಷ್ಟ್ರ ಅಸಮಾಧಾನ ಹೊರಹಾಕಿದೆ. ನಾನು ಅಧಿಕಾರದಲ್ಲಿ ಮುಂದುವರಿದರೆ ಪಾಕಿಸ್ತಾನ ಮತ್ತು ಆ ರಾಷ್ಟ್ರದ ನಡುವಿನ ಸಂಬಂಧ ಹದಗೆಡಲಿದೆ ಎಂಬುದು ಪತ್ರದಲ್ಲಿತ್ತು ಎಂದು ಇಮ್ರಾನ್‌ಖಾನ್ ಅವರು ಪತ್ರಕರ್ತರಿಗೆ ಹೇಳಿದರು’ ಎಂದೂ ಚಾನೆಲ್ ವರದಿ ಮಾಡಿದೆ.

ರಾಜೀನಾಮೆಗೆ ಆಗ್ರಹ: ಸರ್ಕಾರ ಬಹುಮತ ಕಳೆದುಕೊಂಡಿದೆ. ಹಾಗಾಗಿ, ಅವಿಶ್ವಾಸ ನಿರ್ಣಯದ ಮೇಲೆ ಮತದಾನ ನಡೆಯುವ ಮೊದಲೇ ಇಮ್ರಾನ್‌ಖಾನ್ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ವಿರೋಧ ಪಕ್ಷಗಳು ಆಗ್ರಹಿಸಿವೆ.

‘ಪಕ್ಷವು ಪಾಕಿಸ್ತಾನ ಪೀಪಲ್ ಪಾರ್ಟಿ (ಪಿಪಿಪಿ) ಹಾಗೂ ಪಾಕಿಸ್ತಾನ ಮುಸ್ಲಿಂ ಲೀಗ್ (ಪಿಎಂಎಲ್‌-ಎನ್) ನೇತೃತ್ವದ ವಿರೋಧ ಪಕ್ಷದೊಂದಿಗೆ ಕೈಜೋಡಿಸಿರುವುದಾಗಿ ಹೇಳಿರುವ ಎಂಕ್ಯೂಎಂ–ಪಿ, ತನ್ನ ಏಳು ಜನ ಸಂಸದರು ಅವಿಶ್ವಾಸ ನಿರ್ಣಯದ ಪರವಾಗಿ ಮತ ಚಲಾಯಿಸಲಿದ್ದಾರೆ ಎಂದಿದೆ. ಬಲೂಚಿಸ್ತಾನ ಅವಾಮಿ ಪಾರ್ಟಿ (ಬಿಎಪಿ) ಐವರು ಸದಸ್ಯರನ್ನು ಹೊಂದಿದೆ.

ಆಡಳಿತಾರೂಢ ಪಿಟಿಐನ 10ಕ್ಕೂ ಹೆಚ್ಚು ಸಂಸದರು ಕೂಡ ಅಡ್ಡ ಮತದಾನ ಮಾಡುವ ಸುಳಿವು ನೀಡಿದ್ದಾರೆ. ಹಾಗಾಗಿ, ಈ ಸಂಸದರು ಮತದಾನದಿಂದ ದೂರ ಉಳಿಯುವಂತೆ ನೋಡಿಕೊಳ್ಳಲು ಪಿಟಿಐ ಮುಖಂಡರಿಂದ ಕಸರತ್ತು ಮುಂದುವರಿದಿದೆ.

ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ರಾಜೀನಾಮೆ ನೀಡುವಂತೆ ಪಾಕ್ ಸೇನಾ ಮುಖ್ಯಸ್ಥರು ಸೂಚಿಸಿದ್ದಾರೆ ಎಂದು ವರದಿಯಾಗಿತ್ತು. ಆದರೆ ಇದನ್ನು ನಿರಾಕರಿಸಿರುವ ಪಾಕಿಸ್ತಾನದ ಮಾಹಿತಿ ಸಚಿವ ಫವಾದ್ ಚೌಧರಿ, ‘ಸೇನಾ ಮುಖ್ಯಸ್ಥರು ಪ್ರಧಾನಿಯ ರಾಜೀನಾಮೆಯನ್ನು ಕೇಳಿಲ್ಲ, ಪ್ರಧಾನಿಯವರೂ ರಾಜೀನಾಮೆ ನೀಡುವುದಿಲ್ಲ’ ಎಂದಿದ್ದಾರೆ.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಿಂದ ತನಿಖೆ: ಸಚಿವ ಮುರುಗೇಶ ನಿರಾಣಿ ಭರವಸೆ

‘ಕಾನ್‌ಕಾರ್ಡ್’ ಜಮೀನು ಹಂಚಿಕೆ ಅಕ್ರಮ: ಆರೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕೆಐಎಡಿಬಿ ವತಿಯಿಂದ ನೀಡಿರುವ ಜಮೀನಿಗೆ ಸಂಬಂಧಿಸಿದಂತೆ ಅಕ್ರಮ
- ಸದನ ಸಮಿತಿಯಿಂದ ತನಿಖೆಗೆ ವಿಪಕ್ಷ ಸದಸ್ಯರ ಆಗ್ರಹ

ಬೆಂಗಳೂರು: ಸಾದರಮಂಗಲ (ವೈಟ್ ಫೀಲ್ಡ್) ಕೈಗಾರಿಕಾ ಪ್ರದೇಶದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಐಎಡಿಬಿ) ವತಿಯಿಂದ ಕಾನ್‌ಕಾರ್ಡ್ ಸಂಸ್ಥೆಗೆ ನೀಡಿರುವ ಜಮೀನಿಗೆ ಸಂಬಂಧಿಸಿದಂತೆ ವ್ಯಾಪಕ ಅಕ್ರಮಗಳು ನಡೆದಿವೆ. ಈ ಬಗ್ಗೆ ಸದನ ಸಮಿತಿಯಿಂದ ತನಿಖೆ ನಡೆಸಬೇಕು ಎಂದು ವಿರೋಧ ಪಕ್ಷಗಳ ಸದಸ್ಯರು ಬುಧವಾರ ವಿಧಾನ ಪರಿಷತ್‌ನಲ್ಲಿ ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ ಅವರು, ‘1,696 ಕೋಟಿ ಮೌಲ್ಯದ 78 ಎಕರೆ ಜಮೀನನ್ನು ಕೇವಲ ₹39 ಕೋಟಿಗೆ ನೀಡಲಾಗಿದೆ. ಕೈಗಾರಿಕೆ ಹೆಸರಿನಲ್ಲಿ ಭೂಮಿ ಪಡೆದು ರಿಯಲ್ ಎಸ್ಟೇಟ್ ದಂಧೆ ನಡೆಸಿ ಸರ್ಕಾರಕ್ಕೂ ವಂಚನೆ ಮಾಡಲಾಗಿದೆ’ ಎಂದು ದೂರಿದರು.

‘ಸುಮಾರು ₹50 ಕೋಟಿ ಮೌಲ್ಯದ ಮರಗಳು ಈ ಪ್ರದೇಶದಲ್ಲಿದ್ದವು. ಈ ಮರಗಳ ಮೌಲ್ಯದ ಮೊತ್ತವನ್ನು ಸಹ ಸರ್ಕಾರಕ್ಕೆ ನೀಡಿಲ್ಲ. ಸರ್ಕಾರ ಈ ಕಂಪನಿಗೆ ಮಂಜೂರು ಮಾಡಿರುವ ಭೂಮಿಯನ್ನು ರದ್ದುಪಡಿಸಿ ತನಿಖೆ ನಡೆಸಬೇಕು’ ಎಂದು ಒತ್ತಾಯಿಸಿದರು.

ವಿರೋಧ ಪಕ್ಷದ ನಾಯಕ ಹರಿಪ್ರಸಾದ್, ‘ಈ ಪ್ರಕರಣದಲ್ಲಿ ಸಾವಿರಾರು ಕೋಟಿ ರೂಪಾಯಿ ಅವ್ಯವಹಾರ ನಡೆದಿದ್ದು, ಸದನ ಸಮಿತಿ ರಚಿಸಿ’ ಎಂದು ಒತ್ತಾಯಿಸಿದರು.

ಕೈಗಾರಿಕೆ ಸಚಿವ ಮುರುಗೇಶ ನಿರಾಣಿ ಪ್ರತಿಕ್ರಿಯಿಸಿ, ‘ಮೇಲ್ನೋಟಕ್ಕೆ ಕಂಪನಿ ತಪ್ಪು ಮಾಡಿರುವುದು ಕಂಡು ಬಂದಿದೆ. ಈ ಬಗ್ಗೆ ಸಮಗ್ರವಾಗಿ ಸರ್ವೇ ಮಾಡಿಸಲಾಗುವುದು. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಿಂದ ತನಿಖೆ ನಡೆಸಲಾಗುವುದು. ಯಾರನ್ನೂ ರಕ್ಷಿಸುವ ಉದ್ದೇಶ ಇಲ್ಲ’ ಎಂದು ಸಚಿವರು ಭರವಸೆ ನೀಡಿದರು.

‘2007ರಲ್ಲಿ ಪ್ರತಿ ಎಕರೆಗೆ ₹50 ಲಕ್ಷದಂತೆ 78 ಎಕರೆಯನ್ನು ಈ ಕಂಪನಿಗೆ ಕೆಐಎಡಿಬಿ ಜಮೀನು ಹಂಚಿಕೆ ಮಾಡಿತ್ತು. ನಂತರ, ಕಂಪನಿಯು ಎಂಬೆಸ್ಸಿ ಈಸ್ಟ್ ಬ್ಯುಸಿನೆಸ್ ಪಾರ್ಕ್ ಪ್ರೈವೇಟ್ ಲಿಮಿಟೆಡ್ ಎಂದು ಬದಲಾಯಿಸಿತ್ತು. ಸಹೋದರ ಸಂಸ್ಥೆಗಳಾಗಿರುವುದರಿಂದ ನಿರ್ದೇಶಕರು ಬದಲಾಗಿಲ್ಲ ಎನ್ನುವ ಸಮರ್ಥನೆಯನ್ನು ಕಂಪನಿ ನೀಡಿದೆ’ ಎಂದು ವಿವರಿಸಿದರು.


‘ದಾಬಸ್‌ಪೇಟೆಯಲ್ಲೂ ಎಂಬೆಸ್ಸಿ ಇಂಡಸ್ಟ್ರಿಯಲ್ ಪಾರ್ಕ್ ಕಂಪನಿಗೆ 2021ರ ಜೂನ್ 3ರಂದು 125 ಎಕರೆ ಜಮೀನು ನೀಡಲಾಗಿದೆ. ಪ್ರತಿ ಎಕರೆಗೆ ₹1.5 ಕೋಟಿ ಮೌಲ್ಯ ನಿಗದಿಪಡಿಸಲಾಗಿತ್ತು. ಆಗ ಒಟ್ಟು ಮೊತ್ತದಲ್ಲಿನ ಶೇ 30ರಷ್ಟು ಮುಂಗಡ ಹಣವಾದ ₹57.37 ಕೋಟಿ ಪಾವತಿಸಿಕೊಂಡು ಜಮೀನು ಹಂಚಿಕೆ ಮಾಡಲಾಗಿದೆ’ ಎಂದು ತಿಳಿಸಿದರು.

‘ಷರತ್ತುಗಳ ಅನ್ವಯ ಈ ಕಂಪನಿ 2021ರ ಸೆಪ್ಟೆಂಬರ್ 3ರ ಒಳಗೆ ಬಾಕಿ ಉಳಿದಿದ್ದ ₹136.77 ಕೋಟಿ ಮೊತ್ತವನ್ನು ಪಾವತಿಸಬೇಕಾಗಿತ್ತು. ಆದರೆ, ಕಂಪನಿಯು ನಿವೇಶನದ ಆಕಾರ ಬದಲಾಯಿಸಲು ಕೋರಿತ್ತು. ಈ ಕಂಪನಿಗೆ ಹಂಚಿಕೆಯಾದ ಜಮೀನಿನ ಪೈಕಿ ಮೂರು ಎಕರೆ ಜಮೀನಿನ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಪ್ರತಿ ಎಕರೆಗೆ ₹ 1.39 ಕೋಟಿ ಬಾಕಿ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲು ಸೂಚಿಸಲಾಗಿದೆ’ ಎಂದು ವಿವರಿಸಿದರು.

ನಿರಾಣಿ ಬಗ್ಗೆ ಆಯನೂರು ಅಸಮಾಧಾನ

ಈ ಪ್ರಕರಣದ ಬಗ್ಗೆ ಬಿಜೆಪಿಯ ಆಯನೂರು ಮಂಜುನಾಥ್ ಅವರು ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರ ಬಗ್ಗೆಯೇ ಸದನದಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

‘ನನಗೆ ಸಚಿವರ ಬಗ್ಗೆಯೇ ಅಸಮಾಧಾನ ಇದೆ. ಕಡಿಮೆ ದರಕ್ಕೆ ಜಮೀನು ನೀಡಲಾಗಿದೆ. ನಂತರ, ಬೇರೆ, ಬೇರೆ ದರಗಳಿಗೆ ಇನ್ನೊಂದು ಕಂಪನಿಗೆ ಜಮೀನು ನೀಡಿರುವುದು ನಿಮ್ಮ ಗಮನಕ್ಕೆ ಬರಲಿಲ್ಲವೇ? ಬಂದಿದ್ದರೆ ಏಕೆ ಕ್ರಮ ಕೈಗೊಂಡಿಲ್ಲ. ಸಚಿವರೇ ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆಯೇ’ ಎಂದು ಪ್ರಶ್ನಿಸಿದರು. ‘ತನಿಖೆಗಾಗಿ ಎಲ್ಲ ಪಕ್ಷದವರನ್ನು ಒಳಗೊಂಡ ಸದನ ಸಮಿತಿ ರಚಿಸಿ’ ಎಂದು ಒತ್ತಾಯಿಸಿದರು.



ಮೆಟ್ರೊ ಪ್ರಯಾಣಿಕರಿಗೆ ಒಂದು ದಿನ, ಮೂರು ದಿನದ ಪಾಸ್

ಬೆಂಗಳೂರು: ‘ನಮ್ಮ ಮೆಟ್ರೊ’ ಪ್ರಯಾಣಿಕರ ಅನುಕೂಲಕ್ಕಾಗಿ ಒಂದು ದಿನದ ಮತ್ತು ಮೂರು ದಿನದ ಪಾಸ್‌ಗಳನ್ನು ಬೆಂಗಳೂರು ಮೆಟ್ರೊ ರೈಲು ನಿಗಮ (ಬಿಎಂಆರ್‌ಸಿಎಲ್) ಪರಿಚಯಿಸಿದೆ.

ಏ.2ರಿಂದ ಈ ಯೋಜನೆಗೆ ಚಾಲನೆ ದೊರಯಲಿದೆ. ₹200 ದರದ ಒಂದು ದಿನದ ಪಾಸ್ ಖರೀದಿಸಿದವರು ಆ ದಿನ ಮೆಟ್ರೊ ರೈಲಿನಲ್ಲಿ ಅನಿಯಮಿತವಾಗಿ ಪ್ರಯಾಣಿಸಬಹುದು. ₹400 ಮೊತ್ತದ ಪಾಸ್ ಖರೀದಿಸಿದವರು ಮೂರು ದಿನ ಪ್ರಯಾಣಿಸಲು ಅವಕಾಶ ಇದೆ. ಪಾಸ್‌ಗಳು ನಿಲ್ದಾಣದ ಟಿಕೆಟ್ ಕೌಂಟರ್‌ಗಳಲ್ಲಿ ಲಭ್ಯವಿರುತ್ತದೆ. ಪ್ರಯಾಣ ಪೂರ್ಣಗೊಳಿಸಿದ ನಂತರ ಉತ್ತಮ ಸ್ಥಿತಿಯಲ್ಲಿರುವ ಸ್ಮಾರ್ಟ್ ಕಾರ್ಡ್‌ಗಳನ್ನು (ಪಾಸ್) ಗ್ರಾಹಕ ಸಂಪರ್ಕ ಕೇಂದ್ರಗಳಲ್ಲಿ ಹಿಂದಿರುಗಿಸಿದರೆ ಭದ್ರತಾ ಠೇವಣಿ ₹50 ಹಿಂಪಡೆಯಬಹುದು.

6 ತಿಂಗಳಲ್ಲಿ ಸ್ಯಾಂಕಿ ಕೆರೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ



ಸ್ಯಾಂಕಿ ಕೆರೆ ಕಾಮಗಾರಿ ವೀಕ್ಷಿಸಿದ ಸಚಿವ ಸಿ.ಎನ್‌.ಅಶ್ವತ್ಥನಾರಾಯಣ

ಬೆಂಗಳೂರು: ‘ಮಲ್ಲೇಶ್ವರದ ಸ್ಯಾಂಕಿ ಕೆರೆಯನ್ನು ಜನಸ್ನೇಹಿಯಾಗಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಸಾರ್ವಜನಿಕರ ಸಲಹೆಗಳನ್ನೂ ಪರಿಗಣಿಸಲಾಗಿದೆ. ಕೆರೆಯ ಎಲ್ಲ ಕಾಮಗಾರಿಗಳನ್ನು 6 ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು’ ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸ್ಯಾಂಕಿ ಕೆರೆಯಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳನ್ನು ಬುಧವಾರ ಪರಿಶೀಲನೆ ನಡೆಸಿದ ಅವರು ಕೆರೆ ಅಭಿವೃದ್ಧಿ ಮತ್ತು ಸಂರಕ್ಷಣೆ ಕುರಿತು ಸ್ಯಾಂಕಿ ಕೆರೆ ನಡಿಗೆದಾರರ ಸಂಘದ ಸದಸ್ಯರ ಜತೆ ಚರ್ಚಿಸಿದರು.


‘ಕೆರೆಯ ಆವರಣದ ತೆರೆದ ಜಾಗದಲ್ಲಿ ಸದ್ಯ ಎರಡು ಜಿಮ್‌ಗಳಿವೆ. ಅದರಲ್ಲಿ ಒಂದು ಹಾಳಾಗಿದ್ದು, ಶೀಘ್ರದಲ್ಲೇ ಸರಿಪಡಿಸಲಾಗುವುದು. ಅದರ ಜತೆ ಇನ್ನೂ ನಾಲ್ಕು ಜಿಮ್‌ಗಳನ್ನು ಸ್ಥಾಪಿಸಲಾಗುವುದು. ಇದಕ್ಕೆ ನಡಿಗೆದಾರರ ಸಂಘವೇ ಜಾಗ ಗುರುತಿಸಲಿ. ಸಂಘವು ಹೇಳಿದ ಜಾಗದಲ್ಲೇ ಜಿಮ್ ಸ್ಥಾಪಿಸಲಾಗುವುದು’ ಎಂದರು.

‘ಕೆರೆಯನ್ನು ಅಂದಗೊಳಿಸಲು ಆದ್ಯತೆ ನೀಡಲಾಗಿದೆ. ಕೊಳಚೆ ನೀರು ಕೆರೆಗೆ ಸೇರದಂತೆ ಹಾಗೂ ನೀರು ಮಲಿನಗೊಳ್ಳದಂತೆ ಎಚ್ಚರ ವಹಿಸಲಾಗುವುದು’ ಎಂದು ಅವರು ಹೇಳಿದರು.

‘ಕೆರೆಗೆ ವಾಯುವಿಹಾರಕ್ಕೆ ಬರುವವರ ಸಂಖ್ಯೆ ಹೆಚ್ಚಾಗಿದೆ. ಈ ಹಿಂದೆ ಹಣಕಾಸಿನ ತೊಂದರೆಯಿಂದ ಕೆರೆಯಲ್ಲಿ ಹಂತಹಂತವಾಗಿ ಕಾಮಗಾರಿಗಳನ್ನು ನಡೆಸಲಾಗಿತ್ತು. ಈ ಬಾರಿ ಒಂದೇ ಸುತ್ತಿನಲ್ಲಿ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ’ ಎಂದು ಅವರು ತಿಳಿಸಿದರು.

ಈ ವೇಳೆ ನಡಿಗೆದಾರರ ಸಂಘದ ಅಧ್ಯಕ್ಷ ರಂಗನಾಥ್,ಪಾಲಿಕೆ ಪಶ್ಚಿಮ ವಲಯದ ಆಯುಕ್ತ ದೀಪಕ್, ಜಂಟಿ ಆಯುಕ್ತ ಶ್ರೀನಿವಾಸ್, ಕೆರೆಗಳ ವಿಭಾಗದ ಪ್ರಧಾನ ಎಂಜಿನಿಯರ್ ವಿಜಯಕುಮಾರ್ ಇದ್ದರು.

ನಿಧನ



ಶ್ರೀ ಟಿ.ಎಲ್. ಚಂದ್ರಮೌಳಿ
S/o ಟಿ.ಎನ್. ಲಕ್ಷ್ಮೀನರಸಿಂಹಯ್ಯ
ಜನನ: 26–11–1955 ಮರಣ: 30–03–2022
ಇವರು ದಿನಾಂಕ 30–03–2022ರ ಸಂಜೆ 7.14ಕ್ಕೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.
ಅಂತ್ಯಕ್ರಿಯೆಯನ್ನು ದಿನಾಂಕ 31–03–2022, ಮಧ್ಯಾಹ್ನ 2.30 ರೊಳಗೆ ಬನಶಂಕರಿ ರುದ್ರಭೂಮಿಯಲ್ಲಿ ನಡೆಸಲಾಗುವುದು.
~ದುಃಖತಪ್ತರು:~
ಧರ್ಮಪತ್ನಿ ಮತ್ತು ಮಕ್ಕಳು ಹಾಗೂ ಕುಟುಂಬದವರು
ಮೊಬೈಲ್: 9845445857, 9538244713

ಸುದ್ದಿ 2 ನಿಮಿಷ


‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ ಏಳು ಲೇಖಕರು ಆಯ್ಕೆ

ಬೆಂಗಳೂರು: ಸ್ವಾಭಿಮಾನಿ ಕರ್ನಾಟಕ ವೇದಿಕೆ ವತಿಯಿಂದ ನೀಡಲಾಗುವ 2021ನೇ ಸಾಲಿನ ‘ಸ್ವಾಭಿಮಾನಿ ಪುಸ್ತಕ ಪ್ರಶಸ್ತಿ’ಗೆ ಏಳು ಲೇಖಕರ ಪುಸ್ತಕಗಳನ್ನು ಆಯ್ಕೆ ಮಾಡಲಾಗಿದೆ.

ಆಯ್ಕೆಯಾದ ಪುಸ್ತಕಗಳು: ಎಚ್.ಎಸ್.ಅನುಪಮಾ ಅವರ ‘ಕೋವಿಡ್ ಡಾಕ್ಟರ್ ಡೈರಿ’ (ಕಥಾ ಸಂಕಲನ), ಪೂರ್ಣಿಮಾ ಮಾಳಗಿಮನಿ ಅವರ ‘ಇಜಯಾ’ (ಕಾದಂಬರಿ), ಸತೀಶ್ ಕುಮಾರ್ ಎಸ್.ಹೊಸಮನಿ ಅವರ ‘ಪ್ರತಿಬಿಂಬ’ (ಆತ್ಮಕಥನ), ಆಕರ್ಷ ರಮೇಶ್ ಕಮಲ ಅವರ ‘ಬರಿಯ ನೆನಪಲ್ಲ’ (ಅನುವಾದ), ಡಿ.ನಳಿನಿ ಅವರ ‘ಕುವೆಂಪು ಮತ್ತು ರವೀಂದ್ರನಾಥ್ ಟ್ಯಾಗೋರ್– ಒಂದು ತೌಲನಿಕ ಅಧ್ಯಯನ’ (ವಿಮರ್ಶೆ), ಕಾವ್ಯ ವಿಭಾಗದಲ್ಲಿ ಮುಮ್ತಾಜ್ ಬೇಗಂ ಅವರ ‘ಕೊಂದ ಕನಸುಗಳ ಕೇಸು’ ಹಾಗೂ ದೇವು ಮಾಕೊಂಡ ಅವರ ‘ಗಾಳಿಗೆ ತೊಟ್ಟಿಲ ಕಟ್ಟಿ’.

ಪ್ರಶಸ್ತಿ ತಲಾ ₹5 ಸಾವಿರ ನಗದು ಮತ್ತು ಸ್ಮರಣಿಕೆ ಒಳಗೊಂಡಿವೆ. ಏಪ್ರಿಲ್ 16ರಂದು ಬೆಂಗಳೂರಿನಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದು ವೇದಿಕೆ ಅಧ್ಯಕ್ಷ ದ್ವಾರನಕುಂಟೆ ಪಾತಣ್ಣ ತಿಳಿಸಿದ್ದಾರೆ.

ಪಿಇಎಸ್: ಸರ್ಕಾರಿ ಶಾಲೆಗಳ ಕಟ್ಟಡ ಹಸ್ತಾಂತರ



ಬೆಂಗಳೂರು: ಇಲ್ಲಿನ ಪಿಇಎಸ್ ವಿಶ್ವವಿದ್ಯಾಲಯ ನವೀಕರಿಸಿರುವ ಸರ್ಕಾರಿ ಶಾಲೆಗಳ ಕಟ್ಟಡಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಉದ್ಘಾಟಿಸಿದರು.

ಉತ್ತರ ಕರ್ನಾಟಕದ ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಹಾನಿಗೊಳಗಾಗಿದ್ದ ಸರ್ಕಾರಿ ಶಾಲೆಗಳನ್ನು ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ದತ್ತು ಪಡೆದಿದ್ದರು. ಬಳಿಕ ಕಟ್ಟಡಗಳನ್ನು ನವೀಕರಣ ಮಾಡಲಾಗಿದೆ.

‘ಸಾಮಾಜಿಕ ಕಳಕಳಿಯಿಂದ ಸಮಾಜಕ್ಕೆ ಮರಳಿ ನೀಡುವ ಉದಾತ್ತ ಕಾರ್ಯ ಪ್ರೇರಣಾದಾಯಕ. ರಾಯಚೂರು, ಅಥಣಿ, ಮುಧೋಳದಲ್ಲಿನ ಶಾಲೆಗಳನ್ನು ದತ್ತು ಪಡೆದು, ಅಭಿವೃದ್ಧಿಗೊಳಿಸುತ್ತಿರುವ ನಿಸ್ವಾರ್ಥ ಸೇವೆ ಅಭಿನಂದನೀಯ. ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಶಿಕ್ಷಣ ಕ್ಷೇತ್ರ ಅಭಿವೃದ್ಧಿಗೆ ದೊರೆಸ್ವಾಮಿ ಅವರ ಮಾರ್ಗದರ್ಶನ ಪಡೆಯಲಾಗುವುದು’ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಬೆಳಗಾವಿ ಜಿಲ್ಲೆಯಲ್ಲಿ ನಾಲ್ಕು ಶಾಲೆಗಳ ಕಟ್ಟಡ, ಬಾಗಲಕೋಟೆ ಜಿಲ್ಲೆಯಲ್ಲಿ ಮೂರು ಶಾಲೆಗಳು ಹಾಗೂ ಎರಡು ಅಂಗನವಾಡಿಗಳನ್ನು ನವೀಕರಣ ಮಾಡಲಾಗಿದೆ. ಕಟ್ಟಡದ ವೆಚ್ಚ, ಪೀಠೋಪಕರಣಗಳು ಸೇರಿದಂತೆ ಅಗತ್ಯ ಶಿಕ್ಷಣ ಸಾಮಗ್ರಿಗಳನ್ನು ₹ 5 ಕೋಟಿ ವೆಚ್ಚದಲ್ಲಿ ವಿಶ್ವವಿದ್ಯಾಲಯ ಒದಗಿಸಿದೆ’ ಎಂದು ಎಂ.ಆರ್. ದೊರೆಸ್ವಾಮಿ ಹೇಳಿದರು.

ರಂಜಾನ್ ತಿಂಗಳ ವ್ಯಾಪಾರ: ತಪ್ಪು ಸಂದೇಶ ಹರಡದಂತೆ ಮನವಿ

ಬೆಂಗಳೂರು: ‘ರಂಜಾನ್ ತಿಂಗಳಲ್ಲಿ ಮುಸಲ್ಮಾನರ ಬಳಿ ಮಾತ್ರ ವ್ಯಾಪಾರ ಮಾಡಬೇಕು ಎಂಬ ಸಂದೇಶಕ್ಕೆ ಕಿವಿಗೊಡಬಾರದು’ ಎಂದು ಜಮಿಯತ್ ಉಲಮಾ ಕರ್ನಾಟಕ ಮನವಿ ಮಾಡಿದೆ.

‘ಜಾತ್ರೆ ಮತ್ತು ಉತ್ಸವಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ಬಹಿಷ್ಕಾರದ ಬೆದರಿಕೆ ಹಾಕಿರುವುದು ಶೋಚನೀಯ. ಇದೇ ವೇಳೆ ರಂಜಾನ್ ತಿಂಗಳಲ್ಲಿ ಮುಸ್ಲಿಮರ ಬಳಿ ಮಾತ್ರ ವ್ಯಾಪಾರ ಮಾಡಬೇಕು ಎಂಬ ಸಂದೇಶವನ್ನು ಕೆಲವು ಕಿಡಿಗೇಡಿಗಳು ಹರಿಬಿಟ್ಟಿದ್ದಾರೆ. ಇವೆಲ್ಲವೂ ಸಮಾಜದಲ್ಲಿ ಅಶಾಂತಿ ಬೆಳೆಸುವ ಪಿತೂರಿಯ ಭಾಗ. ಮುಸ್ಲಿಮರು ಈ ರೀತಿಯ ಕಿಡಿಗೇಡಿ ಸಂದೇಶ ರವಾನಿಸುವುದಿಲ್ಲ. ಇದು ನಮ್ಮ ಸಂಸ್ಕೃತಿಯೂ ಅಲ್ಲ’ ಎಂದು ಜಮಿಯತ್ ಉಲಮಾ ಕರ್ನಾಟಕದ ಅಧ್ಯಕ್ಷ ಮುಫ್ತಿ ಇಫ್ತೇಖಾರ್ ಕಾಸ್ಮಿ ಮತ್ತು ಕಾರ್ಯದರ್ಶಿ ಮುಫ್ತಿ ಶಮ್ಸುದ್ದೀನ್ ಬಜಲಿ ಕಾಸ್ಮಿ ತಿಳಿಸಿದ್ದಾರೆ.

‘ಬಾಂಧವರು ಈ ರೀತಿಯ ಸಂದೇಶಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ನೀಚ ಸಂಚುಗಳನ್ನು ಸೋಲಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ನಮ್ಮ ಸುತ್ತಮುತ್ತಲಿನ ಎಲ್ಲ ಧರ್ಮದವರಿಗೆ ಉಪಕಾರ ಆಗಬೇಕೇ ಹೊರತು ಯಾರಿಗೂ ನಮ್ಮಿಂದ ಕಷ್ಟ–ನಷ್ಟವಾಗದಂತೆ ನೋಡಿಕೊಳ್ಳಬೇಕು. ಅವರ ಸುಖ ಮತ್ತು ಕ್ಷೇಮದ ಬಗ್ಗೆ ಕಾಳಜಿ ವಹಿಸಬೇಕಾದುದು ನಮ್ಮ ಕರ್ತವ್ಯ. ಸಮಾಜದಲ್ಲಿ ಶಾಂತಿ, ನ್ಯಾಯ, ಸೌಜನ್ಯ ಮತ್ತು ನೈತಿಕತೆಯ ವಾತಾವರಣ ಕಾಯ್ದುಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ. ಇದುವೇ ಇಸ್ಲಾಮ್ ಧರ್ಮ ನಮಗೆ ನೀಡಿರುವ ಉಪದೇಶ. ವ್ಯಾಪಾರ- ವ್ಯವಹಾರಗಳಲ್ಲಿ ಮುಸಲ್ಮಾನ ಅಥವಾ ಬೇರೆ ಧರ್ಮದವ ಅನ್ನುವ ಭೇದ– ಭಾವ ಸಲ್ಲದು. ನೆರೆಹೊರೆಯವರ ಜತೆ ಸೌಜನ್ಯದೊಂದಿಗೆ ವರ್ತಿಸಬೇಕು ಎಂಬುದೇ ನಮಗೆ ಪ್ರವಾದಿ ಮುಹಮ್ಮದ್(ಸ) ನೀಡಿರುವ ಮಾರ್ಗದರ್ಶನ’ ಎಂದು ವಿವರಿಸಿದ್ದಾರೆ.

ಬನ್ನೇರುಘಟ್ಟ ಉದ್ಯಾನ: ವಲಯಗಳ ಪುನರ್ ವಿಂಗಡಣೆ

ಬೆಂಗಳೂರು: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ನಾಲ್ಕು ವಲಯಗಳನ್ನು ಅರಣ್ಯ ಇಲಾಖೆ ಪುನರ್ ವಿಂಗಡಣೆ ಮಾಡಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯಲ್ಲಿ ಒಟ್ಟು 26,902 ಹೆಕ್ಟೇರ್ ಪ್ರದೇಶವಿದ್ದು, 10 ಶಾಖೆ ಮತ್ತು 23 ಗಸ್ತುಗಳಲ್ಲಿ ಅರಣ್ಯ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಪೈಕಿ ಶೇ 55ರಷ್ಟು ಅಂದರೆ 15,706 ಹೆಕ್ಟೇರ್ ಪ್ರದೇಶ ಕೋಡಿಹಳ್ಳಿ ವಲಯದಲ್ಲೇ ಇದ್ದು, 5 ಶಾಖೆ ಮತ್ತು 9 ಗಸ್ತುಗಳನ್ನು ಹೊಂದಿದೆ. ಉಳಿದ ಶೇ 45ರಷ್ಟು ಪ್ರದೇಶ ಮೂರು ವಲಯಗಳಿಗೆ ಹಂಚಿಕೆಯಾಗಿತ್ತು.

ಈಗ ಮರುಹಂಚಿಕೆ ಮಾಡಲಾಗಿದ್ದು, ಬನ್ನೇರುಘಟ್ಟ ವಲಯಕ್ಕೆ 5,480 ಹೆಕ್ಟೇರ್ ಪ್ರದೇಶ, 2 ಶಾಖೆ ಮತ್ತು 4 ಗಸ್ತುಗಳನ್ನು ನೀಡಲಾಗಿದೆ. ಆನೇಕಲ್ ವಲಯಕ್ಕೆ 4,482 ಹೆಕ್ಟೇರ್ ಪ್ರದೇಶ, 3 ಶಾಖೆ ಮತ್ತು 5 ಗಸ್ತುಗಳನ್ನು ಉಳಿಸಲಾಗಿದೆ. ವನ್ಯಜೀವಿ– ಮಾನವ ಸಂಘರ್ಷ ತಡೆಯಲು, ಅರಣ್ಯ ರಕ್ಷಣೆ ಮತ್ತು ಆಡಳಿತಾತ್ಮಕ ದೃಷ್ಟಿಯಿಂದ ಮರು ಹಂಚಿಕೆ ಮಾಡಲಾಗಿದೆ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) ಆದೇಶದಲ್ಲಿ ವಿವರಿಸಿದ್ದಾರೆ.

ಎಚ್‌ಐವಿ: ಉಚಿತ ಪರೀಕ್ಷೆಗೆ ಸೂಚನೆ

ಬೆಂಗಳೂರು: ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿನ ಎ.ಆರ್‌.ಟಿ.ಕೇಂದ್ರಗಳಲ್ಲಿನೋಂದಾಯಿಸಿಕೊಂಡ ಎಚ್‌ಐವಿ ಸೋಂಕಿತರಿಗೆ ಎಲ್ಲ ರೀತಿಯ ವೈದ್ಯಕೀಯ ಪರೀಕ್ಷೆಗಳನ್ನು ಉಚಿತವಾಗಿ ನಡೆಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. 'ಎಚ್‌ಐವಿ ಸೋಂಕಿತರಿಗೆ ಕೆಲ ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಯೋಗಾಲಯ ಮತ್ತು ಇತರೆ ಪರೀಕ್ಷೆಗಳಿಗೆ ಶುಲ್ಕ ವಿಧಿಸುತ್ತಿರುವುದು ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಗಮನಕ್ಕೆ ಬಂದಿದೆ. ಸೋಂಕಿತರಲ್ಲಿ ಬಹುತೇಕರು ಬಡ ಕುಟುಂಬದವರಾಗಿದ್ದಾರೆ. ಹೀಗಾಗಿ, ಚಿಕಿತ್ಸೆಗೆ ನಡೆಸುವ ಪೂರ್ವಭಾವಿ ಪರೀಕ್ಷೆಗಳನ್ನು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ನಡೆಸಬೇಕು' ಎಂದು ಹೇಳಿದ್ದಾರೆ.

ಪರೀಕ್ಷಾ ಪೆ ಚರ್ಚಾ: ಬೆಂಗಳೂರು ವಿದ್ಯಾರ್ಥಿಗಳಿಗೆ ಅವಕಾಶ

ಬೆಂಗಳೂರು: ಏಪ್ರಿಲ್ 1ರಂದು ಪ್ರಧಾನಿ ನರೇಂದ್ರ ಮೋದಿ ನಡೆಸಲಿರುವ 'ಪರೀಕ್ಷಾ ಪೆ ಚರ್ಚಾ'ದಲ್ಲಿ ಬೆಂಗಳೂರಿನ ಆಯ್ದ ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ತಿಳಿಸಿದರು.

'ಬೆಳಿಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ರಾಜಭವನದಲ್ಲಿ ರಾಜ್ಯಪಾಲರ ಜತೆ ವರ್ಚುವಲ್ ವೇದಿಕೆ ಮೂಲಕ ಪಾಲ್ಗೊಳ್ಳಲಿದ್ದಾರೆ' ಎಂದು ಅವರು ಸುದ್ದಿಗೋಷ್ಠಿಯಲ್ಲಿ ಬುಧವಾರ ವಿವರಿಸಿದರು.

'ವಿದ್ಯಾರ್ಥಿಗಳು ಪರೀಕ್ಷಾ ಸಂದರ್ಭದಲ್ಲಿ ಎದುರಿಸುವ ಸಮಸ್ಯೆ, ಸವಾಲು ಮತ್ತು ಆತಂಕಗಳ ಬಗ್ಗೆ ಪ್ರಧಾನಿ ಚರ್ಚಿಸಲಿದ್ದಾರೆ. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಸ್ವತಃ ಪ್ರಧಾನಿ ಅವರೇ ಉತ್ತರ ನೀಡಲಿದ್ದಾರೆ' ಎಂದು ಹೇಳಿದರು.

'2021ರ ಡಿಸೆಂಬರ್ 8ರಿಂದ 2022ರ ಫೆಬ್ರುವರಿ 3ರವರೆಗೆ ವಿದ್ಯಾರ್ಥಿಗಳ ಆತಂಕದ ಬಗ್ಗೆ ಪ್ರಬಂಧ ಸ್ಪರ್ಧೆಯಲ್ಲಿ 15.7 ಲಕ್ಷ ಜನ ಭಾಗವಹಿಸಿದ್ದರು. ಕರ್ನಾಟಕದಿಂದ 84 ಜನ ಆಯ್ಕೆಯಾಗಿದ್ದು, ಅವರಲ್ಲಿ 60 ವಿದ್ಯಾರ್ಥಿಗಳು, 12 ಪೋಷಕರು ಮತ್ತು 12 ಶಿಕ್ಷಕರು ಇದ್ದಾರೆ' ಎಂದು ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ ಉಪನಿರ್ದೇಶಕಿ ಜಯಂತಿ ತಿಳಿಸಿದರು.

ತೃತೀಯ ಲಿಂಗಿಗಳು: ವಿಡಿಯೊ ಸಮಾಲೋಚನೆ ಇಂದಿನಿಂದ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ತೃತೀಯ ಲಿಂಗಿಗಳಿಗೆ ವಿಡಿಯೊ ಸಮಾಲೋಚನೆ ವ್ಯವಸ್ಥೆ ರೂಪಿಸಿದ್ದು, ಇದೇ ಗುರುವಾರದಿಂದ ಶನಿವಾರದವರೆಗೆ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಸಮಾಲೋಚನೆಗೆ ಅವಕಾಶ ಕಲ್ಪಿಸಲಾಗಿದೆ.

ಸಮಾಲೋಚನೆಗೆ ಮೊ. ಸಂಖ್ಯೆ: 89511 46852 ಅಥವಾ 97311 22666

ಡೆಂಗಿ: ಎರಡು ವಾರದಲ್ಲಿ 160 ಮಂದಿಗೆ ಜ್ವರ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಏರುಗತಿ ಪಡೆದುಕೊಂಡಿದ್ದು, ಎರಡು ವಾರದಲ್ಲಿ 160 ಪ್ರಕರಣಗಳು ದೃಢಪಟ್ಟಿವೆ.

ಈವರೆಗೆ ವರದಿಯಾದ ಒಟ್ಟು ಪ್ರಕರಣಗಳ ಸಂಖ್ಯೆ 924ಕ್ಕೆ ತಲುಪಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 205 ಮಂದಿ ಡೆಂಗಿ ಜ್ವರಕ್ಕೆ ಒಳಗಾಗಿದ್ದಾರೆ. 21 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿ ತಲುಪಿದೆ.

ಮೈಸೂರಿನಲ್ಲಿ 83, ಉಡುಪಿ ಹಾಗೂ ದಕ್ಷಿಣ ಕನ್ನಡದಲ್ಲಿ ತಲಾ 70, ಬಳ್ಳಾರಿಯಲ್ಲಿ 68, ಚಿತ್ರದುರ್ಗ ಹಾಗೂ ಕೊಪ್ಪಳದಲ್ಲಿ ತಲಾ 64 ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ಕ್ಕಿಂತ ಕಡಿಮೆ ಇವೆ. ಯಾವುದೇ ಮರಣ ಪ್ರಕರಣ ವರದಿಯಾಗಿಲ್ಲ. 2021ರಲ್ಲಿ 7,189 ಮಂದಿ ಡೆಂಗಿ ಪೀಡಿತರಾಗಿದ್ದರು. ಅವರಲ್ಲಿ ಐವರು ಮೃತಪಟ್ಟಿದ್ದರು.

22 ಜಿಲ್ಲೆಗಳಲ್ಲಿ ಚಿಕೂನ್‌ಗುನ್ಯಾ ಪ್ರಕರಣಗಳು ಪತ್ತೆಯಾಗಿದ್ದು, 232 ಮಂದಿ ಈ ಜ್ವರಕ್ಕೆ ಒಳಗಾಗಿದ್ದಾರೆ. ಕೋಲಾರದಲ್ಲಿ 42, ವಿಜಯಪುರದಲ್ಲಿ 40, ತುಮಕೂರಿನಲ್ಲಿ 28, ಬೆಂಗಳೂರು ಗ್ರಾಮಾಂತರದಲ್ಲಿ 27, ಚಿತ್ರದುರ್ಗದಲ್ಲಿ 17 ಹಾಗೂ ದಾವಣಗೆರೆಯಲ್ಲಿ 14 ಪ್ರಕರಣಗಳು ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 10ಕ್ಕಿಂತ ಕಡಿಮೆ ಇವೆ.

ನಗರದಲ್ಲಿ ಜಠರ ಕರುಳಿನ ಉರಿಯೂತ ಪ್ರಕರಣಗಳು ಉಲ್ಬಣ

ಬಿಸಿಲ ಬೇಗೆ: ಅನಾರೋಗ್ಯ ಬಾಧೆ

• ವರುಣ ಹೆಗಡೆ

ಬೆಂಗಳೂರು: ತಾಪಮಾನ ಏರಿಕೆಯಿಂದ ನಗರದಲ್ಲಿ ಉದರಬೇನೆ (ಗ್ಯಾಸ್ಟ್ರೋಎಂಟರೈಟಿಸ್) ಸಮಸ್ಯೆ ಹೆಚ್ಚಾಗಲಾರಂಭಿಸಿದೆ. ವಾತಾವರಣದಲ್ಲಿನ ದೂಳು ಮತ್ತು ಶುಷ್ಕತೆಯಿಂದ ಚರ್ಮದ ಅಲರ್ಜಿ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳ ಸಂಬಂಧ ಆಸ್ಪತ್ರೆಗಳಿಗೆ ಭೇಟಿ ನೀಡುವವರ ಸಂಖ್ಯೆಯೂ ಏರಿಕೆ ಕಂಡಿದೆ.

ಬಿಸಿಲ ಧಗೆ ದಿನದಿಂದ ದಿನಕ್ಕೆ ಏರತೊಡಗಿದೆ. ಗರಿಷ್ಠ ತಾಪಮಾನ 35 ಡಿಗ್ರಿ ಸೆಲ್ಸಿಯಸ್‌ವರೆಗೂ ಹಾಗೂ ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಇನ್ನೊಂದೆಡೆ ವಾಹನ ಸಂಚಾರ ದಟ್ಟಣೆಯಿಂದಾಗಿ ವಾತಾವರಣದ ಗುಣಮಟ್ಟ ದಿನೇ ದಿನೇ ಕುಸಿತ ಕಾಣುತ್ತಿದೆ. ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ) 'ಉತ್ತಮ' ಹಂತದಿಂದ 'ಮಧ್ಯಮ' ಹಂತಕ್ಕೆ ತಲುಪಿದೆ. ಅಧಿಕ ತಾಪಮಾನ ಹಾಗೂ ದೂಳಿನಿಂದಾಗಿ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮಾಹಿತಿ ಪ್ರಕಾರ ಈ ವರ್ಷ ಫೆಬ್ರುವರಿ ಅಂತ್ಯಕ್ಕೆ ರಾಜ್ಯದಲ್ಲಿ 18,659 ಉದರಬೇನೆ (ಗ್ಯಾಸ್ಟ್ರೋಎಂಟರೈಟಿಸ್) ಪ್ರಕರಣಗಳು ವರದಿಯಾಗಿದ್ದವು.


ಅರ್ಧಕ್ಕೂ ಅಧಿಕ (11,873) ಪ್ರಕರಣಗಳು ಬೆಂಗಳೂರು ವಲಯದಲ್ಲಿಯೇ ದೃಢಪಟ್ಟಿವೆ. 'ಈ ಸಂಖ್ಯೆ ಮಾರ್ಚ್ ತಿಂಗಳಲ್ಲಿ ಮತ್ತಷ್ಟು ಹೆಚ್ಚಳವಾಗಿದ್ದು, ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಗರಿಷ್ಠ ಪ್ರಕರಣಗಳು ವರದಿಯಾಗುವ ಸಾಧ್ಯತೆಯಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.

'ಉದರಬೇನೆ ಸಮಸ್ಯೆಗೆ ಹೊರ ರೋಗಿಗಳ ವಿಭಾಗಕ್ಕೆ ಪ್ರತಿ ದಿನ 15-20 ರೋಗಿಗಳು ಬರುತ್ತಿದ್ದಾರೆ. ಶುಚಿ ಇಲ್ಲದ ಆಹಾರ ಮತ್ತು ನೀರು ಸೇವನೆಯಿಂದ ಈ ಸಮಸ್ಯೆ ಉಂಟಾಗುತ್ತಿದೆ' ಎಂದು ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯರೊಬ್ಬರು ತಿಳಿಸಿದರು.

ವಿಕ್ಟೋರಿಯಾ, ಜಯನಗರ ಸಾರ್ವಜನಿಕ ಆಸ್ಪತ್ರೆ, ಕಿಮ್ಸ್, ಮಣಿಪಾಲ್, ಫೋರ್ಟಿಸ್, ಅಪೋಲೊ, ನಾರಾಯಣ ಹೆಲ್ತ್ ಸೇರಿದಂತೆ ವಿವಿಧ ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ಹೊರ ರೋಗಿಗಳಲ್ಲಿ ಶೇ 10 ಹಾಗೂ ಅದಕ್ಕಿಂತ ಅಧಿಕ ರೋಗಿಗಳು ಉದರಬೇನೆ, ಕಾಲರಾ, ಬೆವರು ಗುಳ್ಳೆಯಂತಹ ಸಮಸ್ಯೆಗಳಿಗೆ ಭೇಟಿ ನೀಡುತ್ತಿದ್ದಾರೆ. ಬೆಂಗಳೂರು ವಲಯದಲ್ಲಿ ಈ ವರ್ಷ ಎರಡು ತಿಂಗಳಲ್ಲಿಯೇ 2,463 ಟೈಫಾಯ್ಡ್ ಪ್ರಕರಣಗಳು ದೃಢಪಟ್ಟಿವೆ.

'ಬೇಸಿಗೆಯಲ್ಲಿ ನೀರಿನಿಂದಲೇ ಹೆಚ್ಚು ರೋಗಗಳು ಹರಡುತ್ತವೆ. ಹೀಗಾಗಿ, ಶುದ್ಧ ನೀರು ಕುಡಿಯುವುದು ಬಹಳ ಮುಖ್ಯವಾಗಿದೆ. ರಸ್ತೆ ಬದಿಯಲ್ಲಿ ತೆರೆದಿಟ್ಟ ಆಹಾರ ಪದಾರ್ಥ ಹಾಗೂ ಕತ್ತರಿಸಿದ ಹಣ್ಣುಗಳನ್ನು ತಿನ್ನುವುದರಿಂದ ರೋಗ ಕಾಣಿಸಿಕೊಳ್ಳುತ್ತದೆ' ಎಂದು ಕೆ.ಸಿ. ಜನರಲ್ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಬಿ.ಆರ್. ವೆಂಕಟೇಶಯ್ಯ ತಿಳಿಸಿದರು.

ವೈದ್ಯರ ಸಲಹೆಗಳು



- ರಸ್ತೆ ಬದಿಯ ಆಹಾರ ಸುರಕ್ಷಿತವಲ್ಲ
- ದ್ರವ ರೂಪದ ಆಹಾರವನ್ನು ಹೆಚ್ಚಾಗಿ ಸೇವಿಸಬೇಕು
- ಕಾಯಿಸಿ, ಆರಿಸಿದ ಶುದ್ಧ ನೀರನ್ನು ಕುಡಿಯಬೇಕು
- ತಾಜಾ ಹಾಗೂ ಪೌಷ್ಟಿಕ ಆಹಾರ ಸೇವಿಸಬೇಕು
- ಹತ್ತಿಯ ಬಟ್ಟೆಯನ್ನು ಧರಿಸಬೇಕು
- ಆಹಾರ ಸೇವಿಸುವ ಮೊದಲು ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಬೇಕು



ಈ ಅವಧಿಯಲ್ಲಿ ಅತಿನೇರಳೆ ಕಿರಣಗಳು ಬಲಿಷ್ಠವಾಗಿರುತ್ತವೆ. ತುರಿಕೆ ಸೇರಿದಂತೆ ವಿವಿಧ ಸಮಸ್ಯೆಗಳು ಕಾಣಿಸಿಕೊಂಡರೆ ನಿರ್ಲಕ್ಷ್ಯ ಮಾಡಬಾರದು

ಡಾ. ಭವ್ಯಶ್ರೀ, ಸ್ಪೆಷಲಿಸ್ಟ್ ಆಸ್ಪತ್ರೆಯ ಚರ್ಮರೋಗ ತಜ್ಞೆ



ರೋಗಾಣುಗಳು ಹರಡಿ, ಸಾಂಕ್ರಾಮಿಕ ಧಗೆಗೆ ಬೆವರುಗುಳ್ಳೆ, ಮೊಡವೆ ಸೇರಿ ಚರ್ಮಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಚಿಕಿತ್ಸೆಗೆ ಬರುವವರ ಸಂಖ್ಯೆ ಹೆಚ್ಚಳವಾಗಿದೆ

ಡಾ.ಎಂ.ಎಸ್. ಗಿರೀಶ್, ಇಎಸ್‌ಐ ಆಸ್ಪತ್ರೆಯ ಚರ್ಮರೋಗ ತಜ್ಞ

ಎಲ್ಲ ಸಮಾಜಗಳು ಕೈಜೋಡಿಸಿದರೆ ಮಾತ್ರ ಸೌಹಾರ್ದ: ಪೇಜಾವರ ಸ್ವಾಮೀಜಿ ಅಭಿಮತ

‘ಸಮಾಜ ನೋವುಂಡಿದೆ, ತಾಳ್ಮೆ ಸ್ಫೋಟಗೊಂಡಿದೆ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಶಾಂತಿ, ಸಾಮರಸ್ಯ, ನೆಮ್ಮದಿ, ಸೌಹಾರ್ದ ಅವಶ್ಯವಾಗಿ ಬೇಕು. ಇದು ಒಂದು ಸಮಾಜದ ಶ್ರಮದಿಂದ ಸಾಧ್ಯವಿಲ್ಲ, ಎಲ್ಲ ಸಮಾಜಗಳು ಕೈಜೋಡಿಸಿದರೆ ಮಾತ್ರ ಸಾಧ್ಯ’ ಎಂದು ಪೇಜಾವರಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಬುಧವಾರ ಮಠದಲ್ಲಿ ತಮ್ಮನ್ನು ಭೇಟಿಯಾದ ಮುಸ್ಲಿಂ, ಕ್ರಿಶ್ಚಿಯನ್ ಧಾರ್ಮಿಕ ಮುಖಂಡರು ಹಾಗೂ ವ್ಯಾಪಾರಿಗಳ ನಿಯೋಗಕ್ಕೆ ಸ್ವಾಮೀಜಿ ಅವರು ಹೀಗೇ ಸ್ಪಷ್ಟವಾಗಿ ಹೇಳಿದರು.

ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ, ಹಲಾಲ್ ಬಹಿಷ್ಕಾರ ಅಭಿಯಾನ ಸೇರಿದಂತೆ ಸಮಾಜದಲ್ಲಿನ ಕದಡಿರುವ ಸೌಹಾರ್ದ ವಾತಾವರಣವನ್ನು ತಿಳಿಗೊಳಿಸುವಂತೆ ನಿಯೋಗದ ಮುಖಂಡರು ಶ್ರೀಗಳಿಗೆ ಮನವಿ ಮಾಡಿದರು.

‘ಸಮಾಜದಲ್ಲಿ ಈಗ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಅರಿವಿದೆ. ಇದಕ್ಕೂ ಮುನ್ನ ಹಿಂದೂ ಸಮಾಜ ತುಂಬಾ ನೋವುಂಡಿದೆ’ ಎಂದು ಶ್ರೀಗಳು ತಿಳಿಸಿದರು.

‘ಹಿಂದಿನಿಂದಲೂ ಅನ್ಯಾಯ ಸಹಿಸಿಕೊಂಡು ಬಂದಿದ್ದ ಹಿಂದೂಗಳ ತಾಳ್ಮೆ ಸ್ಫೋಟಗೊಂಡಿದೆ. ಅವರ ನೋವನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು’ ಎಂದು ಪ್ರತಿಪಾದಿಸಿದರು.

‘ಪರಸ್ಪರ ಸಂವಾದದ ಮೂಲಕ ಈ ಸಮಸ್ಯೆಯನ್ನು ಇತ್ಯರ್ಥಪಡಿಸಬಹುದು. ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರು ಸೌಹಾರ್ದದಿಂದ ಬಾಳೋಣ ಎಂದು ಕರೆ ನೀಡಿದರೆ ಸಮಸ್ಯೆ ಬಗೆಹರಿಯುವುದಿಲ್ಲ. ಹಿಂದೂ ಸಮಾಜಕ್ಕೆ ನೋವಾಗುವುದಿಲ್ಲ ಎಂಬುದು ಅರಿವಿಗೆ ಬಂದರೆ, ಸೌಹಾರ್ದದ ವಾತಾವರಣ ಮತ್ತೆ ನೆಲೆಸಲಿದೆ’ ಎಂದು ಪೇಜಾವರ ಸ್ವಾಮೀಜಿ ಹೇಳಿದರು.



ಧಾರ್ಮಿಕ ಮುಖಂಡರಿಂದ ಸಮಾಜದಲ್ಲಿನ ಈಗಿನ ಸಮಸ್ಯೆ ಪರಿಹಾರ ಸಾಧ್ಯವಿಲ್ಲ. ತಳಮಟ್ಟದಲ್ಲಿ ಪರಿಹಾರ ಹುಡುಕಬೇಕು

ವಿಶ್ವಪ್ರಸನ್ನ ತೀರ್ಥ ಶ್ರೀ, ಪೇಜಾವರ ಮಠ

‘ಹಲಾಲ್ ಮಾಂಸ ಖರೀದಿಸಬೇಡಿ’

‘ಹಲಾಲ್ ಬೋರ್ಡ್ ತೂಗು ಹಾಕಿರುವ ವ್ಯಾಪಾರಿಗಳಿಂದ ವ್ಯಾಪಾರ ಬಹಿಷ್ಕರಿಸೋಣ’ ಎಂದು ಬಿಜೆಪಿ ಉಡುಪಿ ಜಿಲ್ಲಾ ಘಟಕದ ಅಧ್ಯಕ್ಷ ಕುಯಿಲಾಡಿ ಸುರೇಶ್ ನಾಯಕ್ ಕರೆ ನೀಡಿದ್ದಾರೆ.

ಈ ಕುರಿತು ಟ್ವೀಟ್‌ನಲ್ಲಿ ಅವರು, ‘ಮುಸ್ಲಿಮರ ಹಲಾಲ್ ಬೋರ್ಡ್ ಹಾಕುವುದು ಅವರ ಸಂಪ್ರದಾಯ. ಆದರೆ ಹಿಂದೂಗಳ ಹೋಟೆಲ್‌ಗಳಲ್ಲಿ ಇಂತಹ ಬೋರ್ಡ್ ಏಕೆ. ಈ ವಿಚಾರದಲ್ಲಿ ಮುಸ್ಲಿಮರು, ಹಿಂದೂಗಳಿಗೂ ವ್ಯತ್ಯಾಸವಿಲ್ಲ ಎಂದಾದರೆ ಹಲಾಲ್ ಬಳಸುವ ಹಿಂದೂಗಳ ವ್ಯಾಪಾರವೂ ಬೇಡ’ ಎಂದರು.

ಕರಪತ್ರ ಅಭಿಯಾನ: ಮುಸ್ಲಿಮರ ಅಂಗಡಿಯಿಂದ ಹಲಾಲ್ ಮಾಂಸ ಖರೀದಿ ಮಾಡದಂತೆ ವಿಶ್ವ ಹಿಂದೂ ಪರಿಷತ್, ಬಜರಂಗ ದಳ ಸಂಘಟನೆಗಳವರು ಬುಧವಾರ ಚಿಕ್ಕಮಗಳೂರಿನಲ್ಲಿ ಕರಪತ್ರ ಹಂಚಿದರು. ‘ನಗರದ ಎಲ್ಲ ಕಡೆ ಕರಪತ್ರಗಳನ್ನು ಹಂಚುತ್ತೇವೆ’ ಎಂದು ಬಜರಂಗದಳ ನಗರ ಸಂಚಾಲಕ ಶ್ಯಾಮ್ ವಿ.ಗೌಡ ತಿಳಿಸಿದರು.

‘ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲೇ ಮ್ಯಾನ್‌ಹೋಲ್‌ಗಿಳಿದ ಕಾರ್ಮಿಕ’

ಗದಗ: ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ, ಮ್ಯಾನ್‌ಹೋಲ್‌ಗೆ ಕಾರ್ಮಿಕರೊಬ್ಬರನ್ನು ಇಳಿಸಿದ್ದ ವಿಡಿಯೊ ವೈರಲ್ ಆಗಿವೆ. ಆಧುನಿಕ ಯಂತ್ರಗಳಿದ್ದರೂ ಮ್ಯಾನ್‌ಹೋಲ್‌ಗೆ ಕಾರ್ಮಿಕರನ್ನು ಇಳಿಸಿರುವುದಕ್ಕೆ ಸಾರ್ವಜನಿಕವಾಗಿ ಟೀಕೆ ವ್ಯಕ್ತವಾಗಿದೆ.

ಆದರೆ, ಜಿಲ್ಲಾಧಿಕಾರಿ ಕಚೇರಿ ನಿರ್ವಹಣಾ ಕೋಶದ ಅಧಿಕಾರಿಗಳು ಇಲ್ಲಿ ಮ್ಯಾನುವಲ್ ಸ್ಕ್ಯಾವೆಂಜಿಂಗ್ ನಡೆದಿಲ್ಲ. ಮ್ಯಾನ್‌ಹೋಲ್‌ಗೆ ಬಿದ್ದಿದ್ದ ಸ್ಪ್ಯಾನರ್ ತೆಗೆಯಲು ಐದು ಸೆಕೆಂಡ್ ಇಳಿದಿದ್ದ ಸಂದರ್ಭವನ್ನೇ ವಿಡಿಯೊ ಮಾಡಲಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

‘ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿರುವ ಎರಡು ಮ್ಯಾನ್‌ಹೋಲ್‌ಗಳಲ್ಲಿ ಒಂದು ಬ್ಲಾಕ್ ಆಗಿತ್ತು. ಅದರಲ್ಲಿ ಸಿಕ್ಕಿಹಾಕಿಕೊಂಡಿದ್ದ ಕಲ್ಲನ್ನು ಸರಳು ಬಳಸಿ ತೆಗೆಯುವಾಗ ಸ್ಪ್ಯಾನರ್ ಕೆಳಗೆ ಬಿತ್ತು. ಮ್ಯಾನ್‌ಹೋಲ್‌ನಲ್ಲಿ ಗಲೀಜು ಇರಲಿಲ್ಲ. ಒಣಗಿದ ಜಾಗವಾಗಿತ್ತು. ಆಗ, ಜಿಲ್ಲಾಧಿಕಾರಿ ಕಚೇರಿ ಹೊರಗುತ್ತಿಗೆ ನೌಕರ ವೆಂಕಪ್ಪ ಅವರು ಸ್ಪ್ಯಾನರ್ ಅನ್ನು ಕಾಲಿನಿಂದಲೇ ತೆಗೆಯಲು ಪ್ರಯತ್ನಿಸಿದರು. ಅದು ಸಿಗದ ಕಾರಣ, ಕೆಳಕ್ಕಿಳಿದು ಐದು ಸೆಕೆಂಡ್ ಒಳಗೆ ಸ್ಪ್ಯಾನರ್ ಎತ್ತಿಕೊಂಡು ಮೇಲೆ ಬಂದರು’ ಎಂದು ಘಟನೆಯನ್ನು ವಿವರಿಸಿದರು.



ಮ್ಯಾನ್‌ಹೋಲ್‌ಗೆ ಇಳಿದಿರುವ ಗದಗ ಜಿಲ್ಲಾಧಿಕಾರಿ ಕಚೇರಿಯ ಹೊರಗುತ್ತಿಗೆ ನೌಕರ

‘ಮ್ಯಾನುವಲ್ ಸ್ಕ್ಯಾವೆಂಜಿಂಗ್‌ಗೆ ಬುಟ್ಟಿ, ಸಲಿಕೆ, ಬಕೆಟ್ ಮೊದಲಾದ ಸಲಕರಣೆಗಳು ಬೇಕು. ಆದರೆ, ವಿಡಿಯೊ ಗಮನಿಸಿದರೆ ಈ ಉಪಕರಣಗಳು ಇಲ್ಲದಿರುವುದು ಗೋಚರಿಸುತ್ತದೆ. ಸ್ಪ್ಯಾನರ್ ತೆಗೆಯಲು ಇಳಿದ ಕ್ಷಣವನ್ನೇ ಯಾರೋ ವಿಡಿಯೊ ಮಾಡಿದ್ದಾರೆ’ ಎಂದು ಜಿಲ್ಲಾಧಿಕಾರಿ ಕಚೇರಿಯ ನಿರ್ವಹಣಾ ಕೋಶದ ಮೇಲ್ವಿಚಾರಕ ಸಿದ್ದಲಿಂಗಪ್ಪ ಮುರಿಗೆಪ್ಪ ತಿಳಿಸಿದ್ದಾರೆ.

ಈ ಸಂಬಂಧ ಜಿಲ್ಲಾಧಿಕಾರಿ ಎಂ.ಸುಂದರೇಶ್‌ಬಾಬು ಅವರ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತು. ಅವರು ಕರೆ ಸ್ವೀಕರಿಸಲಿಲ್ಲ.

ಪ್ರಭಾಕರ್ ಭಟ್ ವಿರುದ್ಧ ಆಕ್ರೋಶ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಉಳ್ಳಾಲ: ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಪರಿಷತ್ ಉದ್ಘಾಟನೆಗೆ ಆರ್‌ಎಸ್‌ಎಸ್ ಮುಖಂಡ ಡಾ.ಕಲ್ಲಡ್ಕ ಪ್ರಭಾಕರ ಭಟ್ ಅವರನ್ನು ಆಹ್ವಾನಿಸಿರುವುದಕ್ಕೆ ವಿರೋಧಿಸಿ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಕಾರ್ಯಕರ್ತರು, ವಿ.ವಿ. ಮುಖ್ಯದ್ವಾರದಲ್ಲಿ ಪ್ರತಿಭಟನೆ ನಡೆಸಿದರು.

ವಿ.ವಿ ಆವರಣದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಪ್ರತಿಭಟನನಿರತರನ್ನು ಪ್ರವೇಶ ದ್ವಾರದಲ್ಲೇ ತಡೆಯಲಾಯಿತು. ‘ಪ್ರಭಾಕರ ಭಟ್ ಗೋ ಬ್ಯಾಕ್’ ಘೋಷಣೆಗಳು ಕೇಳಿಬಂದವು. ಪ್ರತಿಭಟನಕಾರರನ್ನು ವಶಕ್ಕೆ ಪಡೆದು, ಬಿಡುಗಡೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನನಿರತ ವಿದ್ಯಾರ್ಥಿಗಳು, ‘ದ್ವೇಷ ಭಾಷಣವನ್ನು ನಿರಂತರವಾಗಿ ಮಾಡುತ್ತಿರುವ ಪ್ರಭಾಕರ ಭಟ್‌ರನ್ನು ಆಹ್ವಾನಿಸಿರುವುದು ಖಂಡನೀಯ. ವಿದ್ಯಾಕೇಂದ್ರವನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಸಂಘದ ಕೇಂದ್ರವನ್ನಾಗಿ ಮಾಡಲು ಹೊರಟಿದ್ದಾರೆ. ವಿದ್ಯೆ ನೀಡಬೇಕಾದ ಕೇಂದ್ರದಲ್ಲಿ ಕೋಮು ಸಾಮರಸ್ಯ ಕದಡುವ ಕಾರ್ಯ ಮಾಡುತ್ತಿದ್ದಾರೆ’ ಎಂದು ಆರೋಪಿಸಿದರು.

ವಿದ್ಯಾರ್ಥಿ ಪರಿಷತ್ ಉದ್ಘಾಟನೆ: ಪ್ರತಿಭಟನೆಯ ಮಧ್ಯೆಯೂ ಮಂಗಳೂರು ವಿಶ್ವವಿದ್ಯಾಲಯದ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ ವಿದ್ಯಾರ್ಥಿ ಪರಿಷತ್ ಉದ್ಘಾಟನೆ ಸಮಾರಂಭ ನಿರಾಂತಕವಾಗಿ ನಡೆಯಿತು. ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾಗಿ ಭಾಗವಹಿಸಿದ್ದ ಪ್ರಭಾಕರ್ ಭಟ್, ವಿ.ವಿ.ಯ ವಿದ್ಯಾರ್ಥಿ ಪರಿಷತ್ ಉದ್ಘಾಟಿಸಿದರು.

ಎಸ್‌ಎಫ್‌ಐ ಪ್ರತಿಭಟನೆ: ವಿಶ್ವವಿದ್ಯಾಲಯದ ವಿದ್ಯಾರ್ಥಿ ಪರಿಷತ್ ಉದ್ಘಾಟನೆಗೆ ಡಾ.ಕಲ್ಲಡ್ಕ ಪ್ರಭಾಕರ ಭಟ್ ಅವರನ್ನು ಆಹ್ವಾನಿಸಿದ್ದನ್ನು ವಿರೋಧಿಸಿ ಕುಲಪತಿ, ಆಡಳಿತ ಮಂಡಳಿ ವಿರುದ್ಧ ನಗರದ ಹಂಪನಕಟ್ಟೆ ಬಳಿಯ ವಿಶ್ವವಿದ್ಯಾಲಯ ಕಾಲೇಜು ಬಳಿ ಎಸ್‌ಎಫ್‌ಐ ಜಿಲ್ಲಾ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ವಿವಿಗಳಲ್ಲಿ ಜನಾಂಗ ದ್ವೇಷಿಗಳಿಗೆ ಪ್ರವೇಶವಿಲ್ಲ ಎಂಬ ಘೋಷಣೆ ಕೂಗಿದ ಕಾರ್ಯಕರ್ತರು, ದ್ವೇಷದ ಮಾತು ಆಡುವವರನ್ನು ಆಹ್ವಾನಿಸುವ ಮೂಲಕ ವಿಶ್ವವಿದ್ಯಾಲಯ ಪಾವಿತ್ರ್ಯತೆಗೆ ಧಕ್ಕೆ ತರಲಾಗಿದೆ ಎಂದರು.

ಕೇಸರಿ ಶಾಲು ಧರಿಸದ ಭಟ್

ಸಮಾರಂಭಕ್ಕೂ ಮುನ್ನ ವಿಶ್ವವಿದ್ಯಾಲಯದ ಆವರಣದಲ್ಲಿರುವ ಹುತಾತ್ಮರ ಸ್ಮಾರಕಕ್ಕೆ ಪುಷ್ಪನಮನ ಸಲ್ಲಿಸಿದ ಪ್ರಭಾಕರ್ ಭಟ್ ಅವರಿಗೆ ಕುಲಪತಿ ಡಾ.ಪಿ.ಎಸ್. ಯಡಪಡಿತ್ತಾಯ ಅವರು ಕೇಸರಿ ಶಾಲು ನೀಡಿದರು. ಆದರೆ, ಅದನ್ನು ಧರಿಸದ ಪ್ರಭಾಕರ್ ಭಟ್, ತಮ್ಮ ಜೊತೆಗೆ ಬಂದಿದ್ದವರಿಗೆ ನೀಡಿದ್ದಾರೆ. ಈ ವಿಡಿಯೊ ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.



ಮಂಗಳೂರು ವಿಶ್ವವಿದ್ಯಾಲಯದ ಪ್ರವೇಶ ದ್ವಾರದಲ್ಲಿ ಬುಧವಾರ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

‘ಅನ್ಯಾಯ ಮಾಡಿದವರನ್ನೇ ಹೀರೋ ಮಾಡಿದ್ದಾರೆ’

ಮಂಗಳೂರು: ‘ದೇಶಕ್ಕೆ ಅನ್ಯಾಯ ಮಾಡಿದವರನ್ನು ಅಕ್ಬರ್ ದಿ ಗ್ರೇಟ್, ಔರಂಗಜೇಬ್‌ನನ್ನು ಟೈಗರ್ ಎಂದು ಪಠ್ಯಪುಸ್ತಕದಲ್ಲಿ ಹೇಳಿಕೊಟ್ಟಿದ್ದಾರೆ. ದೇಶದ ಹೀರೋಗಳನ್ನು ಶಿಕ್ಷಣ ವ್ಯವಸ್ಥೆ ಝೀರೋ ಮಾಡಿಟ್ಟಿದೆ. ಅವರನ್ನು ಹೀರೋ ಮಾಡುವ ಕೆಲಸ ಈಗ ಮಾಡಲಾಗುತ್ತಿದೆ. ಅದಕ್ಕಾಗಿ ರಾಜ್ಯ ಸರ್ಕಾರವನ್ನು ಅಭಿನಂದಿಸುತ್ತೇನೆ’ ಎಂದು ಡಾ.ಕಲ್ಲಡ್ಕ ಪ್ರಭಾಕರ ಭಟ್ ಹೇಳಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯದ ಹೊರಗೆ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ಟಿಪ್ಪು ಪಠ್ಯ ಕೈಬಿಡುವ ಸರ್ಕಾರದ ನಿರ್ಧಾರವನ್ನು ಸಮರ್ಥಿಸಿಕೊಂಡರು.

‘ಹಿಂದೂಗಳ ದೇವಸ್ಥಾನದ ಆವರಣದಲ್ಲಿ ಅನ್ಯ ಧರ್ಮೀಯರಿಗೆ ವ್ಯಾಪಾರ ನಿಷೇಧ ಬಗ್ಗೆ ಪ್ರತಿಕ್ರಿಯಿಸಿದ ಅವರು, ಇಂಥ ನೀತಿಯನ್ನು ಜಾರಿಗೆ ತಂದಿದ್ದೇ ಕಾಂಗ್ರೆಸ್‌ನವರು. ಹಿಜಾಬ್ ತೀರ್ಪಿನ ವಿರುದ್ಧ ರಾಜ್ಯ ಬಂದ್ ಕರೆ ಕೊಟ್ಟಿರುವುದು ತಪ್ಪು, ಅದು ಸಂವಿಧಾನ ವಿರೋಧಿ ನಿಲುವು. ಈ ಕಾರಣದಿಂದ ಹಿಂದೂ ಎಚ್ಚೆತ್ತುಕೊಂಡಿದ್ದಾನೆ, ಬಹಿಷ್ಕಾರದ ಅಸ್ತ್ರ ಹಿಡಿದಿದ್ದಾನೆ’ ಎಂದರು.

ತಮ್ಮ ವಿರುದ್ಧ ನಡೆದ ಪ್ರತಿಭಟನೆಯ ಕುರಿತು ಮಾತನಾಡಿದ ಅವರು, ‘ಯಾರು ಬೇಕಾದರೂ ಪ್ರತಿಭಟಿಸಬಹುದು. ಕೋಮು ದ್ವೇಷ ಅಂದರೆ ಏನು? ಹಿಂದೂ ಧರ್ಮದ ಬಗ್ಗೆ ಮಾತನಾಡಿದರೆ ಕೋಮುದ್ವೇಷವೇ? ಹಿಂದೂ ಎನ್ನುವುದು ಈ ದೇಶದ ಹೆಸರು’ ಎಂದರು.

ಹಿತಾಸಕ್ತಿ ಸಂಘರ್ಷದಲ್ಲಿ ಸಿ.ಎಸ್?

ಒಂದನೇ ಪುಟದಿಂದ

ಬಿ.ಎ. ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಆ ಸಭೆಯಲ್ಲಿ ರವಿಕುಮಾರ್ ಕೂಡ ಭಾಗಿಯಾಗಿದ್ದರು. ಆ ಸಭೆಯಲ್ಲೇ ಕೆಇಆರ್‌ಸಿ ಅಧ್ಯಕ್ಷರ ನೇಮಕಾತಿಗೆ ಅರ್ಜಿ ಆಹ್ವಾನಿಸುವುದಕ್ಕೆ ಸಂಬಂಧಿಸಿದ ಕರಡು ಅಧಿಸೂಚನೆ ಮತ್ತು ವೇಳಾಪಟ್ಟಿಗಳನ್ನು ಅನುಮೋದಿಸಲಾಗಿತ್ತು.

‘ಅರ್ಜಿ ಸಲ್ಲಿಸುವವರು ಕನಿಷ್ಠ 25 ವರ್ಷಗಳ ಸೇವಾ ಅನುಭವ ಹೊಂದಿರಬೇಕು ಮತ್ತು ಇಂಧನ ಇಲಾಖೆಯಲ್ಲಿ ಹಿರಿಯ ಶ್ರೇಣಿಯಲ್ಲಿ ಕಾರ್ಯನಿರ್ವಹಿಸಿರಬೇಕು’ ಎಂಬುದೂ ಸೇರಿದಂತೆ ಐದು ಅರ್ಹತೆಗಳನ್ನು ನಿಗದಿಪಡಿಸುವ ಕರಡನ್ನು ಆ ಸಭೆ ಅಂಗೀಕರಿಸಿತ್ತು. ಅದೇ ದಿನ ಅರ್ಜಿಗಳನ್ನೂ ಆಹ್ವಾನಿಸಿ ಅಧಿಸೂಚನೆ ಹೊರಡಿಸಲಾಗಿತ್ತು.

ಹಲವರ ಪೈಪೋಟಿ: ರವಿಕುಮಾರ್, ಮಹೇಂದ್ರ ಜೈನ್ ಸೇರಿದಂತೆ ಹಲವು ಅಧಿಕಾರಿಗಳು ಕೆಇಆರ್‌ಸಿ ಅಧ್ಯಕ್ಷರ ಹುದ್ದೆ ಪಡೆಯಲು ಪೈಪೋಟಿ ನಡೆಸುತ್ತಿದ್ದಾರೆ. ಆಯ್ಕೆ ಸಮಿತಿಯು ಇಬ್ಬರ ಹೆಸರನ್ನು ಶಿಫಾರಸು ಮಾಡಲು ಅವಕಾಶವಿದ್ದು, ಹಲವು ಮಂದಿ ಅರ್ಜಿ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

1984ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ರವಿಕುಮಾರ್ 2021ರ ಜನವರಿಯಲ್ಲಿ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದ್ದರು. ಇದೇ ಜೂನ್‌ನಲ್ಲಿ ನಿವೃತ್ತಿ ಹೊಂದಲಿದ್ದಾರೆ. ಅದಕ್ಕೂ ಮೊದಲು ಕೆಇಆರ್‌ಸಿ ಅಧ್ಯಕ್ಷರ ಹುದ್ದೆ ಭರ್ತಿಯಾಗುತ್ತದೆ ಎನ್ನುವ ಕಾರಣಕ್ಕಾಗಿ ಸ್ವಯಂನಿವೃತ್ತಿ ಪಡೆಯಲು ಮುಂದಾಗಿದ್ದಾರೆ ಎನ್ನುತ್ತವೆ ಮೂಲಗಳು.

‘ಕೆಇಆರ್‌ಸಿ ಅಧ್ಯಕ್ಷರ ಹುದ್ದೆ ಉನ್ನತ ಸ್ಥಾನಮಾನ ಮತ್ತು ವೇತನ, ಭತ್ಯೆಗಳನ್ನು ಹೊಂದಿದೆ. ಆಯೋಗದ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರಗಳೂ ಇವೆ. ಐದು ವರ್ಷಗಳ ಅಧಿಕಾರದ ಅವಧಿ ಇದ್ದು, 65 ವರ್ಷ ವಯಸ್ಸಾಗುವವರೆಗೂ ಸೇವೆಯಲ್ಲಿರಬಹುದು. ಈ ಎಲ್ಲ ಕಾರಣಕ್ಕಾಗಿ ಮುಖ್ಯ ಕಾರ್ಯದರ್ಶಿಯಂತಹ ಸಾಂವಿಧಾನಿಕ ಹುದ್ದೆ ತೊರೆದು, ಕೆಇಆರ್‌ಸಿ ಅಧ್ಯಕ್ಷ ಸ್ಥಾನಕ್ಕೇರಲು ಪ್ರಯತ್ನ ನಡೆಸಿದ್ದಾರೆ’ ಎಂಬ ಮಾತು ಅಧಿಕಾರಿಗಳ ವಲಯದಲ್ಲಿದೆ.

ಕಳಸ, ಕೊಟ್ಟಿಗೆಹಾರದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಕೊಟ್ಟಿಗೆಹಾರ: ಚಿಕ್ಕಮಗಳೂರು ಜಿಲ್ಲೆಯ ಬಣಕಲ್, ಕೊಟ್ಟಿಗೆಹಾರ, ಚಾರ್ಮಾಡಿ ಘಾಟ್, ಬಾಳೂರು ಸುತ್ತಮುತ್ತ ಬುಧವಾರ ಉತ್ತಮ ಮಳೆ ಸುರಿಯಿತು. ಕಳಸದಲ್ಲಿ ಹದವಾದ ಮಳೆ ಆಗಿದೆ. ಕಾಫಿ, ಕಾಳುಮೆಣಸು ಮತ್ತು ಅಡಿಕೆ ಬೆಳೆಗೆ ಈಗ ಸುರಿಯುತ್ತಿರುವ ಮಳೆ ಪೂರಕವಾಗಿದೆ ಎಂದು ರೈತರು ಹೇಳಿದ್ದಾರೆ.

ಸ್ವಪಕ್ಷೀಯ ಶಾಸಕ ವಿರುದ್ಧ ಮಾಜಿ ಸಂಸದ ಕೆ.ಎಚ್.ಮುನಿಯಪ್ಪ ವಾಗ್ದಾಳಿ

‘ನನ್ನನ್ನು ಸೋಲಿಸಿದ್ದೇ ರಮೇಶ್‌ಕುಮಾರ್’

ಪ್ರಜಾವಾಣಿ ವಾರ್ತೆ

ಕೋಲಾರ: ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಅವರು ಬುಧವಾರ ತಮ್ಮದೇ ಪಕ್ಷದ, ಶ್ರೀನಿವಾಸಪುರ ಕ್ಷೇತ್ರದ ಶಾಸಕ ಕೆ.ಆರ್. ರಮೇಶ್‌ಕುಮಾರ್ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ್ದಾರೆ.

‘ನನ್ನ ತಾಳ್ಮೆಗೂ ಒಂದು ಮಿತಿಯಿದೆ ಮಿಸ್ಟರ್ ರಮೇಶ್‌ಕುಮಾರ್. ಕಳೆದ ಲೋಕಸಭಾ ಚುನಾವಣೆಯಲ್ಲಿ ನನ್ನ ಸೋಲಿಗೆ ನೀನೇ ಕಾರಣ’ ಎಂದು ಸುದ್ದಿಗೋಷ್ಠಿಯಲ್ಲಿ ಅವರು ರಮೇಶ್‌ಕುಮಾರ್ ವಿರುದ್ಧ ಹರಿಹಾಯ್ದರು.

‘ಹೇ, ರಮೇಶ್‌ಕುಮಾರ್... ನಿನ್ನ ನಾಟಕ ಎಲ್ಲಾ ಗೊತ್ತು. ಅತಿ ಬುದ್ಧಿವಂತಿಕೆ ತೋರಿಸಬೇಡ. ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಸೋಲಿಸಿ ಬಹಳ ತಪ್ಪು ಮಾಡಿದ್ದೀಯಾ’ ಎಂದು ಏಕವಚನದಲ್ಲೇ ನಿಂದಿಸಿದರು.

‘ಮಾತನಾಡಲಿ ಬಿಡಿ. ಮೂರ್ನಾಲ್ಕು ವರ್ಷಗಳಿಂದ ನಾನು ಯಾರಿಗೂ, ಯಾವುದಕ್ಕೂ ಪ್ರತಿಕ್ರಿಯಿಸಿಲ್ಲ. ನಾನು ನೆಮ್ಮದಿಯಾಗಿ ಇದ್ದೇನೆ.

ಕೆ.ಆರ್.ರಮೇಶ್‌ಕುಮಾರ್, ಕಾಂಗ್ರೆಸ್ ಶಾಸಕ

‘ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ತಲೆ ಮೇಲೆ ಕೂರಿಸಿಕೊಂಡು ಗೆಲ್ಲಿಸಿದ್ದು ಆಯಿತು. ಇನ್ನು ಮುಂದೆ ನಿನ್ನ ಆಟ ನಡೆಯಲ್ಲ. ಇಷ್ಟು ದಿನ ಹೈಕಮಾಂಡ್ ಸೂಚನೆ ಕಾರಣಕ್ಕೆ ಸುಮ್ಮನಿದ್ದೆ. ನಿನ್ನ ಕತೆ ಜನರ ಮುಂದೆ ಬಿಚ್ಚಿಡುತ್ತೇನೆ. ಶ್ರೀನಿವಾಸಪುರ ಕ್ಷೇತ್ರದಿಂದಲೇ ಶುರು ಮಾಡುತ್ತೇನೆ, ಹುಷಾರ್!’ ಎಂದು ಎಚ್ಚರಿಕೆ ನೀಡಿದರು.

‘ಮೂರು ದಶಕದ ರಾಜಕಾರಣದಲ್ಲಿ ಏಳು ಬಾರಿ ಸಂಸದನಾಗಿ ಕಾಂಗ್ರೆಸ್ ಪಕ್ಷದಿಂದಲೇ ಆಯ್ಕೆಯಾಗಿದ್ದೇನೆ. ಕಾಂಗ್ರೆಸ್ ಸರಿ ಇಲ್ಲ ಎಂದು ದೇವೇಗೌಡರ ಬಳಿ ಹೋದ ನೀನು ಅಲ್ಲಿಂದ ಮತ್ತೆ ಕಾಂಗ್ರೆಸ್‌ಗೆ ಬಂದು ಕ್ಷೇತ್ರದಲ್ಲಿ ಪಕ್ಷವನ್ನು ಛಿದ್ರ ಮಾಡಿದೆ. ನಾನು ಬೆಳೆಸಿದ್ದ ಸಂಘಟನೆ ಹಾಳು ಮಾಡಿದ್ದೀಯಾ. ಕಾಂಗ್ರೆಸ್ ಪಕ್ಷದ ದಿಕ್ಕು ತಪ್ಪಿಸಿ ಬಿಜೆಪಿಯನ್ನು ಕೋಲಾರದಲ್ಲಿ ಗೆಲ್ಲಿಸಿದ್ದು ಇತಿಹಾಸದಲ್ಲೇ ಇಲ್ಲ. ಇದರ ಕೀರ್ತಿ ನಿನಗೆ ಸಲ್ಲುತ್ತದೆ’ ಎಂದು ಕುಟುಕಿದರು.

‘ಬಿಜೆಪಿಯಿಂದ ಸ್ಪರ್ಧಿಸು, ತಾಕತ್ತು ತೋರಿಸುತ್ತೇನೆ’

‘ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸರಿ ಇಲ್ಲ ಎಂದು ಬಿಜೆಪಿ ಗೆಲ್ಲಿಸಿದೆಯಲ್ಲಾ? ಈಗ ಬಿಜೆಪಿಗೆ ಹೋಗಿ ಚುನಾವಣೆಗೆ ನಿಂತುಕೋ, ನಾನು ನೋಡೇ ಬಿಡುತ್ತೇನೆ. ಏಕೆ ಇನ್ನೂ ಕಾಂಗ್ರೆಸ್ ಪಕ್ಷದಲ್ಲೇ ಇದ್ದೀಯಾ? ನಿನಗೆ ಮಾನ ಮಾರ್ಯದೆ ಏನಾದರೂ ಇದೆಯಾ? ಈಗ ಮತ್ತೆ ಕಾಂಗ್ರೆಸ್ ಬಗ್ಗೆ ಮಾತನಾಡುತ್ತೀಯಾ? ನಿನಗೆ ಸ್ವಲ್ಪವೂ ನಾಚಿಕೆಯಾಗಲ್ಲವಾ?’ ಎಂದು ರಮೇಶ್‌ಕುಮಾರ್ ಅವರನ್ನು ಪ್ರಶ್ನಿಸಿದರು.

‘ಕಾಂಗ್ರೆಸ್‌ನಲ್ಲಿ ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟಿ ಆಟ ಆಡುತ್ತಿದ್ದೀಯಾ? ರಾಜಕೀಯವಾಗಿ ಮುಳುಗುತ್ತಿರುವ ನೀನು ಜತೆಯಲ್ಲಿ ಇದ್ದವರನ್ನು ಮುಳುಗಿಸುತ್ತೀಯಾ? ಕಾಂಗ್ರೆಸ್ ಮುಳುಗಿಸಬೇಕೆಂದು ತೀರ್ಮಾನಿಸಿದ್ದಿಯಾ?. ಮುಂದಿನ ಒಂದು ವರ್ಷದಲ್ಲಿ ನಾನು ಏನೆಂದು ನಿನಗೆ ತೋರಿಸುತ್ತೇನೆ’ ಎಂದು ಸವಾಲು ಹಾಕಿದರು.

ಹೆತ್ತವರ ಸಾವಿನ ನೋವಿನಲ್ಲೂ ಪರೀಕ್ಷೆಗೆ ಹಾಜರು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಅಮ್ಮನ ಸಾವಿನ ನೋವಿನಲ್ಲೂ ಬುಧವಾರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಆಂಗ್ಲ ಭಾಷಾ ವಿಷಯದ ಪರೀಕ್ಷೆ ಬರೆದ ಮೂವರು ವಿದ್ಯಾರ್ಥಿಗಳು, ಪರೀಕ್ಷೆಯ ನಂತರ ಅಂತ್ಯಸಂಸ್ಕಾರದಲ್ಲಿ ಭಾಗಿಯಾಗಿದರು.

ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕಿನ ದೂದಿಹಳ್ಳಿ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ಮಧು ಚಂದ್ರಪ್ಪ ಅಡಗಂಟಿ ತಂದೆ ಚಂದ್ರಪ್ಪ (46) ಅವರ ಸಾವಿನ ದುಃಖದ ನಡುವೆಯೂ ಪಟ್ಟಣದ ಸಂಗಮೇಶ್ವರ ಪ್ರೌಢಶಾಲಾ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಬರೆದಿದ್ದಾರೆ.

ಶಿಗ್ಗಾವಿಯ ಜೆಎಂಜೆ ಪ್ರೌಢಶಾಲೆ ವಿದ್ಯಾರ್ಥಿ ಹನುಮರಹಳ್ಳಿ ಗ್ರಾಮದ ಯಶವಂತ ಉಮೇಶ ಸಂಶಿ ಅವರ ತಾಯಿ ಸರಸ್ವತಿ ಉಮೇಶ ಸಂಶಿ (40) ಮಂಗಳವಾರ ನಿಧನರಾಗಿದ್ದರು. ಬಿಇಒ ಅವರ ತಂಡ ಆತ್ಮಸ್ಥೈರ್ಯ ತುಂಬಿದ ಬಳಿಕ ವಿದ್ಯಾರ್ಥಿ ಪರೀಕ್ಷೆ ಬರೆದಿದ್ದಾರೆ.

ಗದಗ ಜಿಲ್ಲೆ ನರಗುಂದ ಪಟ್ಟಣದ ಕಲ್ಲಪ್ಪ ಮೆಣಸಿನಕಾಯಿ ಹೃದಯಾಘಾತದಿಂದ ನಿಧನರಾಗಿದ್ದು, ನೋವಿನಲ್ಲೂ ಮಗಳು ಭುವನೇಶ್ವರಿ ಪರೀಕ್ಷೆ ಬರೆದರು.

ನಕಲಿ ವಿದ್ಯಾರ್ಥಿ ಸೆರೆ(ಬಳ್ಳಾರಿ ವರದಿ): ಇಲ್ಲಿನ ಸರ್ಕಾರಿ ಮುನ್ಸಿಪಲ್ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಆಂಗ್ಲ ಭಾಷಾ ವಿಷಯದ ಪರೀಕ್ಷೆ ಬರೆಯುತ್ತಿದ್ದ ನಕಲಿ ವಿದ್ಯಾರ್ಥಿಯನ್ನು ಪೊಲೀಸರು ಬಂಧಿಸಿದ್ದಾರೆ. ಖಾಸಗಿ ವಿದ್ಯಾರ್ಥಿ ಬದಲಿಗೆ ಸುಭಾಷ್ ಎಂಬಾತ ಬರೆಯುತ್ತಿದ್ದ. ಆತನನ್ನು ಪೊಲೀಸರಿಗೆ ಒಪ್ಪಿಸಲಾಯಿತು.

ಪರೀಕ್ಷಾ ಕೇಂದ್ರಕ್ಕೆ ಸಚಿವ ಭೇಟಿ: ಆಕ್ಷೇಪ

ಬಳ್ಳಾರಿ: ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಿಗೆ ಜಿಲ್ಲಾ ಸಚಿವ ಬಿ. ಶ್ರೀರಾಮುಲು ಬುಧವಾರ ಭೇಟಿ ನೀಡಿದ್ದು, ಸಚಿವರ ಈ ಭೇಟಿ ಕುರಿತು ಮಕ್ಕಳು ಮತ್ತು ಪೋಷಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಪರೀಕ್ಷೆ ವೇಳೆ ಕೇಂದ್ರಕ್ಕೆ ಭೇಟಿ ಕೊಡುವುದು ಸರಿಯಲ್ಲ ಎಂಬ ಅಧಿಕಾರಿಗಳ ಸಲಹೆ ಕಡೆಗಣಿಸಿ ಶ್ರೀರಾಮುಲು ತೆರಳಿದ್ದರು’ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸಿ.ರಾಮಪ್ಪ ಸ್ಪಷ್ಟಪಡಿಸಿದರು.

ವಿದ್ಯಾರ್ಥಿನಿಗೆ ಎದೆನೋವು, ಆತಂಕ

ಗದಗ: ನರಗುಂದ ತಾಲ್ಲೂಕಿನ ಶಿರೋಳ ಗ್ರಾಮದ ಪರೀಕ್ಷಾ ಕೇಂದ್ರದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯುತ್ತಿದ್ದ ಕಲ್ಲಾಪುರ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿಗೆ ಎದೆ ನೋವು ಕಾಣಿಸಿಕೊಂಡಿದ್ದು, ಆತಂಕದ ಸ್ಥಿತಿ ನಿರ್ಮಾಣವಾಗಿತ್ತು.

ತಕ್ಷಣವೇ ಶಿಕ್ಷಕರು ಆ ವಿದ್ಯಾರ್ಥಿನಿಯನ್ನು 108 ವಾಹನದಲ್ಲಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿ, ಮತ್ತೆ ಪರೀಕ್ಷೆಗೆ ಕರೆತರಲಾಯಿತು. ‘ಆಕೆ ಈಗ ಆರೋಗ್ಯವಾಗಿದ್ದಾಳೆ’ ಎಂದು ಡಿಡಿಪಿಐ ಬಸವಲಿಂಗಪ್ಪ ತಿಳಿಸಿದ್ದಾರೆ.

ಹಿಜಾಬ್: ಪರೀಕ್ಷೆ ಬರೆಯದೇ ವಾಪಸು

ಸಿಂದಗಿ (ವಿಜಯಪುರ): ಪಟ್ಟಣದ ಸರ್ಕಾರಿ ಆದರ್ಶ ಆಂಗ್ಲ ಮಾಧ್ಯಮ ವಿದ್ಯಾಲಯದಲ್ಲಿ ಬುಧವಾರ ಹಿಜಾಬ್ ಧರಿಸಿ ಬಂದಿದ್ದ ವಿದ್ಯಾರ್ಥಿನಿ ಆಲ್ಫಿಯಾನಾಜ್ ಬಾಗವಾನ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯದ ಮನೆಗೆ ಮರಳಿದರು.

ಬಿಇಒ ಹರನಾಳ, ಎಸ್‌ಡಿಎಂಸಿ ಸದಸ್ಯರೊಬ್ಬರು ವಿದ್ಯಾರ್ಥಿನಿಗೆ ಮನವೊಲಿಕೆಗೆ ಪ್ರಯತ್ನಿಸಿದರು. ‘ಇದೇ ವಿದ್ಯಾರ್ಥಿನಿ ಉರ್ದು ಭಾಷಾ ವಿಷಯ ಪರೀಕ್ಷೆಯನ್ನು ಹಿಜಾಬ್ ತೆಗೆದಿಟ್ಟು ಬರೆದಿದ್ದಾಳೆ’ ಎಂದು ಪರೀಕ್ಷಾ ಕೇಂದ್ರದ ಮುಖ್ಯಸ್ಥ ರಮೇಶ ಚಟ್ಟರಕಿ ತಿಳಿಸಿದರು.

ಅದಿರು ರಫ್ತು: ನಿಲುವು ಸ್ಪಷ್ಟಪಡಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಗಣಿಗಳಿಂದ ಹೊರ ತೆಗೆಯಲಾದ ಕಬ್ಬಿಣದ ಅದಿರಿನ ರಫ್ತು ಕುರಿತು ತಮ್ಮ ನಿಲುವನ್ನು ಸ್ಪಷ್ಟಪಡಿಸುವಂತೆ ‘ಸುಪ್ರೀಂ’ ಬುಧವಾರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿದೆ.

ಅದಿರು ರಫ್ತು ನಿಷೇಧಿಸಿ ಆದೇಶಿಸಿದ ಪ್ರಕರಣದ ವಿಚಾರಣೆ ನಡೆಸಿದ ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ಪೀಠ ಈ ಬಗ್ಗೆ ಏ.8ರೊಳಗೆ ಪ್ರತಿಕ್ರಿಯಿಸಲು ಎರಡು ಸರ್ಕಾರಗಳಿಗೆ ಸೂಚಿಸಿದೆ.

ವರ್ಷಗಳ ಹಿಂದೆ ಗಣಿಗಳಲ್ಲಿ ಸಂಗ್ರಹಿಸಿರುವ ಅದಿರನ್ನು ಸ್ಥಳೀಯವಾಗಿ ಬಳಸಬೇಕೇ, ಅಥವಾ ರಫ್ತು ಮಾಡುವ ಮೂಲಕ ಮಾರಬೇಕೇ ಎಂದು ಸ್ಪಷ್ಟ ನಿಲುವು ತಿಳಿಸಲು ಕೇಂದ್ರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರಿಗೆ ಪೀಠ ತಿಳಿಸಿತು.

ಗಣಿಗಳಲ್ಲಿ ಸದ್ಯ ಇರುವ ಅದಿರು ಪ್ರಮಾಣ ಕುರಿತು ವರದಿ ಸಲ್ಲಿಸಲು ನ್ಯಾಯಪೀಠವು ‘ಸುಪ್ರೀಂ’ ನಿರ್ದೇಶಿತ ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ), ಮೇಲ್ವಿಚಾರಣಾ ಸಮಿತಿಗಳಿಗೆ ಸೂಚಿಸಿತು.

‘ಅದಿರನ್ನು ಬಳಸದೆ ಗಣಿಗಳಲ್ಲಿ ಇಡುವುದರಲ್ಲಿ ಅರ್ಥವಿಲ್ಲ. ಅದಿರುವ ಮಾರಾಟ ಅಥವಾ ತೆರವು ಬಗ್ಗೆ ಆಲೋಚಿಸಿದಲ್ಲಿ ಅಭಿವೃದ್ಧಿ ನಿಧಿಗೆ ಹಣ ದೊರೆಯಬಹುದು ಎಂದು ನ್ಯಾಯಮೂರ್ತಿಗಳಾದ ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

ಸುದ್ದಿ 2 ನಿಮಿಷ

ಡಿಸಿಸಿ ಬ್ಯಾಂಕ್ ವಿಲೀನಕ್ಕೆ ವಿರೋಧ

ಚಿತ್ರದುರ್ಗ: ಕೇರಳ ಮಾದರಿಯಲ್ಲಿ ರಾಜ್ಯದಲ್ಲಿ ಜಿಲ್ಲಾ ಕೇಂದ್ರ ಸಹಕಾರ (ಡಿಸಿಸಿ) ಬ್ಯಾಂಕ್‌ಗಳ ವಿಲೀನಕ್ಕೆ ಸ್ಪಷ್ಟ ವಿರೋಧವಿದೆ. ಆದರೆ, ಸಹಕಾರ ಕ್ಷೇತ್ರವನ್ನು ಬಲಪಡಿಸಿ, ಅಭಿವೃದ್ಧಿಗೊಳಿಸಬೇಕು’ ಎಂದು ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷ ಜಿ.ಟಿ. ದೇವೇಗೌಡ ಬುಧವಾರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ರಾಜ್ಯದಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ಗಳ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿವೆ. ಎರಡು ಹಂತದ ವ್ಯವಸ್ಥೆ ಸಹಕಾರ. ಕರ್ನಾಟಕ ಹಾಗೂ ಕೇರಳದ ಪರಿಸ್ಥಿತಿ ಭಿನ್ನವಾಗಿದೆ. ರಾಜ್ಯಕ್ಕೆ ಬದ್ಧತೆಯ ಕುರಿತು ಅಮಿತ್ ಶಾ ಅವರೊಂದಿಗೆ ಈ ಕುರಿತು ಚರ್ಚಿಸಲಾಗುವುದು’ ಎಂದು ಹೇಳಿದರು.

‘ವಾಣಿಜ್ಯ ಬ್ಯಾಂಕ್‌ಗಳ ಎನ್‌ಪಿಎ ತುಂಬುವ ಕೆಲಸವನ್ನು ಕೇಂದ್ರ ಮಾಡುತ್ತಿದೆ. ಸಹಕಾರ ಕ್ಷೇತ್ರವನ್ನು ಉಳಿಸಲು ಕೊಡುಗೆ ನೀಡಿಲ್ಲ. ಟಿಎಪಿಸಿಎಂಎಸ್ ವ್ಯವಸ್ಥೆಯನ್ನು ಇನ್ನಷ್ಟು ಸುಬಲಗೊಳಿಸಲು ನೆರವು ನೀಡುತ್ತಿಲ್ಲ. ಸಹಕಾರ ಕ್ಷೇತ್ರಕ್ಕೆ ಪ್ರತ್ಯೇಕ ಸಚಿವಾಲಯ ತೆರೆದ ಪ್ರಧಾನಿ ನರೇಂದ್ರ ಮೋದಿ ಅವರು ಸಹಕಾರ ಸಂಘಗಳ ಮೇಲಿನ ತೆರಿಗೆಯನ್ನು ತೆಗೆದು ಹಾಕಲಿ’ ಎಂದು ಆರೋಪಿಸಿದರು.



ನಂದಿನಿ ಕ್ಷೀರಾಭಿವೃದ್ಧಿ ಬ್ಯಾಂಕ್, ‘ಯಶಸ್ವಿನಿ’ಗೆ ಶಾ ಚಾಲನೆ ನಾಳೆ

ಬೆಂಗಳೂರು: ರಾಜ್ಯದಲ್ಲಿ ನಂದಿನಿ ಕ್ಷೀರಾಭಿವೃದ್ಧಿ ಬ್ಯಾಂಕ್ ಸ್ಥಾಪನೆ ಮತ್ತು ಯಶಸ್ವಿನಿ ಯೋಜನೆಯ ಪುನರಾರಂಭಕ್ಕೆ ಸಹಕಾರ ಖಾತೆಯನ್ನೂ ಹೊಂದಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಏ. 1ರಂದು ಚಾಲನೆ ನೀಡಲಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘31ರಂದು ರಾತ್ರಿ 10.30ಕ್ಕೆ ಬೆಂಗಳೂರಿಗೆ ಬರಲಿರುವ ಶಾ, ಮರುದಿನ ಬೆಳಿಗ್ಗೆ ತುಮಕೂರಿನ ಸಿದ್ದಗಂಗಾ ಮಠಕ್ಕೆ ತೆರಳಿ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ’ ಎಂದರು.

‘ಮಧ್ಯಾಹ್ನ ಮುದ್ದೇನಹಳ್ಳಿಯಲ್ಲಿ ವೈದ್ಯಕೀಯ ಕಾಲೇಜಿನ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ ನಾಲ್ಕು ಗಂಟೆಗೆ ಅರಮನೆ ಮೈದಾನದಲ್ಲಿ ಸಹಕಾರ ಇಲಾಖೆಯ ಸಹಕಾರ ಸಮ್ಮೇಳನದಲ್ಲಿ ನಂದಿನಿ ಕ್ಷೀರಾಭಿವೃದ್ಧಿ ಬ್ಯಾಂಕಿನ ಲಾಂಛನ ಬಿಡುಗಡೆ ಮಾಡಲಿದ್ದಾರೆ. ಸಂಜೆ 6 ಗಂಟೆಗೆ ಮಲ್ಲೇಶ್ವರದಲ್ಲಿರುವ ರಾಜ್ಯ ಬಿಜೆಪಿ ಕಚೇರಿಗೆ ಭೇಟಿ ನೀಡಲಿದ್ದು, ಪಕ್ಷದ ಪ್ರಮುಖರ ಸಭೆಯಲ್ಲಿ ಭಾಗವಹಿಸಲಿದ್ದಾರೆ’ ಎಂದು ಬೊಮ್ಮಾಯಿ ತಿಳಿಸಿದರು.

‘ರಾಜ್ಯದಲ್ಲಿ ಒಟ್ಟು 26 ಲಕ್ಷ ಹಾಲು ಉತ್ಪಾದಕರಿದ್ದಾರೆ. 14,900 ಹಾಲು ಸಹಕಾರಿ ಸಂಘಗಳಿವೆ. ಒಟ್ಟು 15 ಹಾಲು ಒಕ್ಕೂಟಗಳಿವೆ. ಹಾಲು ಉತ್ಪಾದನೆ ಮತ್ತು ಇತರ ಚಟುವಟಿಕೆಗೆ ಆರ್ಥಿಕ ಸಂಸ್ಥೆ ಇರಬೇಕೆಂಬ ಕಾರಣಕ್ಕೆ ನಂದಿನಿ ಕ್ಷೀರಾಭಿವೃದ್ಧಿ ಬ್ಯಾಂಕ್ ಸ್ಥಾಪಿಸಲು ಬಜೆಟ್‌ನಲ್ಲಿ ಘೋಷಿಸಿದ್ದು, ಸರ್ಕಾರ ₹ 100 ಕೋಟಿ ನೀಡಲಿದೆ. ಹಾಲು ಮಂಡಳಗಳು ₹ 250 ಕೋಟಿ ಷೇರು ಹಾಕಲಿವೆ. ದೇಶದಲ್ಲಿ ಮೊದಲ ಬಾರಿಗೆ ಹಾಲು ಉತ್ಪಾದಕರ ಬ್ಯಾಂಕ್ ತೆರೆಯಲಾಗುತ್ತಿದೆ. ಮುಂದಿನ ದಿನಗಳಲ್ಲಿ ರೈತರ ಆರ್ಥಿಕ ಸ್ಥಿತಿ ಬದಲಾಯಿಸಲು ಈ ಯೋಜನೆ ಸಹಕಾರಿಯಾಗಲಿದೆ’ ಎಂದರು.

ಸುಳ್ಳು ಜಾತಿ ಪ್ರಮಾಣಪತ್ರ: ನಗರಸಭೆ ಸದಸ್ಯೆ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ಪರಿಶಿಷ್ಟ ಜಾತಿಯ ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದ ಪ್ರಕರಣಕ್ಕೆ ಸಂಬಂಧಿಸಿ ರಾಯಚೂರು ನಗರಸಭೆ ಸದಸ್ಯೆ ರೇಣಮ್ಮ ಭೀಮರಾಯ ಅವರನ್ನು ಕಲಬುರ್ಗಿಯ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಪೊಲೀಸರು ಬುಧವಾರ ವಶಕ್ಕೆ ಪಡೆದರು.

ನಗರಸಭೆ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಮತ ಚಲಾಯಿಸಿ ಹೊರಬರುತ್ತಿದ್ದಂತೆ ಮಹಿಳಾ ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡರು.

ಪ್ರವರ್ಗ–1 ರಲ್ಲಿರುವ ಕಿಳ್ಳಿಕ್ಯಾತ ಜಾತಿಗೆ ಸೇರಿದ ರೇಣಮ್ಮ ಅವರು ಶಿಳ್ಳಿಕ್ಯಾತ ಎಂದು ಪರಿಶಿಷ್ಟ ಜಾತಿ ಪ್ರಮಾಣಪತ್ರ ಪಡೆದಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಛಲವಾದಿ ಮಹಾಸಭಾ ಜಿಲ್ಲಾ ಘಟಕದಿಂದ ಜಾರಿ ನಿರ್ದೇಶನಾಲಯಕ್ಕೆ ದೂರು ಸಲ್ಲಿಸಲಾಗಿತ್ತು.



ರೇಣಮ್ಮ ಭೀಮರಾಯ

ಪರಿಶೀಲಿಸಿದ ನಿರ್ದೇಶನಾಲಯವು ಈ ಬಗ್ಗೆ ಜಿಲ್ಲಾಧಿಕಾರಿಗೆ ವರದಿ ಸಲ್ಲಿಸಿತ್ತು. ಇದನ್ನು ಆಧರಿಸಿ ಜಿಲ್ಲಾಧಿಕಾರಿ ಪ್ರಮಾಣಪತ್ರ ಜಾತಿ ಪರಿಶೀಲನಾ ಸಮಿತಿ ರದ್ದುಗೊಳಿಸಿದ್ದರು. ಆ ನಂತರ ಕಲಬುರಗಿ ಪ್ರಾದೇಶಿ ಆಯುಕ್ತರು ಸದಸ್ಯತ್ವ ರದ್ದುಗೊಳಿಸಿ ಆದೇಶಿಸಿದ್ದರು.

ಜಾತಿ ಪ್ರಮಾಣಪತ್ರ ರದ್ದತಿ ಪ್ರಶ್ನಿಸಿ ರೇಣಮ್ಮ ಅವರು ಹೈಕೋರ್ಟ್ ಮೊರೆ ಹೋಗಿದ್ದು, ವಿಚಾರಣೆ ಬಾಕಿ ಇದೆ. ಈ ಮಧ್ಯೆ ರೇಣಮ್ಮ ಅವರಿಗೆ ಅಧ್ಯಕ್ಷರ ಚುನಾವಣೆಯಲ್ಲಿ ಮತದಾನಕ್ಕೆ ಕೋರ್ಟ್ ಅನುಮತಿ ನೀಡಿದ್ದರಿಂದ ಅವರು ಸಭೆಗೆ ಹಾಜರಾಗಿದ್ದರು.

ಡಿಕೆಶಿ ವಿದೇಶ ಪ್ರವಾಸಕ್ಕೆ ಅನುಮತಿ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ)ದಿಂದ ಬಂಧನಕ್ಕೆ ಒಳಗಾಗಿ, ಷರತ್ತುಬದ್ಧ ಜಾಮೀನು ಪಡೆದಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ವಿದೇಶ ಪ್ರವಾಸ ಕೈಗೊಳ್ಳಲು ದೆಹಲಿ ಹೈಕೋರ್ಟ್ ಬುಧವಾರ ಅನುಮತಿ ನೀಡಿದೆ. ವಿಶೇಷ ಅತಿಥಿಯಾಗಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ)ಗೆ ತೆರಳಲು ಡಿಕೆಶಿ ಅನುಮತಿ ಕೋರಿದ್ದರು.

ಉದ್ಯಮಿ ಕೊಲೆ ಪ್ರಕರಣ • ಬೆಳಗಾವಿಯ ‘ಕೋಕಾ’ ನ್ಯಾಯಾಲಯದಿಂದ ತೀರ್ಪು

ಬನ್ನಂಜೆ ರಾಜಾ ಸೇರಿ 9 ಮಂದಿ ದೋಷಿಗಳು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಉತ್ತರ ಕನ್ನಡ ಜಿಲ್ಲೆ ಅಂಕೋಲಾದ ಉದ್ಯಮಿ, ಸಹಕಾರಿ ಧುರೀಣ ಆರ್.ಎನ್.ನಾಯಕ ಕೊಲೆ ಪ್ರಕರಣದ ವಿಚಾರಣೆ ನಡೆಸಿದ ಇಲ್ಲಿನ ‘ಕೋಕಾ’ (ಕರ್ನಾಟಕ ಸಂಘಟಿತ ಅಪರಾಧ ನಿಯಂತ್ರಣ ಕಾಯ್ದೆ) ನ್ಯಾಯಾಲಯವು, ಭೂಗತ ಪಾತಕಿ ಬನ್ನಂಜೆ ರಾಜಾ ಸೇರಿ 9 ಮಂದಿಯನ್ನು ದೋಷಿಗಳು ಎಂದು ಘೋಷಿಸಿದೆ.

‘ಏ.4ರಂದು ಶಿಕ್ಷೆಯ ಪ್ರಮಾಣ ಪ್ರಕಟಿಸಲಾಗುವುದು’ ಎಂದು ತೀರ್ಪು ಪ್ರಕಟಿಸಿದ ಪ್ರಧಾನ ಜಿಲ್ಲಾ ಹಾಗೂ ಸೆಷನ್ಸ್ ನ್ಯಾಯಾಧೀಶ ಸಿ.ಎಂ. ಜೋಶಿ ತಿಳಿಸಿದರು. ರಾಜ್ಯದ ಮೊದಲ ‘ಕೋಕಾ’ ಪ್ರಕರಣ ಇದಾಗಿದ್ದರಿಂದ, ಜನರ ಗಮನ ಸೆಳೆದಿತ್ತು.

ಈ ಪ್ರಕರಣದಲ್ಲಿ ಕೇರಳದ ರಬ್ದಿನ್ ಸಲೀಂ, ಬೆಂಗಳೂರು ಮೂಲದ ಮಹ್ಮದ್ ಶಹಬಂದ್ರಿ ಹಾಗೂ ಉತ್ತರ ಕನ್ನಡ ಜಿಲ್ಲೆ ಅಂಕೋಲಾದ ಆನಂದ ರಮೇಶ್ ನಾಯಕ ದೋಷಮುಕ್ತರಾಗಿದ್ದಾರೆ.

ಮುಖ್ಯಾಂಶಗಳು

- 210 ಸಾಕ್ಷಿಗಳ ವಿಚಾರಣೆ, 1,027 ದಾಖಲೆ ಪರಿಶೀಲನೆ
- ₹ 3 ಕೋಟಿ ಹಫ್ತಾಗೆ ಬೇಡಿಕೆ, ನೀಡದಿದ್ದಕ್ಕೆ ಕೊಲೆ
- ಮೊರಾಕೋದಲ್ಲಿ ಬಂಧಿತನಾಗಿದ್ದ ಬನ್ನಂಜೆ ರಾಜಾ

ಸಂಘಟಿತ ಅಪರಾಧ: ಉತ್ತರಪ್ರದೇಶ ಮೂಲದ ಜಗದೀಶ್ ಪಟೇಲ್, ವಿಜಯಪುರದ ಅಂಭಾಜಿ ಬಂಡುಗಾರ, ಉಡುಪಿ ಜಿಲ್ಲೆ ಕಾರ್ಕಳದ ಮಂಜುನಾಥ ನಾರಾಯಣಭಟ್ ಯಾನೆ ಗಣೇಶ ಲಕ್ಷ್ಮಣ ಭಜಂತ್ರಿ, ಕೇರಳದ ಕೆ.ಎಂ.ಇಸ್ಮಾಯಿಲ್, ಹಾಸನದ ಮಹೇಶ ಅಚ್ಚಂಗಿ, ಕೇರಳದ ಸಂತೋಷ ಎಂ.ಬಿ.(ಸುಳ್ಯ ಸಂತೋಷ್), ಉಡುಪಿ ಮೂಲದ ಬನ್ನಂಜೆ ರಾಜಾ, ಬೆಂಗಳೂರಿನ ಜಗದೀಶ್ ಚಂದ್ರರಾಜ ಅರಸ್, ಉತ್ತರಪ್ರದೇಶದ ಅಂಕಿತ್‌ಕುಮಾರ್ ಕಶ್ಯಪ್ ದೋಷಿಗಳು, ಇವರು ಸಂಘಟಿತ ಅಪರಾಧದಲ್ಲಿ ಭಾಗಿಯಾಗಿದ್ದರು ಎಂದು ಹೇಳಿದೆ.



ಬನ್ನಂಜೆ ರಾಜಾ

ಒಂದನೇ ಆರೋಪಿ, ಉತ್ತರ ಪ್ರದೇಶದ ವಿವೇಕ್ ಉಪಾಧ್ಯಾಯ ಘಟನೆ ನಡೆದ ದಿ ಆರ್.ಎನ್.ನಾಯಕ ಅವರ ಗನ್‌ಮ್ಯಾನ್ ರಮೇಶ್ ಜೊತೆ ನಡೆಸಿದ ಗುಂಡಿನ ಚಕಮಕಿಯಲ್ಲಿ ಮೃತಪಟ್ಟಿದ್ದರು. ಉಳಿದ ಆರೋಪಿಗಳಾಗಿದ್ದ ಭಟ್ಕಳದ ನಾಜೀಂ ನಿಲಾವರ್, ಮಂಗಳೂರಿನ ಹಾಜಿ ಅಮಿನ್ ಭಾಷಾ ಹಾಗೂ ಸಕಲೇಶಪುರದ ಸುಲೇಮಾನ್ ಜೈನುದ್ದೀನ್ ಪತ್ತೆಯಾಗಿಲ್ಲ ಎಂದು ವಕೀಲರು ಮಾಹಿತಿ ನೀಡಿದರು.

2013ರಲ್ಲಿ ನಡೆದಿತ್ತು: 2013ರ ಡಿ.21ರಂದು ಮಧ್ಯಾಹ್ನ 1.30ರ ಸುಮಾರಿಗೆ ಘಟನೆ ನಡೆದಿತ್ತು. ಅಂಕೋಲಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸರ್ಕಾರದ ಪರ ವಿಶೇಷ ಅಭಿಯೋಜಕ ಕೆ.ಜಿ. ಪುರಾಣಿಕಮಠ ಹಾಗೂ ವಿಶೇಷ ಅಭಿಯೋಜಕ ಕೆ. ಶಿವಪ್ರಸಾದ್ ಆಳ್ವಾ ವಕಾಲತ್ತು ವಹಿಸಿದ್ದರು.

‘ಬನ್ನಂಜೆ ರಾಜಾ, ನಾಯಕ ಅವರ ಬಳಿ ₹ 3 ಕೋಟಿ ಹಫ್ತಾ ಕೇಳಿದ್ದ. ನೀಡದ ಹಿನ್ನೆಲೆಯಲ್ಲಿ ನಡೆದಿರುವ ಕೊಲೆ ಇದಾಗಿದೆ. ಹೀಗಾಗಿ, ದೋಷಿಗಳಿಗೆ ಮರಣದಂಡನೆ ವಿಧಿಸಬೇಕು’ ಎಂದು ಕೆ.ಜಿ.ಪುರಾಣಿಕಮಠ ವಾದಿಸಿದ್ದರು.

ಹಿರಿಯ ಪೊಲೀಸ್ ಅಧಿಕಾರಿಗಳಾದ ಪ್ರತಾಪ್ ರೆಡ್ಡಿ, ಅಲೋಕಕುಮಾರ್, ಭಾಸ್ಕರ್‌ರಾವ್, ಅಣ್ಣಾಮಲೈ (ಈಗ ಮಾಜಿ) ಸೇರಿದಂತೆ 210 ಸಾಕ್ಷಿಗಳ ವಿಚಾರಣೆ ನಡೆದಿತ್ತು. 1,027 ದಾಖಲೆ ಹಾಗೂ 7 ರಿವಾಲ್ವರ್‌ಗಳು ಸೇರಿದಂತೆ 137 ಮುದ್ದೆಮಾಲುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಬನ್ನಂಜೆ ರಾಜಾನನ್ನು ರಾಜ್ಯದ ಪೊಲೀಸರು ಮೊರಾಕೊದಲ್ಲಿ 2015ರ ಆ.15ರಂದು ಬಂಧಿಸಿದ್ದರು.

ಆರೋಪಿಗಳನ್ನು ಹಿಂಡಲಗಾ ಕಾರಾಗೃಹದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರುಪಡಿಸಲಾಯಿತು.

ಚುನಾವಣಾ ವ್ಯವಸ್ಥೆ ಕೆಡಲು ನಾವೆಲ್ಲರೂ ಕಾರಣರು, ಆತ್ಮವಂಚನೆ ಮಾಡಿಕೊಳ್ಳುತ್ತಿದ್ದೇವೆ: ಸಿದ್ದರಾಮಯ್ಯ

‘ಇವಿಎಂಗಳ ಮೇಲಿನ ವಿಶ್ವಾಸ ಕಡಿಮೆಯಾಗಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಸುಮಾರು 19 ಲಕ್ಷ ಇವಿಎಂಗಳು ನಾಪತ್ತೆಯಾಗಿದೆ. ಇದಕ್ಕೆ ಹೊಣೆ ಯಾರು? ಇದೇ ಕಾರಣಕ್ಕೆ ಜನರಿಗೆ ಇವಿಎಂಗಳ ಮೇಲೆ ವಿಶ್ವಾಸ ಕಡಿಮೆಯಾಗುತ್ತಿದೆ ಎಂದು ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ಚುನಾವಣಾ ವ್ಯವಸ್ಥೆ ಕುರಿತು ವಿಧಾನಸಭೆಯಲ್ಲಿ ಬುಧವಾರ ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಇಂತಹ ವ್ಯವಸ್ಥೆ ಸರಿ ಇಲ್ಲ ಎಂಬ ಕಾರಣಕ್ಕೆ ಜರ್ಮನಿಯಂತಹ ಮುಂದುವರಿದ ರಾಷ್ಟ್ರವೇ ಇವಿಎಂ ಬಿಟ್ಟು, ಮತಪತ್ರಗಳ ವ್ಯವಸ್ಥೆಗೆ ಮರಳಿವೆ ಎಂದು ತಿಳಿಸಿದರು.

‘ಒಮ್ಮೆ ನನ್ನ ಬಳಿ ಒಬ್ಬ ತಂತ್ರಜ್ಞ ಬಂದು ಇವಿಎಂಗಳನ್ನು ಹೇಗೆ ದುರ್ಬಳಕೆ ಮಾಡಬಹುದು ಎಂದು ಪ್ರಾತ್ಯಕ್ಷಿಕೆ ತೋರಿಸಿದ. ಆದರೆ ನನಗೆ ತಂತ್ರಜ್ಞಾನದ ಬಗ್ಗೆ ಸರಿಯಾದ ಮಾಹಿತಿ ಇಲ್ಲದ ಕಾರಣ ‘ಸರಿ ಬಿಡಪ್ಪಾ’ ಅಂತ ಹೇಳಿ ಕಳುಹಿಸಿದೆ. ಆದರೆ, ಯಂತ್ರಗಳನ್ನು ದುರ್ಬಳಕೆ ಮಾಡಿಕೊಳ್ಳಲು ಒಂದು ಅವಕಾಶ ಇದ್ದೇ ಇರುತ್ತದೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

ವ್ಯವಸ್ಥೆ ಕೆಡಲು ನಾವೆಲ್ಲರೂ ಕಾರಣರು: ‘ಚುನಾವಣೆ ವ್ಯವಸ್ಥೆ ಕೆಡಲು ನಾವೆಲ್ಲರೂ ಕಾರಣರು. ಇದರಲ್ಲಿ ಸರ್ಕಾರ, ನ್ಯಾಯಾಂಗ, ಕಾರ್ಯಾಂಗ, ಮಾಧ್ಯಮ ಎಲ್ಲವೂ ಸೇರಿವೆ. ಈಗ ಎಲ್ಲರೂ ಸೇರಿಯೇ ವ್ಯವಸ್ಥೆಯನ್ನು ಸರಿಪಡಿಸಬೇಕಾಗಿದೆ. ಶಾಸಕರು ಮಾತ್ರವಲ್ಲ ಜನರಲ್ಲೂ ಜಾಗೃತಿ ಬರಬೇಕು. ಇಲ್ಲವಾದರೆ ಬದಲಾವಣೆ ಸಾಧ್ಯವಿಲ್ಲ. ಚುನಾವಣಾ ವ್ಯವಸ್ಥೆಯ ಮೇಲೆ ಹಣ, ಜಾತಿ ತೋಳ್ಬಲ ಮತ್ತು ಮಾಫಿಯಾಗಳ ಹಿಡಿತ ಸಾಧಿಸಿವೆ’ ಎಂದು ಅವರು ಹೇಳಿದರು.

‘ಪಕ್ಷಾಂತರ ನಿಷೇಧ ಕಾಯ್ದೆ ಬಂದರೂ, ಇತ್ತೀಚಿನ ವರ್ಷಗಳಲ್ಲಿ ‘ಆಪರೇಷನ್’ಗಳನ್ನು ನಡೆಸಿ ಚುನಾಯಿತ ಸರ್ಕಾರಗಳನ್ನು ಬದಲಿಸುತ್ತಾರೆ. ಈ ಬಗ್ಗೆ ರಾಜಕೀಯ ಪಕ್ಷಗಳು ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲವೇ? ನಾವೂ ಸ್ವಯಂ ನಿರ್ಬಂಧ ಹಾಕಿಕೊಳ್ಳಬೇಕು. ನಾವ್ಯಾರೂ ವ್ಯವಸ್ಥೆಗಿಂತ ಅತೀತರಲ್ಲ. ವ್ಯವಸ್ಥೆಯ ಭಾಗವಾಗಿದ್ದೇವೆ. ಆತ್ಮಾವಲೋಕನ ಮಾಡಿಕೊಂಡು ಶುದ್ಧೀಕರಣ ಮಾಡಿಕೊಳ್ಳಬೇಕು’ ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

ಅಂತರ್ಗತ ಶಕ್ತಿಯಿಂದ ದೇಶ ಸುಭದ್ರ: ಬಸವರಾಜ ಬೊಮ್ಮಾಯಿ

ಪ್ರಜಾಪ್ರಭುತ್ವದ ಅಂತರ್ಗತ ಶಕ್ತಿಯಿಂದಾಗಿ 75 ವರ್ಷಗಳು ಕಳೆದರೂ ದೇಶ ಸುಭದ್ರವಾಗಿದೆ. ಪ್ರತಿ ಚುನಾವಣೆ ನಡೆದಾಗಲೂ ನಮ್ಮಲ್ಲಿ ಅಧಿಕಾರ ಹಸ್ತಾಂತರ ಸುಗಮವಾಗಿ ನಡೆಯುತ್ತದೆ. ಅತ್ಯಂತ ಮುಂದುವರಿದ ದೇಶದಲ್ಲೂ ಅಧಿಕಾರ ಸುಗಮವಾಗಿ ನಡೆಯುವುದಿಲ್ಲ ಎಂಬುದಕ್ಕೆ ಅಮೆರಿಕಾವೇ ಉದಾಹರಣೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ‘ನಮ್ಮ ಚುನಾವಣಾ ವ್ಯವಸ್ಥೆಯಲ್ಲಿ ಲೋಪಗಳಿವೆ. ಆದರೆ ಸಿನಿಕತನದಿಂದ ಲೋಪವನ್ನೇ ದೊಡ್ಡದು ಮಾಡುವುದರಲ್ಲಿ ಅರ್ಥವಿಲ್ಲ. ಲೋಪದೋಷಗಳನ್ನು ಎಲ್ಲರೂ ಸೇರಿಯೇ ಸರಿಪಡಿಸಬೇಕು. ಎಲ್ಲರೂ ಕೂಡಿಯೇ ಆತ್ಮಾವಲೋಕನ ಮಾಡಿಕೊಳ್ಳಬೇಕು’ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

‘ಆಂತರಿಕ ಚುನಾವಣೆ ನಡೆಸದಿದ್ದರೆ ಮಾನ್ಯತೆ ರದ್ದು ಮಾಡಿ’

ರಾಜಕೀಯ ಪಕ್ಷಗಳ ಒಳಗೆ ಆಂತರಿಕ ಪ್ರಜಾಪ್ರಭುತ್ವ ಅತಿ ಅಗತ್ಯ. ಇಲ್ಲವಾದಲ್ಲಿ ಪ್ರಜಾಪ್ರಭುತ್ವವೇ ಕುಸಿದು ಹೋಗುತ್ತದೆ. ಅದರಲ್ಲೂ ಆಂತರಿಕ ಚುನಾವಣೆಗಳನ್ನು ನಡೆಸದಿದ್ದರೆ, ಅಂತಹ ಪಕ್ಷಗಳ ಮಾನ್ಯತೆ ರದ್ದು ಮಾಡಬೇಕು ಎಂದು ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಅವರು ಚುನಾವಣಾ ಆಯೋಗಕ್ಕೆ ಸಲಹೆ ನೀಡಿದರು.

ಚುನಾವಣೆ ಸುಧಾರಣೆಯ ಬಗ್ಗೆ ಮಾತನಾಡಿದ ಅವರು, ರಾಜಕೀಯ ಪಕ್ಷಗಳಲ್ಲಿ ಸದಸ್ಯತ್ವ ಅಭಿಯಾನ, ಪದಾಧಿಕಾರಿಗಳ ಚುನಾವಣೆಗಳನ್ನು ಕಾಲಕಾಲಕ್ಕೆ ನಡೆಸಬೇಕು. ಅದನ್ನು ಮಾಡದೇ ಇದ್ದರೆ ಪ್ರಜಾಪ್ರಭುತ್ವ ವ್ಯವಸ್ಥೆ ಎಂದು ಹೇಳಲು ಸಾಧ್ಯವೇ? ಈ ಮಾತನ್ನು ಯಾವುದೇ ಒಂದು ಪಕ್ಷವನ್ನು ಉದ್ದೇಶಿಸಿ ಹೇಳುತ್ತಿಲ್ಲ ಎಂದರು.

‘ರಾಜಕೀಯ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವ ಇಲ್ಲವಾದರೆ, ಹೊಸ ಪೀಳಿಗೆ ಬರಲು ಸಾಧ್ಯವಾಗದು. ಆ ಜಾಗವನ್ನು ತಂತ್ರಗಾರಿಕೆ ತುಂಬುತ್ತದೆ. ರಾಜಕೀಯ ಪಕ್ಷಗಳಲ್ಲಿ ಆಂತರಿಕ ಚುನಾವಣೆ ನಡೆಸುವ, ಸದಸ್ಯತ್ವ ಅಭಿಯಾನ ನಡೆಸಲು ಚುನಾವಣಾ ಆಯೋಗ ಕ್ರಮ ತೆಗೆದುಕೊಳ್ಳಬೇಕು’ ಎಂದೂ ಸಲಹೆ ನೀಡಿದರು.

ಇವಿಎಂ– ಅನುಮಾನ ನಿವಾರಿಸಿ: ಎಚ್‌ಡಿಕೆ

ಬೆಂಗಳೂರು: ಪ್ರತಿ ಬಾರಿ ಚುನಾವಣೆ ನಡೆದಾಗಲೂ ವಿದ್ಯುನ್ಮಾನ ಮತಯಂತ್ರ (ಇವಿಎಂ) ಕುರಿತು ಅನುಮಾನ ಸೃಷ್ಟಿಯಾಗುತ್ತಿದೆ. ಕೇಂದ್ರ ಸರ್ಕಾರ ಮತ್ತು ಕೇಂದ್ರ ಚುನಾವಣಾ ಆಯೋಗವು ಅನುಮಾನ ನಿವಾರಿಸುವ ಕೆಲಸ ಮಾಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

ವಿಧಾನಸಭೆಯಲ್ಲಿ ಬುಧವಾರ ಚುನಾವಣಾ ಸುಧಾರಣೆ ಕುರಿತ ಚರ್ಚೆಯಲ್ಲಿ ಮಾತನಾಡಿದ ಅವರು, ‘ಸಾಮಾನ್ಯ ಮತದಾರನಿಂದ ಅಭ್ಯರ್ಥಿಯವರೆಗೆ ಇವಿಎಂ ಕುರಿತು ಅನುಮಾನಗಳಿವೆ. ರಾಜಕೀಯ ಪಕ್ಷಗಳೂ ಆಕ್ಷೇಪ ವ್ಯಕ್ತಪಡಿಸುವ ಸ್ಥಿತಿ ಇದೆ. ಆದರೆ, ಚುನಾವಣಾ ಆಯೋಗದಿಂದ ಅಧಿಕೃತ ಮಾಹಿತಿ ಏಕೆ ಬರುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ದೇಶದಲ್ಲಿ 19 ಲಕ್ಷ ಇವಿಎಂಗಳು ನಾಪತ್ತೆಯಾಗಿವೆ ಎಂಬುದನ್ನು ಎಚ್‌.ಕೆ. ಪಾಟೀಲ ಇದೇ ಸದನದ ಮುಂದಿಟ್ಟಿದ್ದಾರೆ. ಇವಿಎಂಗಳ ನಿರ್ವಹಣೆಯಲ್ಲಿ ಸಮಸ್ಯೆಗಳ ಕುರಿತು ಕೃಷ್ಣ ಬೈರೇಗೌಡ ಕೂಡ ಬೆಳಕು ಚೆಲ್ಲಿದ್ದಾರೆ. ಇವಿಎಂ ನಾಪತ್ತೆ ವಿಚಾರದಲ್ಲಿ ಉತ್ತರದಾಯಿ ಯಾರು? ಚುನಾವಣಾ ಆಯೋಗವೇ ಈ ಪ್ರಶ್ನೆಗಳಿಗೆ ಉತ್ತರಿಸಬೇಕು’ ಎಂದು ಆಗ್ರಹಿಸಿದರು.

ಕಾನೂನು ನೆಪಮಾತ್ರಕ್ಕೆ: ಹಿಂದೆ ಚುನಾವಣೆ ಸಮಯದಲ್ಲಿ ಹಣ ಹಂಚಲು ಜನರು ತಮ್ಮ ಊರಿಗೆ ಬರದಂತೆ ಹಳ್ಳಿಗಳ ಜನರು ದೊಣ್ಣೆ ಹಿಡಿದು ಕಾಯುತ್ತಿದ್ದರು. ಈಗ ಹಣ ಹಂಚಲು ಬರುವ ರಾಜಕೀಯ ಪಕ್ಷಗಳಿಗಾಗಿ ಜನರು ಇಡೀ ರಾತ್ರಿ ಕಾಯುತ್ತಾರೆ ಎಂದು ಹೇಳಿದರು.

‘ಎಲ್ಲ ಚುನಾವಣೆಗೂ ಹಣ ಖರ್ಚು ಮಾಡಲೇಬೇಕಾದ ಪರಿಸ್ಥಿತಿಯನ್ನು ಸೃಷ್ಟಿ ಮಾಡಲಾಗಿದೆ. ಈ ರೀತಿ ಹಣ ಬಲದಲ್ಲಿ ಚುನಾವಣೆಗೆ ಸ್ಪರ್ಧಿಸುವವರನ್ನು ಬಹಿಷ್ಕರಿಸಿ ಎಂದು ಕರೆ ಕೊಡಿ’ ಎಂದು ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಆಗ್ರಹಿಸಿದರು.

ನವೀಕರಿಸಬಹುದಾದ ಹೊಸ ಇಂಧನ ನೀತಿಗೆ ಸಂಪುಟ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ನವೀಕರಿಸಬಹುದಾದ ಇಂಧನ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲು ‘ಕರ್ನಾಟಕ ನವೀಕರಿಸಬಹುದಾದ ಇಂಧನ ನೀತಿ 2022–27’ ಕ್ಕೆ ಬುಧವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ ಇನ್ನೂ 1,55,074 ಮೆ.ವ್ಯಾ.ಗಳಷ್ಟು ವಿದ್ಯುತ್ ಪಡೆಯಲು ಸಾಧ್ಯವಾಗುವ ನವೀಕರಿಸಬಹುದಾದ ಇಂಧನ ಮೂಲಗಳಿವೆ. ಆ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿದ್ದೇ ಆದಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಗೆ ತಲುಪಬಹುದು. ಈ ನೀತಿಯು ಅಧಿಸೂಚನೆ ಹೊರಡಿಸಿದ ದಿನದಿಂದ 5 ವರ್ಷಗಳವರೆಗೆ ಜಾರಿ ಇರುತ್ತದೆ. ರಾಜ್ಯದಲ್ಲಿ ಸುಸ್ಥಿರ ಮತ್ತು ಹಸಿರು ಇಂಧನ ಬೆಳವಣಿಗೆಗೆ ಅವಕಾಶ ಸಿಗಲಿದೆ.

ನೀತಿಯ ಮುಖ್ಯ ಅಂಶಗಳು:

- ಒಂದು ಗಿಗಾ ವಾಟ್ ಸಾಮರ್ಥ್ಯದ ಸೌರ ಮೇಲ್ಛಾವಣಿ ದ್ಯುತಿ ವಿದ್ಯುತ್‌ಜನಕ (ಫೋಟೊವೋಲ್ಟಿಕ್) ಯೋಜನೆ ಒಳಗೊಂಡಂತೆ ರಾಜ್ಯದಲ್ಲಿ ಇಂಧನ ಶೇಖರಣೆಗೆ ವ್ಯವಸ್ಥೆ ಅಥವಾ 10 ಗಿಗಾ ವ್ಯಾಟ್ ಹೆಚ್ಚುವರಿ ನವೀಕರಿಸಬಹುದಾದ ಯೋಜನೆಗಳ ಅಭಿವೃದ್ಧಿಗೆ ಅನುಕೂಲ ಕಲ್ಪಿಸುವುದು.
- ನವೀಕರಿಸಬಹುದಾದ ಇಂಧನ ವಲಯದಲ್ಲಿ ಹೂಡಿಕೆಯನ್ನು ಆಕರ್ಷಿಸುವುದು. ಈ ಮೂಲಕ ರಾಜ್ಯದ ಆರ್ಥಿಕತೆ ಅಭಿವೃದ್ಧಿಪಡಿಸುವುದು.
- ಇತರ ರಾಜ್ಯಗಳಿಗೆ ಹೆಚ್ಚುವರಿ ವಿದ್ಯುತ್ ರಫ್ತು ಮಾಡುವುದು. ಕಾಲ ಕಾಲಕ್ಕೆ ಕೆಇಆರ್‌ಸಿ ನಿರ್ದಿಷ್ಟಪಡಿಸಿದ ಆರ್‌ಪಿಒ ಗುರಿ ಸಾಧಿಸುವುದು.
- ರಾಜ್ಯದಲ್ಲಿ ಹೈಬ್ರೀಡ್ ಪಾರ್ಕ್‌ಗಳು ಸೇರಿದಂತೆ ನವೀಕರಿಸಬಹುದಾದ ಇಂಧನ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವುದು. ಹಸಿರು ಇಂಧನ ಕಾರಿಡಾರ್ ಯೋಜನೆಗಳಲ್ಲಿ ಖಾಸಗಿ ವಲಯದ ಹೂಡಿಕೆಗೆ ಉತ್ತೇಜನ ನೀಡುವುದು.
- ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸುವ ಯೋಜನೆಗಳು, ಕಿರು ಮತ್ತು ಸಣ್ಣ ಜಲ ವಿದ್ಯುತ್ ಯೋಜನೆಗಳು, ಹೊಸ ತಾಂತ್ರಿಕತೆ ಹೊಂದಿರುವ, ಪ್ರಾಯೋಗಿಕ ಯೋಜನೆಗಳು, ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತು.

ಪ್ರಮುಖ ತೀರ್ಮಾನಗಳು

- ಧಾರವಾಡದ ಕೃಷಿ ವಿಶ್ವವಿದ್ಯಾಲಯದಲ್ಲಿ ‘ಸೆಂಟರ್ ಆಫ್ ಎಕ್ಸಲೆನ್ಸ್ ಇನ್ ಸ್ಮಾರ್ಟ್ ಅಗ್ರಿಕಲ್ಚರ್’ ಅನ್ನು ನಿರ್ಮಿಸಲು ಉದ್ದೇಶಿಸಿದ್ದು, ಇದಕ್ಕಾಗಿ ₹51.20 ಕೋಟಿ ವೆಚ್ಚ ಮಾಡಲಾಗುತ್ತಿದೆ. ಇದಕ್ಕೆ ಕೇಂದ್ರ ಶೇ 60 ಮತ್ತು ರಾಜ್ಯ ಶೇ 40 ರಷ್ಟು ಅನುದಾನ ನೀಡಲಿವೆ.
- ಅಕ್ರಮ ಗಣಿಗಾರಿಕೆಗಳ ತನಿಖೆಗೆ ಕರ್ನಾಟಕ ಲೋಕಾಯುಕ್ತ ಸಂಸ್ಥೆ ರಚಿಸಿರುವ ವಿಶೇಷ ತನಿಖಾ ತಂಡ(ಎಸ್‌ಐಟಿ) ಕಾರ್ಯಾವಧಿಯನ್ನು ಇನ್ನೂ ಒಂದು ವರ್ಷ ಅವಧಿಗೆ ಮುಂದುವರಿಕೆ.
- ರಾಯಚೂರಿನ ಗ್ರೀನ್‌ಫೀಲ್ಡ್ ದೇಶೀಯ ಪ್ರಯಾಣಿಕ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸಂಬಂಧಿಸಿದಂತೆ ಮೆ.ರೈಟ್ಸ್ ಇಂಡಿಯಾ ಲಿ. ಸಿದ್ಧಪಡಿಸಿರುವ ₹185.57 ಕೋಟಿ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ.
- ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 114 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಲು ತೀರ್ಮಾನ.
- ಬೆಂಗಳೂರಿನ ನೃಪತುಂಗಾ ವಿಶ್ವವಿದ್ಯಾಲಯಕ್ಕೆ ಉಪಕರಣ ಖರೀದಿ, ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಮತ್ತು ಹಳೇ ಕಟ್ಟಡ ನವೀಕರಣ ಕಾಮಗಾರಿಯ ₹55 ಕೋಟಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಒಪ್ಪಿಗೆ.
- ಉಡುಪಿಯಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿರುವ 200 ಹಾಸಿಗೆಗಳ ಕೂಸಮ್ಮ ಶಂಭುಶೆಟ್ಟಿ ಮೆಮೋರಿಯಲ್ ಹಾಜಿ ಅಬ್ದುಲ್ಲಾ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಸರ್ಕಾರದ ಸುಪರ್ದಿಗೆ ತೆಗೆದುಕೊಳ್ಳಲು ಒಪ್ಪಿಗೆ. ರಾಮನಗರ ಜಿಲ್ಲಾ ಆಸ್ಪತ್ರೆ ನಿರ್ಮಾಣ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ₹99.93 ಕೋಟಿಗೆ ಆಡಳಿತಾತ್ಮಕ ಅನುಮೋದನೆ.
- ಎನ್‌ಡಿಆರ್‌ಎ–27 ರಡಿ ಅನುಮೋದನೆಯಾಗಿರುವ 4 ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ದಕ್ಷಿಣಕನ್ನಡ, ಚಿಕ್ಕಮಗಳೂರು, ಉಡುಪಿ, ಉತ್ತರಕನ್ನಡ ಜಿಲ್ಲೆಯಲ್ಲಿ ಒಟ್ಟು ₹66.88 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ.

ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್‌ಗೆ ಸಿದ್ಧತೆ

ಬೆಂಗಳೂರು: ‘ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್–2021ಕ್ಕೆ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಏಪ್ರಿಲ್ 1 ರಂದು ಲಾಂಛನ ಬಿಡುಗಡೆಗೊಳಿಸಲಾಗುವುದು’ ಎಂದು ಕ್ರೀಡಾ ಸಚಿವ ನಾರಾಯಣಗೌಡ ತಿಳಿಸಿದರು.

‘ಏ.24ರಿಂದ ಮೇ 3ರವರೆಗೂ ಈ ಕ್ರೀಡಾಕೂಟ ನಡೆಯಲಿದೆ. ಏ. 24 ರಂದು ಖೇಲೊ ಇಂಡಿಯಾ ಯೂನಿವರ್ಸಿಟಿ ಗೇಮ್ಸ್ ಉದ್ಘಾಟನೆಗೆ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಆಗಮಿಸಲಿದ್ದಾರೆ. 10 ದಿನಗಳ ಕ್ರೀಡಾಕೂಟದಲ್ಲಿ 20 ಕ್ರೀಡೆಗಳು ನಡೆಯಲಿದ್ದು, ದೇಶದ 200ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳ 8 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು, ಸಿಬ್ಬಂದಿ ಪಾಲ್ಗೊಳ್ಳಲಿದ್ದಾರೆ’ ಎಂದು ವಿವರಿಸಿದರು.



ಸೆಲ್ಕೋ ಸಂಸ್ಥೆಯು ನಗರದಲ್ಲಿ ಬುಧವಾರ ಆಯೋಜಿಸಿದ್ದ ಸಂಸ್ಥಾಪನಾ ದಿನ ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಆಶಾಲತಾ, ಗಿರಿಜಾ ಕೇರಿ, ಶಂಕರ್ ತೊರಗಲ್ಲಮಠ, ಆಸ್ಮಾ ಹಾಗೂ ವಸಂತ್ ಅವರನ್ನು ಸನ್ಮಾನಿಸಲಾಯಿತು. ಸೆಲ್ಕೋದ ನಿರ್ದೇಶಕ ಪ್ರೊ.ಎಂ.ಎಸ್.ಶ್ರೀರಾಮ್, ಸೆಲ್ಕೋ ಫೌಂಡೇಷನ್‌ನ ನಿರ್ದೇಶಕಿ ಹುದಾ, ನಿರ್ದೇಶಕ ಥಾಮಸ್ ಪುಲ್ಲಂಕೇವ್, ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ತನ್ವೀರ್ ಆಸೀಫ್, ಹರೀಶ್ ಹಂದೆ, ಕಂಪನಿ ಕಾರ್ಯದರ್ಶಿ ಖುಷ್ಬೂ, ಸಿಇಒ ಮೋಹನ ಭಾಸ್ಕರ ಹೆಗಡೆ ಇದ್ದಾರೆ.

ನಗರದಲ್ಲಿ ಇಂದು

‘ಮಹಿಳೆಯರ ಮತ್ತು ಮಕ್ಕಳ ಸಂರಕ್ಷಣೆ ಹಾಗೂ ಹಕ್ಕುಗಳು ಮತ್ತು ಕಾನೂನುಗಳ ಅನುಷ್ಠಾನದಲ್ಲಿ ಪೊಲೀಸ್ ಅಧಿಕಾರಿಗಳ ಪಾತ್ರ’ ಕುರಿತು ಕಾರ್ಯಾಗಾರ: ಅತಿಥಿ–ಪ್ರಮೀಳಾ ನಾಯ್ಡು, ಆಯೋಜನೆ–ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಪೊಲೀಸ್ ಇಲಾಖೆ, ಸ್ಥಳ–ನಿಮ್ಹಾನ್ಸ್ ಸಮ್ಮೇಳನ ಸಭಾಂಗಣ, ಹೊಸೂರು ರಸ್ತೆ, ಬೆಳಿಗ್ಗೆ 10.30

ಲಿಂಗಾಯತ ಪಂಚಮಸಾಲಿ 2ಎ ಮೀಸಲಾತಿಗಾಗಿ ಅಂತಿಮ ಹೋರಾಟದ ಮೊದಲ ಸಿದ್ಧತಾ ಸಭೆ: ನೇತೃತ್ವ–ಬಸನಗೌಡ ಪಾಟೀಲ ಯತ್ನಾಳ್, ಅಧ್ಯಕ್ಷತೆ–ವಿಜಯಾನಂದ ಕಾಶಪ್ಪನವರ, ಬಸವಜಯ ಮೃತ್ಯುಂಜಯ ಸ್ವಾಮೀಜಿ, ಸ್ಥಳ–ಕ್ಯಾಪಿಟಲ್ ಹೊಟೇಲ್, ರಾಜಭವನ ರಸ್ತೆ, ಬೆಳಿಗ್ಗೆ 10.30

ಬುಡಕಟ್ಟು ಯುವಜನ ವಿನಿಮಯ ಕಾರ್ಯಕ್ರಮ: ಅತಿಥಿಗಳು–ರಾಜ್ಯಪಾಲ ಥಾವರಚಂದ್ ಗೆಹಲೋತ್, ಕೆ.ಸಿ. ನಾರಾಯಣ ಗೌಡ, ರಿಜ್ವಾನ್ ಅರ್ಷದ್, ಶಾಲಿನಿ ರಜನೀಶ್, ಆಯೋಜನೆ–ನೆಹರು ಯುವ ಕೇಂದ್ರ ಸಂಘಟನೆ, ಸ್ಥಳ–ಯವನಿಕ ಸಭಾಂಗಣ, ನೃಪತುಂಗ ರಸ್ತೆ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ದಿನ: ಉದ್ಘಾಟನೆ–ವಂದಿತಾ ಶರ್ಮಾ, ಉಪನ್ಯಾಸ–ಡಿ.ರೂಪಾ, ಅಧ್ಯಕ್ಷತೆ–ಸಿ.ಎಸ್. ಷಡಾಕ್ಷರಿ, ಆಯೋಜನೆ ಮತ್ತು ಸ್ಥಳ–ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನ, ಬೆಳಿಗ್ಗೆ 11

ಯುಗಾದಿ ಪ್ರಯುಕ್ತ ತೃತೀಯ ಲಿಂಗಿಗಳಿಗೆ ಬಾಗಿನ ಅರ್ಪಣೆ ಮತ್ತು ಆಹಾರ ಕಿಟ್ ವಿತರಣೆ: ಅತಿಥಿಗಳು–ಗೌರವ್ ಗುಪ್ತ, ಮಲ್ಲು ಕುಂಬಾರ್, ಎ.ಅಮೃತರಾಜ್, ಎಚ್. ಎಸ್.ರಾಜಶೇಖರ್, ಶ್ರೀಕಾಂತ್ ಕಣ್ಣನ್, ಉಮಾ, ಆಯೋಜನೆ–ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ–ರಾಜ್‌ಕುಮಾರ್ ಗಾಜಿನ ಮನೆ, ಬಿಬಿಎಂಪಿ ಕೇಂದ್ರ ಕಚೇರಿ ಆವರಣ, ಬೆಳಿಗ್ಗೆ 11.30

ವಾಲ್ಮೀಕಿ ನಾಟಕೋತ್ಸವ: ಅತಿಥಿಗಳು–ವೆಂಕಟೇಶ್, ಜೆ.ಕೆ.ರಾಜು, ಬಿ.ರುದ್ರೇಶ್, ನಾಟಕಗಳು–ಅಕ್ಷರದ್ವ, ಭಾಂದವ್ಯ, ಆಯೋಜನೆ–ಏಕಲವ್ಯ ಫೌಂಡೇಶನ್, ಸ್ಥಳ–ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 4.30ರಿಂದ


ಸಂಸ್ಕೃತ ಕಲಾ ಉತ್ಸವ:ವಿವಿಧ ನೃತ್ಯ ಶಾಲೆಗಳ ತಂಡಗಳಿಂದ ನೃತ್ಯ ಕಾರ್ಯಕ್ರಮ: ಆಯೋಜನೆ–ಇಂಟರ್‌ನ್ಯಾಷನಲ್ ಆರ್ಟ್ಸ್ ಆ್ಯಂಡ್ ಕಲ್ಚರಲ್ ಫೌಂಡೇಶನ್, ಸ್ಥಳ–ಸೇವಾಸದನ, ಮಲ್ಲೇಶ್ವರ, ಸಂಜೆ 5.30

ಲತಾ ಮಂಗೇಶ್ಕರ್ ಅವರಿಗೆ ಮರಣೋತ್ತರ ‘ರೋಟರಿ ಸೇವಾ ಪರಿಣಿತ ಪ್ರಶಸ್ತಿ’ ಪ್ರದಾನ ಮತ್ತು ಗೀತಾ ನೃತ್ಯನಮನ: ಅತಿಥಿಗಳು–ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಮುದ್ದು ಮೋಹನ್, ಸಂಗೀತ ಕಟ್ಟಿ, ಮಹೇಂದ್ರ ಮುನ್ನೋತ್, ಆಯೋಜನೆ–ರೋಟರಿ ಸಂಸ್ಥೆ, ಸ್ಥಳ–ರವೀಂದ್ರ ಕಲಾಕ್ಷೇತ್ರ, ಸಂಜೆ 6

‘ಪಂಪ, ರನ್ನರ ಕಾವ್ಯಗಳಲ್ಲಿ ಯುದ್ಧ ವಿರೋಧಿ ನೆಲೆಗಳು’ ಉಪನ್ಯಾಸ: ಕೆ.ನಾಗಭೂಷಣ, ಅತಿಥಿ–ಎಂ.ಸಿ.ನರೇಂದ್ರ, ಅಧ್ಯಕ್ಷತೆ–ಜಗದೀಶ್ ರೆಡ್ಡಿ, ಮಹಾಂತೇಶ ದೇಗಾವಿ, ಆಯೋಜನೆ ಮತ್ತು ಸ್ಥಳ–ಕನ್ನಡ ಯುವಜನ ಸಂಘ, ಹೊಂಬೇಗೌಡ ನಗರ, ಸಂಜೆ 6.30

ಕೊಳಲು ವಾದನ: ಶ್ರೀನಿಧಿ ಕಟ್ಟಿ, ಆಯೋಜನೆ ಮತ್ತು ಸ್ಥಳ–ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7


‘ಪ್ರಾಜೆಕ್ಟ್ ನಗ್ನ’ ನಾಟಕ ಪ್ರದರ್ಶನ: ಆಯೋಜನೆ–ಅಂತರಂಗ, ನಿರ್ದೇಶನ–ಅರ್ಚನಾ ಶ್ಯಾಮ್, ಸ್ಥಳ–ರಂಗಶಂಕರ, ಜೆ.ಪಿ. ನಗರ, ಸಂಜೆ 7.30



ಸಂತೋಷ್ ಹೆಗ್ಡೆ

ಪುತ್ತಿಗೆ ಸ್ವಾಮೀಜಿ ಗುರುವಂದನೋತ್ಸವ: ಭಾಗವಹಿಸುವವರು–ವಿಶ್ವಪ್ರಸನ್ನ ತೀರ್ಥ ಶ್ರೀಪಾದರು, ಎನ್.ಸಂತೋಷ್ ಹೆಗ್ಡೆ, ಸುಧಾಮೂರ್ತಿ, ಎಲ್.ಎ.ರವಿಸುಬ್ರಮಣ್ಯ, ಯು.ಬಿ. ವೆಂಕಟೇಶ್, ರಘುಪತಿ ಭಟ್, ಜಯಪ್ರಕಾಶ್ ಹೆಗ್ಡೆ, ಆಯೋಜನೆ–ಗುರುವಂದನಾ ಸಮಿತಿ, ಸ್ಥಳ–ಗುರುನರಸಿಂಹ ಕಲ್ಯಾಣ ಮಂಟಪ, ರಾಮಕೃಷ್ಣ ಆಶ್ರಮದ ಬಳಿ, ಬಸವನಗುಡಿ, ಸಂಜೆ 4

ಸರ್ವ ಜನಾಂಗದ ಶಾಂತಿಯ ತೋಟ–ಭಾವೈಕ್ಯತೆಯ ಚರ್ಚೆ: ಅಧ್ಯಕ್ಷತೆ–ಎಚ್.ಡಿ.ಕುಮಾರಸ್ವಾಮಿ, ಉದ್ಘಾಟನೆ–ಕುಂ.ವೀರಭದ್ರಪ್ಪ, ಅತಿಥಿಗಳು–ಎಚ್.ಎನ್.ನಾಗಮೋಹನ್ ದಾಸ್, ಬಿ.ಎಂ. ಹನೀಫ್, ಆಶೀರ್ವಚನ–ಬಸವಜಯ ಮೃತ್ಯುಂಜಯ ಸ್ವಾಮೀಜಿ, ಸೌಮ್ಯಾನಂದನಾಥ ಸ್ವಾಮೀಜಿ, ಮುಫ್ತಿ ಮಹಮ್ಮದ್ ಆಲಿ ಮಿಸ್ಬಾಲಿ ಜಮಾಲಿ ನೂರಿ, ಸಿರಿಲ್ ವಿಕ್ಟರ್, ಆಯೋಜನೆ–ಲೋಕನಾಯಕ ಜೆ.ಪಿ.ವಿಚಾರ ವೇದಿಕೆ, ಸ್ಥಳ–ಗಾಂಧಿಭವನ, ಬೆಳಿಗ್ಗೆ 10.30



ನಾಗಮೋಹನ್ ದಾಸ್

2022–23ರಲ್ಲೂ ₹ 9ಸಾವಿರ ಕೋಟಿ ಮೀರಲಿದೆ ಬಜೆಟ್ ಗಾತ್ರ?

● ಅನುದಾನ ಹೆಚ್ಚಳಕ್ಕೆ ಕೊನೆ ಕ್ಷಣದಲ್ಲಿ ಶಾಸಕರಿಂದ ಒತ್ತಡ

‘ವಿತ್ತೀಯ ಹೊಣೆಗಾರಿಕೆ’ಗೆ ಈ ಸಲವೂ ಎಳ್ಳುನೀರು?

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ‘ಬಿಬಿಎಂಪಿಯಲ್ಲಿ ಆರ್ಥಿಕ ಶಿಸ್ತು ತರಬೇಕು. ಕಂದಾಯ ಸ್ವೀಕೃತಿಯ ವಾಸ್ತವಾಂಶಗಳನ್ನು ಆಧರಿಸಿಯೇ ಬಜೆಟ್ ರೂಪಿಸಬೇಕು’ ಎಂಬ ಉದ್ದೇಶದಿಂದ ಬಿಬಿಎಂಪಿಗೂ ವಿತ್ತೀಯ ಹೊಣೆಗಾರಿಕೆ ಕಾಯ್ದೆಯನ್ನು ರಾಜ್ಯ ಸರ್ಕಾರ 2022ರ ಮಾರ್ಚ್ 10ರಿಂದ ಜಾರಿಗೊಳಿಸಿದೆ. ಆದರೆ, ಪಾಲಿಕೆಯ 2022–23ನೇ ಸಾಲಿನ ಬಜೆಟ್ ಕೂಡ ಇದಕ್ಕೆ ಬದ್ಧವಾಗಿ ರೂಪುಗೊಳ್ಳುವುದು ಅನುಮಾನ ಎನ್ನುತ್ತವೆ ಬಿಬಿಎಂಪಿ ಮೂಲಗಳು.

ಅಧಿಕಾರಿಗಳು ಬಿಬಿಎಂಪಿ ಬಜೆಟ್ ಅಂತಿಮ ರೂಪ ನೀಡಿದ ಬಳಿಕವೂ ನಗರದ ಕೆಲವು ಸಚಿವರು ಹಾಗೂ ಶಾಸಕರು ತಮ್ಮ ಕ್ಷೇತ್ರದ ವಾರ್ಡ್‌ಗಳಿಗೆ ಹೆಚ್ಚಿನ ಅನುದಾನ ಮೀಸಲಿಡುವಂತೆ ಒತ್ತಡ ಹೇರುತ್ತಿರುವುದು ಅಧಿಕಾರಿಗಳನ್ನು ಹೈರಾಣಾಗಿಸಿದೆ.

ಈ ಸಲ ಬಿಬಿಎಂಪಿ (ವಿತ್ತೀಯ ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣೆ) ನಿಯಮಗಳು 2021ರ ಆಧಾರದಲ್ಲಿ ಬಜೆಟ್ ರೂಪಿಸಬೇಕಿದೆ. ಹಿಂದಿನ ವರ್ಷದಲ್ಲಿ ವಾಸ್ತವದಲ್ಲಿ ಎಷ್ಟು ವರಮಾನ ಬಂದಿದೆ ಎಂಬ ಆಧಾರದಲ್ಲೇ ಬಜೆಟ್ ರೂಪಿಸಬೇಕು. ಇದನ್ನು ಖಾತರಿಪಡಿಸುವ ಸಲುವಾಗಿ ಹಣಕಾಸು ನಿರ್ವಹಣಾ ತತ್ವಗಳನ್ನು ರೂಪಿಸಲಾಗಿದೆ. ಅದರ ಪ್ರಕಾರ ಬಜೆಟ್‌ನ ವಿತ್ತೀಯ ಕೊರತೆಯು ಬಜೆಟ್ ಗಾತ್ರದ ಶೇ 3 ಅನ್ನು ಮೀರುವಂತಿಲ್ಲ. ಪಾಲಿಕೆಯ ಹಣಕಾಸು ಸ್ಥಿತಿಗತಿಯನ್ನು ಅವಲೋಕಿಸುವುದಕ್ಕೆ ಸೂಚ್ಯಂಕಗಳನ್ನು ರೂಪಿಸಲಾಗಿದೆ. ಹಿಂದಿನ ನಾಲ್ಕು ವರ್ಷಗಳಲ್ಲಿ ಪಾಲಿಕೆಯ ವಾರ್ಷಿಕ ಬೆಳವಣಿಗೆಯ ಸಂಯುಕ್ತ ದರ (ಸಿಎಜಿಆರ್) ಆಧರಿಸಿ ಬಜೆಟ್ ಗಾತ್ರವನ್ನು ನಿಗದಿಪಡಿಸಬೇಕು. ಸಿಎಜಿಆರ್ ದರದಷ್ಟು ಪ್ರಮಾಣದಲ್ಲಿ ಬಜೆಟ್ ಗಾತ್ರವನ್ನು ಹೆಚ್ಚಿಸುವುದಕ್ಕೆ ಅವಕಾಶ ಇರುತ್ತದೆ.

ಉದಾಹರಣೆಗೆ, ಹಿಂದಿನ ವರ್ಷದ ಕಂದಾಯ ಸ್ವೀಕೃತಿ ₹ 4 ಸಾವಿರ ಕೋಟಿ ಆಗಿದ್ದರೆ, ಸಿಎಜಿಆರ್ ದರ 10 ಇದ್ದರೆ, ಕಂದಾಯ ಸ್ವೀಕೃತಿಯನ್ನು ₹4,400 ಕೋಟಿ ಎಂದು ಅಂದಾಜು ಮಾಡಿ ಅದಕ್ಕೆ ಬಂಡವಾಳ ಸ್ವೀಕೃತಿಯನ್ನು ಸೇರಿಸಿ ಬಜೆಟ್ ಗಾತ್ರವನ್ನು ನಿಗದಿಪಡಿಸಬಹುದು. ಬಿಬಿಎಂಪಿ 2021–22ರಲ್ಲಿ ಮಾರ್ಚ್ 29ರವರೆಗೆ ₹ 3,004 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸಿದೆ. ಕೊನೆಯ ಎರಡು ದಿನಗಳ ತೆರಿಗೆ ಸಂಗ್ರಹ ಹಾಗೂ ಇತರ ವರಮಾನಗಳನ್ನು ಸೇರಿಸಿದರೂ ಕಂದಾಯ ಸ್ವೀಕೃತಿ ಗಾತ್ರ ಗರಿಷ್ಠ ₹ 3,500 ತಲುಪಬಹುದು ಎನ್ನುತ್ತವೆ ಬಿಬಿಎಂಪಿ ಮೂಲಗಳು.

ಪಾಲಿಕೆ ಬಜೆಟ್– ಮುಖ್ಯಮಂತ್ರಿ ಅಂಗಳಕ್ಕೆ

ಪಾಲಿಕೆ ಬಜೆಟ್ ಮಂಡನೆಯ ದಿನಾಂಕ ನಿಗದಿ ನಿರ್ಧಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಂಗಳವನ್ನು ತಲುಪಿದೆ.

ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್ ಹಾಗೂ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮುಖ್ಯಮಂತ್ರಿಯವರು ಗುರುವಾರ (ಇದೇ 31ರಂದು) ಬೆಳಿಗ್ಗೆ 10 ಗಂಟೆಗೆ ಭೇಟಿ ಆಗಿ ಬಜೆಟ್ ಬಗ್ಗೆ ಚರ್ಚಿಸಲಿದ್ದಾರೆ. ಈ ಸಂದರ್ಭದಲ್ಲಿ ಕೆಲ ಸಚಿವರು ಹಾಗೂ ಶಾಸಕರು ಉಪಸ್ಥಿತರಿರುವ ನಿರೀಕ್ಷೆ ಇದೆ. ಮುಖ್ಯಮಂತ್ರಿ ಸಮ್ಮತಿ ಸೂಚಿಸಿದರೆ, ಗುರುವಾರವೇ ಬಜೆಟ್ ಮಂಡಿಸುವ ಸಾಧ್ಯತೆಯೂ ಇದೆ.

‘2020ರ ಬಿಬಿಎಂಪಿ ಕಾಯ್ದೆ ಪ್ರಕಾರ ಆರ್ಥಿಕ ವರ್ಷ ಕೊನೆಗೊಳ್ಳುವುದಕ್ಕೆ ಮೂರು ವಾರ ಮುಂಚಿತವಾಗಿ ಪಾಲಿಕೆ ಬಜೆಟ್‌ಗೆ ಅಂಗೀಕಾರ ಪಡೆಯಬೇಕು. ಕಡೇ ಪಕ್ಷ ಈ ಆರ್ಥಿಕ ವರ್ಷದಲ್ಲಾದರೂ ಬಜೆಟ್ ಮಂಡಿಸಿದರೆ ಒಳ್ಳೆಯದು. ಏಪ್ರಿಲ್ 1ರ ನಂತರ ಬಜೆಟ್ ಮಂಡಿಸುವುದು ಅಷ್ಟು ಸಮಂಜಸವಲ್ಲ’ ಎಂದು ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟರು.



ಬಿಬಿಎಂಪಿ

‘ಈ ವರ್ಷವೂ ಬಜೆಟ್ ಗಾತ್ರ ಕಳೆದ ಸಾಲಿಗಿಂತ ಕಡಿಮೆ ಆಗುವ ಲಕ್ಷಣಗಳು ಕಾಣಿಸುತ್ತಿಲ್ಲ. ಬಿಬಿಎಂಪಿಯ ಕಂದಾಯ ಸ್ವೀಕೃತಿಯಲ್ಲಿಯೂ ಗಣನೀಯ ಹೆಚ್ಚಳ ಆಗುವ ನಿರೀಕ್ಷೆಗಳಿಲ್ಲ. ಹಾಗಾಗಿ ಬಜೆಟ್ ಗಾತ್ರ ₹ 9ಸಾವಿರ ಕೋಟಿ ಮೀರಿದರೆ ಅದನ್ನು ವಾಸ್ತವಾಂಶ ಆಧರಿಸಿದ ಬಜೆಟ್ ಎನ್ನಲಾಗದು’ ಎನ್ನುವುದು ಅಧಿಕಾರಿಯೊಬ್ಬರ ಅಭಿಪ್ರಾಯ.

‘₹ 4,544.33 ಕೋಟಿ ಕಂದಾಯ ಸ್ವೀಕೃತಿಯನ್ನು ಅಂದಾಜು ಮಾಡಿ ₹ 9,019 ಕೋಟಿ ಮೊತ್ತಕ್ಕೆ ಬಜೆಟ್ ಗಾತ್ರವನ್ನು ಅಂತಿಮಗೊಳಿಸಲು ಬಿಬಿಎಂಪಿ ಅಧಿಕಾರಿಗಳು ನಿರ್ಧರಿಸಿದ್ದರು. ಆ ಬಳಿಕವೂ ಕೆಲವು ಸಚಿವರು ಹಾಗೂ ಶಾಸಕರು ತಮ್ಮ ವಾರ್ಡ್‌ಗೆ ಹೆಚ್ಚುವರಿ ಅನುದಾನ ಮೀಸಲಿಡುವಂತೆ ಒತ್ತಡ ಹೇರಿದ್ದಾರೆ. ಅದಕ್ಕೆ ಒಪ್ಪಿದರೆ ವಿತ್ತೀಯ ಹೊಣೆಗಾರಿಕೆ ನಿಯಮದ ಆಶಯಗಳಿಗೆ ಬದ್ಧವಾಗಿರಲು ಸಾಧ್ಯವಿಲ್ಲ’ ಎಂದು ಅಧಿಕಾರಿಗಳು ಅಸಹಾಯಕತೆ ತೋಡಿಕೊಂಡರು.

2021–22ನೇ ಸಾಲಿನಲ್ಲಿ ಬಿಬಿಎಂಪಿ ಅಧಿಕಾರಿಗಳು ₹ 9,286.80 ಕೋಟಿ ಗಾತ್ರದ ಬಜೆಟ್ ಅನ್ನು ಅಂಗೀಕರಿಸಿ ನಗರಾಭಿವೃದ್ಧಿ ಇಲಾಖೆಗೆ ಅನೊಮೋದನೆಗಾಗಿ ಕಳುಹಿಸಿತ್ತು. ಯಾವತ್ತೂ ಬಿಬಿಎಂಪಿ ಬಜೆಟ್ ಗಾತ್ರಕ್ಕೆ ಕತ್ತರಿ ಹಾಕಿ ಅನುಮೋದನೆ ನೀಡುತ್ತಿದ್ದ ಇಲಾಖೆ ಬಜೆಟ್ ಗಾತ್ರವನ್ನು ₹ 9,951.8 ಕೋಟಿಗೆ ಹೆಚ್ಚಿಸಿ ಅನುಮೋದನೆ ನೀಡಿತ್ತು.

ಬಿಬಿಎಂಪಿ: 3 ಸಾವಿರ ಕೋಟಿ ಆಸ್ತಿ ತೆರಿಗೆ ಸಂಗ್ರಹ



ಗುರಿ ಸಾಧನೆ: ಮುಂಚೂಣಿಯಲ್ಲಿ ಯಲಹಂಕ ವಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ 2021–22ನೇ ಸಾಲಿನಲ್ಲಿ ಆಸ್ತಿ ತೆರಿಗೆ ಸಂಗ್ರಹ ₹ 3 ಸಾವಿರ ಕೋಟಿ ದಾಟಿದೆ. ಮಾ.29ರವರೆಗೆ ಒಟ್ಟು ₹ 3,004.83 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿದೆ. ಪಾಲಿಕೆ ಇದುವರೆಗೆ ಆಸ್ತಿ ತೆರಿಗೆ ಸಂಗ್ರಹದಲ್ಲಿ ₹ 3 ಸಾವಿರ ಕೋಟಿ ಗಡಿ ದಾಟಿರುವುದು ಇದೇ ಮೊದಲು.

2021–22ನೇ ಸಾಲಿಗೆ ಒಟ್ಟು 4,000 ಕೋಟಿ ತೆರಿಗೆ ಸಂಗ್ರಹಿಸುವ ಗುರಿಯನ್ನು ನಿಗದಿಪಡಿಸಲಾಗಿತ್ತು. ಇದರಲ್ಲಿ ₹ 3,058.23 ಕೋಟಿ ಪ್ರಸಕ್ತ ಸಾಲಿನ ತೆರಿಗೆ ಹಾಗೂ ₹942.30 ಕೋಟಿ ಹಳೆ ಬಾಕಿ ಸೇರಿತ್ತು.

‘ಭಾರಿ ಪ್ರಮಾಣದಲ್ಲಿ ತೆರಿಗೆ ಬಾಕಿ ಉಳಿಸಿಕೊಂಡಿದ್ದವರಿಗೆ ನೋಟಿಸ್ ಜಾರಿಗೊಳಿಸಿ, ಒತ್ತಡ ಹಾಕಿದ್ದರಿಂದ ಅನೇಕರು ಹಳೆ ಬಾಕಿಗಳನ್ನು ಚುಕ್ತಾ ಮಾಡಿದ್ದಾರೆ. ಇನ್ನು ಅನೇಕರು ಹಳೆ ಬಾಕಿ ಪಾವತಿಸಿಲ್ಲ. ಅದರ ವಸೂಲಿಗೂ ಕ್ರಮ ಕೈಗೊಳ್ಳುತ್ತೇವೆ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ (ಕಂದಾಯ) ಡಾ.ದೀಪಕ್ ಆರ್.ಎಲ್. ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರತಿ ವರ್ಷವೂ ಕೊನೆಯ 2–3 ದಿನಗಳಲ್ಲಿ ಆಸ್ತಿ ತೆರಿಗೆ ಸಂಗ್ರಹ ಹೆಚ್ಚು ಇರುತ್ತದೆ. ಮಂಗಳವಾರ (ಮಾರ್ಚ್ 29) 13 ಕೋಟಿ, ಬುಧವಾರ (ಮಾರ್ಚ್ 30) 23 ಕೋಟಿಗೂ ಅಧಿಕ ತೆರಿಗೆ ಸಂಗ್ರಹವಾಗಿದೆ. ಈ ಆರ್ಥಿಕ ವರ್ಷದ ಕೊನೆಯ ದಿನವಾದ ಗುರುವಾರ (ಮಾರ್ಚ್ 31) ಭಾರಿ ಪ್ರಮಾಣದಲ್ಲಿ ತೆರಿಗೆ ಸಂಗ್ರಹವಾಗುವ ನಿರೀಕ್ಷೆ ಇದೆ’ ಎಂದು ಜಂಟಿ ಆಯುಕ್ತ (ಕಂದಾಯ) ವೆಂಕಟಾಚಲಪತಿ ತಿಳಿಸಿದರು.

ಆಸ್ತಿ ತೆರಿಗೆ ಸಂಗ್ರಹಕ್ಕೆ ಸಂಬಂಧಿಸಿದ ಗುರಿ ಸಾಧನೆಯಲ್ಲಿ ಯಲಹಂಕ ವಲಯ ಮುಂಚೂಣಿಯಲ್ಲಿದೆ. ಅನೇಕ ವರ್ಷಗಳಿಂದ ತೆರಿಗೆ ಬಾಕಿ ಉಳಿಸಿಕೊಂಡಿದ್ದ ಟೆಕ್ ಪಾರ್ಕ್‌ಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಕಲ್ಯಾಣ ಸಂಸ್ಥೆಗಳ ಮೇಲೆ ಇಲ್ಲಿನ ಕಂದಾಯ ಅಧಿಕಾರಿಗಳು ದಾಳಿ ನಡೆಸಿ ನೋಟಿಸ್ ಜಾರಿಗೊಳಿಸಿ ತೆರಿಗೆ ವಸೂಲಿಗೆ ಕ್ರಮಕೈಗೊಂಡಿದ್ದರು. ಈ ವಲಯವು ಶೇ 84.95ರಷ್ಟು ಗುರಿ ಸಾಧನೆ ಮಾಡಿದೆ.

ದಾಸರಹಳ್ಳಿ ವಲಯವು ಗುರಿ ಸಾಧನೆಯಲ್ಲಿ (ಶೇ 68.61) ಹಿಂದುಳಿದಿದೆ.

‘ಯಲಹಂಕ ವಲಯದಲ್ಲಿ ಕಳೆದ ವರ್ಷದವರೆಗೆ ಗರಿಷ್ಠ ₹ 217 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು. 2021–22ನೇ ಸಾಲಿನಲ್ಲಿ ಒಟ್ಟು ₹ 289.69 ಕೋಟಿ ತೆರಿಗೆ ಸಂಗ್ರಹವಾಗಿದೆ. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹಾಗೂ ವಿಶೇಷ ಆಯುಕ್ತ (ಕಂದಾಯ) ದೀಪಕ್ ಅವರ ಮಾರ್ಗದರ್ಶನದಿಂದಾಗಿ ಈ ಸಾಧನೆ ಸಾಧ್ಯವಾಗಿದೆ’ ಎಂದು ಯಲಹಂಕ ವಲಯದ ಕಂದಾಯ ಉಪಾಯುಕ್ತ ಕೆ.ಶಿವೇಗೌಡ ತಿಳಿಸಿದರು.

ಬಿಬಿಎಂಪಿಯು ಕಳೆದ ಆರ್ಥಿಕ ವರ್ಷದಲ್ಲಿ (2020–21) ಆಸ್ತಿ ತೆರಿಗೆ, ಖಾತಾ ವರ್ಗಾವಣೆ, ಖಾತಾ ಪ್ರಮಾಣ ಪತ್ರ ನೀಡುವಿಕೆ ಹಾಗೂ ಸುಧಾರಣಾ ಶುಲ್ಕಗಳಿಂದ ಒಟ್ಟು ₹ 3,001.06 ಕೋಟಿ ಸಂಗ್ರಹಿಸಿತ್ತು. ಅದರಲ್ಲಿ ಆಸ್ತಿ ತೆರಿಗೆ ಸಂಗ್ರಹದ ಪಾಲು ₹ 2780.83 ಕೋಟಿ ಇತ್ತು.

ಪ್ರಜಾವಾಣಿ ವಿಶೇಷ

ಬಿಬಿಎಂಪಿ:2021–22ನೇ ವರ್ಷದ ಆಸ್ತಿ ತೆರಿಗೆ ಸಂಗ್ರಹ

(ವಲಯವಾರು ವಿವರ ₹ ಕೋಟಿಗಳಲ್ಲಿ)

ವಲಯ	ಗುರಿ	ಸಂಗ್ರಹ	ಶೇ
ಯಲಹಂಕ	341	289	84.95
ಮಹದೇವಪುರ	996.10	774.65	77.77
ಆರ್.ಆರ್.ನಗರ	262.81	200.43	76.26
ಪೂರ್ವ	759.22	569.25	74.98
ಬೊಮ್ಮನಹಳ್ಳಿ	432.94	319.24	73.74
ದಕ್ಷಿಣ	623.11	442.82	71.07
ಪಶ್ಚಿಮ	465.12	326.26	70.15
ದಾಸರಹಳ್ಳಿ	120.23	82.49	68.61

ಬಿಬಿಎಂಪಿಯು ₹ 3 ಸಾವಿರ ಕೋಟಿಗೂ ಅಧಿಕ ಆಸ್ತಿ ತೆರಿಗೆ ಸಂಗ್ರಹಿಸಿದ್ದು ಗಮನಾರ್ಹ ಸಾಧನೆ. ವ್ಯವಸ್ಥೆಯ ಕೆಲವು ಲೋಪಗಳನ್ನು ಸರಿಪಡಿಸಿ ತೆರಿಗೆ ಸಂಗ್ರಹವನ್ನು ಇನ್ನಷ್ಟು ಸುಧಾರಿಸಲು ಕ್ರಮ ಕೈಗೊಳ್ಳುತ್ತೇವೆ

ಡಾ.ದೀಪಕ್ ಆರ್.ಎಲ್., ವಿಶೇಷ ಆಯುಕ್ತ (ಕಂದಾಯ), ಬಿಬಿಎಂಪಿ

ಅಂಕಿ-ಅಂಶಗಳು

₹2,247.10 ಕೋಟಿ
ಬಿಬಿಎಂಪಿಯ 2021-22ನೇ ಸಾಲಿನ ಆಸ್ತಿ ತೆರಿಗೆ (ಹಳೆ ಬಾಕಿ ಹೊರತಾಗಿ) ಸಂಗ್ರಹ ಪ್ರಮಾಣ (ಮಾರ್ಚ್ 29ರವರೆಗೆ)

₹699.53 ಕೋಟಿ
2021-22ನೇ ಸಾಲಿನಲ್ಲಿ ಸಂಗ್ರಹಿಸಿರುವ ಆಸ್ತಿ ತೆರಿಗೆಯ ಹಳೆ ಬಾಕಿ (ಮಾರ್ಚ್ 29ರವರೆಗೆ)

₹2,153.17 ಕೋಟಿ
2020-21ನೇ ಸಾಲಿನ ಆಸ್ತಿ ತೆರಿಗೆ (ಹಳೆ ಬಾಕಿ ಹೊರತಾಗಿ) ಸಂಗ್ರಹ ಪ್ರಮಾಣ

₹627.73 ಕೋಟಿ
2020-21ನೇ ಸಾಲಿನಲ್ಲಿ ಸಂಗ್ರಹಿಸಿರುವ ಆಸ್ತಿ ತೆರಿಗೆಯ ಹಳೆ ಬಾಕಿ

₹2,055.60 ಕೋಟಿ
2019-20ನೇ ಸಾಲಿನ ಆಸ್ತಿ ತೆರಿಗೆ (ಹಳೆ ಬಾಕಿ ಹೊರತಾಗಿ) ಸಂಗ್ರಹ ಪ್ರಮಾಣ

₹629.75 ಕೋಟಿ
2019-20ನೇ ಸಾಲಿನಲ್ಲಿ ಸಂಗ್ರಹಿಸಿರುವ ಆಸ್ತಿ ತೆರಿಗೆಯ ಹಳೆ ಬಾಕಿ

ಸುಳ್ಳು ಹೇಳಿ ಮದುವೆ ಮಾಡಿಕೊಂಡ ಆರೋಪ

ಕೆಎಎಸ್ ಅಧಿಕಾರಿ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ದಕ್ಷಿಣ ವಿಭಾಗದ ಜಂಟಿ ಆಯುಕ್ತರಾಗಿದ್ದ ಕೆಎಎಸ್ ಅಧಿಕಾರಿ ವೀರಭದ್ರಸ್ವಾಮಿ ಅವರು ಸುಳ್ಳು ಹೇಳಿ ತನ್ನನ್ನು ವಿವಾಹವಾಗಿದ್ದಾರೆ’ ಎಂದು ಮಹಿಳೆಯೊಬ್ಬರು ಆರೋಪಿಸಿದ್ದಾರೆ. ಈ ಸಂಬಂಧ ಬಸವನಗುಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘2020ರಲ್ಲಿ ವೀರಭದ್ರಸ್ವಾಮಿ ಅವರ ಪರಿಚಯವಾಗಿತ್ತು. ನನ್ನ ಬಳಿ ಪ್ರೇಮ ನಿವೇದನೆ ಮಾಡಿಕೊಂಡಿದ್ದ ಅವರು ಕೆಲ ದಿನಗಳ ನಂತರ ವಿವಾಹದ ಪ್ರಸ್ತಾಪ ಮುಂದಿಟ್ಟಿದ್ದರು. ಮೊದಲನೆ ಪತ್ನಿ ಹಾಗೂ ಕುಟುಂಬದಿಂದ 11 ವರ್ಷಗಳಿಂದ ದೂರ ಇರುವುದಾಗಿಯೂ ನಂಬಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಈ ವರ್ಷದ ಫೆಬ್ರುವರಿ 14ರಂದು ಹುಳಿಮಾವು–ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿರುವ ದೇವಸ್ಥಾನವೊಂದರಲ್ಲಿ ಕುಟುಂಬದವರು ಹಾಗೂ ಆಪ್ತರ ಸಮ್ಮುಖದಲ್ಲಿ ನನ್ನನ್ನು ವಿವಾಹವಾಗಿದ್ದ ಅವರು ನಮ್ಮ ಮನೆಯಲ್ಲೇ ವಾಸವಿದ್ದರು. ನಂತರ ಆಗಾಗ ಮೊದಲ ಪತ್ನಿ ಮನೆಗೂ ಹೋಗಿ ಬರುತ್ತಿದ್ದರು. ಈ ಕುರಿತು ಪ್ರಶ್ನಿಸಿದ ನಂತರ ಅವರು ನಾಪತ್ತೆಯಾಗಿದ್ದಾರೆ.ಮೊಬೈಲ್ ಸಂಪರ್ಕಕ್ಕೂ ಸಿಗುತ್ತಿಲ್ಲ ಎಂದೂ ದೂರಿನಲ್ಲಿ ವಿವರಿಸಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ. ಈ ಕುರಿತು ಪ್ರತಿಕ್ರಿಯೆ ಪಡೆಯಲು ವೀರಭದ್ರಸ್ವಾಮಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಯಿತು. ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು.

ಬೆಸ್ಕಾಂ ಇ.ಇ ಬಳಿ ಕೋಟ್ಯಂತರ ಮೌಲ್ಯ ಆಸ್ತಿ

ಬೆಂಗಳೂರು: ವಿದ್ಯುತ್ ಸಂಪರ್ಕ ಕಲ್ಪಿಸಲು ಲಂಚ ಪಡೆಯುವಾಗ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಬಂಧಿಸಿದ್ದ ಬೆಸ್ಕಾಂ ಉತ್ತರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಎಲ್.ಎಸ್. ಲಕ್ಷ್ಮೀಶ್ ಬಳಿ ಎರಡು ಫ್ಲ್ಯಾಟ್, ಐದು ನಿವೇಶನ ಸೇರಿದಂತೆ ಕೋಟ್ಯಂತರ ರೂಪಾಯಿ ಮೌಲ್ಯದ ಆಸ್ತಿ ಇರುವುದು ಪತ್ತೆಯಾಗಿದೆ.

ಸೋಮವಾರ ವ್ಯಕ್ತಿಯೊಬ್ಬರಿಂದ ₹ 10,000 ಲಂಚ ಪಡೆಯುತ್ತಿದ್ದ ಅಧಿಕಾರಿಯನ್ನು ಎಸಿಬಿ ಬಂಧಿಸಿತ್ತು. ಮಾಗಡಿ ರಸ್ತೆಯ ಪ್ರೆಸ್ಟೀಜ್ ವುಡ್ಸ್ ಅಪಾರ್ಟ್‌ಮೆಂಟ್‌ನಲ್ಲಿರುವ ಆರೋಪಿಯ ಮನೆ ಹಾಗೂ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿರುವ ವಾಸದ ಮನೆಗಳ ಮೇಲೆ ಬುಧವಾರ ದಾಳಿಮಾಡಿದ ಎಸಿಬಿ ಅಧಿಕಾರಿಗಳು ಶೋಧ ನಡೆಸಿದರು.

ಬೆಂಗಳೂರಿನಲ್ಲಿ ಎರಡು ಫ್ಲ್ಯಾಟ್, ಮೂರು ನಿವೇಶನ, ಮೈಸೂರಿನಲ್ಲಿ ಎರಡು ನಿವೇಶನ, ರಾಮನಗರ ಜಿಲ್ಲೆಯ ಬೀಗೆಹಳ್ಳಿಯಲ್ಲಿ 2 ಎಕರೆ 8 ಗುಂಟೆ ಕೃಷಿ ಜಮೀನು, ಅರಸೀಕೆರೆ ತಾಲ್ಲೂಕಿನಲ್ಲಿ 3 ಎಕರೆ ಕೃಷಿ ಜಮೀನು ಹೊಂದಿರುವುದು ಪತ್ತೆಯಾಗಿದೆ. ಮನೆಯಲ್ಲಿ ₹ 9.90 ಲಕ್ಷ ನಗದು, ₹ 5.78 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನೂ ಪತ್ತೆಮಾಡಲಾಗಿದೆ. ಆರೋಪಿಯ ವಿರುದ್ಧ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದಡಿ ಪ್ರತ್ಯೇಕ ಪ್ರಕರಣ ದಾಖಲಿಸಲಾಗಿದೆ. ಶೋಧನಾ ಕಾರ್ಯವು ಮುಂದುವರಿದಿದೆ. ಆರೋಪಿಯು ಹೊಂದಿರುವ ಆಸ್ತಿಯ ದಾಖಲೆಗಳ ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ: ಮೂವರು ಅಧಿಕಾರಿಗಳ ಅಮಾನತು

ಬೆಂಗಳೂರು: ಪೌರ ಕಾರ್ಮಿಕರ ಕುಂದು ಕೊರತೆ ನಿವಾರಣೆಗೆ ಕ್ರಮ ಕೈಗೊಳ್ಳದ ಆರೋಪದ ಮೇರೆಗೆ ಸಿ.ವಿ.ರಾಮನ್‌ನಗರ ವಿಭಾಗದ ಮೂವರು ಅಧಿಕಾರಿಗಳನ್ನು ಬಿಬಿಎಂಪಿ ಅಮಾನತು ಮಾಡಿದೆ. ಕಾರ್ಯಪಾಲಕ ಎಂಜಿನಿಯರ್ ಬಿ.ಪ್ರಭಾಕರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್, ಕಾರ್ಯಪಾಲಕ ಎಂಜಿನಿಯರ್ ಕಚೇರಿಯ ವ್ಯವಸ್ಥಾಪಕ ಕೆ.ಪಿ.ಸುರೇಶ್ ಕುಮಾರ್ ಅಮಾನತಾದವರು.

ಕೆಲಸಕ್ಕಾಗಿ ನಕಲಿ ಅಂಕಪಟ್ಟಿ: ದೂರು

ಬೆಂಗಳೂರು: ಸಿದ್ದಲಿಂಗೇಶ ಗಂಗಾಧರ ಬುದ್ನಿ ಎಂಬುವವರು ಅನುಕಂಪದ ಆಧಾರದ ಮೇಲೆ ಕೆಲಸ ಗಿಟ್ಟಿಸಲು ನಕಲಿ ಅಂಕಪಟ್ಟಿ ನೀಡಿದ್ದಾರೆ ಎಂದು ಆರೋಪಿಸಿ ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ (ಆಡಳಿತ) ವಿಷ್ಣುವರ್ಧನ್ ರೆಡ್ಡಿ ದೂರು ನೀಡಿದ್ದಾರೆ. ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಸಿದ್ದಲಿಂಗೇಶ, ಬಾಗಲಕೋಟೆಯವರು. ಅವರ ತಂದೆ ಗಂಗಾಧರ ಬುದ್ನಿ ಇಲಾಖೆಯ ನೌಕರರಾಗಿದ್ದರು. ಸೇವೆಯಲ್ಲಿರುವಾಗಲೇ (2008ರ ಆಗಸ್ಟ್ 18) ನಿಧನ ಹೊಂದಿದ್ದರು. ಹೀಗಾಗಿ 2020ರಲ್ಲಿ ಸಿದ್ದಲಿಂಗೇಶ ಅವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕ ಕೆಲಸ ನೀಡಲಾಗಿತ್ತು ಎಂದು ವಿಷ್ಣುವರ್ಧನ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ’ ಎಂದು ಪೊಲೀಸರು ಹೇಳಿದ್ದಾರೆ.

‘ಈ ವರ್ಷದ ಆರಂಭದಲ್ಲಿ ಅವರು ಪ್ರಥಮ ದರ್ಜೆ ಸಹಾಯಕನ ಹುದ್ದೆಗಾಗಿ ಮನವಿ ಮಾಡಿದ್ದರು. ಅವರು ಸಲ್ಲಿಸಿದ್ದ ಪದವಿ ಅಂಕಪಟ್ಟಿ ನಕಲಿ ಎಂಬುದನ್ನು ಮೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳು ದೃಢಪಡಿಸಿದ್ದಾರೆ. ಹೀಗಾಗಿ ಸಿದ್ದಲಿಂಗೇಶ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಿ ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ’ ಎಂದು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಒಡಿಶಾ: 2 ಕ್ಷಿಪಣಿಗಳ ಪರೀಕ್ಷೆ ಯಶಸ್ವಿ

ಬಾಲಾಸೋರ್, ಒಡಿಶಾ (ಪಿಟಿಐ): ಭೂಮಿಯಿಂದ ಆಕಾಶಕ್ಕೆ ಚಿಮ್ಮಿ, ನಿರ್ದಿಷ್ಟ ಗುರಿಯನ್ನು ನಾಶಪಡಿಸಬಲ್ಲ ಮಧ್ಯಮ ಶ್ರೇಣಿಯ ಎರಡು ಕ್ಷಿಪಣಿಗಳ (ಎಂಆರ್ ಎಸ್‌ಎಂ) ಪರೀಕ್ಷಾರ್ಥ ಪ್ರಯೋಗ ಒಡಿಶಾದ ಚಾಂದಿಪುರ್‌ನಲ್ಲಿ ಬುಧವಾರ ನಡೆಸಲಾಯಿತು.

ಇಲ್ಲಿನ ಕರಾವಳಿಯಲ್ಲಿರುವ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್‌ನಲ್ಲಿ (ಐಟಿಆರ್) ಈ ಕ್ಷಿಪಣಿಗಳ ಪರೀಕ್ಷಾರ್ಥ ಪ್ರಯೋಗ ನಡೆಸಲಾಯಿತು. ಎರಡೂ ಕ್ಷಿಪಣಿಗಳ ಪರೀಕ್ಷೆಗಳು ಯಶಸ್ವಿಯಾದವು ಎಂದು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಮೂಲಗಳು ಹೇಳಿವೆ.

135 ಮಂದಿ ಪೊಲೀಸರಿಗೆ ಮುಖ್ಯಮಂತ್ರಿ ಪದಕ

ಬೆಂಗಳೂರು: ದಕ್ಷತೆಯಿಂದ ಸೇವೆ ಸಲ್ಲಿಸಿರುವ ರಾಜ್ಯದ ಒಟ್ಟು 135 ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗೆ 2021ನೇ ಸಾಲಿನ ಮುಖ್ಯಮಂತ್ರಿಗಳ ಪದಕ ಲಭಿಸಿದೆ.

‘ಏಪ್ರಿಲ್ 2ರಂದು ಬೆಳಿಗ್ಗೆ 8 ಗಂಟೆಗೆ ಕೋರಮಂಗಲದಲ್ಲಿರುವ ಕೆಎಸ್‌ಆರ್‌ಪಿ ಪಡೆ–3ರ ಮೈದಾನದಲ್ಲಿ ಪದಕ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ’ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀನಿವಾಸಾಚಾರಿ ವರದಿ ಜಾರಿಗೆ ಆಗ್ರಹ

ಬೆಂಗಳೂರು: ಆರೋಗ್ಯ ಇಲಾಖೆಯ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರಿಗೆ ಸೇವಾ ಭದ್ರತೆ, ವೇತನ ಪರಿಷ್ಕರಣೆ ಮಾಡುವ ಬೇಡಿಕೆಗಳನ್ನು ವಾರದೊಳಗೆ ಈಡೇರಿಸದಿದ್ದರೆ, ಸ್ವಾತಂತ್ರ್ಯ ಉದ್ಯಾನದಲ್ಲಿ ಧರಣಿ ನಡೆಸುವುದಾಗಿ ಆರೋಗ್ಯ ಇಲಾಖೆ ಗುತ್ತಿಗೆ ಮತ್ತು ಹೊರಗುತ್ತಿಗೆ ನೌಕರರ ಸಂಘ ಹಾಗೂ ಭಾರತೀಯ ಮಜ್ದೂರ್ ಸಂಘಗಳು ತಿಳಿಸಿವೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾರತೀಯ ಮಜ್ದೂರ್ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಂಕರ್ ಸುಲೇಗಾಂವ್,‘ಗುತ್ತಿಗೆ ನೌಕರರಿಗೆ ಸೇವಾ ಭದ್ರತೆ ಹಾಗೂ ವೇತನ ಪರಿಷ್ಕರಣೆ ಕುರಿತ ಶ್ರೀನಿವಾಸಾಚಾರಿ ಸಮಿತಿ ವರದಿ ಸಲ್ಲಿಕೆಯಾಗಿದ್ದರೂ ಸರ್ಕಾರ ಈವರೆಗೆ ಅನುಷ್ಠಾನ ಮಾಡಿಲ್ಲ. ಸರ್ಕಾರದ ಈ ವಿಳಂಬ ಧೋರಣೆ ಯಾಕೆ’ ಎಂದು ಪ್ರಶ್ನಿಸಿದರು.

‘ಗೆಟ್ ಸೆಟ್ ಗೋ’ಗೆ ಚಾಲನೆ

ಬೆಂಗಳೂರು: ‘ಜೆಇಇ, ನೀಟ್ ಮತ್ತು ಸಿಇಟಿಯಂಥ ಸಾಮಾನ್ಯ ಪ್ರವೇಶ ಪರೀಕ್ಷೆ ಬರೆಯಲಿರುವ ಎಂಜಿನಿಯರಿಂಗ್ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಉಚಿತ ನೆರವು ನೀಡುವ ಮೂರನೇ ವರ್ಷದ ‘ಗೆಟ್-ಸೆಟ್-ಗೋ’ ಆನ್ ಲೈನ್ ತರಬೇತಿ ಕಾರ್ಯಕ್ರಮಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರು ಬುಧವಾರ ಚಾಲನೆ ನೀಡಿದರು.

ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಾಲತಾಣದಲ್ಲಿ ಅನಾವರಣಗೊಳಿಸಿ ಮಾತನಾಡಿದ ಅವರು, ‘ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳು ‘ಡಿಜಿಲರ್ನ್’ ಎಡುಟೆಕ್ ಸಂಸ್ಥೆಯ ಜೊತೆಗೂಡಿ ರೂಪಿಸಿರುವ ಈ ವಿದ್ಯಾರ್ಥಿಸ್ನೇಹಿ ಯೋಜನೆಯ ಲಾಭವು ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಥಮ ಪಿಯುಸಿಯಿಂದಲೇ ಸಿಗುವಂತೆ ಮಾಡಲಾಗುವುದು. ಈ ಸಂಬಂಧ ಕಂಪನಿಯೊಂದಿಗೆ ಮಾತುಕತೆ ನಡೆಸಲಾಗುತ್ತಿದೆ’ ಎಂದರು.

‘ಜಾಲತಾಣದ ಜತೆಗೆ ಆ್ಯಪ್ ಮೂಲಕವೂ ಈ ಪ್ರಯೋಜನ ಪಡೆಯಬಹುದಾಗಿದೆ. ಗೂಗಲ್ ಪ್ಲೇಸ್ಟೋರಿನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅಲ್ಲದೆ, ಯೂಟ್ಯೂಬ್ ಮೂಲಕವೂ ವಿಡಿಯೊಗಳನ್ನು ವೀಕ್ಷಿಸಬಹುದು’ ಎಂದರು.

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತ ಪಿ. ಪ್ರದೀಪ್, ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕ ಎನ್. ರವಿಚಂದ್ರನ್ ಇದ್ದರು.

ಚಿರತೆ ಸೆರೆಗೆ ಕಾರ್ಯಾಚರಣೆ

ಯಲಹಂಕ: ರೈಲು ಗಾಲಿ ಕಾರ್ಖಾನೆ ಆವರಣದಲ್ಲಿ 4 ದಿನಗಳಿಂದ ಬೀಡು ಬಿಟ್ಟಿರುವ ಚಿರತೆ, ಇನ್ನೂ ಪತ್ತೆಯಾಗದೆ ಕಾರ್ಖಾನೆ ಸಿಬ್ಬಂದಿ ಹಾಗೂ ಸುತ್ತಮುತ್ತಲ ಜನರ ಆತಂಕ ಹೆಚ್ಚಿಸಿದೆ.

ಯಲಹಂಕ ವಲಯ ಅರಣ್ಯ ಸಿಬ್ಬಂದಿ ಬೋನು ಇರಿಸಿ ಚಿರತೆ ಸೆರೆ ಹಿಡಿಯಲು ಕಾರ್ಯಾಚರಣೆ ಮುಂದುವರಿಸಿದ್ದಾರೆ.

‘ಭೂಸ್ವಾಧೀನ ವಿಳಂಬದಿಂದ ಹೆದ್ದಾರಿ ಕಾಮಗಾರಿ ನಿಧಾನ’

ನವದೆಹಲಿ: ಭೂಸ್ವಾಧೀನ ಪ್ರಕ್ರಿಯೆ ವಿಳಂಬ ಹಾಗೂ ಅರಣ್ಯ ಇಲಾಖೆಯಿಂದ ಮೊದಲೇ ಅನುಮತಿ ಪಡೆಯದಿರುವುದು ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿಗಳ ಕಾಮಗಾರಿ ನಿಧಾನಗೊಳ್ಳಲು ಕಾರಣ ಎಂದು ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಬುಧವಾರ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಬಿಜೆಪಿ ಸದಸ್ಯ ಕೆ.ಸಿ. ರಾಮಮೂರ್ತಿ ಅವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಕರ್ನಾಟಕದಲ್ಲಿ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವು 2018–19ರಲ್ಲಿ 1,038 ಕಿ.ಮೀ., 2019–20ರಲ್ಲಿ 777 ಕಿ.ಮೀ. ಆಗಿದ್ದರೆ, 2020–21ರಲ್ಲಿ ಕೇವಲ 671 ಕಿ.ಮೀ. ಅಷ್ಟೇ ನಿರ್ಮಾಣವಾಗಿತ್ತು. ಇದಕ್ಕೆ ಭೂಸ್ವಾಧೀನ ವಿಳಂಬವಾಗಿರುವುದು ಮಾತ್ರವಲ್ಲದೆ ಪರಿಸರ ಇಲಾಖೆಯ ಅನುಮತಿ, ಕಲ್ಲುಗಣಿಗಾರಿಕೆ, ನಿರ್ಮಾಣಕ್ಕೆ ಅಗತ್ಯವಿರುವ ಮಣ್ಣು, ಮರಳು ಗಣಿಗಾರಿಕೆಗೆ ಮೊದಲೇ ಅನುಮತಿ ಪಡೆಯದಿರುವುದು ಕೂಡ ಕಾರಣ ಎಂದು ವಿವರಿಸಿದ್ದಾರೆ.

ಕಾಮಗಾರಿಗಳನ್ನು ತ್ವರಿತಗೊಳಿಸಲು ರಸ್ತೆ ಸಾರಿಗೆ ಸಚಿವಾಲಯವು ಯಾವ ಪ್ರಯತ್ನಗಳನ್ನು ಮಾಡುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಗಡ್ಕರಿ, ಅರಣ್ಯ ಇಲಾಖೆಯ ಅನುಮತಿ, ಭೂಸ್ವಾಧೀನ ಮೊದಲಾದವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ಕರ್ನಾಟಕದ ಮುಖ್ಯ ಕಾರ್ಯದರ್ಶಿ ನೇತೃತ್ವದ ಉನ್ನತಾಧಿಕಾರ ಸಮಿತಿಯು ನಿಯಮಿತವಾಗಿ ಪರಿಶೀಲನಾ ಸಭೆಗಳನ್ನು ನಡೆಸುತ್ತಿದೆ ಎಂದೂ ಹೇಳಿದರು.

ಕರ್ನಾಟಕದ ಲೋಕೋಪಯೋಗಿ ಇಲಾಖೆ ಮತ್ತು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಈ ಕುರಿತು ವಿವಿಧ ಹಂತಗಳಲ್ಲಿ ಪರಿಶೀಲನೆ ನಡೆಸಿದೆ ಎಂದೂ ತಿಳಿಸಿದ್ದಾರೆ. 2021–22ರಲ್ಲಿ 17 ಹಾಗೂ 2022–23ರಲ್ಲಿ 43 ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಲಾಗುತ್ತಿದೆ ಎಂದೂ ತಿಳಿಸಿದ್ದಾರೆ.



ಹೂವಿನ ಪಲ್ಲಕ್ಕಿ ಕೈವಾರ ತಾತಯ್ಯ ಅವರ ಜಯಂತಿ ಅಂಗವಾಗಿ ಕೆ.ಆರ್. ಪುರದಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ಬಲಿಜ ಸಮಾಜ ಹಮ್ಮಿಕೊಂಡಿದ್ದ ಕೈವಾರ ತಾತಯ್ಯ ಅವರ ಹೂವಿನ ಪಲ್ಲಕ್ಕಿ ರಥಯಾತ್ರೆಯಲ್ಲಿ ಮಹಿಳೆಯರು ಕಳಶ ಹೊತ್ತು ಸಾಗಿದರು

ಬಾಲಕಿ ಮೇಲೆ ಅತ್ಯಾಚಾರ: 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ ಆರೋಪಿಗೆ ನಗರದ ಪೋಕ್ಸೊ ವಿಶೇಷ ನ್ಯಾಯಾಲಯ 20 ವರ್ಷ ಜೈಲು ಶಿಕ್ಷೆ ಹಾಗೂ ₹ 3 ಸಾವಿರ ದಂಡ ವಿಧಿಸಿದೆ.

ಕಿರಣ್ ಕುಮಾರ್ ಶಿಕ್ಷೆಗೆ ಗುರಿಯಾಗಿರುವ ಅಪರಾಧಿ. ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಹೆಚ್ಚುವರಿ ಎಫ್‌ಟಿಎಸ್‌ಸಿ–3ನೇ ನ್ಯಾಯಾಲಯದ ನ್ಯಾಯಾಧೀಶೆ ಇಶ್ರತ್ ಜಹಾನ್ ಆರಾ ಶಿಕ್ಷೆ ವಿಧಿಸಿದ್ದು, ದಂಡದ ಮೊತ್ತ ಪಾವತಿಸದೇ ಇದ್ದಲ್ಲಿ ಹೆಚ್ಚುವರಿ ಜೈಲು ಶಿಕ್ಷೆ ಅನುಭವಿಸುವಂತೆ ಆದೇಶಿಸಿದ್ದಾರೆ.

ಪ್ರಕರಣವೇನು?:‘ಕಿರಣ್ ಕುಮಾರ್ ಪರಿಚಯಸ್ಥ ಬಾಲಕಿಯ ಮೇಲೆ 2014ರ ಅಕ್ಟೋಬರ್ 30ರಂದು ಅತ್ಯಾಚಾರ ಎಸಗಿದ್ದ’ ಎಂದು ಮಡಿವಾಳ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ, ನಂತರ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಲಾಗಿತ್ತು. ವಿಚಾರಣೆ ನಡೆಸಿದ್ದ ಸಿಸಿಎಚ್–55, ಎಫ್‌ಟಿಸಿ–3ನೇ ಕೋರ್ಟ್ ಇದೇ 28ರಂದು ಅಪರಾಧಿಗೆ ಶಿಕ್ಷೆ ವಿಧಿಸಿ ಆದೇಶಿಸಿದೆ. ಪ್ರಾಸಿಕ್ಯೂಷನ್ ಪರ ಕೃಷ್ಣವೇಣಿ ಮತ್ತು ಗೊರವರ ಗೀತಾ ರಾಮಕೃಷ್ಣ ವಾದ ಮಂಡಿಸಿದ್ದರು.

ಆನ್‌ಲೈನ್‌ನಲ್ಲಿ ‘ವೈನ್’ ಖರೀದಿ: ವಂಚನೆ

ಬೆಂಗಳೂರು: ಆನ್‌ಲೈನ್‌ನಲ್ಲಿ ‘ವೈನ್’ ಕಾಯ್ದಿರಿಸಿದ್ದ ಯುವತಿಯೊಬ್ಬರ ಬ್ಯಾಂಕ್ ಖಾತೆಯಿಂದ ಸೈಬರ್ ವಂಚಕರು ₹50 ಸಾವಿರ ಮೊತ್ತ ಡ್ರಾ ಮಾಡಿಕೊಂಡಿದ್ದಾರೆ. ಲಾಲ್‌ಬಾಗ್ ರಸ್ತೆಯ ವಸತಿ ಸಮುಚ್ಚಯವೊಂದರಲ್ಲಿ ನೆಲೆಸಿರುವ 22 ವರ್ಷದ ಯುವತಿ ಈ ಸಂಬಂಧ ಕೇಂದ್ರ ವಿಭಾಗದ ಸಿಇಎನ್ ಠಾಣೆಗೆ ದೂರು ನೀಡಿದ್ದಾರೆ.

‘ಯುವತಿಯು ವೆಬ್‌ಸೈಟ್‌ವೊಂದರ ಮೂಲಕ ವೈನ್ ಕಾಯ್ದಿರಿಸಿದ್ದರು. ₹540 ಮೊತ್ತವನ್ನೂ ಪಾವತಿಸಿದ್ದರು. ಅವರಿಗೆ ಕರೆ ಮಾಡಿದ್ದ ಅಪರಿಚಿತ ವ್ಯಕ್ತಿಯೊಬ್ಬ ಕೆಲ ನಿಮಿಷಗಳಲ್ಲಿ ನಿಮ್ಮ ಮನೆಗೆ ‘ವೈನ್’ ತಲುಪಿಸಲಿದ್ದೇನೆ. ಅದಕ್ಕೂ ಮುನ್ನ ₹10 ಶುಲ್ಕ ಪಾವತಿಸುವಂತೆ ಸೂಚಿಸಿದ್ದ. ನಿಮ್ಮ ಮೊಬೈಲ್‌ಗೆ ಬಂದಿರುವ ಒಟಿಪಿ ಹೇಳುವಂತೆ ತಿಳಿಸಿದ್ದ. ಆತನ ಮಾತು ನಂಬಿ ಒಟಿಪಿ ಹೇಳಿದ್ದರು. ಕೂಡಲೇ ಅವರ ಬ್ಯಾಂಕ್ ಖಾತೆಯಿಂದ ಹಣ ಡ್ರಾ ಆಗಿತ್ತು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮಾದಕ ವಸ್ತು ಮಾರಾಟ: ಬಂಧನ

ಬೆಂಗಳೂರು: ಸಾರ್ವಜನಿಕರು ಹಾಗೂ ವಿದ್ಯಾ/ರ್ಥಿಗಳನ್ನು ಗುರಿಯಾಗಿಟ್ಟುಕೊಂಡು ಮಾದಕ ವಸ್ತು ಮಾರಾಟ ಮಾಡಲು ಮುಂದಾಗಿದ್ದ ಇಬ್ಬರನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಂಟ್ವಾಳ ತಾಲ್ಲೂಕಿನ ವಿಟ್ಲ ಪಡ್ನೂರು ನಿವಾಸಿ ಹಸನ್ ಸಾದಿಕ್ (35) ಅಹಾಗೂ ಬೆಂಗಳೂರಿನ ಬೆನ್ಸನ್‌ಟೌನ್‌ನ ತಲ್ಹಾ ಖಾನ್ (22) ಬಂಧಿತರು. ಇವರಿಂದ 23 ಗ್ರಾಂ ಎಂಡಿಎಂಎ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

ಬೀಡಿ ಕೊಡದಿದ್ದಕ್ಕೆ ಕೊಲೆ: ಅಪರಾಧಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀಡಿ ಕೊಡಲಿಲ್ಲವೆಂದು ಪರಮೇಶ್ (39) ಎಂಬುವವರನ್ನು ಕೊಲೆ ಮಾಡಿದ್ದ ಆರೋಪಿ ಅಬ್ದುಲ್ ವಾಸೀಂ (34) ಎಂಬಾತನಿಗೆ ನಗರದ 60ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ನ್ಯಾಯಾಧೀಶ ವಿದ್ಯಾಧರ್ ಶಿರಹಟ್ಟಿ ಅವರು ಬುಧವಾರ ತೀರ್ಪು ಪ್ರಕಟಿಸಿದ್ದಾರೆ.

ಪರಮೇಶ್ ಹಾಗೂ ಅಬ್ದುಲ್ ಅವರು ಎಲ್.ಆರ್.ನಗರದ 1ನೇ ಮುಖ್ಯರಸ್ತೆಯಲ್ಲಿ ವಾಸವಿದ್ದರು. ಇವರ ನಡುವೆ ಆಗಾಗ ಜಗಳ ನಡೆಯುತ್ತಿತ್ತು. 2020ರ ಜುಲೈ 20ರಂದು ಮಧ್ಯಾಹ್ನ 2 ಗಂಟೆ ಸುಮಾರಿಗೆ ಪರಮೇಶ್ ಮನೆಗೆ ಬಂದಿದ್ದ ಅಬ್ದುಲ್, ಬೀಡಿ ಕೊಡುವಂತೆ ಕೇಳಿದ್ದ. ಅವರು ಇಲ್ಲ ಎಂದಿದ್ದರು. ಅಷ್ಟಕ್ಕೆ ಸಿಟ್ಟಾಗಿದ್ದ ಆತ ಮನೆಗೆ ಹೋಗಿ ಮತ್ತೆ ಹಿಂತಿರುಗಿದ್ದ. ಪರಮೇಶ್ ಅವರನ್ನು ಮನೆಯಿಂದ ಆಚೆ ಕರೆದುಕೊಂಡು ಬಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ತನ್ನ ಬಳಿ ಇದ್ದ ಸ್ಕ್ರೂ ಡ್ರೈವರ್‌ನಿಂದ ಪರಮೇಶ್ ಅವರ ಎಡ ಕಿವಿ ಹಾಗೂ ಕತ್ತಿನ ಬಳಿ ಬಲವಾಗಿ ಚುಚ್ಚಿದ್ದ. ಬಳಿಕ ಗೋಡೆಗೆ ತಳ್ಳಿ ಕೊಲೆ ಮಾಡಿದ್ದ. ಸರ್ಕಾರಿ ವಕೀಲರಾದ ಶೈಲಜಾ ಕೃಷ್ಣ ನಾಯಕ್ ಅವರು ಪರಮೇಶ್ ಕುಟುಂಬದ ಪರ ವಾದ ಮಂಡಿಸಿದ್ದರು.

ವಲಸಿಗರ ಮೀಸಲು: ನಿರ್ದೇಶನ

ಬೆಂಗಳೂರು: ‘ಬೇರೆ ರಾಜ್ಯಗಳಿಂದ ಬಂದು ಕರ್ನಾಟಕದಲ್ಲಿ ನೆಲೆಸಿರುವ ಪರಿಶಿಷ್ಟ ಜಾತಿ (ಎಸ್ಸಿ) , ಪರಿಶಿಷ್ಟ ಪಂಗಡ (ಎಸ್ಟಿ) ಮತ್ತು ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಜನರಿಗೆ ರಾಜ್ಯ ಸರ್ಕಾರದ ಉದ್ಯೋಗಗಳಲ್ಲಿ ಮೀಸಲು ಕಲ್ಪಿಸುವುದಕ್ಕೆ ನಿರ್ಬಂಧ ಹೇರಲು ಅಗತ್ಯ ತಿದ್ದುಪಡಿ ರೂಪಿಸುವ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಿ’ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿದೆ.

ಈ ಕುರಿತು ಬೆಂಗಳೂರಿನ ಡಾ.ಎಚ್. ಕೃಷ್ಣರಾಮ್ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತು ರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಸ್.ವಿ. ಗಿರಿಕುಮಾರ್, ‘ಹೊರ ರಾಜ್ಯದ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಸಾಕಷ್ಟು ಜನರು ವಲಸೆ ಬಂದು ಇಲ್ಲಿಯೇ ನೆಲೆಯೂರಿದ್ದಾರೆ. ಇವರೆಲ್ಲಾ ಕರ್ನಾಟಕದಲ್ಲಿ ಜಾತಿ ಪ್ರಮಾಣ ಪತ್ರ ಪಡೆದು ಮೀಸಲು ಕೋಟಾದಡಿ ರಾಜ್ಯ ಸರ್ಕಾರದ ಉದ್ಯೋಗಗಳನ್ನು ಗಿಟ್ಟಿಸುತ್ತಿದ್ದಾರೆ. ಇದರಿಂದ ಕರ್ನಾಟಕದಲ್ಲೇ ಹುಟ್ಟಿ ಬೆಳೆದಿರುವ ಎಸ್ಸಿ-ಎಸ್ಟಿ ಹಾಗೂ ಒಬಿಸಿ ಪಂಗಡದವರು ವಂಚಿತರಾಗುತ್ತಿದ್ದಾರೆ’ ಎಂದು ಆಕ್ಷೇಪಿಸಿದರು.

ವಾದ ಮಾನ್ಯ ಮಾಡಿದ ನ್ಯಾಯಪೀಠ, ‘ಅರ್ಜಿದಾರರು ಈ ಕುರಿತು ಸರ್ಕಾರಕ್ಕೆ ಮನವಿ ಸಲ್ಲಿಸಬೇಕು. ಮನವಿ ಕುರಿತಂತೆ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬಹುದು’ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.



ಸುಭಾಷಿತ
ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ.
-ತ.ರಾ.ಸು.

ಬಿಬಿಎಂಪಿ: ವಾರ್ಡ್ ಸಮಿತಿ ಸಭೆಗಳಿಗೆ ಸಿಗಲಿ ಕಾಯಕಲ್ಪ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಆಡಳಿತ ಸುಸೂತ್ರವಾಗಿ ನಡೆಯಬೇಕು ಎಂಬ ಉದ್ದೇಶದಿಂದಲೇ ವಾರ್ಡ್ ಸಮಿತಿಗಳನ್ನು ರಚಿಸಲಾಗಿದೆ. ವಾರ್ಡ್ ಸಮಿತಿಯೂ ಬಿಬಿಎಂಪಿ ಆಡಳಿತ ವ್ಯವಸ್ಥೆಯ ಶಾಸನಬದ್ಧ ಅಂಗ. ಪಾಲಿಕೆ ಸದಸ್ಯರೇ ವಾರ್ಡ್ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. 2020ರ ಸೆಪ್ಟೆಂಬರ್ 10ರ ಬಳಿಕ ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಅಸ್ತಿತ್ವದಲ್ಲಿಲ್ಲ. ಜನರ ಅಹವಾಲು ಆಲಿಸಲು ಪಾಲಿಕೆ ಸದಸ್ಯರು ಇಲ್ಲದ ಕಾರಣಕ್ಕೆ ಆಡಳಿತದಲ್ಲಿ ನಿರ್ವಾತ ಸೃಷ್ಟಿ ಆಗುವುದನ್ನು ತಪ್ಪಿಸಲು ಪ್ರತೀ ವಾರ್ಡ್‌ಗೂ ಬಿಬಿಎಂಪಿಯ ಹಿರಿಯ ಅಧಿಕಾರಿಯೊಬ್ಬರನ್ನು ನೋಡಲ್ ಅಧಿಕಾರಿಯನ್ನಾಗಿ ನಿಯೋಜಿಸಲಾಗಿದೆ. ವಾರ್ಡ್ ಅಭಿವೃದ್ಧಿಯ ಮೇಲ್ವಿಚಾರಣೆ ಅವರ ಹೊಣೆ. ವಾರ್ಡ್‌ನ ನಿವಾಸಿಗಳ ಕುಂದುಕೊರತೆಗಳಿಗೆ ಪರಿಹಾರ ಒದಗಿಸುವುದು ಹಾಗೂ ವಾರ್ಡ್ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸುವ ಜವಾಬ್ದಾರಿಯೂ ಅವರದೇ. 2020ರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 85ರ ಪ್ರಕಾರ, ಪ್ರತೀ ವಾರ್ಡ್ ಸಮಿತಿಯೂ ತಿಂಗಳಲ್ಲಿ ಒಮ್ಮೆಯಾದರೂ ಸಭೆ ನಡೆಸಬೇಕು. ಪಾಲಿಕೆ ಸದಸ್ಯರಿಲ್ಲದಿರುವ ಕೊರತೆ ನೀಗಿಸಲು ತಿಂಗಳಲ್ಲಿ ಎರಡು ಬಾರಿ (ಮೊದಲ ಹಾಗೂ ಮೂರನೇ ಶನಿವಾರ) ಸಭೆಗಳನ್ನು ನಡೆಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಆದೇಶ ಮಾಡಿದ್ದಾರೆ. ಕಾರಣಾಂತರಗಳಿಂದ ನಿಗದಿತ ದಿನದಂದು ಸಭೆ ನಡೆಸಲು ಸಾಧ್ಯವಾಗದಿದ್ದರೆ, ಅದೇ ವಾರದಲ್ಲಿ ಸರ್ಕಾರಿ ರಜೆ ಅಲ್ಲದ ಬೇರೆ ದಿನ ಸಭೆ ನಡೆಸಬಹುದು. ಆರಂಭದಲ್ಲಿ ವಾರ್ಡ್‌ನ ನೋಡಲ್ ಅಧಿಕಾರಿಗಳು ಸಭೆಗಳನ್ನು ಉತ್ಸಾಹದಿಂದಲೇ ನಡೆಸಿದರು. ದೇಶದಲ್ಲಿ 4 ಸಾವಿರಕ್ಕೂ ಅಧಿಕ ವಾರ್ಡ್ ಸಮಿತಿ ಸಭೆಗಳನ್ನು ನಡೆಸಿದ ಮೊದಲ ಮಹಾನಗರ ಪಾಲಿಕೆ ಎಂಬ ಹೆಗ್ಗಳಿಕೆಗೂ ಬಿಬಿಎಂಪಿ ಪಾತ್ರವಾಗಿತ್ತು. ಆದರೆ, ಇದು ಆರಂಭಶೂರತ್ವವಾಯಿತೇನೋ ಎಂದು ತೋರುತ್ತಿದೆ. ಇತ್ತೀಚೆಗಂತೂ ಬಹುತೇಕ ವಾರ್ಡ್‌ಗಳಲ್ಲಿ ಈ ಸಭೆಗಳು ನಿಯಮಿತವಾಗಿ ನಡೆಯುತ್ತಿಲ್ಲ. ಸಭೆ ನಡೆಸುವುದಕ್ಕೆ ಈಗ ಕೋವಿಡ್‌ನ ಆತಂಕವೂ ಇಲ್ಲ. ಹಾಗಿದ್ದರೂ ವಾರ್ಡ್ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸದಿರುವುದಕ್ಕೆ ಕ್ಷಮೆ ಇಲ್ಲ. ಒಟ್ಟು 198 ವಾರ್ಡ್‌ಗಳ ಪೈಕಿ 77ರಲ್ಲಿ ಮಾತ್ರ ವಾರ್ಡ್ ಸಮಿತಿ ಸಭೆಗಳು ನಿಯಮಿತವಾಗಿ ನಡೆಯುತ್ತಿರುವುದು ಜನಾಗ್ರಹ ಸಂಸ್ಥೆ ನಡೆಸಿದ ಅಧ್ಯಯನದಲ್ಲಿ ತಿಳಿದುಬಂದಿದೆ. ಇನ್ನುಳಿದ ಸಮಿತಿಗಳು, ಪ್ರತೀ ತಿಂಗಳು ಸಭೆ ನಡೆಸಬೇಕೆಂಬ ನಿಯಮವನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಸಭೆಯ ನಡಾವಳಿಗಳನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು ವ್ಯವಸ್ಥೆ ಕಲ್ಪಿಸುವ ಮೂಲಕ ಮಾಹಿತಿಯನ್ನು ಸಾರ್ವಜನಿಕರು ಮುಕ್ತವಾಗಿ ಪಡೆಯಲು ಅನುವು ಮಾಡಿಕೊಡಲಾಗಿದೆ. ಈ ಮಾರ್ಚ್ ತಿಂಗಳ ಸಭೆಯ ನಡಾವಳಿಯ ಮಾಹಿತಿಯನ್ನು 31 ವಾರ್ಡ್ ಸಮಿತಿಗಳು ಮಾತ್ರ ಬಿಬಿಎಂಪಿ ವೆಬ್‌ಸೈಟ್‌ನಲ್ಲಿ ಪ್ರಕಟಿಸಿವೆ. ವಾರ್ಡ್ ಸಮಿತಿಯ ಶಾಸನಬದ್ಧ ಜವಾಬ್ದಾರಿಗಳನ್ನು ಬಿಬಿಎಂಪಿ ಕಾಯ್ದೆಯ ಸೆಕ್ಷನ್ 86ರಲ್ಲಿ ವಿವರಿಸಲಾಗಿದೆ. ವಾರ್ಡ್ ಅಭಿವೃದ್ಧಿ ಯೋಜನೆ ರೂಪಿಸುವುದು, ಆದ್ಯತಾ ಪಟ್ಟಿ ರೂಪಿಸುವುದು, ವಿವಿಧ ಸರ್ಕಾರಿ ಕಾರ್ಯಕ್ರಮಗಳಿಗೆ ಫಲಾನುಭವಿಗಳ ಆದ್ಯತಾ ಪಟ್ಟಿ ಸಿದ್ಧಪಡಿಸುವುದು, ಯೋಜನೆಗಳ ಮೇಲ್ವಿಚಾರಣೆ ಹಾಗೂ ನೈರ್ಮಲ್ಯ ಕಾಪಾಡುವುದರಲ್ಲಿ ಈ ಸಮಿತಿಗಳ ಪಾತ್ರ ಮಹತ್ವದ್ದು. ಸಮಿತಿ ಸಭೆಗಳೇ ನಿಯಮಿತವಾಗಿ ನಡೆಯದಿದ್ದರೆ, ವಾರ್ಡ್ ಅಭಿವೃದ್ಧಿ ಕಾರ್ಯ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯಲು ಸಾಧ್ಯವೇ?



ವಾರ್ಡ್ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸುವುದರ ಜೊತೆಗೆ ಸ್ಥಳೀಯ ಅಭಿವೃದ್ಧಿ ವಿಚಾರಗಳ ಬಗ್ಗೆ ಅಲ್ಲಿ ಮುಕ್ತವಾದ ಚರ್ಚೆ ನಡೆಯುವಂತೆ ನೋಡಿಕೊಳ್ಳಬೇಕು

ಈ ಹಿಂದೆ ಪಾಲಿಕೆ ಸದಸ್ಯರು ವಾರ್ಡ್ ಸಮಿತಿಗಳ ಅಧ್ಯಕ್ಷರಾಗಿದ್ದಾಗ, ಸದಸ್ಯರ ನೇಮಕದಿಂದ ಸಭೆಯ ನಡಾವಳಿಯವರೆಗೆ ಎಲ್ಲದರಲ್ಲೂ ಅವರ ಹಸ್ತಕ್ಷೇಪ ಇತ್ತು. ಸದಸ್ಯರಿಲ್ಲದ ಸಂದರ್ಭದಲ್ಲಾದರೂ ಸಮಿತಿಗಳು ಸ್ವತಂತ್ರವಾಗಿ ಹಾಗೂ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದು ಎಂಬ ನಿರೀಕ್ಷೆ ಇತ್ತು. ಅದು ಹುಸಿಯಾಗಿದೆ. ಕೆಲವು ವಾರ್ಡ್‌ಗಳಲ್ಲಿ ಶಾಸಕರ ತಾಳಕ್ಕೆ ತಕ್ಕಂತೆ ನೋಡಲ್ ಅಧಿಕಾರಿಗಳು ಕುಣಿಯುತ್ತಿದ್ದಾರೆ. ಸಮಿತಿ ಸಭೆಗಳನ್ನು ಕಾಟಾಚಾರಕ್ಕೆ ನಡೆಸುತ್ತಿದ್ದಾರೆ. ಬಿಬಿಎಂಪಿ, ಜಲಮಂಡಳಿ, ಬೆಸ್ಕಾಂ, ಪೊಲೀಸ್ ಹಾಗೂ ಇತರ ಇಲಾಖೆಗಳ ಅಧಿಕಾರಿಗಳು ಸಭೆಗಳಲ್ಲಿ ಭಾಗವಹಿಸಬೇಕು. ಆದರೆ, ಅಧಿಕಾರಿಗಳು ಅತ್ತ ಮುಖವನ್ನೇ ಹಾಕುತ್ತಿಲ್ಲ. ಹಾಗಾಗಿ, ವಾರ್ಡ್‌ನ ಸಮಸ್ಯೆಗಳನ್ನು ತಕ್ಷಣದಲ್ಲೇ ಬಗೆಹರಿಸುವ ಅವಕಾಶ ಕೈತಪ್ಪುತ್ತಿದೆ. ಬಿಬಿಎಂಪಿಯ ಬಜೆಟ್‌ನಲ್ಲಿ ಕೌನ್ಸಿಲ್‌ನ ಆಡಳಿತ ಅವಧಿಯಲ್ಲಿ, ಸ್ಥಳೀಯ ಅಭಿವೃದ್ಧಿ ಕಾಮಗಾರಿಗಳಿಗೆ ನಗರ ಕೇಂದ್ರ ವಾಣಿಜ್ಯ ಪ್ರದೇಶದ ವಾರ್ಡ್‌ಗಳಿಗೆ ವರ್ಷಕ್ಕೆ ತಲಾ ₹ 2 ಕೋಟಿ ಹಾಗೂ ಹೊರವಲಯದ ವಾರ್ಡ್‌ಗಳಿಗೆ ತಲಾ ₹ 3 ಕೋಟಿ ಅನುದಾನ ಹಂಚಿಕೆ ಮಾಡಲಾಗುತ್ತಿತ್ತು. 2021–22ನೇ ಸಾಲಿನಲ್ಲಿ ಪ್ರತೀ ವಾರ್ಡ್‌ಗೆ ಕೇವಲ ₹ 60 ಲಕ್ಷ ಅನುದಾನ ಹಂಚಿಕೆ ಮಾಡಲಾಗಿತ್ತು. ಹೊಸ ಯೋಜನೆ ಕೈಗೆತ್ತಿಕೊಳ್ಳುವುದು ಬಿಡಿ, ಈಗಿನ ಸೌಕರ್ಯಗಳ ನಿರ್ವಹಣೆಗೂ ಇದು ಸಾಲುತ್ತಿಲ್ಲ. ವಾರ್ಡ್ ಅಭಿವೃದ್ಧಿಗೆ ಹಂಚಿಕೆ ಮಾಡುವ ಅನುದಾನವನ್ನೂ ಹೆಚ್ಚಿಸಬೇಕು. ವಾರ್ಡ್ ಸಮಿತಿ ಸಭೆಗಳನ್ನು ನಡೆಸುವ ವಿಚಾರದಲ್ಲಿ ಅಸಡ್ಡೆ ತೋರಿಸುತ್ತಿರುವ ನೋಡಲ್ ಅಧಿಕಾರಿಗಳ ವಿರುದ್ಧ ಬಿಬಿಎಂಪಿ ಮುಖ್ಯ ಆಯುಕ್ತರು ಹಾಗೂ ಆಡಳಿತಾಧಿಕಾರಿ ಶಿಸ್ತುಕ್ರಮ ಕೈಗೊಳ್ಳಬೇಕು. ವಾರ್ಡ್ ಸಮಿತಿ ಸಭೆಗಳನ್ನು ನಿಯಮಿತವಾಗಿ ನಡೆಸುವುದಷ್ಟೇ ಅಲ್ಲ, ಸ್ಥಳೀಯ ಅಭಿವೃದ್ಧಿ ವಿಚಾರಗಳ ಕುರಿತು ವಾರ್ಡ್ ಸಮಿತಿ ಸಭೆಯಲ್ಲಿ ಮುಕ್ತವಾದ ಚರ್ಚೆ ನಡೆಯುವಂತೆ ನೋಡಿಕೊಳ್ಳಬೇಕು. ನಾಗರಿಕರು ಕೂಡಾ ಈ ಸಭೆಗಳಲ್ಲಿ ಉತ್ಸಾಹದಿಂದ ಭಾಗವಹಿಸಬೇಕು.

ದಿನದ ಟ್ವೀಟ್

ಆತಂಕಕಾರಿ




ಅರವಿಂದ ಕೇಜ್ರಿವಾಲ್ ಅವರ ನಿವಾಸದ ಮೇಲಿನ ದಾಳಿಯನ್ನು ನಾನು ಖಂಡಿಸುತ್ತೇನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಹಿಂಸೆಯನ್ನು ಎಂದಿಗೂ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಸಾಂವಿಧಾನಿಕ ಸ್ಥಾನ ಹೊಂದಿರುವವರು ಇಂತಹ ದಾಳಿಯ ಭಾಗವಾಗುವುದು ಹೊರದೇಶಗಳಲ್ಲಿ ಭಾರತದ ಪ್ರತಿಷ್ಠೆಗೆ ಧಕ್ಕೆ ಉಂಟು ಮಾಡುತ್ತದೆ. ಭಾರತದಲ್ಲಿ ತೀವ್ರವಾದ ವೈಯಕ್ತಿಕ ದಾಳಿ ಮತ್ತು ಹಿಂಸಾಚಾರವನ್ನು ಒಳಗೊಂಡ ರಾಜಕೀಯ ಸಂಸ್ಕೃತಿ ಬೆಳೆಯುತ್ತಿರುವುದು ಆತಂಕಕಾರಿ.

ಮಿಲಿಂದ್ ದೇವ್ರಾ, ಕಾಂಗ್ರೆಸ್ ಪಕ್ಷದ ಮುಖಂಡ

ಕಿಡಿನುಡಿ

ವಿಧಾನ ಪರಿಷತ್ ಚುನಾವಣೆಯಲ್ಲಿ ₹ 25 ಕೋಟಿಯಿಂದ ₹ 30 ಕೋಟಿಯವರೆಗೂ ವೆಚ್ಚ ಮಾಡಲಾಗುತ್ತಿದೆ. ಅಷ್ಟೊಂದು ಹಣವನ್ನು ಮರಳಿ ಹೇಗೆ ಪಡೆಯುತ್ತಾರೆ? ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವವರು ಯಾರು ಎಂಬ ಪರಿಸ್ಥಿತಿ ಇದೆ.



ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

25 ವರ್ಷಗಳ ಹಿಂದೆ
ಸೋಮವಾರ, 31-3-1997

• ರಂಗ ಸರ್ಕಾರಕ್ಕೆ ಕಾಂಗ್ರೆಸ್ ಬೆಂಬಲ ಹಠಾತ್ ವಾಪಸು

ನವದೆಹಲಿ, ಮಾ. 30– ಕಾಂಗ್ರೆಸ್ ಪಕ್ಷವು ಹದಿಮೂರು ಪಕ್ಷಗಳ ಸಂಯುಕ್ತ ರಂಗಕ್ಕೆ ನೀಡಿದ್ದ ಬೆಂಬಲವನ್ನು ಹಠಾತ್ತಾಗಿ ವಾಪಸ್ ಪಡೆಯುವ ನಿರ್ಧಾರದಿಂದ, ಪ್ರಥಮ ಕನ್ನಡಿಗ ಪ್ರಧಾನಿ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡ ಅವರ ಹತ್ತು ತಿಂಗಳ ಆಳ್ವಿಕೆ ಈಗ ಬಹುತೇಕ ಕೊನೆಗೊಳ್ಳುವ ಅಂತಿಮ ಘಟ್ಟವನ್ನು ತಲುಪಿದೆ.

ಕಾಂಗ್ರೆಸ್ಸಿನ ನಿರ್ಧಾರದಿಂದ ಸರ್ಕಾರ ಬಹುಮತ ಕಳೆದುಕೊಂಡಿದೆ. ಆದರೆ ರಾಜೀನಾಮೆ ನೀಡಲು ಸರ್ಕಾರ ನಿರಾಕರಿಸಿದೆ. ಲೋಕಸಭೆಯಲ್ಲಿ ಬಹುಮತ ಸಾಬೀತು ಮಾಡುವುದಾಗಿ ಹೇಳಿಕೊಂಡಿದೆ.

ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರ ನೇತೃತ್ವದ ತಂಡವು ಇಂದು ಮಧ್ಯಾಹ್ನ ಹನ್ನೆರಡು ಗಂಟೆಗೆ ರಾಷ್ಟ್ರಪತಿ ಡಾ. ಶಂಕರ ದಯಾಳ್ ಶರ್ಮಾ ಅವರನ್ನು ಭೇಟಿ ಮಾಡಿ, ತನ್ನ 140 ಸದಸ್ಯರ ಬೆಂಬಲವನ್ನು ಹಿಂತೆಗೆದುಕೊಳ್ಳುವ ಪಕ್ಷದ ನಿರ್ಧಾರಕ್ಕೆ ಸಂಬಂಧಿಸಿದ ಅಧಿಕೃತ ಪತ್ರವನ್ನು ಸಲ್ಲಿಸಿತು.

50 ವರ್ಷಗಳ ಹಿಂದೆ
ಶುಕ್ರವಾರ, 31-3-1972

• ಖಾಸಗಿ ಶಾಲಾ ಶಿಕ್ಷಕರ ವಜಾ ವಿರುದ್ಧ ಕ್ರಮ: ಅರಸು ಭರವಸೆ

ಬೆಂಗಳೂರು, ಮಾ. 30– ಖಾಸಗಿ ಶಾಲಾ ಆಡಳಿತ ವರ್ಗದವರು ಉಪಾಧ್ಯಾಯರನ್ನು ಅಕ್ರಮವಾಗಿ ಹೊರದೂಡುವುದಕ್ಕೆ ಸರ್ಕಾರ ಅವಕಾಶ ಕೊಡುವುದಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನ ಪರಿಷತ್ತಿನಲ್ಲಿ ಭರವಸೆ ನೀಡಿದರು.

ಶ್ರೀ ಮಳೂರು ಆನಂದರಾವ್ ಅವರು, ಅನೇಕ ಆಡಳಿತ ವರ್ಗದವರು ಏಪ್ರಿಲ್ 10ರಂದು ಅನೇಕರನ್ನು ಕೆಲಸದಿಂದ ತೆಗೆಯುವ ಭೀತಿ ಇದೆ ಎಂದು ಆತಂಕ ವ್ಯಕ್ತಪಡಿಸಿದಾಗ ಮುಖ್ಯಮಂತ್ರಿ ಅರಸು ಅವರು, ತಮ್ಮ ಗಮನಕ್ಕೂ ಅನೇಕ ವಿಚಾರಗಳು ಬಂದಿವೆಯೆಂದು ಹೇಳಿದರು.

ಅನಗತ್ಯವಾಗಿ ಹೊರದೂಡುವುದು ಮಾತ್ರವಲ್ಲ ಅನೇಕ ಶಿಕ್ಷಕರ ಹೆಸರನ್ನು ರಿಜಿಸ್ಟರ್‌ನಲ್ಲೂ ಬರೆದಿಲ್ಲ ಎಂದರು.

ಸಮೂಹ ಸನ್ನಿ ಸ್ಥಳದಲ್ಲಿ ಸಮೂಹಪ್ರಜ್ಞೆ ಮೂಡಿಸಲು ಪರಂಪರೆಯ ಪ್ರತೀಕಗಳನ್ನು ಸರಿದಾರಿಯಲ್ಲಿ ಪರಿಚಯಿಸಬೇಕಿದೆ

ದ್ವೇಷಾತೀತ ಭಾರತವನ್ನು ಒಟ್ಟಾಗಿ ಕಟ್ಟೋಣ



ವಿಶ್ಲೇಷಣೆ
ಬರಗೂರು ರಾಮಚಂದ್ರಪ್ಪ

ಇಂದು ಒಡೆದ ಮನಸ್ಸುಗಳ ನಡುವೆ ದ್ವೇಷದ ಧನುಸ್ಸುಗಳು ಕಾದಾಟ ನಡೆಸುತ್ತಿವೆ; ಸೌಹಾರ್ದ ಪರಂಪರೆಯ ಬಹುತ್ವ ಭಾರತದ ಬೆಳಕು ಹೊಯ್ದಾಡುತ್ತಿದೆ. ಜಾತಿ ಮತ್ತು ಧರ್ಮಗಳು ರಾಜಕೀಯ ಅಸ್ತ್ರವಾಗಿ ಭಾವಭಾರತದ ಹೃದಯ ಗಾಯಗೊಂಡಿದೆ. ಹಾಗಾದರೆ ನಮ್ಮಲ್ಲಿ ಜಾತಿ ಮತ್ತು ಧರ್ಮಗಳೇ ಇಲ್ಲದ ಸಮಾಜ ನಿರ್ಮಾಣ ಸಾಧ್ಯವಿಲ್ಲವೇ? ಈ ಪ್ರಶ್ನೆಗೆ ವಾಸ್ತವದ ನೆಲೆಯಲ್ಲಿ ಉತ್ತರ ಹುಡುಕಬೇಕಾಗುತ್ತದೆ. ಜಾತಿಗಳನ್ನು ಸಾಮಾಜಿಕ ವಾಸ್ತವವಾಗಿ ಕಾಣುವುದಕ್ಕೂ ಜಾತಿವಾದ ಮಾಡುವುದಕ್ಕೂ ವ್ಯತ್ಯಾಸವಿದೆ. ಅಂತೆಯೇ ಧಾರ್ಮಿಕತೆಗೂ ಧಾರ್ಮಿಕ ಮೂಲಭೂತವಾದಕ್ಕೂ ಅಂತರವಿದೆ. ಜಾತಿವಾದವು ಜಾತಿಗಳಲ್ಲೇ ಶ್ರೇಷ್ಠ ಮತ್ತು ಕನಿಷ್ಠಗಳನ್ನು ನಿರ್ಧರಿಸಿ ಮೇಲು-ಕೀಳುಗಳನ್ನು ನಿರ್ಮಿಸಿ ಶೋಷಣೆಯ ಸಾಧನವಾಗುತ್ತದೆ. ಧಾರ್ಮಿಕ ಮೂಲಭೂತವಾದವು ಆಂತರಿಕ ಸುಧಾರಣೆಯನ್ನು ನಿರಾಕರಿಸುವ ಜಡಶಾಸ್ತ್ರಕ್ಕೆ ಬೆಲೆ ಕೊಡುತ್ತ ಅನ್ಯಧರ್ಮ ದ್ವೇಷಕ್ಕೆ ಅಸ್ತ್ರವಾಗುತ್ತದೆ. ಇಂದು ನಮ್ಮ ದೇಶದಲ್ಲಿ ಜಾತಿವಾದ ಮತ್ತು ಧಾರ್ಮಿಕ ಮೂಲಭೂತವಾದಗಳು ಎಗ್ಗಿಲ್ಲದೆ ನುಗ್ಗುವ ಗುಂಪುಗೂಳಿತನದ ಪ್ರದರ್ಶನಕ್ಕೆ ಕಾರಣವಾಗುತ್ತಿವೆ. ಕಟುವಾಸ್ತವವೆಂದರೆ, ಜಾತಿ ಮತ್ತು ಧರ್ಮಗಳ ಸಾಮಾಜಿಕ ಅಸ್ತಿತ್ವವನ್ನು ಒಪ್ಪುತ್ತಲೇ ಜಾತಿಯು ಜಾತಿವಾದವಾಗದಂತೆ, ಧರ್ಮವು ಮೂಲಭೂತವಾಗದಂತೆ ಸಮಾನತೆ ಮತ್ತು ಸಹಿಷ್ಣುತೆಗಳನ್ನು ಸಂರಕ್ಷಿಸುವ ಸವಾಲು ನಮ್ಮೆದುರು ಇದೆ. ಜಾತಿಗಳು ಜೈಲಾಗಬಾರದು; ಧರ್ಮಗಳು ದ್ವೀಪಗಳಾಗಬಾರದು.

ನಾವು ಒಪ್ಪಲಿ ಬಿಡಲಿ, ಜಾತಿ ಮತ ಧರ್ಮಗಳು ಅಸ್ತಿತ್ವದಲ್ಲಿವೆ. ಸಂಪೂರ್ಣ ನಾಸ್ತಿಕವಾದಿಯಾದ ಯಾವ ದೇಶವೂ ವಿಶ್ವದಲ್ಲಿಲ್ಲ. ಲೆನಿನ್ ಕ್ರಾಂತಿಗಾಗಿ ಕಟ್ಟಿದ ಪಕ್ಷಕ್ಕೆ ಧಾರ್ಮಿಕ ನಂಬಿಕೆಯುಳ್ಳವರನ್ನೂ ಸದಸ್ಯರಾಗಿಸಿಕೊಂಡಿದ್ದರು. ಕಮ್ಯುನಿಸ್ಟ್ ಸರ್ಕಾರ ಬಂದ ನಂತರವೂ ಚರ್ಚುಗಳನ್ನು ಹಾಗೇ ಉಳಿಸಿಕೊಂಡರು. 1975ರಲ್ಲಿ ಚೀನಾ ದೇಶವು ಜನರಿಗೆ ಧಾರ್ಮಿಕ ಸ್ವಾತಂತ್ರ್ಯ ನೀಡುವ ಕಾಯ್ದೆಯನ್ನು ಜಾರಿಗೆ ತಂದಿತು. ಈ ಉಪಕ್ರಮಗಳು ಜನರ ಮಾನಸಿಕ ನಂಬಿಕೆಯನ್ನು ಪರಿಗಣಿಸುತ್ತವೆ. ಆದರೆ ಆ ಸರ್ಕಾರಗಳು ತಾವೇ ನೇರವಾಗಿ ಧರ್ಮವನ್ನು ಪೋಷಿಸದೆ ಜನರಿಗೇ ಬಿಟ್ಟಿವೆ. ಹಾಗೆಂದು ಇದು ವಿಶ್ವಾದರ್ಶವಾಗಿಯೇನೂ ಬೆಳೆದಿಲ್ಲ. ಯಾಕೆಂದರೆ ಒಂದೊಂದು ದೇಶವೂ ವಿಭಿನ್ನ ಸಾಮಾಜಿಕ ಸಾಂಸ್ಕೃತಿಕ ಸ್ವರೂಪ ಪಡೆದಿರುತ್ತದೆ. ನಮ್ಮ ದೇಶವು ಬಹು ಸಂಸ್ಕೃತಿ ಮತ್ತು ಬಹು ಧರ್ಮಗಳ ನೆಲೆಬೀಡಾಗಿದೆ.

ವಿಪರ್ಯಾಸವೆಂದರೆ, ನಮ್ಮ ದೇಶದಲ್ಲಿ ಸಮವಸ್ತ್ರ, ವ್ಯಾಪಾರ ಮುಂತಾದವೆಲ್ಲ ಧಾರ್ಮಿಕ ವಿವಾದದ ವಸ್ತುವಾಗುತ್ತಿವೆ. ವಿಚಾರದ ಜಾಗದಲ್ಲಿ ವಿಕಾರ ವಿಜೃಂಭಿಸುತ್ತಿದೆ. ಆದರೆ ಡಾ. ಅಂಬೇಡ್ಕರ್ ರೂಪಿಸಿದ ನಮ್ಮ ಸಂವಿಧಾನವು ಎಲ್ಲ ಧರ್ಮಗಳ ಸಮಾನತೆಯನ್ನು ಸಾರುವ ಸಾರವನ್ನು ಒಳಗೊಂಡಿದೆ. ಸರ್ಕಾರಗಳು ಸಾಮಾಜಿಕ ಮತ್ತು ಧಾರ್ಮಿಕ ಸಮಾನತೆಯ ಆಶಯದಲ್ಲಿ ಜಾತಿ ಮತ್ತು ಧರ್ಮಗಳನ್ನು ಪರಿಗಣಿಸಿ ಯೋಜನೆಗಳನ್ನು ರೂಪಿಸಲು ಅವಕಾಶವಿದ್ದರೂ ಜಾತಿವಾದ ಮತ್ತು ಧಾರ್ಮಿಕ ಮೂಲಭೂತವಾದವನ್ನು ಸಂವಿಧಾನವು ಸಹಿಸುವುದಿಲ್ಲ. ವಿಷಾದಕರ ವಿಷಯವೆಂದರೆ, ಇಂದು ಜಾತಿವಾದ ಮತ್ತು ಮೂಲಭೂತವಾದಗಳೇ ಮುನ್ನೆಲೆಗೆ ಬಂದು ಸಮೂಹ ಸನ್ನಿಯ ಸ್ವರೂಪ ತಾಳಿವೆ. ಸಮೂಹ ಸನ್ನಿಯ ಸ್ಥಳದಲ್ಲಿ ಸಮೂಹ ಪ್ರಜ್ಞೆಯನ್ನು ಮೂಡಿಸಲು ನಾವು ಪರಂಪರೆಯ ಪ್ರತೀಕಗಳನ್ನು ಸರಿದಾರಿಯಲ್ಲಿ ಪರಿಚಯಿಸುವ ಅಗತ್ಯವಿದೆ. ಈ ಮೂಲಕ ಜಾತಿ, ಧರ್ಮಗಳ ದ್ವೇಷ ರಾಜಕಾರಣಕ್ಕೆ ಉತ್ತರಿಸಬೇಕಾಗಿದೆ. ಯಾಕೆಂದರೆ ಜನಸಾಮಾನ್ಯರು ಪರಂಪರೆಯ ಮೌಲ್ಯಗಳಿಗೆ ಹೆಚ್ಚು ಗೌರವ ಕೊಡುತ್ತಾರೆ.

ಉದಾಹರಣೆಗೆ ಹೇಳುವುದಾದರೆ, ನಮ್ಮ ದೇಶದ ಜನಸಾಮಾನ್ಯರು ಗೌರವಿಸುತ್ತ ಬಂದಿರುವ ರಾಮಾಯಣ ಮತ್ತು ಮಹಾಭಾರತಗಳು ವೋಟಿನ ಸಾಧನಗಳಾಗುತ್ತಿರುವುದನ್ನು ಮನಗಾಣಿಸಲು ಆ ಮಹಾಕಾವ್ಯಗಳಲ್ಲಿರುವ 'ರಾಜಕೀಯ ನೈತಿಕತೆ'ಯನ್ನು ಮುನ್ನೆಲೆಗೆ ತರಬಹುದಾಗಿದೆ. ಶ್ರೀರಾಮ, ಭರತ, ಪಾಂಡವರು ಯಾವತ್ತೂ ಅಧಿಕಾರಕ್ಕೆ ಆಸೆಪಟ್ಟವರಾಗದೆ ರಾಜಕೀಯ ನೈತಿಕತೆ ತೋರಿದ್ದನ್ನು ಉದಾಹರಿಸಬಹುದು. ಈ ಪುರಾಣ ಕಾವ್ಯಗಳ ಕೆಲವು ಬಿಡಿ ಪ್ರಸಂಗಗಳ ಮೂಲಕ ಅಂತಿಮ ನಿರ್ಣಯಕ್ಕೆ ಬರುವ ಬದಲು ಇಡಿಯಾಗಿ ಧ್ವನಿಸಿದ ಅಧಿಕಾರ ಕೇಂದ್ರೀಕರಣ ವಿರೋಧಿ ಮೌಲ್ಯವನ್ನು ಮುನ್ನೆಲೆಗೆ ತರಬಹುದು. ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ'ನ ರಾಮತ್ವದ ಸರ್ವೋದಯ ಪರಿಕಲ್ಪನೆಯನ್ನು ಪ್ರತಿಪಾದಿಸಬಹುದು. ಈ ಪುರಾಣಕಾವ್ಯಗಳ ಬಗ್ಗೆ ವಿಭಿನ್ನ ವಿಮರ್ಶೆಗಳಿದ್ದರೂ ಇವು ರಾಜಕೀಯ ದಾಳಗಳಾಗುವುದನ್ನು ಕಾವ್ಯಗಳ ಒಳಗಿಂದಲೇ ವಿರೋಧಿಸಬಹುದು.

ಇಂದು ಲೌಕಿಕ ಲಾಭಕ್ಕಾಗಿ ಧರ್ಮ ಮತ್ತು ರಾಜಕಾರಣಗಳನ್ನು ಬೆರೆಸಲಾಗುತ್ತಿದೆ. ಈ ಸಂದರ್ಭದಲ್ಲಿ ನನಗೆ ಕನ್ನಡದ ಪಂಪ, ಬಸವಣ್ಣ, ಅಲ್ಲಮರಾದಿಯಾಗಿ ಅನೇಕರ ದೃಷ್ಟಿದರ್ಶನ ನೆನಪಾಗುತ್ತದೆ. ಪಂಪ ಕವಿಯು 'ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ' ಎಂದು ಲೌಕಿಕಕ್ಕೆ ಮಹಾಭಾರತ ಕಥಾವಸ್ತುವನ್ನೂ ಜಿನಾಗಮಕ್ಕೆ ಆದಿಪುರಾಣದ ವಸ್ತುವನ್ನೂ ಆಯ್ಕೆ ಮಾಡಿಕೊಳ್ಳುವ ಮೂಲಕ ಧರ್ಮ ಮತ್ತು ರಾಜಕಾರಣವನ್ನು ಬೆರೆಸದೆ ಇರುವ ವಿವೇಕವನ್ನು ತೋರಿದ್ದಾನೆ. ರಾಜಕಾರಣಕ್ಕೆ ಮಹಾಭಾರತದ ವಸ್ತು, ಧರ್ಮಕ್ಕೆ ಆದಿಪುರಾಣದ ವಸ್ತು. ಹೀಗೆ ವಿಂಗಡಿಸಿಕೊಂಡ ವಿವೇಕವನ್ನು ಇಂದಿನ ಪಕ್ಷರಾಜಕೀಯವು ಅನುಸರಿಸಬೇಕಾಗಿದೆ. ಇನ್ನು 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪಕವಿಯ ನುಡಿ ನಮ್ಮ ಸಾಮಾಜಿಕ ಆದರ್ಶವಾಗಬೇಕು.



ಬಸವಣ್ಣನವರು ಪ್ರತಿಪಾದಿಸಿದ 'ದೇಹವೇ ದೇಗುಲ' ಮತ್ತು 'ಶರಣಸತಿ ಲಿಂಗಪತಿ' ಎಂಬ ಪರಿಕಲ್ಪನೆಗಳು ಧಾರ್ಮಿಕವಾಗಿ ಜಾಗತಿಕ ಆದರ್ಶದ ಮಾದರಿಗಳಾಗಿವೆ. ಜಡವಾದ ದೇವಸ್ಥಾನದ ಕಟ್ಟಡಕ್ಕೆ ಬದಲು ದೇಹವನ್ನೇ ದೇವಸ್ಥಾನವೆಂದು ಪ್ರತಿಪಾದಿಸಿದ ವೈಚಾರಿಕ ಪಲ್ಲಟವು ಮಂದಿರ, ಮಸೀದಿ, ಚರ್ಚುಗಳ ಹೆಸರಿನಲ್ಲಿ ನಡೆಯುತ್ತಿರುವ ದ್ವೇಷಭಾವದ ಲೌಕಿಕ ಘಟನೆಗಳಿಗೆ ಅದ್ಭುತ ಆಧ್ಯಾತ್ಮಿಕ ಉತ್ತರವೂ ಆಗುತ್ತದೆ. 'ಶರಣಸತಿ ಲಿಂಗಪತಿ'ಯೆಂಬುದು ಭಕ್ತಿಯ (ಧರ್ಮದ) ಖಾಸಗಿತನವನ್ನು ಪ್ರತಿಪಾದಿಸುತ್ತದೆ. ಇಂದು ಬಸವಣ್ಣಾದಿಗಳ ಮೂಲಕ ಧರ್ಮದ ಖಾಸಗಿತನದ ಮೌಲ್ಯವನ್ನು ಜನರಿಗೆ ತಿಳಿಸುವ ಅಗತ್ಯವಿದೆ. ವಚನ ಚಳವಳಿಯ ಭಾಗವಾಗಿ ಬಂದ ಈ ಪ್ರಸ್ತುತ ಪ್ರತಿಪಾದನೆಗಳ ನಡುವೆ ಒಳವಿಮರ್ಶೆಯ ಪ್ರತೀಕವಾದ ಅಲ್ಲಮಪ್ರಭುಗಳು ಇಂದಿಗೂ ಆದರ್ಶವಾಗುತ್ತಾರೆ.

ಒಳವಿಮರ್ಶೆಯ ವಿಷಯ ಬಂದಾಗ ವಿವೇಕಾನಂದರನ್ನು ನೆನೆಯಲೇಬೇಕು. ವಿವೇಕಾನಂದರರದು ಅನ್ನ ಮೂಲ ಅಧ್ಯಾತ್ಮ. ದೀನದಲಿತರಿಗೆ ಮೊದಲು ಅನ್ನ ನೀಡಿ ಆಮೇಲೆ ಅಧ್ಯಾತ್ಮ ಹೇಳಿ ಎಂದು ಪ್ರತಿಪಾದಿಸಿದ ವಿವೇಕಾನಂದರು ಎಲ್ಲ ಧರ್ಮಗಳ ಕೂಪ ಮಂಡೂಕತ್ವವನ್ನು ವಿರೋಧಿಸುತ್ತಾರೆ. ಹಿಂದೂ ಧರ್ಮಕ್ಕೆ ಬದ್ಧರಾಗಿದ್ದೂ ಒಳವಿಮರ್ಶಕರಾಗುತ್ತಾರೆ. ಹಿಂದೂ-ಮುಸ್ಲಿಂ ಭಾವೈಕ್ಯವನ್ನು ಪ್ರತಿಪಾದಿಸುತ್ತಾರೆ. ಇದು ಎಲ್ಲ ಧರ್ಮಗಳಿಗೂ ಆದರ್ಶವಾಗಿರುತ್ತದೆ.

ಇಲ್ಲಿಯೇ ಕ್ರಿ.ಶ. 850ರಲ್ಲಿ ರಚಿತವಾದ ಕನ್ನಡದ ಕೃತಿ 'ಕವಿರಾಜಮಾರ್ಗ'ವನ್ನು ನೆನೆಯಬೇಕು. ಈ ಕೃತಿಯ ಒಂದು ಪದ್ಯದಲ್ಲಿ 'ಪರವಿಚಾರ ಮತ್ತು ಪರಧರ್ಮಗಳನ್ನು ಸಹಿಸುವುದೇ ನಿಜವಾದ ಬಂಗಾರ' ಎಂದು ಹೇಳಲಾಗಿದೆ. ಈ ಮಾತು ಇಂದಿಗೂ ಪ್ರಸ್ತುತವಾಗಿದೆ.

ಗಾಂಧೀಜಿ ಧಾರ್ಮಿಕತೆಯಲ್ಲೂ ಸಹಿಷ್ಣುತೆಯ ಸಿದ್ಧಾಂತವೇ ಪ್ರಧಾನವಾಗಿತ್ತು. ಅದಕ್ಕಾಗಿ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಅದಕ್ಕಾಗಿ ಜೀವವನ್ನೇ ತೆತ್ತರು. ಡಾ. ಅಂಬೇಡ್ಕರ್ ಅವರು ಸ್ವಾತಂತ್ರ್ಯ, ಸಮಾನತೆ, ಸೋದರತೆಗಳ ಸಿದ್ಧಾಂತವನ್ನೇ ಸಂವೇದನೆಯಾಗಿಸಿಕೊಂಡ ಸಂವಿಧಾನವನ್ನು ಕೊಟ್ಟರು. ದ್ವೇಷವಿಲ್ಲದೆ ದೇಶ ಕಟ್ಟುವ ಆಶಯವನ್ನು ಅಂತರ್ಗತ ಮಾಡಿಕೊಂಡ ಸಂವಿಧಾನದ ಮುನ್ನೋಟಕ್ಕೆ ಎಲ್ಲರೂ ಮನ್ನಣೆ ಕೊಡಬೇಕು. ನಮ್ಮ ಪರಂಪರೆಯಲ್ಲಿ ಪ್ರತಿಪಾದಿತವಾದ ಸೌಹಾರ್ದ ಸಂಸ್ಕೃತಿಗೆ ಆದ್ಯತೆ ನೀಡಬೇಕು. ಪ್ರಾಚೀನ ಪರಂಪರೆಯ ಜೊತೆಗೆ ಆಧುನಿಕ ಸಂದರ್ಭದ ಗಾಂಧಿ, ಅಂಬೇಡ್ಕರ್ ಆದಿಯಾಗಿ ಸುಭಾಷ್ ಚಂದ್ರಬೋಸ್, ನೆಹರೂ, ಮೌಲಾನ ಆಜಾದ್, ಭಗತ್ ಸಿಂಗ್ ಮುಂತಾದವರ ಜಾತ್ಯತೀತ ನಿಲುವನ್ನು ಅಳವಡಿಸಿಕೊಳ್ಳಬೇಕು. 'ಜಾತ್ಯತೀತ' ಎಂಬ ಪದವನ್ನು ಉಚ್ಚರಿಸಲು ಇಚ್ಛೆಪಡದವರು ಕಡೇಪಕ್ಷ 'ದ್ವೇಷಾತೀತ' ಎಂಬ ಪದವನ್ನು ಅಭ್ಯಾಸ ಮಾಡಿಕೊಳ್ಳಬೇಕು. ಎಲ್ಲ ಧರ್ಮಗಳ ಮೂಲಭೂತವಾದವನ್ನು ವಿರೋಧಿಸಬೇಕು. ತನ್ಮೂಲಕ ದ್ವೇಷಾತೀತ ಭಾರತವನ್ನು ಒಟ್ಟಾಗಿ ಕಟ್ಟಬೇಕು.

ಚುರುಮುರಿ



ಹಬ್ಬದ ಸೇವೆ

• ಸಿ.ಎನ್.ರಾಜು

'ಹಬ್ಬದಲ್ಲಿ ಇನ್ನೇನು ರಿಸ್ಕ್ ಇರುತ್ತೆ, ತೋರಣ ಕಟ್ಟಿ, ಹೂರಣ ಕುಟ್ಟಿ, ಒಬ್ಬಟ್ಟು ತಟ್ಟಿದರೆ ಯುಗಾದಿ ಮುಗಿಯುತ್ತದೆ...' ಅಂದ ಗಿರಿ.

'ಅಷ್ಟು ಈಸಿಯಲ್ಲಾರೀ, ಎಷ್ಟೊಂದು ಕೆಲ್ಸ ಇರುತ್ತವೆ ಗೊತ್ತಾ? ನೀವು ನನಗೆ ಹೆಲ್ಪ್ ಮಾಡಬೇಕು' ಎಂದಳು ಅನು.

ಅಷ್ಟೊತ್ತಿಗೆ, 'ನಮಸ್ಕಾರ ಮೇಡಂ...' ಎನ್ನುತ್ತಾ ಬಂದ ಪುರುಷ, ಮಹಿಳೆ, 'ನಾವು ಹಬ್ಬ ಆಚರಣಾ ಸಂಸ್ಥೆಯವರು, ನಿಮ್ಮ ಮನೆಯ ಹಬ್ಬಕ್ಕೆ ನಮ್ಮ ಸೇವೆ ಬಳಸಿಕೊಳ್ಳಿ' ಎಂದರು.

'ಏನು ಸೇವೆ? ಮನೆ ಕ್ಲೀನ್ ಮಾಡಿಕೊಡ್ತೀರಾ?' ಗಿರಿ ಕೇಳಿದ.

'ಮಾಡ್ತೀವಿ. ಮನೆಯನ್ನು ಸಾರಿಸಿ, ಗುಡಿಸಿ ಅಲಂಕಾರ ಮಾಡ್ತೀವಿ, ಬಾಗಿಲಿಗೆ ತೋರಣ ಕಟ್ಟಿ, ಸುಂದರವಾಗಿ ರಂಗೋಲಿ ಹಾಕ್ತೀವಿ' ಎಂದ ಆತ.

'ಹಬ್ಬದ ಕೆಲಸ ಅಷ್ಟೇ ಅಲ್ಲ...' ಅನು ಗೊಣಗಿದಳು.

'ನೀರು ಕಾಯಿಸಿ ನಿಮ್ಮೆಲ್ಲರಿಗೂ ಎಣ್ಣೆಸ್ನಾನ ಮಾಡಿಸ್ತೀವಿ, ಮಕ್ಕಳಿಗೆ ಬಟ್ಟೆ ತೊಡಿಸಿ, ತಲೆ ಬಾಚಿ, ಪೌಡರ್ ಹಾಕಿ ಬೊಟ್ಟು ಇಡ್ತೀವಿ...' ಎಂದಳು ಆಕೆ.

'ನೀವೇ ಅಡುಗೆ ಮಾಡ್ತೀರಾ?' ಗಿರಿ ಕೇಳಿದ.

'ಮಾಡ್ತೀವಿ. ಪೂಜೆ ಮಾಡಿ, ಬೇವು ಬೆಲ್ಲ ಕೊಡ್ತೀವಿ, ಹಬ್ಬದ ಅಡುಗೆ ಮಾಡಿ ನಿಮಗೆ ಬಡಿಸ್ತೀವಿ. ಹಬ್ಬದ ದಿನ ನೀವು ಆರಾಮಾಗಿ, ಆನಂದವಾಗಿ ಇರಬಹುದು. ನಮಗೆ ಸರ್ವೀಸ್ ಚಾರ್ಜ್ ಕೊಟ್ಟರೆ ಸಾಕು' ಎಂದ ಆತ.

'ಹೌದೇ?!... ಬೇರೆ ಹಬ್ಬಗಳ ಆಚರಣೆಯ ಆರ್ಡರ್‌ಗಳನ್ನೂ ತಗೊಳ್ತೀರಾ?' ಅನು ಕೇಳಿದಳು.

'ಹೌದು, ಗಣೇಶ ಹಬ್ಬದಲ್ಲಿ ನಾವೇ ಗಣೇಶ ಮೂರ್ತಿ ತಂದು ಪ್ರತಿಷ್ಠಾಪಿಸಿ ಪೂಜೆ ಮಾಡಿ ನಿಮಗೆ ಪ್ರಸಾದ ಕೊಡ್ತೀವಿ. ದೀಪಾವಳಿಗೆ ಪಟಾಕಿ ತಂದು ಸುಡ್ತೀವಿ, ಸಿಹಿ ಅಡುಗೆ ಸಿದ್ಧಮಾಡಿ ಬಡಿಸ್ತೀವಿ. ನೀವು ಯಾವುದೇ ಹಬ್ಬದ ಸೇವೆಗಾಗಿ ಆರ್ಡರ್ ಮಾಡಬಹುದು, ನಿಮ್ಮ ಸೇವೆಗೆ ನಾವು ಸದಾ ಸಿದ್ಧ...' ಎಂದು ಕರಪತ್ರ ಕೊಟ್ಟು ಹೊರಟರು.

ಸಂಗತ

ವೇಗದ ಜಗತ್ತಿಗೂ ತಾಳ್ಮೆಯೇ ಮಂತ್ರ

ಸಮಾಧಾನವಾಗಿ ಯೋಚಿಸಿ ತೆಗೆದುಕೊಳ್ಳುವ ನಿರ್ಧಾರ ಮಹತ್ವದ್ದು

• ಡಾ. ಜ್ಯೋತಿ

ಈ ಬಾರಿಯ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ವಿಲ್ ಸ್ಮಿತ್ ತಮ್ಮ ಪತ್ನಿಯ ಬೋಳು ತಲೆಯ ಕುರಿತು ವೇದಿಕೆಯಲ್ಲಿ ತಮಾಷೆ ಮಾಡಿದ್ದಕ್ಕಾಗಿ ನಿರೂಪಕ ಕ್ರಿಸ್ ರಾಕ್ ಕೆನ್ನೆಗೆ ಬಾರಿಸಿದ್ದು ದೊಡ್ಡ ಸುದ್ದಿಯಾಗಿದೆ. ಆನಂತರ ಶ್ರೇಷ್ಠ ನಟ ಪ್ರಶಸ್ತಿ ಸ್ವೀಕರಿಸಲು ಪುನಃ ವೇದಿಕೆಯೇರಿದ ಸ್ಮಿತ್ ಕ್ಷಮೆ ಯಾಚಿಸಿದ್ದರು. ಅವರ ಮುಖಭಾವದಲ್ಲಿ, ಜನರಿಗೆ ಮಾದರಿಯಾಗಬೇಕಿದ್ದ ತಾನು ಈ ರೀತಿ ಸಂಯಮ ಕಳೆದುಕೊಳ್ಳಬಾರದಿತ್ತು ಎನ್ನುವ ಪಶ್ಚಾತ್ತಾಪ ಎದ್ದು ಕಾಣುತ್ತಿತ್ತು.

ನಮ್ಮ ಸುತ್ತಲಿನ ಜಗತ್ತಿನ ಮನುಷ್ಯರ ವರ್ತನೆಯನ್ನು ಗಮನಿಸಿದರೆ, ವರ್ತಮಾನ ಕಾಲದ ಮೂಲಮಂತ್ರ 'ಆತುರ' ಎನ್ನುವುದು ಸ್ಪಷ್ಟವಾಗುತ್ತದೆ. ನಮಗೆ ಎಲ್ಲವೂ ತಕ್ಷಣದಲ್ಲಿ ಆಗಬೇಕು ಮತ್ತು ಸಿಗಬೇಕು. ಒಂದು ವೇಳೆ ಪ್ರಾಪ್ತಿಯಾಗದಿದ್ದಲ್ಲಿ, ವ್ಯಾವಹಾರಿಕ ಮಾರುಕಟ್ಟೆಯಲ್ಲಿ ಬಹಳಷ್ಟು ಆಯ್ಕೆಗಳಿವೆ. ಇದು ವಸ್ತುಗಳಿಗೆ ಮಾತ್ರವಲ್ಲ, ಸಂಬಂಧಗಳಿಗೂ ಅನ್ವಯಿಸುತ್ತದೆ. ಆದರೂ ತಾಳ್ಮೆಯಿಂದ ಯೋಚಿಸಿ ನಿರ್ಧರಿಸುವ ತಾಕತ್ತು ಮನುಷ್ಯನ ಅತ್ಯುನ್ನತ ಗುಣವೆನ್ನಬಹುದು. ನಮ್ಮ ಸುತ್ತಮುತ್ತ ನಡೆಯುತ್ತಿರುವ ಹೆಚ್ಚಿನ ಆತ್ಮಹತ್ಯೆ, ಅಪರಾಧ ಕೃತ್ಯಗಳು ಅಥವಾ ಅಪಘಾತಗಳಿಗೆ ಆ ಕ್ಷಣದ ಚಂಚಲತೆ, ಆತುರ, ಕ್ರೋಧ, ದ್ವೇಷ, ಭಾವೋದ್ವೇಗ ಕಾರಣವಾಗಿರುತ್ತವೆ.

ಸಮಾಧಾನವಾಗಿ ಯೋಚಿಸಿ ತೆಗೆದುಕೊಳ್ಳುವ ನಿರ್ಧಾರದ ಮಹತ್ವವನ್ನು ಆಧುನಿಕ ಸಣ್ಣಕಥೆಗಳ ಜನಕನೆಂದೇ ಖ್ಯಾತನಾಗಿರುವ ರಷ್ಯಾದ ಕಥೆಗಾರ ಆ್ಯಂಟನ್ ಚೆಕೊವ್ ತನ್ನ ಸಣ್ಣಕಥೆ 'ಆ್ಯನ್ ಅವೆಂಜರ್' ನಲ್ಲಿ (ಸೇಡು ತೀರಿಸಿಕೊಳ್ಳುವವನು) ಬಹಳ ಅದ್ಭುತವಾಗಿ ಚಿತ್ರಿಸಿದ್ದಾರೆ. ಹಾಗಿದ್ದಲ್ಲಿ, ಈ ಕಥೆಯಲ್ಲಿ ನಡೆಯುವುದೇನು?

ಕಥಾನಾಯಕ ಫ್ಯೋಡರ್ ಸಿಗೇವ್‌ನಿಗೆ ತನ್ನ ಪತ್ನಿ ಇನ್ನೊಬ್ಬನೊಂದಿಗೆ ಪ್ರೇಮ ವ್ಯವಹಾರದಲ್ಲಿ ತೊಡಗಿರುವುದು ಗೊತ್ತಾಗುತ್ತದೆ. ತಕ್ಷಣ ಅವನಿಗೆ ಅವರಿಬ್ಬರನ್ನೂ ಸಾಯಿಸಿಬಿಡಬೇಕೆನಿಸುತ್ತದೆ. ಅದಕ್ಕಾಗಿ ರಿವಾಲ್ವರ್ ಖರೀದಿಸಲೆಂದು ಅಂಗಡಿಗೆ ಓಡುತ್ತಾನೆ. ಆಕ್ರೋಶಗೊಂಡಿದ್ದ ಅವನು ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾನೆ- 'ನನ್ನ ಮನೆತನದ ಗೌರವ ಮಣ್ಣುಪಾಲಾಗಿದೆ. ವಿವಾಹದ ಪಾವಿತ್ರ್ಯ ನಾಶವಾಗಿದೆ. ನಾನೀಗ ಸೇಡು ತೀರಿಸಿಕೊಳ್ಳಲೇಬೇಕು. ಮೊದಲು ಅವರಿಬ್ಬರನ್ನೂ ಸಾಯಿಸಿ, ಆನಂತರ ಗುಂಡಿಕ್ಕಿಕೊಂಡು ಸಾಯುತ್ತೇನೆ'.

ಅಂಗಡಿಯವನು ಸಿಗೇವ್‌ನ ಮುಂದೆ ಒಂದು ರಾಶಿ ರಿವಾಲ್ವರ್‌ಗಳನ್ನಿಟ್ಟು ಅವುಗಳ ವೈಶಿಷ್ಟ್ಯವನ್ನು ವಿವರಿಸಲಾರಂಭಿಸಿದ. ಒಂದನ್ನು ತೋರಿಸಿ- 'ಇದು ಮೋಸ ಮಾಡಿದ ಹೆಂಡತಿ ಮತ್ತು ಅವಳ ಪ್ರೇಮಿಯನ್ನು ಸಾಯಿಸಲು ಅಥವಾ ಆತ್ಮಹತ್ಯೆ ಮಾಡಿಕೊಳ್ಳಲು ಸೂಕ್ತವಾದುದಲ್ಲ' ಎನ್ನುತ್ತಾನೆ. ಆಘಾತಗೊಂಡ ಸಿಗೇವ್, 'ನಾನೇನು ಯಾರನ್ನೂ ಸಾಯಿಸಲು ಖರೀದಿಸುತ್ತಿಲ್ಲ. ಕಳ್ಳರನ್ನು ಹೆದರಿಸಲು ಅಷ್ಟೇ' ಎಂದು ಸುಳ್ಳು ಹೇಳುತ್ತಾನೆ.

ಆನಂತರ, ಸಿಗೇವ್‌ನ ಯೋಚನಾಲಹರಿ, ಅವರಿಬ್ಬರನ್ನೂ ಸಾಯಿಸುವ ವಿಧಿವಿಧಾನದ ಕಡೆಗೆ ಹರಿಯುತ್ತದೆ- 'ಅವನನ್ನು ಮನೆಯ ಹೊರಗೆ ಕಾದಾಡಲು ಕರೆದು ಸಾಯಿಸಲೇ? ಛೆ, ಅದರಿಂದ ಅವನಿಗೆ ಗೌರವ ಕೊಟ್ಟಂತಾಗುತ್ತದೆ. ಅವನನ್ನು ಬೀದಿ ನಾಯಿಯಂತೆ ಸಾಯಿಸುತ್ತೇನೆ. ಅವರಿಬ್ಬರನ್ನೂ ಸಾಯಿಸಲೇ? ಇಲ್ಲ, ಅವಳು ಮಾಡಿದ ದ್ರೋಹಕ್ಕೆ ತಕ್ಷಣದ ಸಾವು ಬರಬಾರದು. ಅವಳು ಸಮಾಜದಲ್ಲಿ ಅವಮಾನವನ್ನು ದಿನವೂ ಎದುರಿಸುತ್ತಾ ನಿಧಾನವಾಗಿ ಸಾಯಬೇಕು. ಹಾಗಾಗಿ ಸಾಯುವುದು ನಾನು ಮತ್ತು ಅವಳ ಪ್ರೇಮಿ ಮಾತ್ರ'.

'ಅರೇ, ನಾನು ಸತ್ತರೆ, ಅವಳು ಅನುಭವಿಸುವ ನೋವನ್ನು ನೋಡುವುದು ಹೇಗೆ? ಅಲ್ಲದೆ, ಅವಳು ಸುಳ್ಳು ಕಥೆಗಳನ್ನು ಸೃಷ್ಟಿಸಿ ಕಣ್ಣೀರಿನಿಂದ ಜನರನ್ನು ನಂಬಿಸಬಹುದು. ಆಗ, ನಾನು ಜೋಕರ್ ಆಗುತ್ತೇನೆ. ಹಾಗಾಗಿ, ನಾನು ಸಾಯಬಾರದು'.

ಒಂದು ಕ್ಷಣದ ನಂತರ ಸಿಗೇವ್‌ಗೆ ಮತ್ತಷ್ಟು ಸ್ಪಷ್ಟತೆ ಸಿಗಲಾರಂಭಿಸಿತು- 'ಅಲ್ಲ, ನಾನೇಕೆ ಸಾಯಬೇಕು? ತಪ್ಪು ಮಾಡಿರುವುದು ಅವರಿಬ್ಬರು. ನಾನು ಅವನನ್ನು ಸಾಯಿಸಿ, ಅವಳನ್ನು ಕೋರ್ಟಿಗೆ ಎಳೆಯುತ್ತೇನೆ'.



ಹೀಗೆ, ಸಿಗೇವ್‌ನ ಮನಸ್ಸಿನಲ್ಲಿ ನಿರ್ಧಾರಗಳು ಬದಲಾಗುತ್ತಿರುವಾಗ, ಅಂಗಡಿಯವನು ಇಂತಹದ್ದೇ ಒಂದು ಘಟನೆಯನ್ನು ವಿವರಿಸಿದ- 'ಕೆಲವು ದಿನಗಳ ಹಿಂದೆ ಅಧಿಕಾರಿಯೊಬ್ಬ ತನಗೆ ಮೋಸ ಮಾಡಿದ ಹೆಂಡತಿ ಮತ್ತು ಅವಳ ಪ್ರೇಮಿಯನ್ನು ಕೊಂದ. ಆನಂತರ ಅಧಿಕಾರಿಯನ್ನು ಬಂಧಿಸಿ ಕಾರಾಗೃಹಕ್ಕೆ ತಳ್ಳಲಾಯಿತು. ಇಂತಹ ಪ್ರಕರಣಗಳಲ್ಲಿ ವ್ಯವಸ್ಥೆಯು ಸತ್ತವರಿಗೆ ಸಹಾನುಭೂತಿ ತೋರಿಸುತ್ತದೆ. ಹಾಗಾಗಿ, ಇತ್ತೀಚಿಗಿನ ದಿನಗಳಲ್ಲಿ ಮೋಸ ಮಾಡಿದ ಹೆಂಡತಿಯ ವಿರುದ್ಧ ಸೇಡು ತೀರಿಸಿಕೊಳ್ಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಬದಲಾಗಿ, ವಿಚ್ಛೇದನ ನೀಡಿ ಜೀವನ ಮುಂದುವರಿಸುತ್ತಾರೆ'. ಆಗ ಸಿಗೇವ್‌ಗೆ ಜ್ಞಾನೋದಯವಾಯಿತು- 'ಅಯ್ಯೋ ನಾನೇಕೆ ಜೈಲು ಪಾಲಾಗಲಿ? ವಿಚ್ಛೇದನಕ್ಕೆ ಅರ್ಜಿ ಹಾಕಿ, ಅವಳ ಮೋಸವನ್ನು ಬಯಲಿಗೆಳೆಯುತ್ತೇನೆ'.

ಇನ್ನು ಸಿಗೇವ್‌ಗೆ ರಿವಾಲ್ವರ್‌ನ ಅಗತ್ಯ ಕಾಣಲಿಲ್ಲ. ಆದರೆ, ಅಷ್ಟು ಹೊತ್ತು ಸಾವಕಾಶವಾಗಿ ರಿವಾಲ್ವರ್‌ಗಳನ್ನು ತೋರಿಸುತ್ತಾ, ಸರಿಯಾದ ನಿರ್ಧಾರ ತೆಗೆದುಕೊಳ್ಳಲು ತನಗೆ ಪರೋಕ್ಷವಾಗಿ ಸಹಾಯ ಮಾಡಿದ ಅಂಗಡಿಯವನಿಂದ ಏನನ್ನಾದರೂ ಖರೀದಿಸಬೇಕೆಂದು ಅನ್ನಿಸಿತು. ಹಕ್ಕಿ ಹಿಡಿಯುವ ಬಲೆಯನ್ನು ಖರೀದಿಸಿ ಹೊರನಡೆದ. ಹೀಗೆ, ನಿರ್ಧಾರ ತೆಗೆದುಕೊಳ್ಳಲು ಸಮಯ ತೆಗೆದುಕೊಂಡಿದ್ದರಿಂದ ತಕ್ಷಣದ ಆಕ್ರೋಶ ಕಳೆದು, ಒಂದು ಉತ್ತಮ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಯಿತು.

ಷೇಕ್ಸ್‌ಪಿಯರ್ ಹೇಳಿದಂತೆ, 'ಬುದ್ಧಿವಂತಿಕೆಯಿಂದ ನಿಧಾನವಾಗಿ ನಡೆ. ವೇಗವಾಗಿ ಓಡುವವರು ಮುಗ್ಗರಿಸುತ್ತಾರೆ'.

ವಾಚಕರ ವಾಣಿ

ಮಾನ್ಯತೆ ರದ್ದು: ಬೇಸರದ ವಿದ್ಯಮಾನ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ (ಕೆಎಸ್‌ಒಯು) ಇತಿಹಾಸವನ್ನು ಒಳಗೊಂಡ ಬಿ.ಎ. ಪದವಿಗಾಗಿ 2015ರಲ್ಲಿ ಪ್ರವೇಶಾತಿಯನ್ನು ಪಡೆದಿದ್ದೆ. ಎರಡು ವರ್ಷಗಳ ಡಿಗ್ರಿಯನ್ನು ಮುಗಿಸಿ ಪ್ರಮಾಣಪತ್ರವನ್ನು ಪಡೆದುಕೊಂಡಿದ್ದೆ. ಆದರೆ, ಮೂರನೇ ವರ್ಷವಾಗುವಾಗ ಕೆಎಸ್‌ಒಯು ಮಾನ್ಯತೆಯನ್ನು ಯುಜಿಸಿ ರದ್ದುಗೊಳಿಸಿತ್ತು. ತದನಂತರ, ಕಲಿಯಲೇಬೇಕೆಂಬ ಉತ್ಕಟೇಚ್ಛೆಯಿಂದ ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದ ದೂರಶಿಕ್ಷಣ ಕೋರ್ಸ್‌ಗೆ ಸೇರ್ಪಡೆಯಾಗಿ ಮೂರು ವರ್ಷಗಳ ಡಿಗ್ರಿ ಪೂರೈಸಿದೆ. ಅದಕ್ಕೆ ಸಂಬಂಧಿಸಿದ ಎಲ್ಲ ಪ್ರಮಾಣಪತ್ರಗಳನ್ನೂ ಪಡೆದುಕೊಂಡೆ. ಆದರೆ, ಇದೀಗ ಈ ವಿಶ್ವವಿದ್ಯಾಲಯದ ದೂರಶಿಕ್ಷಣ ಕಾರ್ಯಕ್ರಮಗಳನ್ನು ಯುಜಿಸಿ ರದ್ದು ಮಾಡಿದೆ.

ಈ ವಿಷಯ ತಿಳಿದು ತುಂಬಾ ಬೇಸರವಾಗಿದೆ. ಮೊದಲ ಬಾರಿ ಪದವಿ ಪೂರ್ತಿಗೊಳಿಸಲು ಸಾಧ್ಯವಾಗಲಿಲ್ಲ. ಎರಡನೇ ಬಾರಿ ಪೂರ್ತಿಗೊಳಿಸಿದರೂ ವಿಶ್ವವಿದ್ಯಾಲಯದ ದೂರಶಿಕ್ಷಣ ಕೋರ್ಸ್‌ಗಳ ಮಾನ್ಯತೆಯೇ ರದ್ದಾಗಿದೆ. ಇಂತಹ ವಿದ್ಯಮಾನಗಳಿಗೆ ಯುಜಿಸಿ ನಿಯಮಾವಳಿಗಳನ್ನು ಉಲ್ಲಂಘಿಸುವ ಆಯಾ ವಿಶ್ವವಿದ್ಯಾಲಯಗಳೇ ಹೊಣೆಯಾಗಿರುತ್ತವೆ. ದೂರಶಿಕ್ಷಣ ಪಡೆಯುತ್ತಿದ್ದ ಸಾವಿರಾರು ವಿದ್ಯಾರ್ಥಿಗಳು ಇದರಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಮಾನ್ಯತೆ ಇಲ್ಲದಿದ್ದರೂ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವ ವಿಶ್ವವಿದ್ಯಾಲಯಗಳ ವಿರುದ್ಧ ಸರ್ಕಾರ ಇನ್ನಾದರೂ ಕಠಿಣ ಕ್ರಮ ಜರುಗಿಸಬೇಕು.

ಎಂ.ಎ.ಮುಜೀಬ್ ಅಹಮದ್, ಗುಂಡಿಕೆರೆ, ಕೊಡಗು

ಹೋಟಾ ಸಮಿತಿಯ ಶಿಫಾರಸು ಏನಾಯಿತು?

ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗೆ ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ನಡೆಸುವ ಪರೀಕ್ಷೆಯಲ್ಲಿ ಸಂದರ್ಶನದ ಅಂಕಗಳನ್ನು ಕಡಿತಗೊಳಿಸಲು ಸರ್ಕಾರ ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ಈ ಮೊದಲು 200 ಅಂಕಗಳು ಇದ್ದಾಗ ಕೆಲವು ಪ್ರಭಾವಿಗಳು 170ಕ್ಕಿಂತಲೂ ಹೆಚ್ಚು ಅಂಕಗಳನ್ನು ಸ್ವಜನಪಕ್ಷಪಾತ, ಲಾಬಿ, ಪ್ರಭಾವ, ದುಡ್ಡಿನ ಮೂಲಕ ಗಳಿಸಿ ಆಯ್ಕೆಯಾಗುತ್ತಿದ್ದರು ಎಂಬ ಆಪಾದನೆ ಬಲವಾಗಿ ಕೇಳಿಬರುತ್ತಿತ್ತು.

ಈಗ ಸಂದರ್ಶನದ ಅಂಕಗಳ ಕಡಿತಕ್ಕೆ ರಾಜಕಾರಣಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆಯೇ ವಿನಾ ಯಾವ ವಿದ್ಯಾರ್ಥಿಯೂ ಅಲ್ಲ. ಇದರಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ಅನ್ಯಾಯವಾಗಲಿದೆ ಎಂದು ರಾಜಕಾರಣಿಗಳು ಸ್ಪಷ್ಟೀಕರಣ ನೀಡಬೇಕು. ಹೋಟಾ ಸಮಿತಿಯ ಶಿಫಾರಸಿನಂತೆ ಸಂದರ್ಶನದ ಅಂಕಗಳನ್ನು ನಿಗದಿ ಮಾಡಿ ಎಂದು ಅವರು ಕೇಳುತ್ತಿದ್ದಾರೆ. ಹಾಗಾದರೆ ಹೋಟಾ ಸಮಿತಿಯ ಶಿಫಾರಸುಗಳ ಸಂಪೂರ್ಣ ಅನುಷ್ಠಾನ ಆಗಿದೆಯೇ? ಕಾಲಕಾಲಕ್ಕೆ ನೇಮಕಾತಿ ಆಗುತ್ತಿದೆಯೇ ಎಂಬುದಕ್ಕೆ ಇವರೇ ಉತ್ತರ ನೀಡಬೇಕಾಗಿದೆ.

ವಿನಯ್ ಕುಮಾರ್, ಹುಣಸಗಿ

ಅನಿಷ್ಟ ಪದ್ಧತಿಯ ಪುನರಾರಂಭ

ಕೇರಳ ಸೇರಿದಂತೆ ದೇಶದ ಹಲವಾರು ಕಡೆಗಳಲ್ಲಿ ಜಾತಿ, ಧರ್ಮದ ನೆಪದಲ್ಲಿ ಕೆಲವು ಕಲಾವಿದರಿಗೆ, ಬಹಳ ಮುಖ್ಯವಾಗಿ ಹಾಡುಗಾರರಿಗೆ ತಮ್ಮ ಸಂಗೀತ ಸೇವೆ ನೀಡಲು ಅವಕಾಶ ಕೊಡದಿರುವುದು ಅಮಾನವೀಯವಾದುದು. ಈ ಹಿಂದೆ ಗಾಯಕ ಕೆ.ಜೆ.ಯೇಸುದಾಸ್ ಅವರಿಗೂ– ಅವರು ಹಿಂದೂ ದೇವರುಗಳ ಭಕ್ತರಾಗಿದ್ದರ ನಡುವೆಯೂ– ಕೆಲವು ದೇವಾಲಯಗಳಲ್ಲಿ ಹಾಡಲು ಅವಕಾಶ ಕೊಡದೆ ಇದೇ ರೀತಿಯ ಅವಮಾನ ಮಾಡಲಾಗಿತ್ತು. ಆದರೆ ಕರ್ನಾಟಕದ ಕೊಲ್ಲೂರು ಮೂಕಾಂಬಿಕೆ ದೇವಸ್ಥಾನದಲ್ಲಿ ಅವರಿಗೆ ಸಂಗೀತ ಸೇವೆ ನೀಡುವ ಅವಕಾಶ ಕಲ್ಪಿಸಲಾಯಿತು. ನಂತರ ಕೇರಳದ ದೇವಮಂದಿರಗಳಲ್ಲೂ ಅವರಿಗೆ ಅವಕಾಶ ನೀಡಲಾಯಿತು.

1936ರಲ್ಲಿ ಮಹಾರಾಜ ಚಿತಿರ ತಿರುನಾಳ ಬಲರಾಮ ವರ್ಮ ಒಂದು ಆದೇಶ ಹೊರಡಿಸಿ, ತಳ ಸಮುದಾಯಗಳ ಜನರ ಮೇಲಿದ್ದ ಮಂದಿರ ಪ್ರವೇಶ ನಿಷಿದ್ಧವನ್ನು ರದ್ದುಗೊಳಿಸಿದ್ದರು. ಅಂತಹ ಅನಿಷ್ಟ ಪದ್ಧತಿಗಳ ವಿರುದ್ಧ ಕೇರಳದಲ್ಲಿ ನಡೆದ ವೈಕೊಂ ಸತ್ಯಾಗ್ರಹ ಹಾಗೂ ಗುರುವಾಯೂರು ಸತ್ಯಾಗ್ರಹ ಬಹಳ ಪ್ರಮುಖವಾದವು. ಮತ್ತೆ ಈಗ ಅದೇ ರೀತಿಯ ಪ್ರವೃತ್ತಿ ಆರಂಭವಾಗಿರುವುದು ಆತಂಕದ ವಿಚಾರ. ಜನಸಾಮಾನ್ಯರ ಬದುಕಿನ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾದ ರಾಜಕೀಯ ಶಕ್ತಿಗಳು ಕೋಮುಧ್ರುವೀಕರಣದ ಮೂಲಕ ಅಧಿಕಾರ ಹಿಡಿಯುವ ಪ್ರವೃತ್ತಿ ಇಂತಹ ಸಾಮಾಜಿಕ ಅನಿಷ್ಟಗಳಿಗೆ ಕಾರಣವಿರಬಹುದು.

ಟಿ.ಸುರೇಂದ್ರ ರಾವ್, ಬೆಂಗಳೂರು

ವಿದ್ಯುತ್ ದರ: ತಪ್ಪು ಸಂದೇಶ ಪ್ರಚಾರ

ವಿದ್ಯುತ್ ಶುಲ್ಕಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಸುಮಾರು ಮೂರ್ನಾಲ್ಕು ವರ್ಷಗಳಿಂದಲೂ ತಪ್ಪು ಸಂದೇಶ ಹರಿದಾಡುತ್ತಿದೆ. ದೇವಾಲಯ, ಮಸೀದಿ ಮತ್ತು ಚರ್ಚ್‌ಗಳಿಗೆ ಪ್ರತ್ಯೇಕವಾದ ಪ್ರಮಾಣದಲ್ಲಿ ವಿದ್ಯುತ್ ದರವನ್ನು ಎಸ್ಕಾಂಗಳು (ವಿದ್ಯುತ್ ಸರಬರಾಜು ಕಂಪನಿಗಳು) ವಿಧಿಸುತ್ತಿದ್ದು, ದೇವಾಲಯಗಳಿಗೆ ಪ್ರತೀ ಯುನಿಟ್‌ಗೆ 800 ಪೈಸೆ, ಮಸೀದಿಗೆ 285 ಪೈಸೆ ಮತ್ತು ಚರ್ಚ್‌ಗಳಿಗೆ 285 ಪೈಸೆ ಎಂದು ಪ್ರಚಾರ ಮಾಡಲಾಗುತ್ತಿದೆ. ಯಾವುದೇ ಕಾಲದಲ್ಲಿಯೂ ಪೂಜಾ ಮಂದಿರಗಳಿಗಾಗಲಿ ಅಥವಾ ಧಾರ್ಮಿಕ ಮಂದಿರಗಳಿಗಾಗಲಿ ಧರ್ಮ ಅಥವಾ ಮತದ ಆಧಾರದ ಮೇಲೆ ವಿದ್ಯುತ್ ಶುಲ್ಕವನ್ನು ವಿಧಿಸಿರುವ ಇತಿಹಾಸವಿಲ್ಲ. ಇಂತಹ ಒಂದು ಪ್ರಸ್ತಾವವನ್ನು ಯಾವಾಗಲೂ ಎಸ್ಕಾಂ ಮಾಡಿಲ್ಲ ಮತ್ತು ಇದಕ್ಕೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಸಹ ಅವಕಾಶ ಕೊಟ್ಟಿಲ್ಲ. ಹೀಗಿರುವಾಗ ಜನರಿಗೆ ತಪ್ಪು ಸಂದೇಶ ನೀಡುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ಬರುವ ಎಲ್ಲಾ ಸಂದೇಶ ಅಥವಾ ಸುದ್ದಿಗಳನ್ನು ಪರಿಶೀಲಿಸಿ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳಲು ಸಾಧ್ಯವಿಲ್ಲ. ಒಬ್ಬರು ಒಂದು ಸಂದೇಶವನ್ನು ಹರಿಯಬಿಟ್ಟರೆ ಅದು ಸರಿ ಇರುವುದು ಎಂಬ ಭಾವನೆಯಿಂದಲೇ ಅದನ್ನು ಒಬ್ಬರಿಂದೊಬ್ಬರಿಗೆ ತಿಳಿಸುವ ಪ್ರಯತ್ನವನ್ನು ಜನ ಮಾಡುತ್ತಾರೆ. ಸರಿಯಾಗಿ ತಿಳಿದುಕೊಳ್ಳದೆ ಇಂತಹ ಸುದ್ದಿ ಹಬ್ಬಿಸುವವರನ್ನು ಪತ್ತೆ ಹಚ್ಚಿ ಛೀಮಾರಿ ಹಾಕಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಇನ್ನೂ ಇಂತಹ ಅನೇಕ ತಪ್ಪು ಸಂದೇಶಗಳಿಗೆ ಕಡಿವಾಣ ಬೀಳಬೇಕು.

ಕೆ.ವಿ.ಸೀತಾರಾಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಚೋದನಕಾರಿ ಜಾಹೀರಾತಿಗೇ ಒತ್ತು

• ನಯನತಾರಾ ರಂಗನಾಥನ್, ಕುಮಾರ ಸಂಭವ ಶ್ರೀವಾಸ್ತವ

ಫೇಸ್‌ಬುಕ್‌ನಲ್ಲಿ ಬಿಜೆಪಿ ಪರವಾಗಿ ಅಧಿಕೃತವಾಗಿ ಮತ್ತು ಅನಧಿಕೃತವಾಗಿ ನೀಡಲಾದ ಜಾಹೀರಾತುಗಳು ಹಾಗೂ ಸುದ್ದಿರೂಪದ ಜಾಹೀರಾತುಗಳಲ್ಲಿ ಬಹುತೇಕವು ಪ್ರಚೋದನಕಾರಿ ಮತ್ತು ಧ್ರುವೀಕರಣದ ವಿಷಯಗಳನ್ನು ಒಳಗೊಂಡಿದ್ದವು. ಇಂತಹ ಸುದ್ದಿರೂಪದ ಜಾಹೀರಾತುಗಳು ಅತ್ಯಂತ ಕಡಿಮೆ ಅವಧಿಯಲ್ಲಿ ಅತಿಹೆಚ್ಚು ಜನರನ್ನು ತಲುಪುತ್ತವೆ. ಹೀಗಾಗಿ ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ ಇಂತಹ ಜಾಹೀರಾತುಗಳ ಮೊರೆ ಹೋಗುತ್ತಿತ್ತು. ಇದರಿಂದ ಹೆಚ್ಚು ಜನರನ್ನು ತಲುಪಲು ಸಾಧ್ಯವಾಗುತ್ತಿತ್ತು. ಹೀಗೆ ಹೆಚ್ಚು ವೀಕ್ಷಿಸಲಾಗುವ ಜಾಹೀರಾತುಗಳಿಗೆ ಕಡಿಮೆ ಶುಲ್ಕ ವಿಧಿಸುವ ವ್ಯವಸ್ಥೆ ಫೇಸ್‌ಬುಕ್‌ನಲ್ಲಿದೆ. ಇದರಿಂದ ಬಿಜೆಪಿ ಕಡಿಮೆ ವೆಚ್ಚದಲ್ಲಿ ಹೆಚ್ಚು ಜಾಹೀರಾತು ನೀಡಲು ಸಾಧ್ಯವಾಯಿತು ಮತ್ತು ಹೆಚ್ಚು ಜಾಹೀರಾತುಗಳು ದೊರೆಯುವ ಮೂಲಕ ಫೇಸ್‌ಬುಕ್‌ನ ಆದಾಯವೂ ಹೆಚ್ಚಿತು

ಬಿಹಾರದಲ್ಲಿ 2020ರಲ್ಲಿ ನಡೆದ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಘಟಕವು ಫೇಸ್‌ಬುಕ್‌ನಲ್ಲಿ ಒಂದು ವಿಡಿಯೊ ಜಾಹೀರಾತು ನೀಡಿತ್ತು. ಬಿಜೆಪಿಯೇತರ ಪಕ್ಷವಾಗಿರುವ ಆರ್‌ಜೆಡಿಯ ಸಂಭಾವ್ಯ ಮುಖ್ಯಮಂತ್ರಿ ಅಭ್ಯರ್ಥಿಯಾಗಿದ್ದ ತೇಜಸ್ವಿ ಯಾದವ್ ವಿರುದ್ಧ ನೀಡಲಾಗಿದ್ದ ಜಾಹೀರಾತು ಅದಾಗಿತ್ತು. ಚುನಾವಣಾ ಪ್ರಚಾರದ ಕಣದಲ್ಲಿ ತೇಜಸ್ವಿ ಪರವಾದ ಅಲೆ ತೀವ್ರವಾಗಿದ್ದ ಸಂದರ್ಭದಲ್ಲಿ ಈ ಜಾಹೀರಾತು ಪ್ರಕಟವಾಗಿತ್ತು.

‘ತೇಜಸ್ವಿ ಯಾದವ್ ತಮ್ಮದೇ ಪಕ್ಷದ ಕಾರ್ಯಕರ್ತ ಶಕ್ತಿ ಮಲಿಕ್ ಅವರಿಗೆ ಕೊಲೆ ಬೆದರಿಕೆ ಹಾಕಿದ್ದಾರೆ. ‘ನಾನು ಲಾಲು ಪ್ರಸಾದ್ ಅವರ ಮಗ. ನಾನು ಉಪಮುಖ್ಯಮಂತ್ರಿ. ನೀನು ದನಿ ಜೋರು ಮಾಡಿದರೆ, ನಿನ್ನನ್ನು ಕೊಲ್ಲುತ್ತೇನೆ’ ಎಂದು ಬೆದರಿಕೆ ಹಾಕಿದ್ದರು. ಆ ಬೆದರಿಕೆ ನಿಜವಾಗಿದೆ. ಶಕ್ತಿ ಮಲಿಕ್ ಈಗ ಕೊಲೆಯಾಗಿದ್ದಾರೆ’ ಎಂದು ಬಿಜೆಪಿ ನೀಡಿದ್ದ ಜಾಹೀರಾತಿನಲ್ಲಿ ಆರೋಪಿಸಲಾಗಿತ್ತು. ಈ ಜಾಹೀರಾತು ಪ್ರಕಟವಾದ ನಂತರದ 24 ಗಂಟೆಗಳಲ್ಲಿ ಅದನ್ನು 1.75 ಲಕ್ಷ ಜನರು ವೀಕ್ಷಿಸಿದ್ದರು. ಈ ಜಾಹೀರಾತಿಗೆ ಬಿಜೆಪಿ ಪಾವತಿಸಿದ್ದು ₹4,250 ಮಾತ್ರ. ಅಂದರೆ ಪ್ರತಿ ವೀಕ್ಷಣೆಗೆ (ವ್ಯೂಗೆ) ಬಿಜೆಪಿ 3 ಪೈಸೆಯನ್ನಷ್ಟೇ ಪಾವತಿಸಿದಂತಾಯಿತು. ಇಷ್ಟು ಕಡಿಮೆ ವೆಚ್ಚದಲ್ಲಿ ಬಿಜೆಪಿ ನೀಡಿದ್ದ ಒಂದು ಜಾಹೀರಾತು ಭಾರಿ ವೈರಲ್ ಆಗಿತ್ತು.


‘ಶಕ್ತಿ ಮಲಿಕ್ ಅವರನ್ನು ವ್ಯಾವಹಾರಿಕ ದ್ವೇಷದ ಕಾರಣದಿಂದ ಕೊಲ್ಲಲಾಗಿದೆ’ ಎಂದು ಈ ಜಾಹೀರಾತು ವೈರಲ್ ಆದ ಮರುದಿನ ಬಿಹಾರ ಪೊಲೀಸರು ಮಾಹಿತಿ ನೀಡಿದ್ದರು. ಆದರೆ ಈ ಸ್ಪಷ್ಟನೆ ದೊರೆಯುವ ವೇಳೆಗೆ, ಜಾಹೀರಾತು ಪರಿಣಾಮ ಬೀರಿತ್ತು. ‘ಈ ಕೊಲೆಯ ಬಗ್ಗೆ ಉತ್ತರ ನೀಡಿ ತೇಜಸ್ವಿ’ ಎಂದು ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಆರಂಭಿಸಿದ್ದರು. ಈ ರೀತಿ ಪರಿಣಾಮ ಬೀರಿದ್ದು ಇದೊಂದೇ ಜಾಹೀರಾತಲ್ಲ. 2019ರ ಫೆಬ್ರುವರಿಯಿಂದ 2020ರ ನವೆಂಬರ್‌ವರೆಗೆ ನಡೆದ 10 ಚುನಾವಣೆಗಳ ಸಂದರ್ಭದಲ್ಲಿ ಬಿಜೆಪಿ ಇಂತಹ ಸಾವಿರಾರು ಜಾಹೀರಾತುಗಳನ್ನು ನೀಡಿದೆ. ಬಿಜೆಪಿ ಪರವಾಗಿ ಅನಧಿಕೃತವಾಗಿ ನೀಡಿದ ಜಾಹೀರಾತುಗಳು ಮತ್ತು ಸುದ್ದಿರೂಪದ ಜಾಹೀರಾತುಗಳ ಸಂಖ್ಯೆಯು ಹತ್ತಾರು ಸಾವಿರವನ್ನು ಮುಟ್ಟುತ್ತದೆ.

ಕಡಿಮೆ ವೆಚ್ಚದಲ್ಲಿ ಬಿಜೆಪಿ ಮತ್ತು ಆ ಪಕ್ಷದ ಪರವಾಗಿ ಅನಧಿಕೃತವಾಗಿ ಜಾಹೀರಾತು ನೀಡಲು ಸಾಧ್ಯವಾಗಿದ್ದು, ಫೇಸ್‌ಬುಕ್ ರೂಪಿಸಿದ್ದ ಜಾಹೀರಾತು ನೀತಿಯಿಂದ. ಅತಿಹೆಚ್ಚು ಜನರು ನೋಡುವ ಕಂಟೆಂಟ್ ಇರುವ ಜಾಹೀರಾತುಗಳನ್ನು ಫೇಸ್‌ಬುಕ್ ಉತ್ತೇಜಿಸುತ್ತದೆ. ಮತ್ತು ಅದು ಇನ್ನಷ್ಟು ಜನರ ನ್ಯೂಸ್‌ಫೀಡ್‌ನಲ್ಲಿ ಬಿತ್ತರವಾಗುವಂತೆ ಮಾಡುತ್ತದೆ. ಹೀಗೆ ಹೆಚ್ಚು ವೀಕ್ಷಣೆಗೆ, ಲೈಕ್‌ಗೆ, ಕಾಮೆಂಟ್‌ಗೆ ಒಳಗಾಗುವ ಜಾಹೀರಾತುಗಳಿಗೆ ಫೇಸ್‌ಬುಕ್ ಕಡಿಮೆ ಶುಲ್ಕ ವಿಧಿಸುತ್ತದೆ. ಇದು ಪ್ರತಿ ಜಾಹೀರಾತನ್ನು ಆಯ್ದು, ಆಯ್ದು ಶುಲ್ಕ ವಿಧಿಸುವ ವ್ಯವಸ್ಥೆ ಅಲ್ಲ. ಬದಲಿಗೆ ಫೇಸ್‌ಬುಕ್‌ನ ಅಲ್ಗಾರಿದಂ ವ್ಯವಸ್ಥೆ, ಶುಲ್ಕವನ್ನು ನಿಗದಿ ಮಾಡುತ್ತವೆ.

ಬಿಜೆಪಿ ಮತ್ತು ಆ ಪಕ್ಷದ ಪರವಾಗಿ ಅನಧಿಕೃತವಾಗಿ ನೀಡಿದ ಪ್ರಚೋದನಕಾರಿ ಮತ್ತು ಧ್ರುವೀಕರಣದ ವಿಷಯ ಇರುವ ಜಾಹೀರಾತುಗಳು ಮತ್ತು ಸುದ್ದಿರೂಪದ ಜಾಹೀರಾತುಗಳು ಅತಿಹೆಚ್ಚು ಬಾರಿ ವೀಕ್ಷಣೆಗೆ ಒಳಗಾಗಿವೆ. ಆದರೆ ಬಿಜೆಪಿಯೇತರ ಪಕ್ಷಗಳಾದ ಕಾಂಗ್ರೆಸ್, ಆರ್‌ಜೆಡಿ ಮತ್ತು ಎಎಪಿ ನೀಡಿದ ಜಾಹೀರಾತುಗಳಿಗೆ ಆ ಮಟ್ಟದ ವೀಕ್ಷಣೆ ದೊರೆತಿಲ್ಲ.

ಪ್ರಚೋದನಕಾರಿ ಮತ್ತು ಧ್ರುವೀಕರಣದ ವಿಷಯ ಇರುವ ಜಾಹೀರಾತುಗಳನ್ನೇ ನೀಡಿದ್ದರಿಂದ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಹೆಚ್ಚು ಜನರನ್ನು ತಲುಪಲು ಸಾಧ್ಯವಾಯಿತು. ಹೆಚ್ಚು ಜನರನ್ನು ತಲುಪಲು ಸಾಧ್ಯವಿದ್ದ ಕಾರಣ, ಬಿಜೆಪಿ ಇಂತಹದ್ದೇ ಜಾಹೀರಾತುಗಳನ್ನು ನೀಡಿತು. ಜತೆಗೆ ಬಿಜೆಪಿ ಪರವಾಗಿ ಅನಧಿಕೃತವಾಗಿ ಜಾಹೀರಾತು ಮತ್ತು ಸುದ್ದಿರೂಪದ ಜಾಹೀರಾತು ನೀಡಿದ 23 ಸಂಸ್ಥೆಗಳೂ ಸಹ, ಇದೇ ಹಾದಿಯನ್ನು ಅನುಸರಿಸಿದವು. ಇದರಿಂದ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ತಲುಪಿದ ಜನರ ಪ್ರಮಾಣ ಎರಡರಷ್ಟಾಯಿತು. ಇಂತಹ ವಿಷಯ ಇದ್ದ ಜಾಹೀರಾತುಗಳನ್ನು ನೀಡದೇ ಇದ್ದ ಕಾರಣ ವಿರೋಧ ಪಕ್ಷಗಳು ನೀಡಿದ ಜಾಹೀರಾತುಗಳು ಹೆಚ್ಚು ಜನರನ್ನು ತಲುಪಲಿಲ್ಲ.

ಹೆಚ್ಚು ವೀಕ್ಷಣೆಗೆ ಒಳಗಾಗುವ ವಿಷಯಗಳನ್ನೇ ಮತ್ತಷ್ಟು ಉತ್ತೇಜಿಸುವ ಫೇಸ್‌ಬುಕ್‌ನ ಈ ಅಲ್ಗಾರಿದಂ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಫೇಸ್‌ಬುಕ್, ಬಿಜೆಪಿ ಕಾರ್ಯಕರ್ತರಿಗೆ ತರಬೇತಿ ನೀಡಿತ್ತು ಎಂದು ‘ದಿ ವಾಲ್‌ಸ್ಟ್ರೀಟ್ ಜರ್ನಲ್’ ವರದಿ ಮಾಡಿತ್ತು. ‘ನಾವು ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಹಚ್ಚಿದೆವಷ್ಟೆ. ಉಳಿದದ್ದೆಲ್ಲವೂ ಇತಿಹಾಸ’ ಎಂದು ಬಿಜೆಪಿ ನಾಯಕರೊಬ್ಬರು ತಮ್ಮ ಪಕ್ಷದ ಗೆಲುವಿನ ಸಂದರ್ಭದಲ್ಲಿ ಹೇಳಿದ್ದರು ಎಂದು ದಿ ವಾಲ್‌ಸ್ಟ್ರೀಟ್ ಜರ್ನಲ್ ಈ ವರದಿಯಲ್ಲಿ ಉಲ್ಲೇಖಿಸಿತ್ತು.



ಚುನಾವಣೆಗಳಲ್ಲಿ ಪ್ರಚಾರಕ್ಕೆ ಬಿಜೆಪಿಗೆ ಫೇಸ್‌ಬುಕ್ ನೆರವು

ಭಾಗ–3



136 ಕೋಟಿ – ಬಿಜೆಪಿ ಅಧಿಕೃತ ಜಾಹೀರಾತುಗಳಿಗೆ ದೊರೆತ ವೀಕ್ಷಣೆಗಳು

131 ಕೋಟಿ – ಬಿಜೆಪಿ ಪರವಾಗಿ ಅನಧಿಕೃತ ಸಂಸ್ಥೆಗಳು ನೀಡಿದ ಸುದ್ದಿರೂಪದ ಜಾಹೀರಾತುಗಳಿಗೆ ದೊರೆತ ವೀಕ್ಷಣೆಗಳು

110 ಕೋಟಿ – ಕಾಂಗ್ರೆಸ್‌ನ ಜಾಹೀರಾತುಗಳಿಗೆ ದೊರೆತ ವೀಕ್ಷಣೆಗಳು

ಫೇಸ್‌ಬುಕ್‌ಗೂ ಲಾಭ

ಜಾಹೀರಾತುದಾರರು ನೀಡುವ ಜಾಹೀರಾತುಗಳು ಹೆಚ್ಚು ಜನರನ್ನು ತಲುಪಿದಷ್ಟೂ ಫೇಸ್‌ಬುಕ್‌ಗೆ ಲಾಭವಾಗುತ್ತದೆ. ಹೆಚ್ಚು ಹೆಚ್ಚು ವೀಕ್ಷಕರು ಲಭ್ಯವಾದರೆ, ಫೇಸ್‌ಬುಕ್‌ಗೆ ಹೆಚ್ಚು ಜಾಹೀರಾತು ದೊರೆಯುತ್ತವೆ. ಅಂತಹ ಜಾಹೀರಾತುಗಳಿಗ ಕಡಿಮೆ ಶುಲ್ಕ ವಿಧಿಸಿದರೂ, ಜಾಹೀರಾತುಗಳ ಸಂಖ್ಯೆ ಹೆಚ್ಚುವುದರಿಂದ ಅಂತಿಮವಾಗಿ ಫೇಸ್‌ಬುಕ್‌ಗೆ ಲಾಭವಾಗುತ್ತದೆ.

ಹಿಂದುತ್ವ, ತೀವ್ರ ಹಿಂದುತ್ವ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕುರಿತ ಜಾಹೀರಾತುಗಳು ಮತ್ತು ಸುದ್ದಿರೂಪದ ಜಾಹೀರಾತುಗಳು ಹೆಚ್ಚು ಜನರನ್ನು ತಲುಪುತ್ತವೆ. ಫೇಸ್‌ಬುಕ್ ತನ್ನ ಪ್ರತಿ ಬಳಕೆದಾರರ ವರ್ತನೆ, ರಾಜಕೀಯ ಸಿದ್ಧಾಂತ ಮತ್ತು ಆಸಕ್ತಿಗಳ ಪ್ರೊಫೈಲ್ ಅನ್ನು ರೂಪಿಸಿರುತ್ತದೆ. ಹಿಂದುತ್ವ ಮತ್ತು ಪ್ರಧಾನಿ ನರೇಂದ್ರ ಮೋದಿ ಕುರಿತು ಬಿಜೆಪಿ ಮತ್ತು ಬಿಜೆಪಿ ಪರವಾಗಿ ಅನಧಿಕೃತ ಸಂಸ್ಥೆಗಳು ನೀಡುವ ಜಾಹೀರಾತುಗಳು, ಹಿಂದುತ್ವದ ಬಗ್ಗೆ ಒಲವು ಇರುವ ಬಳಕೆದಾರರ ನ್ಯೂಸ್‌ಫೀಡ್‌ನಲ್ಲಿ ಬಿತ್ತರವಾಗುವಂತೆ ಫೇಸ್‌ಬುಕ್ ಮಾಡುತ್ತದೆ. ಆಗ ಅಂತಹ ಜಾಹೀರಾತುಗಳನ್ನು ವೀಕ್ಷಿಸುವ ಬಳಕೆದಾರರ ಸಂಖ್ಯೆ ಹೆಚ್ಚಾಗುತ್ತದೆ. ಚುನಾವಣಾ ಕಣದಲ್ಲಿ ಇರುವ ಬಿಜೆಪಿಗೆ ಇದರಿಂದ ನೆರವಾಗುತ್ತದೆ. ಜತೆಗೆ, ಹೆಚ್ಚು ಜಾಹೀರಾತು ದೊರೆಯುವುದರಿಂದ ಫೇಸ್‌ಬುಕ್‌ನ ಆದಾಯವೂ ಹೆಚ್ಚುತ್ತದೆ.

ಆಧಾರ: ದಿ ರಿಪೋರ್ಟರ್ಸ್ ಕಲೆಕ್ಟಿವ್ ವರದಿ. ಈ ವರದಿಯ ಇಂಗ್ಲಿಷ್ ಆವೃತ್ತಿ ಆಲ್‌ಜಜೀರಾ ಸುದ್ದಿತಾಣದಲ್ಲಿ ಪ್ರಕಟವಾಗಿದೆ

* ಈ ವರದಿಗಳ ಸರಣಿ ಮುಗಿದಿದೆ.

ಅಲ್ಗಾರಿದಂ ‘ಆಟ’ ಬಲ್ಲವರಿಗೆ ‘ಲಾಭ’

ತನ್ನ ವೇದಿಕೆಯಲ್ಲಿ ಪ್ರಕಟವಾಗುವ ಒಂದು ‘ಕಂಟೆಂಟ್’ ಯಾವ ವರ್ಗದ ಜನರನ್ನು ತಲುಪುತ್ತದೆ ಹಾಗೂ ಅದಕ್ಕೆ ಆ ವರ್ಗದ ಎಷ್ಟು ಜನರು ಸ್ಪಂದಿಸುತ್ತಾರೆ ಎಂಬುದರ ಮೇಲೆ ಆ ಕಂಟೆಂಟ್‌ನ ಪ್ರಸ್ತುತತೆಯನ್ನು ಫೇಸ್‌ಬುಕ್ ಅಲ್ಗಾರಿದಂ ನಿರ್ಧರಿಸುತ್ತದೆ.

ಬಹಳಷ್ಟು ಸಾಮಾಜಿಕ ಜಾಲತಾಣಗಳು ಜಾಹೀರಾತುದಾರರು ನೀಡಿದ ‘ನಿರ್ದಿಷ್ಟ’ ಜಾಹೀರಾತುಗಳು ಹೆಚ್ಚು ಜನರನ್ನು ತಲುಪುವಂತೆ ನೋಡಿಕೊಳ್ಳುತ್ತವೆ. ಜಾಹೀರಾತುದಾರರಿಗೆ ಇದರಿಂದ ಅನುಕೂಲವಾಗುತ್ತದೆ. ಫೇಸ್‌ಬುಕ್ ಸಹ ಹೀಗೆಯೇ ಮಾಡುತ್ತದೆ. ಹೆಚ್ಚು ಗಮನ ಸೆಳೆಯುವ ಜಾಹೀರಾತುಗಳು ಬಳಕೆದಾರರು ಟೈಮ್‌ಲೈನ್‌ನಲ್ಲಿ ಹೆಚ್ಚು ಹೊತ್ತು ಉಳಿಯುವಂತೆ ಮಾಡುವುದರಿಂದ ಫೇಸ್‌ಬುಕ್‌ಗೆ ಹೆಚ್ಚು ನೆರವಾಗುತ್ತದೆ. ಈ ಪ್ರಕ್ರಿಯೆಯು ಇಬ್ಬರಿಗೂ ಅನುಕೂಲಕರವಾಗಿ ಪರಿಣಮಿಸುತ್ತದೆ.

ಈ ರೀತಿ ದೊಡ್ಡ ಗ್ರಾಹಕರಿಗೆ ಕಡಿಮೆ ವೆಚ್ಚದಲ್ಲಿ ವ್ಯವಸ್ಥಿತವಾಗಿ ಜಾಹೀರಾತುಗಳನ್ನು ನೀಡುತ್ತಿರುವುದು ಫೇಸ್‌ಬುಕ್ ಮಾತ್ರವಲ್ಲ. ಹಲವು ನಿರ್ಮಾಣ ಸಂಸ್ಥೆಗಳು ಹಿಂದಿನಿಂದಲೂ ಇದನ್ನು ಮಾಡಿಕೊಂಡು ಬರುತ್ತಿವೆ. ಆದರೆ ಫೇಸ್‌ಬುಕ್‌ನ ಶುಲ್ಕ ನಿಗದಿ ನೀತಿಯು ಪ್ರಜಾಪ್ರಭುತ್ವ ಇರುವ ಎಲ್ಲ ದೇಶಗಳಲ್ಲಿ ಪ್ರಶ್ನಾರ್ಹ ಆಗಿರುವುದಕ್ಕೆ ಕಾರಣಗಳಿವೆ. ಕೇವಲ ಜಾಹೀರಾತು ಸರಕು ಮತ್ತು ಸೇವೆಗಳನ್ನು ಮಾರಾಟ ಮಾಡುವುದಕ್ಕೆ ಈ ವ್ಯವಹಾರ ಮಾದರಿಯು ಸೀಮಿತವಾಗಿಲ್ಲ. ಬದಲಾಗಿ, ಚುನಾವಣಾ ಕಣಕ್ಕಿಳಿಯುವ ರಾಜಕೀಯ ಪಕ್ಷಗಳಿಗೆ ಅನ್ಯಾಯದ ಮತ್ತು ಅಸಮಾನ ಅವಕಾಶಗಳಿಗೆ ದಾರಿ ಮಾಡಿಕೊಡುತ್ತದೆ.

ರಾಜಕೀಯ ತಜ್ಞ ಶಿವರಾಮ್ ಶಂಕರ್ ಸಿಂಗ್ ಅವರು ಫೇಸ್‌ಬುಕ್ ಅಲ್ಗಾರಿದಂ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ‘ಒಂದು ರಾಜಕೀಯ ಪಕ್ಷವು ಫೇಸ್‌ಬುಕ್‌ನ ಅಲ್ಗಾರಿದಂನ ಆಟವನ್ನು ಅರ್ಥಮಾಡಿಕೊಂಡರೆ, ಬಳಕೆದಾರರನ್ನು ಹೆಚ್ಚು ತಲುಪಬಲ್ಲ ಯಾವ ರೀತಿಯ ಕಂಟೆಂಟ್ ಅನ್ನು ಸಿದ್ಧಪಡಿಸಬೇಕು ಎಂಬುದು ಅರ್ಥವಾಗಿಬಿಡುತ್ತದೆ. ತನ್ಮೂಲಕ ಆ ಪಕ್ಷವು ರಾಜಕೀಯ ಲಾಭ ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ’ ಎಂದು ಅವರು ಹೇಳುತ್ತಾರೆ.

‘ಅಲ್ಗಾರಿದಂನ ಈ ಆಟವು ಮಾಹಿತಿಯುಕ್ತ ಕಂಟೆಂಟ್‌ನಿಂದ ಆರಂಭವಾಗುತ್ತದೆ. ಅದು ಕೊನೆಗೆ ಭಾವನೆಗಳನ್ನು ಉತ್ತೇಜಿಸುವ ಕಂಟೆಂಟ್‌ಗೆ ಒತ್ತು ನೀಡುತ್ತದೆ. ಇದನ್ನು ಅಲ್ಗಾರಿದಂ ಮಾಡುತ್ತದೆ. ಮತಗಳನ್ನು ಧ್ರುವೀಕರಿಸುವ ಉದ್ದೇಶ ಹೊಂದಿರುವ ರಾಜಕೀಯ ಪಕ್ಷಗಳಿಗೆ ಇದು ಅಂತಿಮವಾಗಿ ಬಹುದೊಡ್ಡ ಲಾಭವನ್ನು ತಂದುಕೊಡುತ್ತದೆ’ ಎಂದು ಅವರು ವಿಶ್ಲೇಷಿಸಿದ್ದಾರೆ.

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 82

ಪರಬ್ರಹ್ಮ ಶಕ್ತಿಯೇ ಅಂಬಿಕಾ

ಅದ್ವಿತೀಯವೂ ಆದ್ಯಂತರಹಿತವೂ ಸರ್ವಸ್ವರೂಪವೂ ಪ್ರಕಾಶಮಯವೂ ಸರ್ವವೂ ಅವಿನಾಶಿಯೂ ಆದ ಆ ಪರಬ್ರಹ್ಮವು ಶುದ್ಧ ಸ್ವರೂಪವುಳ್ಳ ಆ ಈಶ್ವರಮೂರ್ತಿಯನ್ನು ಕಲ್ಪಿಸಿ ಅಂತರ್ಧಾನ ಹೊಂದಿತು – ಎಂದು ನಾರದನಿಗೆ ಶಿವತತ್ವವಿಚಾರವನ್ನು ಬ್ರಹ್ಮ ಹೇಳುತ್ತಾನೆ.

ನಿಷ್ಕ್ರಿಯಾವಸ್ಥೆಯಲ್ಲಿ ಯಾವುದು ಪರಬ್ರಹ್ಮವೆನಿಸಿತೋ ಅದರ ಮೂರ್ತಿಯು ಸದಾಶಿವನೆಂದು ತಿಳಿ. ಆ ಸದಾಶಿವಮೂರ್ತಿಯನ್ನೇ ಈಚಿನ ಮತ್ತು ಹಿಂದಿನ ತಿಳಿದ ವಿದ್ವಾಂಸರು ಈಶ್ವರನೆಂದು ಕರೆಯುವರು. ಸ್ವಚ್ಛಂದವಾಗಿ ವಿಹರಿಸುತ್ತಿದ್ದ ಆ ಪರಬ್ರಹ್ಮಮೂರ್ತಿಯು ಒಂಟಿಯಾಗಿದ್ದರೂ ಅದರ ಶರೀರವನ್ನ ಎಡಬಿಡದಂತಿರುವ ಶಕ್ತಿಯು, ಆ ಪರಬ್ರಹ್ಮವಿಗ್ರಹದಿಂದ ತಾನಾಗಿಯೇ ಸೃಷ್ಟಿಸಲ್ಪಟ್ಟಿತು. ಆ ಶಕ್ತಿಯನ್ನೇ ಪ್ರಕೃತಿಯೆಂದು, ಪ್ರಧಾನವೆಂದು, ಮಾಯೆಯೆಂದು, ಸತ್ವ-ರಜಸ್ಸು-ತಮಸ್ಸುಗಳೆಂಬ ಗುಣತ್ರಯಗಳುಳ್ಳವಳೆಂದು, ಬುದ್ಧಿತತ್ವದ ಮಾತೆಯೆಂದು, ವಿಕಾರ ವರ್ಜಿತಳೆಂದು ನಾನಾವಿಧವಾಗಿ ಕರೆಯುವರು ಎಂದು ಬ್ರಹ್ಮ ನಾರದನಿಗೆ ತಿಳಿಸುತ್ತಾನೆ.

ಆ ಪರಬ್ರಹ್ಮಶಕ್ತಿಯೇ ಅಂಬಿಕೆಯೆಂದು ಕರೆಯಲ್ಪಡುವವಳು. ಅವಳನ್ನೇ ಪ್ರಕೃತಿಯೆಂತಲೂ ಸಕಲೇಶ್ವರಿಯೆಂದೂ ಹೇಳುವರು. ಆ ಅಂಬಿಕೆಯೇ ಬ್ರಹ್ಮ ವಿಷ್ಣು ಮಹೇಶ್ವರರೆಂಬ ತ್ರಿಮೂರ್ತಿಗಳಿಗೆ ತಾಯಿ ಎನಿಸಿದಳು. ಅವಳು ನಿತ್ಯಳೆಂತಲೂ ಮೂಲಕಾರಣವೆಂತಲೂ ಹೇಳಲ್ಪಡುವಳು. ಪ್ರಕೃತಿಮಾತೆಗೆ ಎಂಟು ಕೈಗಳು, ವಿಚಿತ್ರವಾದ ಮುಖಗಳು, ಇದ್ದುವು. ಸಾವಿರಾರು ಚಂದ್ರರು ಒಟ್ಟಿಗೇ ಸೇರಿದರೆ ಉಂಟಾಗುವಷ್ಟರ ಮಟ್ಟಿನ ಪಾವನವಾದ ಕಾಂತಿ ಆಕೆಯ ಮುಖಮಂಡಲದಲ್ಲಿ ಯಾವಾಗಲೂ ನೆಲೆಸಿತ್ತು. ಆ ದೇವಿಯು ನಾನಾವಿಧವಾದ ಒಡವೆಗಳಿಂದ ಅಲಂಕೃತಳಾಗಿದ್ದಳು. ನಾನಾವಿಧವಾದ ಗತಿಗಳಿಂದ ಕೂಡಿದವಳಾಗಿದ್ದಳು. ಆಕೆಯ ಕೈಗಳು ವಿವಿಧವಾದ ಆಯುಧಗಳಿಂದ ಶೋಭಿಸುತ್ತಿದ್ದವು. ಕಂಗಳು ಅರಳಿದ ತಾವರೆಯನ್ನು ಹೋಲುತ್ತಿದ್ದುವು.

ಆಕೆಯ ತೇಜಸ್ಸನ್ನು ಊಹಿಸಲೂ ಅಸಾಧ್ಯವಾಗಿತ್ತು. ಆಕೆ ಸರ್ವಭೂತಗಳಿಗೂ ಕಾರಣಿಭೂತಳಾಗಿದ್ದಳು. ಮಾಯರೂಪಿಣಿಯಾದ ಆಕೆ ಒಂಟಿಯಾಗಿ ಇದ್ದರೂ, ವಿವಿಧ ಸಂಯೋಗವಶದಿಂದ ವೈವಿಧ್ಯವನ್ನು ಪಡೆವಳು. ಆ ಈಶ್ವರನನ್ನೇ ಪರಮಪುರುಷನೆಂಬುದಾಗಿ ತಿಳಿ. ಆತನನ್ನು ಶಿವನೆಂದೂ ಶಂಭುವೆಂತಲೂ ಕರೆಯುವರು. ಬೇರೆ ಯಾರೂ ಆತನಿಗೆ ಪ್ರಭುವಾಗಲಾರರು. ಆತನ ತಲೆಯಲ್ಲಿ ಗಂಗೆಯು ಶೋಭಿಸುತ್ತಿರುವಳು. ಹಣೆಯಂಚಿನಲ್ಲಿ ಬಾಲಚಂದ್ರನು ಮೆರೆಯುತ್ತಿದ್ದ. ಆತನಿಗೆ ಮೂರು ಕಣ್ಣುಗಳು, ಐದು ಮುಖಗಳು, ಹತ್ತು ಕೈಗಳು ಇದ್ದುವು. ಆತ ತ್ರಿಶೂಲವನ್ನು ಧರಿಸಿದ್ದ. ಕರ್ಪೂರದಂತೆ ಬೆಳ್ಳಗೆ ಆತನ ಮೈಬಣ್ಣವಿದ್ದಿತು. ಶರೀರವೆಲ್ಲಾ ಭಸ್ಮದಿಂದ ಉದ್ಧೂಲಿತವಾಗಿತ್ತು.

ಕಾಲಸ್ವರೂಪಿಯಾದ ಆ ಪರಮಪುರುಷನು ಶಕ್ತಿಯೊಡಗೂಡಿ, ಶಿವಲೋಕವೆಂಬ ಕ್ಷೇತ್ರವನ್ನು ಒಟ್ಟಿಗೇ ನಿರ್ಮಿಸಿದ. ಆ ಶಿವಲೋಕವೇ ಉತ್ತಮವಾದ ಕಾಶೀಕ್ಷೇತ್ರವೆನಿಸಿತು. ಶ್ರೇಷ್ಠವಾದ ಮೋಕ್ಷಭೂಮಿ ಎನಿಸಿ, ಎಲ್ಲಕ್ಕಿಂತಲೂ ಮೇಲೆ ಆ ಕ್ಷೇತ್ರ ವಿರಾಜಿಸುತ್ತಿತ್ತು. ಆ ಮನೋಹರವಾದ ಕ್ಷೇತ್ರದಲ್ಲಿ ಪರಮಾನಂದ ಸ್ವರೂಪರಾದ ಶಿವಶಕ್ತಿಯರೊಡನೆ ಕೂಡಿ, ಕಾಶೀ ಕ್ಷೇತ್ರವು ಪರಮಾನಂದದಾಯಕವೆನಿಸಿತು. ಪ್ರಳಯಕಾಲದಲ್ಲಿಯೂ ಬಿಡದೆ, ಶಿವಪಾರ್ವತಿಯರು ಅಲ್ಲಿಯೇ ಯಾವಾಗಲೂ ನೆಲೆಸಿರುವು ದರಿಂದ ಆ ಕಾಶೀಕ್ಷೇತ್ರವನ್ನು ಅವಿಮುಕ್ತವೆನ್ನುವರು. ಆ ಕ್ಷೇತ್ರವು ಆನಂದದಾಯಕವಾಗಿದ್ದುದರಿಂದ, ಆರಂಭದಲ್ಲಿ ಆ ಕ್ಷೇತ್ರಕ್ಕೆ ಆನಂದವನ ವೆಂದು ಶಿವನೇ ಹೆಸರಿಟ್ಟ. ಆಮೇಲೆ ಅವಿಮುಕ್ತವೆಂಬ ಹೆಸರು ಬಂದಿತು.

ಆ ಆನಂದವನದಲ್ಲಿ ಶಿವಪಾರ್ವತಿಯರು ವಿಹರಿಸುತ್ತಿರುವಾಗ ಅವರಿಗೆ ಮತ್ತೊಬ್ಬನನ್ನು ಸೃಷ್ಟಿಸಬೇಕೆಂಬ ಇಚ್ಛೆಯುಂಟಾಯಿತು. ‘ನಾವು ಸೃಷ್ಟಿಸುವ ಪುರುಷನಿಗೆ, ನಮ್ಮೆಲ್ಲಾ ಹೊಣೆಗಾರಿಕೆ ಭಾರವನ್ನು ಹೊರಿಸಿ, ನಾವಿಬ್ಬರೂ ಈ ಕಾಶಿಯಲ್ಲೇ ವಾಸಿಸುತ್ತಾ, ಸ್ವಚ್ಛಂದವಾಗಿ ವಿಹರಿಸುತ್ತಿರೋಣ. ನನ್ನ ಅನುಗ್ರಹದಿಂದ ಯಾವಾಗಲೂ ಆ ಪುರುಷನೇ ಎಲ್ಲವನ್ನೂ ಸೃಷ್ಟಿಸಲಿ. ಅವನೇ ಎಲ್ಲವನ್ನೂ ಪಾಲಿಸಲಿ. ಕೊನೆಗೆ ಎಲ್ಲವನ್ನೂ ಆತನೇ ಉಪಸಂಹರಿಸಲಿ’ ಎಂದು ಶಿವ-ಪಾರ್ವತಿ ತೀರ್ಮಾನಿಸಿದರು.

ಯೋಚನೆಗಳೆಂಬ ಅಲೆಗಳಿಂದ, ಸತ್ವಗುಣವೆಂಬ ರತ್ನಗಳಿಂದಲೂ, ರಜೋಗುಣವೆಂಬ ಬಳ್ಳಿಗಳಿಂದಲೂ, ತಮೋಗುಣವೆಂಬ ಮೊಸಳೆ ಗಳಿಂದಲೂ ಕೂಡಿರುವ ಮನಸ್ಸೆಂಬ ಸಮುದ್ರವನ್ನು ಕಡೆದು, ಆ ಶಕ್ತಿಯೊಡನೆ ಆಲೋಚಿಸಿ, ಆ ಸರ್ವೇಶ್ವರನಾದ ಪರಮಪುರುಷನು ತನ್ನ ಎಡಪಾರ್ಶ್ವದ ಅವಯವದಲ್ಲಿ ಅಮೃತಪ್ರವಾಹವನ್ನು ಹರಿಸಿದ. ಬಳಿಕ ಆ ಪರಮ ಪುರುಷನ ಎಡಭಾಗದಿಂದ ಮೂರು ಲೋಕಗಳಲ್ಲೂ ಸಾಟಿಯೇ ಇಲ್ಲ ದಂಥ ಸೌಂದರ್ಯದಿಂದ ಕೂಡಿದ ಪುರುಷನೊಬ್ಬ ಅವಿರ್ಭವಿಸಿದ. ಆತ ಮಹಾಶಾಂತನಾಗಿದ್ದ. ಆತನಲ್ಲಿ ಸತ್ವಗುಣವು ಪ್ರಧಾನವಾಗಿತ್ತು. ಗಾಂಭೀರ್ಯ ದಲ್ಲಿ ಸಾಗರವೂ ಆತನನ್ನು ಹೋಲುತ್ತಿರಲಿಲ್ಲ – ಎಂದು ಬ್ರಹ್ಮ ವಿಶ್ಲೇಷಿಸುತ್ತಾನೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹಳೆಯ ದೇವಸ್ಥಾನವೊಂದನ್ನು ಜೆಸಿಬಿ ಬಳಸಿ ಕೆಡವುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆಂಧ್ರ ಪ್ರದೇಶದ ವಿಜಯವಾಡದಲ್ಲಿ ಸೆರೆಯಾಗಿರುವ ದೃಶ್ಯ ಇದು ಎಂದು ಹೇಳಲಾಗಿದೆ. ವಿಡಿಯೊದಲ್ಲಿ ಮಸೀದಿ ಕೂಡಾ ಕಾಣುತ್ತದೆ. ‘ಆಂಧ್ರ ಪ್ರದೇಶ ಸರ್ಕಾರವು ರಸ್ತೆ ಅಗಲೀಕರಣಕ್ಕಾಗಿ ಪ್ರಾಚೀನ ಹಿಂದೂ ದೇವಾಲಯವನ್ನು ನೆಲಸಮ ಮಾಡುತ್ತಿದೆ. ಆದರೆ ಮಸೀದಿಯನ್ನು ಹಾಗೇ ಬಿಟ್ಟಿದೆ’ ಎಂದು ಈ ವಿಡಿಯೊದಲ್ಲಿ ಬಿಂಬಿಸಲಾಗಿದೆ. ಹಿಂದೂಪರ ಸಂಘಟನೆಗಳು ಈ ವಿಡಿಯೊವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಬಾರಿ ಹಂಚಿಕೊಂಡಿವೆ.



2020ರ ಮೇ ತಿಂಗಳಿನಲ್ಲಿ ಚಿತ್ರೀಕರಿಸಲಾದ ಈ ವಿಡಿಯೊವನ್ನು ತಪ್ಪು ಮಾಹಿತಿಯ ಜೊತೆಗೆ ಈಗ ಹಂಚಿಕೊಳ್ಳಲಾಗುತ್ತಿದೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. ಶ್ರೀ ವಿಜಯೇಶ್ವರ ಸ್ವಾಮಿ ವಾರಿ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಯ ವೇಳೆ ಜೆಸಿಬಿ ಯಂತ್ರ ಬಳಸಲಾಗಿತ್ತು. ದೇವಸ್ಥಾನದ ಒಳಾಂಗಣವನ್ನು ಮಾತ್ರ ವಿಸ್ತರಿಸಲಾಗಿದೆ. ದೇವಸ್ಥಾನ ಈಗಲೂ ಅದೇ ಜಾಗದಲ್ಲಿದೆ. ದೇವಸ್ಥಾನದ ಎದುರಿದ್ದ ಮಸೀದಿ ಕೂಡಾ ಅಲ್ಲಿಯೇ ಇದೆ ಎಂದು ವಿಜಯವಾಡ ಪೊಲೀಸರು ದೃಢಪಡಿಸಿದ್ದಾರೆ ಎಂದು ಆಲ್ಟ್ ನ್ಯೂಸ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಯಾವುದೂ ವ್ಯರ್ಥವಲ್ಲ

ಗರಡಿ ಸಾಮಿಂದೆ ನೀನೆದುರಾಳ ಗೆಲದೊಡೇಂ? |
ಬರದಿಹುದೆ ನಿನಗನಿತು ಕಾಯಾಂಗಪಟುತೆ? ||
ವರ ಸದ್ಯಕ್ಕಿಲ್ಲದೊಡೆ ಬರಿದಾಗುವುದೆ ಪೂಜೆ? |
ಪರಿಶುದ್ಧ ಮನವೆ ವರ - ಮಂಕುತಿಮ್ಮ || 596 ||

ಪದ-ಅರ್ಥ: ಸಾಮಿಂದೆ = ವ್ಯಾಯಾಮದಿಂದೆ, ನೀನೆದುರಾಳ = ನೀನು + ಎದುರಾಳ (ಎದುರಾಳಿ), ಗೆಲದೊಡೇಂ = ಗೆಲ್ಲದಿದ್ದರೇನಾಯಿತು, ನಿನಗನಿತು = ನಿನಗೆ + ಅನಿತು(ಸ್ವಲ್ಪ), ಕಾಯಾಂಗಪಟುತೆ = ದೇಹದ ಅಂಗಗಳ ಸಾಮರ್ಥ್ಯ, ಬರಿದಾಗುವುದೆ = ಬರಿದು + ಆಗುವುದೆ.

ವಾಚ್ಯಾರ್ಥ: ಗರಡಿಯಲ್ಲಿ ಮಾಡಿದ ವ್ಯಾಯಾಮದಿಂದ ನೀನು ಕುಸ್ತಿಯಲ್ಲಿ ಎದುರಾಳಿಯನ್ನು ಗೆಲ್ಲದಿದ್ದರೆ ಏನಾಯಿತು? ವ್ಯಾಯಾಮದಿಂದ ನಿನ್ನ ದೇಹಶಕ್ತಿಯಾದರೂ ವೃದ್ಧಿಯಾಯಿತಲ್ಲ. ತಕ್ಷಣಕ್ಕೆ ವರ ಸಿಕ್ಕದಿದ್ದರೆ, ಪೂಜೆ ವ್ಯರ್ಥವೆ? ಮನಸ್ಸು ಪರಿಶುದ್ಧವಾಗುವುದೆ ವರ.

ವಿವರಣೆ: ಟಕೋ ಜಪಾನಿನ ಟೋಕಿಯೊದ ಹೊರಭಾಗದ ಕೊಳಚೆ ಪ್ರದೇಶದಲ್ಲಿ ಬೆಳೆದ ಹುಡುಗ. ಬಡತನ ಯಾವ ಮಟ್ಟದ್ದೆಂದರೆ ಆತ ಪ್ರತಿದಿನ ಹದಿನಾಲ್ಕು ಗಂಟೆ ಕೆಲಸ ಮಾಡದಿದ್ದರೆ ಮನೆ ನಡೆಯುತ್ತಿರಲಿಲ್ಲ. ಮನೆಯಲ್ಲಿ ತಾಯಿ ಮತ್ತು ತಂಗಿ ಇಬ್ಬರೇ. ಮೂವರ ಹೊಟ್ಟೆಗೆ ಬೇಕಾಗುವಷ್ಟನ್ನು ದುಡಿಯುವುದರಲ್ಲಿ ಟಕೋನ ದಿನಗಳು ಮುಗಿದು ಹೋಗುತ್ತಿದ್ದವು. ಆತನಿಗೆ ಶಾಲೆಗೆ ಹೋಗುವುದಕ್ಕೆ ಸಾಧ್ಯವೇ ಆಗಲಿಲ್ಲ. ಮನೆಯಲ್ಲಿ ತಾಯಿಗೆ ಅದು ಹೇಗೋ ಸಾಹಿತ್ಯದಲ್ಲಿ ಆಸಕ್ತಿ. ಅವಳ ನೆನಪಿನ ಶಕ್ತಿಯೂ ಅಗಾಧ. ಆಕೆ ಅನೇಕ ಜಪಾನೀ ಕವಿಗಳ ಕಾವ್ಯಗಳನ್ನು ನೆನಪಿನಿಂದ ಹೇಳಬಲ್ಲವಳಾಗಿದ್ದಳು. ಆಕೆಯ ಜಪಾನೀ ಭಾಷೆ ತುಂಬ ಶುದ್ಧವಾದದ್ದು ಮತ್ತು ಸ್ಪಷ್ಟವಾದದ್ದು. ಆಕೆಯ ಮಾತು ಕೇಳಿ ಕೇಳಿ ಟಕೋನ ಜಪಾನೀ ಮಾತುಗಾರಿಕೆಯೂ ಬಹಳ ಚೆನ್ನಾಗಿದ್ದು ಮೆಚ್ಚುಗೆ ಪಡೆದಿತ್ತು. ಅವನು ಒಬ್ಬರ ಮನೆಗೆಲಸಕ್ಕೆ ಸೇರಿಕೊಂಡ. ಅವರು ಬ್ರಿಟಿಷ್ ದಂಪತಿಗಳು. ಅವರಿಗೆ ಜಪಾನೀ ಭಾಷೆ ಬರದು. ಈತ ಹರಕುಮುರುಕು ಇಂಗ್ಲಿಷ್‌ನಲ್ಲಿ ಅವರಿಗೆ ಜಪಾನೀ ಭಾಷೆ ಕಲಿಸಿದ. ಬದಲಾಗಿ ಅವನಿಗೆ ಅವರು ಇಂಗ್ಲಿಷ್ ಭಾಷೆಯನ್ನು ಕಲಿಸಿದರು. ಅವನು ಅದರಲ್ಲಿ ಎಷ್ಟು ಆಸಕ್ತಿ ವಹಿಸಿದನೆಂದರೆ ಅವನೊಬ್ಬ ಇಂಗ್ಲಿಷ್ ಪ್ರಾಧ್ಯಾಪಕರಂತೆ ಮಾತನಾಡುತ್ತಿದ್ದ. ಇದರಿಂದ ಏನು ಪ್ರಯೋಜನ ಎಂದು ಜನ ತಮಾಷೆ ಮಾಡುತ್ತಿದ್ದರು. ಮುಂದೆ ಆತ ಮನೆಗೆಲಸ ಮಾಡುವುದನ್ನು ಬಿಟ್ಟು ಇಂಗ್ಲೀಷ್ ಮಾತನಾಡುವ ಪ್ರವಾಸಿಗಳಿಗೆ ಜಪಾನ್ ತೋರಿಸುವ ಮಾರ್ಗದರ್ಶಿಯಾದ. ಅವನು ಕಲಿತ ಇಂಗ್ಲಿಷ್ ಭಾಷೆಯ ಸೊಗಸಿಗೆ ಬಹುಮಾನವೆಂದಂತೆ ಅವನನ್ನು ಜಪಾನಿನ ರಾಜರಾಗಿದ್ದ ಹಿರೋಹಿಟೋರವರಿಗೆ ದುಭಾಷಿಯೆಂದು ನೇಮಕ ಮಾಡಿದರು. ಆತ ಕೇವಲ ದುಭಾಷಿಯಾಗದೆ ರಾಜರಿಗೆ ಇಂಗ್ಲಿಷ್ ಕಲಿಸುವ ಪ್ರಾಧ್ಯಾಪಕನೂ, ಆತ್ಮೀಯನೂ ಆದ.

ಈ ಕಗ್ಗ ಹೇಳುತ್ತದೆ, ಕುಸ್ತಿಯನ್ನು ಅಭ್ಯಾಸ ಮಾಡಲು ಗರಡಿಗೆ ಹೋಗಿ ಸಾಮುವರಸೆಗಳನ್ನೆಲ್ಲ ಮಾಡಿದರೂ ಕುಸ್ತಿಯ ಪಂದ್ಯದಲ್ಲಿ ಸೋತರೆ ನಷ್ಟವೇನಿಲ್ಲ. ಪ್ರಶಸ್ತಿ ಬರದಿರಬಹುದು, ಆದರೆ ಕುಸ್ತಿಯ ಪ್ರಯತ್ನದಿಂದಾಗಿ ನಿನ್ನ ದೇಹ ಬಲಶಾಲಿಯಾಗಿಲ್ಲವೆ? ಟಕೋ ಇಂಗ್ಲೀಷ್ ಕಲಿತದ್ದು ಯಾವ ಪ್ರಯೋಜನಕ್ಕೆ ಎಂದು ತಮಾಷೆ ಮಾಡಿದ್ದರು. ಆದರೆ ಅವನ ಇಂಗ್ಲೀಷನಲ್ಲಿ ಪರಿಶ್ರಮ ರಾಜನ ಬಳಿಗೆ ಕರೆದೊಯ್ದಿತು. ಯಾವ ಪ್ರಯತ್ನವೂ ತಕ್ಷಣವೇ ಫಲ ನೀಡುವುದಿಲ್ಲ. ಫಲ ಬರಲಿಲ್ಲವೆಂದು ಪೂಜೆ ಮಾಡಿದ್ದು ವ್ಯರ್ಥವೆ? ಪೂಜೆ ಮಾಡಿದರೆ ಫಲ ತಡವಾಗಿ ಬಂದೀತು: ಮಾಡದೆ ಹೋದರೆ ಫಲದ ಆಸೆಯೇ ಇಲ್ಲವಲ್ಲ. ಪೂಜೆ ಮಾಡುವಾಗ ಮನಸ್ಸಾದರೂ ಶುದ್ಧವಾಗಿತ್ತಲ್ಲ. ಫಲ ದೊರಕದೆ ಹೋದರೂ ಮನಸ್ಸು ಶುದ್ಧವಾಗಿ ಉಳಿದದ್ದೇ ಪೂಜೆಯ ವರ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಗುರುವಾರ ಮಾರ್ಚ್ 31, 2022

ಶ್ರೀ ಪ್ಲವನಾಮ ಸಂವತ್ಸರ ಉತ್ತರಾಯಣ–ಶಿಶಿರ ಋತು ಮೀನ ಮಾಸದ 17 ನೇ ದಿನ ತಿಥಿ: (ಫಾಲ್ಗುಣ ಕೃಷ್ಣ) ಚತುರ್ದಶಿ ಗಂ. 12-23 ನಕ್ಷತ್ರ: ಪೂರ್ವಾಭಾದ್ರಾ ಗಂ. 10-31 ಯೋಗ: ಶುಕ್ಲ ಗಂ. 11-07, ಕರಣ: ಶಕುನಿ ಗಂ. 12-23. ರಾಹುಕಾಲ: ಮಧ್ಯಾಹ್ನ 01:30 – 03:00 ಸೂರ್ಯೋದಯ: 06-31 ಸೂರ್ಯಾಸ್ತ : 06-39 ಮುಸ್ಲಿಂ ದಿನಾಂಕ : 27 ಶಬನ್ ಅದೃಷ್ಟ ಸಂಖ್ಯೆ: 10, 13

ಮೇಷ: ಲೆಕ್ಕ ಪರಿಶೋಧಕರು ಕೆಲಸದಲ್ಲಿ ಹೆಚ್ಚಿನ ತೃಪ್ತಿ ಕಾಣಲಿದ್ದೀರಿ. ಜಲಮಂಡಳಿ ನೌಕರರಿಗೆ ವೇತನ ಹೆಚ್ಚಳ. ಲೇವಾದೇವಿ ವ್ಯವಹಾರ ಉತ್ತಮವಾಗಿ ಮುಂದುವರೆಯುವುದು. ನೆಮ್ಮದಿ ಜೀವನ ನಿಮ್ಮದಾಗುವುದು.

ವೃಷಭ: ಮೇಲಧಿಕಾರಿಗಳಿಂದ ಹೆಚ್ಚಿನ ಹೊಸ-ಹೊಸ ಅವಕಾಶಗಳು ಹಾಗೂ ಪ್ರಶಂಸೆಯ ಮಾತುಗಳನ್ನು ಕೇಳುವಿರಿ. ನಿಮ್ಮ ಬಗ್ಗೆ ಯೋಚಿಸುವುದನ್ನು ಬಿಟ್ಟು ಇತರ ಕುರಿತು ಕಾಳಜಿ ವಹಿಸುವುದನ್ನು ಕೂಡ ಅಭ್ಯಾಸ ಮಾಡಿಕೊಳ್ಳಿ.

ಮಿಥುನ: ನಿಮ್ಮ ಕ್ರಿಯೆಯನ್ನು ಸಮರ್ಥಿಸಿಕೊಳ್ಳಲು ಸಾಕಷ್ಟು ಕಾರಣ ಸಿಗಲಿವೆ. ಬಟ್ಟೆ ಮಾರಾಟಗಾರರಿಗೆ ಉತ್ತಮ ವ್ಯಾಪಾರವಿದ್ದೂ ಅಧಿಕ ಲಾಭವಿರುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ.

ಕರ್ಕಾಟಕ: ಮನೆಯಲ್ಲಿರುವ ಆಂತರಿಕ ಸಮಸ್ಯೆಗಳನ್ನು ಶೀಘ್ರವಾಗಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಿ. ಸ್ನೇಹಿತರ ಹಾಗೂ ಬಂಧುಗಳ ಸಹಕಾರದಿಂದ ವ್ಯಾಪಾರ ವಹಿವಾಟುಗಳ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ.

ಸಿಂಹ: ಈ ದಿನದ ಒಂದು ಘಟನೆ ನಿಮ್ಮನ್ನು ಭಾವುಕರನ್ನಾಗಿ ಮಾಡಲಿದೆ. ಅಧಿಕಾರ, ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ. ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ ಹಾಗೂ ಜೀವನಶೈಲಿ ವಿಭಿನ್ನವಾಗಿ ಬದಲಾಗಲಿದೆ.

ಕನ್ಯಾ: ನಿಮ್ಮ ಉದ್ದೇಶ ನೆರವೇರಿಸಿಕೊಳ್ಳುವುದಕ್ಕೆ ನಡೆಸಿರುವ ಪ್ರಯತ್ನಗಳು ನಿಧಾನವಾಗಿಯಾದರೂ ಸಿದ್ಧಿಸಲಿದೆ. ವಿವಾಹ ವಿಷಯಗಳು ನಿಶ್ಚಿತಗೊಂಡಿದ್ದರೂ ಇನ್ನೊಮ್ಮೆ ವಿಚಾರಿಸಿ ದೃಢಪಡಿಸಿಕೊಳ್ಳುವುದು ಉತ್ತಮ

ತುಲಾ: ನಿಮ್ಮಲ್ಲಿ ಇಂದು ಹೆಚ್ಚಿನ ಉತ್ಸಾಹ ಕಾಣಿಸುತ್ತಿದ್ದು ಹೊಸದೊಂದು ಹಾದಿಯಲ್ಲಿ ನಡೆಯಲಿದ್ದೀರಿ. ಯಾವುದೇ ಪರಿಸ್ಥಿತಿಯಲ್ಲಿಯೂ ನಿಮ್ಮ ಮನಸ್ಸಿನ ಭಾವನೆಗಳಿಗೆ ಮಾನ್ಯತೆ ನೀಡದಿರುವಂತಹ ತೀರ್ಮಾನ ತೆಗೆದುಕೊಳ್ಳಬೇಡಿ.

ವೃಶ್ಚಿಕ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸನ್ನು ಹೊಂದುವ ಎಲ್ಲಾ ಲಕ್ಷಣಗಳೂ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಉದ್ಯೋಗದಲ್ಲಿ ಸಣ್ಣದಾಗಿ ಬದಲಾವಣೆ ಕಂಡುಬರಲಿದೆ.

ಧನು: ಜೀವನ ರೂಪಿಸಿಕೊಳ್ಳಲು ನಿರ್ಧರಿಸಿದ ಪ್ರೇಮಿಗಳಿಗೆ ತಮ್ಮ ಸಹೋದರರಿಂದ ಅಥವಾ ಕುಟುಂಬ ವರ್ಗದವರಿಂದ ಸ್ಪಂದನೆ ಸಿಗುವ ಅವಕಾಶಗಳಿವೆ. ಕೋರ್ಟ್ ಕೆಲಸಗಳನ್ನು ತ್ವರಿತ ಗತಿಯಲ್ಲಿ ಮುಗಿಸಲು ಮನವಿ.

ಮಕರ: ಇಂದಿನ ದಿನದ ಪರಿಸ್ಥಿತಿಗಳನ್ನು ನೀವು ನಿಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುವ ಪ್ರಯತ್ನದಲ್ಲಿ ಸಫಲರಾಗುವಿರಿ. ನಿಮ್ಮ ವ್ಯಾವಹಾರಿಕೆ ಚಾಣಾಕ್ಷತನಕ್ಕೆ, ಕ್ರಿಯಾಶೀಲತೆಗೆ ಸರಿಯಾಗಿ ಈ ದಿನ ನಿಮಗೆ ಲಾಭವಾಗುವುದು.

ಕುಂಭ: ಆಫೀಸಿನ ಸಿಬ್ಬಂದಿಯೊಂದಿಗೆ ಮಾತುಗಳನ್ನು ಕಡಿಮೆ ಮಾಡುವುದು ಉತ್ತಮ. ಮನಸ್ಸಿನ ಉದ್ವೇಗ ಕಡಿಮೆ ಮಾಡಿಕೊಳ್ಳಲು ದೇವರ ಧ್ಯಾನದಲ್ಲಿ ತೊಡಗುವಿರಿ. ಮಕ್ಕಳ ಆರೋಗ್ಯದಲ್ಲಿ ಕೊರತೆ ಇರುವುದಿಲ್ಲ.


ಮೀನ: ಇಲಾಖೆ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭಡ್ತಿ ಪಡೆಯುವ ಕಾಲ. ತಂದೆಯಾಗಲಿರುವ ಸುದ್ದಿ ಕೇಳಿ ಸಂತಸ. ವೀರಾಂಜನೇಯನಿಗೆ ಜೇನುತುಪ್ಪ ಅಭಿಷೇಕ ಮಾಡಿಸುವುದರಿಂದ ವ್ಯಾಧಿಗಳು ದೂರಾಗುತ್ತವೆ.

ಪದಬಂಧ 4914

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಮತದೊಳಗೆ ವ್ಯಕ್ತಪಡಿಸಿದ ಅಭಿಪ್ರಾಯ (4)
5.ಬೇರೆ ರೂಪವು ಈ ತರ ಕಾಣಿಸುತ್ತಿದೆ (4)
6.ಹನ್ನೆರಡು ಅಂಗುಲದ ಅಳತೆ (2)
7.ಕಾಲಸೂಚಕ ಯಂತ್ರ (4)
10.ಅಡುಗೆಮನೆಯಿದು (4)
12.ಕಥೆಯಲ್ಲ! ದುಃಖ! (2)
14.ಚಾಲಕನೊಡನಿರುವ ವ್ಯವಸ್ಥಾಪಕ! (4)
15.ಅಸಾಂಗತ್ಯವನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಬಹು ಹೆಚ್ಚಿನ ಅವಶ್ಯಕತೆ (3)
2.ಬಹಿರಂಗದ ವಿರುದ್ಧ ಪದ (4)
3.ಮರದಲ್ಲಿರುವ ಹೊಸ ಯುಗ (4)
4.ತೂಕ ಮಾಡುವ ಸಾಧನ (3)
6.ನೀರು ನೆಲೆಯಾಗಿ ನಿಲ್ಲುವ ಸ್ಥಳ (2)
8.ಈತ ಬೇಡುವವನು (3)
9.ನಡೆದ ಅಥವಾ ಕಲ್ಪಿತ ಸಂಗತಿ (2)
10.ಪಾಪಕ್ಕೆ ಹೆದರುವವನು (4)
11.ಖರ್ಚುವೆಚ್ಚದ ವಿವರ (4)
12.ಅಂಗುಳಿನ ಒಳಭಾಗವಿಲ್ಲಿ ಉಲ್ಟಾ ಕಾಣುತ್ತಿದೆ (3)
13.ಅನುಕೂಲತೆ ಇಲ್ಲಿದೆ (3)



4913ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಾಕಾರ 3.ಅನಾಮಿಕೆ
5.ನವೀನ 7.ಪ್ರವರ್ತಕ
9.ವ್ಯವಹಾರ 11.ಮಗಳು
14.ಆಡುಂಬೊಲ
15.ಕಣಕ

ಮೇಲಿಂದ ಕೆಳಕ್ಕೆ:
1.1.ಪ್ರಾಚೀನ 2.ರಸನ
3.ಅನುಭಾವ 4.ಕೆಪ್ಪ
6.ವೀರಕಾವ್ಯ 7.ಪ್ರಹರ
8.ಕವಾಡಿಗ 10.ಹಾಲಾಹಲ
11.ಮರುಕ 12.ಳುರುಕ
13.ಸೇಆ

ಸುಡೊಕು 5300

	4		2		9	6		1
		1		8		2	7	
	7		1		4			8
		4				1		
2	8		6	9	1			
		7					6	5
	5			1				7
	1	6	8		2	5		
4	2			5				6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5299 ಸುಡೊಕು

3	5	1	7	4	2	9	8	6
6	9	2	1	5	8	3	7	4
4	7	8	3	6	9	2	1	5
1	6	4	8	9	5	7	2	3
9	2	5	4	3	7	8	6	1
8	3	7	6	2	1	4	5	9
2	1	3	9	7	6	5	4	8
5	4	6	2	8	3	1	9	7
7	8	9	5	1	4	6	3	2

‘ದ್ವೇಷದ ವಿಷವನ್ನೇ ಉಸಿರಾಡುತ್ತಿದ್ದಾರೆ’

ಬೆಂಗಳೂರು: ಕೆಲವು ಮನುಷ್ಯ ವಿರೋಧಿಗಳು ರಾಜ್ಯದಲ್ಲಿ ದ್ವೇಷದ ವಿಷವನ್ನೇ ಉಸಿರಾಡುತ್ತಿದ್ದು ಅವರು ಮಾನಸಿಕ ಸ್ಥಿಮಿತರಾಗಿ ಉಳಿಯುವ ಲಕ್ಷಣ ಕಾಣುತ್ತಿಲ್ಲ ಎಂದು ಕಾಂಗ್ರೆಸ್ ಮುಖಂಡ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

ಡಾ. ಅಂಬೇಡ್ಕರ್ ನೀಡಿರುವ ಸಂವಿಧಾನ ಹಾಗೂ ಅದನ್ನು ಆಧರಿಸಿದ ಪ್ರಜಾಪ್ರಭುತ್ವವು ದೇಶದ ಆಮ್ಲಜನಕವಾಗಿದೆ. ಆದರೆ, ಅದನ್ನು ಒಪ್ಪದ ಕೆಲವರು ಅನಗತ್ಯ ವಿವಾದ ಸೃಷ್ಟಿಮಾಡುತ್ತಿದ್ದಾರೆ. ಒಳ್ಳೆಯತನ ಇದ್ದರೆ ಕುಂಕುಮವಾಗಲಿ, ಹಿಜಾಬ್, ಹಲಾಲ್ ಆಗಲಿ ಯಾವುದೂ ಸಮಸ್ಯೆಗಳಲ್ಲ ಎಂದರು.

‘ಮೌಢ್ಯ ರಹಿತವಾದ ವೈಜ್ಞಾನಿಕ ಆಚರಣೆಗಳನ್ನು ಎಲ್ಲ ಧರ್ಮದವರೂ ಗೌರವಿಸಬೇಕು. ಇಷ್ಟವಿದ್ದರೆ ಭಾಗಿಯಾಗಬೇಕು. ಮನುಷ್ಯನ ಹಸಿವಿನ ಮುಂದೆ ಯಾವ ಧರ್ಮವೂ ನಿಲ್ಲಲಾರದು. ಇದುವೆ ಸಂವಿಧಾನ ನಮಗೆ ಹೇಳಿದ ತಿಳಿವಳಿಕೆ’ ಎಂದು ಹೇಳಿದ್ದಾರೆ.

ಪೊಲೀಸ್ ಭ್ರಷ್ಟಾಚಾರದ ಹಣ ‘ಪರಿವಾರ’ಕ್ಕೆ ರವಾನೆ– ಹರಿಪ್ರಸಾದ್ ಆರೋಪ

‘ಭಯೋತ್ಪಾದಕ’ ಹೇಳಿಕೆ: ಪರಿಷತ್‌ನಲ್ಲಿ ಗದ್ದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪೊಲೀಸ್ ಅಧಿಕಾರಿಗಳ ವರ್ಗಾವಣೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಹಣ ಕೇಶವಕೃಪಾ ಮೂಲಕ ಸಂಘ ಪರಿವಾರದ ಸಂಸ್ಥೆಗಳಿಗೆ ರವಾನೆಯಾಗುತ್ತಿದೆ. ಕಲ್ಲಡ್ಕದ ಭಯೋತ್ಪಾದಕರೊಬ್ಬರ ಸೂಚನೆಯಂತೆ ಪೊಲೀಸರ ವರ್ಗಾವಣೆಯಾಗುತ್ತಿದೆ’ ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ನೀಡಿದ ಹೇಳಿಕೆ ವಿಧಾನಪರಿಷತ್‌ನಲ್ಲಿ ಆಡಳಿತ–ವಿರೋಧ ಪಕ್ಷದ ಸದಸ್ಯರ ಮಧ್ಯೆ ಭಾರಿ ವಾಗ್ವಾದಕ್ಕೆ ಕಾರಣವಾಯಿತು.

ಹರಿಪ್ರಸಾದ್ ಹೇಳಿಕೆಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಬಿಜೆಪಿಯ ಭಾರತಿ ಶೆಟ್ಟಿ, ಸಭಾ ನಾಯಕ ಕೋಟ ಶ್ರೀನಿವಾಸಪೂಜಾರಿ, ‘ಕಲ್ಲಡ್ಕದ ಭಯೋತ್ಪಾದಕ ಎಂದರೆ ಯಾರು? ಹಾಲಿ ಶಾಸಕರಾ, ಮಾಜಿ ಶಾಸಕರಾ ಎಂದು ಸ್ಪಷ್ಟಪಡಿಸಬೇಕು. ಅದರ ಹೊರತಾಗಿ ಇಂಥ ಹೇಳಿಕೆ ನೀಡುವುದು ಸರಿಯಲ್ಲ’ ಎಂದು ಏರಿದ ಧ್ವನಿಯಲ್ಲಿ ಆಗ್ರಹಿಸಿದರು.

ಮಾತು ಮುಂದುವರೆಸಿದ ಹರಿಪ್ರಸಾದ್, ‘ಕುಂಬಳಕಾಯಿ ಕಳ್ಳ ಎಂದರೆ ಬಿಜೆಪಿ ಸದಸ್ಯರು ಏಕೆ ಹೆಗಲು ಮುಟ್ಟಿಕೊಂಡು ನೋಡುತ್ತಾರೆ? ಪೊಲೀಸರ ವರ್ಗಾವಣೆಯಲ್ಲಿ ಭಾಗಿಯಾಗಿರುವ ಭಯೋತ್ಪಾದಕರ ಬಗ್ಗೆ ಮಾತನಾಡುತ್ತಿದ್ದೇನೆ. ಅದೇ ವಿಚಾರವನ್ನು ನೂರು ಬಾರಿ ಬೇಕಾದರೂ ಹೇಳಲು ಸಿದ್ಧನಿದ್ದೇನೆ’ ಎಂದು ಎದೆ ತಟ್ಟಿಕೊಂಡು ಮತ್ತಷ್ಟು ಜೋರಾಗಿ ಹೇಳಿದರು.

ಈ ವೇಳೆ ‘ಪಾಯಿಂಟ್ ಆಫ್ ಆರ್ಡರ್’ ಎತ್ತಿದ ಬಿಜೆಪಿಯ ಆಯನೂರು ಮಂಜುನಾಥ್, ‘ಪೊಲೀಸರ ಭ್ರಷ್ಟಾಚಾರದ ಬಗ್ಗೆ ಮಾತ್ರ ಚರ್ಚೆ ನಡೆಸಬೇಕು. ಅದರ ಹೊರತು ಬೇರೆ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ’ ಎಂದರು. ಅದಕ್ಕೆ ದನಿಗೂಡಿಸಿದ ಸಭಾಪತಿ ಬಸವರಾಜ ಹೊರಟ್ಟಿ, ಪೊಲೀಸ್ ಅಧಿಕಾರಿಗಳ ಭ್ರಷ್ಟಾಚಾರದ ಕುರಿತು ಚರ್ಚೆ ನಡೆಸುವಂತೆ ಸೂಚಿಸಿದರು.

‘ಪೊಲೀಸ್ ಇಲಾಖೆಯ ಹೆಚ್ಚುವರಿ ಮಹಾನಿರ್ದೇಶಕರೊಬ್ಬರು ಕೇಶವ ಕೃಪಾಗೆ ಭೇಟಿ ನೀಡಿ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ. ವರ್ಗಾವಣೆಯ ಹಣ ಕೇಶವಾಕೃಪಾಗೆ ತಲುಪುತ್ತಿದೆ’ ಎಂದು ಹರಿಪ್ರಸಾದ್, ಮತ್ತೆ ಆರೋಪಿಸಿದರು. ‘ಸಂಘ ಪರಿವಾರದ ಹೆಸರು ಹೇಳುವ ಅಗತ್ಯವಿಲ್ಲ. ಕಾಂಗ್ರೆಸ್ ಸದಸ್ಯರಿಗೆ ಆ ಯೋಗ್ಯತೆ ಇಲ್ಲ’ ಎಂದು ಕೋಟ ಶ್ರೀನಿವಾಸ ಪೂಜಾರಿ ಹೇಳಿದರು. ಮತ್ತೆ ಗದ್ದಲ ಉಂಟಾಯಿತು.

‘ಪೊಲೀಸ್ ವ್ಯವಸ್ಥೆ ಸಂಘ ಪರಿವಾರದ ಪರ ಕೆಲಸ ಮಾಡುತ್ತಿದೆ. ಶಿವಮೊಗ್ಗದಲ್ಲಿ ನಿಷೇದಾಜ್ಞೆ ಜಾರಿಯಲ್ಲಿದ್ದರೂ ಜನ ಗುಂಪುಗೂಡುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನುಬಾಹಿರ ಚಟುವಟಿಕೆ ನಡೆಯುತ್ತಿದೆ. ಆದರೂ ಪೊಲೀಸರು ಯಾವುದೇ ಕ್ರಮಕ್ಕೆ ಮುಂದಾಗುತ್ತಿಲ್ಲ’ ಎಂದು ಅವರು ದೂರಿ ದರು.

ಜೆಡಿಎಸ್‌ನ ಮರಿತಿಬ್ಬೇಗೌಡ, ‘ಶಿಕ್ಷಕರಿಗೆ ಕೌನ್ಸೆಲಿಂಗ್ ನಡೆಸುವ ಮಾದರಿಯಲ್ಲಿ ಪೊಲೀಸ್ ಇಲಾಖೆ ಸಿಬ್ಬಂದಿ ವರ್ಗಾವಣೆಗೂ ಕೌನ್ಸೆಲಿಂಗ್ ಪದ್ಧತಿ ಜಾರಿ ಮಾಡಬೇಕು’ ಎಂದು ಸಲಹೆ ನೀಡಿದರು.

ಕಾಂಗ್ರೆಸ್‌ನ ಆರ್.ಬಿ. ತಿಮ್ಮಾಪುರ, ಪಿ.ಆರ್. ರಮೇಶ್, ನಸೀರ್ ಅಹ್ಮದ್, ಪ್ರಕಾಶ ರಾಥೋಡ್, ಯು.ಬಿ. ವೆಂಕಟೇಶ್, ಜೆಡಿಎಸ್‌ನ ಎಚ್.ಎಂ. ರಮೇಶ ಗೌಡ ಕೂಡಾ ಮಾತನಾಡಿದರು.

ಕೆಂಪಯ್ಯ ಕೈಗೆ ಪೊಲೀಸ್ ಇಲಾಖೆ ಕೊಟ್ಟಿದ್ದೇಕೆ?

‘ನಿಮ್ಮ (ಕಾಂಗ್ರೆಸ್) ಅವಧಿಯ ಕೆ.ಜೆ. ಜಾರ್ಜ್, ಜಿ. ಪರಮೇಶ್ವರ ಅತ್ಯುತ್ತಮ ಗೃಹ ಸಚಿವರು. ಆದರೆ, ನಿವೃತ್ತ ಅಧಿಕಾರಿ ಕೆಂಪಯ್ಯ ಅವರನ್ನು ನೇಮಿಸಿ ಈ ಸಚಿವರನ್ನು ಡಮ್ಮಿ ಮಾಡಿದಿರಿ. ನಿವೃತ್ತ ಅಧಿಕಾರಿ ಕೈಗೆ ಇಡೀ ಪೊಲೀಸ್ ಇಲಾಖೆಯನ್ನು ಕೊಟ್ಟಿದ್ದೀರಲ್ಲ. ಇತಿಹಾಸಲ್ಲಿಯೇ ಮೊದಲ ಬಾರಿ ಪೊಲೀಸರೇ ಪ್ರತಿಭಟನೆಗಿಳಿಯುವಂತಾಗಿತ್ತು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.

ಪೊಲೀಸರು ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆಂಬ ವಿರೋಧ ಪಕ್ಷದ ಆರೋಪಗಳನ್ನು ತಳ್ಳಿಹಾಕಿದ ಅವರು, ‘ಇಂಥ ಆರೋಪಗಳಲ್ಲಿ ಸತ್ಯಾಂಶಗಳಿಲ್ಲ. ಸರ್ಕಾರ ಬದಲಾದಾಗ ಇಲಾಖೆ ಬದಲಾಗುವುದಿಲ್ಲ. ಸಚಿವರು ಮಾತ್ರ ಬದಲಾಗುತ್ತಾರೆ. ನನ್ನ ಇಲಾಖೆಯಲ್ಲಿಯೂ ಹಾಗೆಯೇ ಆಗಿರುವುದು. ಅದೇ ಟೋಪಿ, ಲಾಠಿ’ ಎಂದು ಅವರು ಹೇಳಿದರು.

‘ಪೊಲೀಸರ ವರ್ಗಾವಣೆ ವಿಚಾರದಲ್ಲಿ ಎರಡು ವರ್ಷವಿದ್ದ ನಿಯಮವನ್ನು ಒಂದು ವರ್ಷಕ್ಕೆ ಯಾಕೆ ಮಾಡಿದಿರಿ? ನಿಮ್ಮ ಅವಧಿಯಲ್ಲಿ ಯಾಕೆ ಹೆಚ್ಚು ಮಾಡಲಿಲ್ಲ. ಇಂಥ ಸ್ಥಿತಿಗೆ ನೀವೆ ಹೊಣೆ’ ಎಂದರು.

‘ಪತ್ರಿಕಾ ಸ್ವಾತಂತ್ರ್ಯ ಹರಣ ಮಾಡಿದ್ದೀರಿ, ನೀವು (ಕಾಂಗ್ರೆಸ್) ಪತ್ರಿಕಾ ಕಚೇರಿಗೆ ಬೀಗ ಹಾಕಿದ್ದಿರಲ್ಲ’ ಎಂದು ಹಳೆಯ ಪ್ರಕರಣವನ್ನು ಗೃಹ ಸಚಿವರು ಉಲ್ಲೇಖಿಸಿದಾಗ ಆಕ್ಷೇಪ ವ್ಯಕ್ತಪಡಿಸಿದ ಹರಿಪ್ರಸಾದ್, ‘ನೀವು ಎಷ್ಟು ಜನ ಪತ್ರಕರ್ತರನ್ನು ಜೈಲಿಗೆ ಹಾಕಿದ್ದೀರಿ ಎಂದು ಗೊತ್ತಿದೆ. ನಿಮ್ಮಂತೆ ಪತ್ರಿಕೆ ಮಾಧ್ಯಮಗಳನ್ನು ನಾವು ಖರೀದಿ ಮಾಡಿಲ್ಲ. ಪತ್ರಿಕೆಗಳ ಮೇಲೆ ಇಡಿ, ಐಟಿ ದಾಳಿ ಮಾಡಿಸಲಿಲ್ಲ’ ಎಂದರು.

ಸುದ್ದಿ 2 ನಿಮಿಷ

ಬಿಜೆಪಿಯಿಂದ ಆರ್ಥಿಕ ಜಿಹಾದ್ ಪ್ರಿಯಾಂಕ್ ಖರ್ಗೆ ಕಿಡಿ

ಬೆಂಗಳೂರು: ‘ಸಾಮಾನ್ಯ ಜನರ ಮೇಲೆ ಬಿಜೆಪಿ ಜಿಹಾದ್ ಮಾಡುತ್ತಿದೆ’ ಎಂದು ಬಿಜೆಪಿ ವಿರುದ್ಧ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಬಿಜೆಪಿಯವರ ಪ್ರಕಾರ ಜಿಹಾದ್ ಎಂದರೆ ಯುದ್ಧ, ಭಯೋತ್ಪಾದನೆ. ಬಿಜೆಪಿಯವರ ಆರ್ಥಿಕ ಜಿಹಾದ್ ಅಲ್ಪಸಂಖ್ಯಾತರಿಗೆ ಮಾತ್ರವಲ್ಲ, ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು, ಪರಿಶಿಷ್ಟರು, ಹಿಂದುಳಿದ ವರ್ಗದವರು, ಆರ್ಥಿಕವಾಗಿ ಹಿಂದುಳಿದವರು, ಮಹಿಳೆಯರಿಗೆ ಮಾಡುತ್ತಿದೆ’ ಎಂದರು.



‘ಬಿಜೆಪಿ ನಾಯಕರು ಹಲಾಲ್ ಕಟ್ ಮಾಂಸ ಮಾರಾಟ ನಿರ್ಬಂಧದ ವಿಚಾರ ತಂದಿದ್ದಾರೆ. ಇದೆಲ್ಲದರ ಬಗ್ಗೆ ಮಾತನಾಡುತ್ತಿರುವ ಬಿಜೆಪಿಯವರು ಬಜೆಟ್ ಕಟ್ ಬಗ್ಗೆ ಯಾಕೆ ಮಾತನಾಡುತ್ತಿಲ್ಲ’ ಎಂದು ಪ್ರಶ್ನಿಸಿದರು.

‘ಪರಿಶಿಷ್ಟರು ಉದ್ಯಮಿಗಳು ಆಗಬಾರದೇ? ಇದು ಪರಿಶಿಷ್ಟರ ಮೇಲೆ ನಡೆಸುತ್ತಿರುವ ಆರ್ಥಿಕ ಜಿಹಾದ್ ಅಲ್ಲವೇ? ₹ 10 ಲಕ್ಷದ ನೆರವನ್ನು ಬಿಜೆಪಿ ಸರ್ಕಾರ ₹ 50 ಸಾವಿರಕ್ಕೆ ಇಳಿಸಿದೆ. ಸಲಹೆ ಕೊಟ್ಟಿದ್ದ ಕಾರಜೋಳ ಸಾಹೇಬರು ಈಗೇನು ಮಾಡುತ್ತಿದ್ದಾರೆ? ಬಿಜೆಪಿ ಬಂದ ನಂತರ ಪರಿಶಿಷ್ಟರ ಅನುದಾನ ಕಡಿತ ಆಗಿದ್ದು ಯಾಕೆ’ ಎಂದೂ ಖರ್ಗೆ ಪ್ರಶ್ನಿಸಿದರು.

ಮನೆ ಬಾಗಿಲಿಗೆ ಪಿಂಚಣಿ

ಬೆಂಗಳೂರು: ‘ಹಲೋ ಕಂದಾಯ ಸಚಿವರೇ ಎಂದು ಸಹಾಯವಾಣಿಗೆ ಕರೆ ಮಾಡಿದರೆ 72 ಗಂಟೆಗಳಲ್ಲಿ ಮನೆ ಬಾಗಿಲಿಗೆ ಪಿಂಚಣಿ ಮಂಜೂರಾತಿ ಪತ್ರ ತಲುಪಿಸುವ ವಿನೂತನ ಯೋಜನೆ ಜಾರಿಗೊಳಿಸಲಾಗುತ್ತಿದೆ’ ಎಂದು ಕಂದಾಯ ಸಚಿವ ಆರ್. ಅಶೋಕ್ ಘೋಷಿಸಿದ್ದಾರೆ.

ವಿಧಾನ ಪರಿಷತ್‌ನಲ್ಲಿ ಬುಧವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಪಿ.ಎಂ. ಮುನಿರಾಜುಗೌಡ ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ‘ರಾಜ್ಯದಲ್ಲಿ ವೃದ್ಧಾಪ್ಯ ವೇತನ, ವಿಧವಾ ವೇತನ ಸೇರಿದಂತೆ ವಿವಿಧ ಮಾಸಾಶನ ಯೋಜನೆಗಳು ಸಕಾಲಕ್ಕೆ ತಲುಪುತ್ತಿಲ್ಲ ಎನ್ನುವ ದೂರುಗಳಿವೆ. ಈ ವ್ಯವಸ್ಥೆಯನ್ನು ಸುಧಾರಿಸಲು ಈ ಕ್ರಮಕೈಗೊಳ್ಳಲಾಗುತ್ತಿದೆ’ ಎಂದು ವಿವರಿಸಿದರು.

‘ಈ ಯೋಜನೆಗಾಗಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗುತ್ತಿದೆ. ಇದಕ್ಕಾಗಿ ಪ್ರತ್ಯೇಕ ನಿಯಂತ್ರಣ ಕೊಠಡಿಯನ್ನು ಆರಂಭಿಸಲಾಗುವುದು. ಕರ್ನಾಟಕದ ಯಾವುದೇ ಮೂಲೆಯಿಂದ ಕರೆ ಮಾಡಿದರೂ ಅವರಿಗೆ 72 ಗಂಟೆಗಳಲ್ಲಿ ಪಿಂಚಣಿ ಸೌಲಭ್ಯ ದೊರೆಯಲಿದೆ’ ಎಂದು ವಿವರಿಸಿದರು.

‘ರಾಜ್ಯದಲ್ಲಿ ಆರಂಭಿಸಲಾದ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ದೊರೆತಿದೆ. ಅಲ್ಲಿ ದೊರೆತ ಅನುಭವದಿಂದ ಮನೆ ಬಾಗಿಲಿಗೆ ದಾಖಲೆಗಳನ್ನು ತಲುಪಿಸುವ ಯೋಜನೆ ರೂಪಿಸಲಾಗಿತ್ತು. ಈಗ ಮನೆ ಬಾಗಿಲಿಗೆ ಪಿಂಚಣಿ ಸೌಲಭ್ಯವನ್ನು ಮನೆ ಬಾಗಿಲಿಗೆ ತಲುಪಿಸಲು ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.



ಕಲಾಪ ವೀಕ್ಷಣೆ ವಿಧಾನಸೌಧದಲ್ಲಿ ವಿಧಾನ ಪರಿಷತ್ ಅಧಿವೇಶನದ ಕಲಾಪವನ್ನು ವೀಕ್ಷಿಸಿದ ವಿವಿಧ ಶಾಲಾ ವಿದ್ಯಾರ್ಥಿಗಳು –ಪ್ರಜಾವಾಣಿ ಚಿತ್ರ

‘ಸಾವಯವ ಸಿರಿ ಸಂಘ ಪರಿವಾರದ ಯೋಜನೆ’

ಬೆಂಗಳೂರು: 'ಸಾವಯವ ಸಿರಿ ಯೋಜನೆಯನ್ನು ಸಂಘ ಪರಿವಾರ ಮತ್ತು ಬಿಜೆಪಿ ಕಾರ್ಯಕರ್ತರ ಅನುಕೂಲಕ್ಕೆ ತಕ್ಕಂತೆ ರೂಪಿಸಲಾಗಿದೆ’ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ ಕೆ ರಾಠೋಡ ಆರೋಪಿಸಿದರು.

‘ಪ್ರಜಾವಾಣಿ’ಯಲ್ಲಿ ‘ಸಾವಯವ ಸಿರಿ ಕಡೆ ಗಳಿಗೆ ತರಾತುರಿ' ಎನ್ನುವ ಶೀರ್ಷಿಕೆ ಅಡಿಯಲ್ಲಿ ಪ್ರಕಟವಾದ ವಿಶೇಷ ವರದಿಯನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿ ಮಾತನಾಡಿದ ಅವರು, ‘ಈ ಯೋಜನೆ ಅಡಿಯಲ್ಲಿ ಮೂರು ವರ್ಷಗಳ ಫಲಾನುಭವಿಗಳನ್ನು ಆರ್ಥಿಕ ವರ್ಷದ ಕೊನೆಯ ಘಟ್ಟದಲ್ಲಿ ಏಕಾಏಕಿ ಆಯ್ಕೆ ಮಾಡಲು ಕೃಷಿ ಇಲಾಖೆ ಮುಂದಾಗಿದೆ’ ಎಂದು ದೂರಿದರು.

‘₹500 ಕೋಟಿ ಅನುದಾನವನ್ನು ಆರ್ಥಿಕ ವರ್ಷದ ಆರಂಭದಲ್ಲೇ ಘೋಷಿಸಿದ್ದರೂ ಇಲ್ಲಿಯವರೆಗೂ ಯಾವುದೇ ಕ್ರಮಕೈಗೊಳ್ಳದೆಯೇ ಏಕಾಏಕಿ ಮೈಕೊಡವಿ ನಿಂತಿರುವುದು ಏಕೆ’ ಎಂದು ಪ್ರಶ್ನಿಸಿದರು.

‘ಸಾವಯವ ಸಿರಿ ಅನುದಾನಕ್ಕಾಗಿ ಅರ್ಜಿ ಸಲ್ಲಿಸಲು ನಿಗದಿ ಮಾಡಿರುವ ಅರ್ಹತೆಯ ಮಾನದಂಡಗಳು ಸಂದೇಹಕ್ಕೀಡು ಮಾಡಿವೆ. ಅರ್ಜಿ ಸಲ್ಲಿಸುವ ಸ್ವಯಂ ಸೇವಾ ಸಂಸ್ಥೆಗಳು ಕನಿಷ್ಠ ಹತ್ತು ಹೆಕ್ಟೇರ್ ಕೃಷಿ ಯೋಗ್ಯ ಜಮೀನು ಹೊಂದಿರಬೇಕು ಮತ್ತು ಸಂಸ್ಥೆ ಗೋಶಾಲೆ ನಿರ್ವಹಿಸುತ್ತಿರಬೇಕು ಎನ್ನುವ ಷರತ್ತುಗಳನ್ನು ವಿಧಿಸಲಾಗಿದೆ. ಆಡಳಿತ ಪಕ್ಷದ ಕಾರ್ಯಕರ್ತರು ಮತ್ತು ಸಂಘ ಪರಿವಾರಕ್ಕೆ ಸೇರಿದ ಸ್ವಯಂ ಸೇವಾ ಸಂಸ್ಥೆಗಳಿಗೆ ಈ ಯೋಜನೆಯ ಪ್ರಯೋಜನ ದೊರೆಯಬೇಕು ಎನ್ನುವ ಉದ್ದೇಶದಿಂದಲೇ ಈ ಷರತ್ತುಗಳನ್ನು ಹಾಕಲಾಗಿದೆ’ ಎಂದು ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಕಾನೂನು ಸಚಿವ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಮತ್ತು ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ, ‘ಆರೋಪಕ್ಕೆ ದಾಖಲೆ ನೀಡಿ. ಯಾವುದೇ ಆಧಾರಗಳು ಇಲ್ಲದೆಯೇ ಆರೋಪ ಮಾಡಿದರೆ ಹೇಗೆ? ದಾಖಲೆಗಳನ್ನು ನೀಡಿದರೆ ನಾವು ಪರಿಶೀಲಿಸಿ ಉತ್ತರ ಕೊಡುತ್ತೇವೆ’ ಎಂದರು.

ಒಟ್ಟು ಮೀಸಲಾತಿ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸುವುದು ಅಗತ್ಯ: ಬೊಮ್ಮಾಯಿ

‘ಎಸ್‌.ಟಿ. ಮೀಸಲು ಹೆಚ್ಚಳ: ಶೀಘ್ರ ಇತ್ಯರ್ಥಕ್ಕೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಪಂಗಡಗಳ (ಎಸ್.ಟಿ) ಮೀಸಲಾತಿ ಪ್ರಮಾಣವನ್ನು ಶೇಕಡ 7.5ಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಕುರಿತು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ನೇತೃತ್ವದ ಸಮಿತಿಯಿಂದ ಮಧ್ಯಂತರ ವರದಿ ಪಡೆದು ತ್ವರಿತವಾಗಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಬುಧವಾರ ವಿಧಾನಸಭೆಯ ಕಲಾಪ ಆರಂಭವಾಗುತ್ತಿದ್ದಂತೆ ಧರಣಿ ಆರಂಭಿಸಿದ ಕಾಂಗ್ರೆಸ್‌ನ ಟಿ.ರಘುಮೂರ್ತಿ, ಭೀಮಾ ನಾಯ್ಕ್, ಬಸನಗೌಡ ದದ್ದಲ್ ಸೇರಿದಂತೆ ಹಲವು ಶಾಸಕರು, ‘ಎಸ್.ಟಿ. ಮೀಸಲಾತಿ ಹೆಚ್ಚಳದ ಕುರಿತು ತಕ್ಷಣ ನಿರ್ಧಾರ ಪ್ರಕಟಿಸಬೇಕು’ ಎಂದು ಆಗ್ರಹಿಸಿದರು.

ಪರಿಶಿಷ್ಟ ಪಂಗಡಗಳನ್ನು ಮೊದಲು ಹಿಂದುಳಿದ ಬುಡಕಟ್ಟುಗಳು (ಬಿ.ಟಿ) ಎಂಬ ಪ್ರವರ್ಗದಲ್ಲಿ ಇಡಲಾಗಿತ್ತು. ಆಗ ಬಿ.ಟಿ ಪ್ರವರ್ಗಕ್ಕೆ ಶೇ 5ರಷ್ಟು ಮೀಸಲಾತಿ ಇತ್ತು. ಈಗ ಪರಿಶಿಷ್ಟ ಪಂಗಡಗಳಿಗೆ ಶೇಕಡ 3ರಷ್ಟು ಮೀಸಲಾತಿ ಇದೆ. ಒಟ್ಟು ಮೀಸಲಾತಿ ಪ್ರಮಾಣ ಶೇ 50 ಮೀರಬಾರದು ಎಂದು ಸುಪ್ರೀಂ ಕೋರ್ಟ್ ಇಂದಿರಾ ಸಹಾನಿ ಪ್ರಕರಣದಲ್ಲಿನ ನೀಡಿರುವ ತೀರ್ಪು ಇದೆ. ಹೀಗಾಗಿ ಸರ್ಕಾರ ಎಚ್ಚರಿಕೆಯ ಹೆಜ್ಜೆ ಇಡಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

‘ಮೀಸಲಾತಿ ಪಟ್ಟಿಗೆ ಸೇರ್ಪಡೆ, ಪ್ರವರ್ಗಗಳ ಬದಲಾವಣೆ, ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದಂತೆ ವಿವಿಧ ಸಮುದಾಯಗಳಿಂದ ಬೇಡಿಕೆಗಳಿವೆ. ಒಟ್ಟು ಮೀಸಲಾತಿಯ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸುವ ಅಗತ್ಯವಿದೆ ಎಂಬ ನಿಲುವನ್ನು ರಾಜ್ಯ ಸರ್ಕಾರ ಹೊಂದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಅವರ ಒಟ್ಟು ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿ ಕಲ್ಪಿಸುವುದಕ್ಕೆ ನಾವು ಬದ್ಧತೆ ಹೊಂದಿದ್ದೇವೆ’ ಎಂದರು.

ಸಂವಿಧಾನದಲ್ಲಿನ ಅವಕಾಶಗಳನ್ನೇ ಬಳಸಿಕೊಂಡು ಮೀಸಲಾತಿ ಹೆಚ್ಚಿಸಲಾಗುವುದು. ಇದಕ್ಕಾಗಿ ಹತ್ತು ದಿನಗಳೊಳಗೆ ಸಮಿತಿಯಿಂದ ವರದಿ ಪಡೆಯಲು ಪ್ರಯತ್ನಿಸಲಾಗುತ್ತಿದೆ. ಅಡ್ವೊಕೇಟ್ ಜನರಲ್ ಅವರಿಂದಲೂ ಸಲಹೆ ಕೇಳಲಾಗಿದೆ. ಪರಿಶಿಷ್ಟ ಪಂಗಡಗಳ ಜನರಿಗೆ ಒಳ್ಳೆಯ ಸುದ್ದಿ ಕೊಡಲಾಗುವುದು ಎಂದು ತಿಳಿಸಿದರು.

‘ಹೆಚ್ಚಳಕ್ಕೆ ಅವಕಾಶವಿದೆ’: ‘ವಿಶೇಷ ಸಂದರ್ಭಗಳಲ್ಲಿ ಮೀಸಲಾತಿಯ ಪ್ರಮಾಣವನ್ನು ಶೇ 50ಕ್ಕಿಂತ ಹೆಚ್ಚಿಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕೆಲವು ರಾಜ್ಯಗಳು ಈಗಾಗಲೇ ಮೀಸಲಾತಿ ಹೆಚ್ಚಿಸಿವೆ. ಕೇಂದ್ರ ಸರ್ಕಾರ ಆರ್ಥಿಕವಾಗಿ ಹಿಂದುಳಿದವರಿಗೆ ಶೇ 10ರಷ್ಟು ಮೀಸಲಾತಿ ನೀಡಿರುವುದರಿಂದ ಎಲ್ಲ ರಾಜ್ಯಗಳಲ್ಲೂ ಮೀಸಲಾತಿ ಪ್ರಮಾಣ ಶೇ 50 ಮೀರಿದೆ. ಈಗ ರಾಜ್ಯದಲ್ಲೂ ಮೀಸಲಾತಿ ಹೆಚ್ಚಳಕ್ಕೆ ಅವಕಾಶವಿದೆ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಪ್ರತಿಪಾದಿಸಿದರು.

ಧರಣಿ ಕೈಬಿಡಲು ಮನವಿ

ಎಸ್.ಟಿ ಮೀಸಲಾತಿ ಹೆಚ್ಚಳಕ್ಕೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ 49 ದಿನಗಳಿಂದ ಧರಣಿ ನಡೆಸುತ್ತಿರುವ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದಪುರಿ ಸ್ವಾಮೀಜಿ ಅವರನ್ನು ಮನವೊಲಿಸಿ, ಧರಣಿ ಅಂತ್ಯಗೊಳಿಸುವಂತೆ ಶಾಸಕರು ಆಗ್ರಹಿಸಿದರು. ಸ್ವಾಮೀಜಿಯವರ ಮನವೊಲಿಸುವಂತೆ ಸಿದ್ದರಾಮಯ್ಯ ಕೂಡ ಒತ್ತಾಯಿಸಿದರು.

‘ಧರಣಿ ಕೈಬಿಡುವಂತೆ ಸ್ವಾಮೀಜಿಯವರಲ್ಲಿ ಮನವಿ ಮಾಡುತ್ತೇನೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು. ‘ಧರಣಿ ಕೈಬಿಡುವಂತೆ ಸ್ವಾಮೀಜಿಯವರಲ್ಲಿ ಸದನದಿಂದಲೇ ಮನವಿ ಮಾಡುತ್ತೇವೆ’ ಎಂದು ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಪರಿಷತ್‌ಗೆ ಅವಮಾನ, ಅಗೌರವ: ಬಿ.ಕೆ. ಹರಿಪ್ರಸಾದ್

ಸಭಾಧ್ಯಕ್ಷ ಕಾಗೇರಿ ಭಾಷಣಕ್ಕೆ ಕಾಂಗ್ರೆಸ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣಾ ವ್ಯವಸ್ಥೆಯಲ್ಲಿ ಸುಧಾರಣೆಗಳ ಅಗತ್ಯತೆ ಕುರಿತು ವಿಧಾನ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಮಾಡಿರುವ ಭಾಷಣವು, ವಿಧಾನ ಪರಿಷತ್‌ಗೆ ಅವಮಾನ ಮತ್ತು ಅಗೌರವ ತಂದಿದೆ’ ಎಂದು ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಸರ್ಕಾರದ ಮುಖ್ಯ ಸಚೇತಕ ವೈ.ಎ. ನಾರಾಯಣಸ್ವಾಮಿ ಅವರು ಭಾಷಣದ ಪ್ರತಿಗಳನ್ನು ವಿತರಿಸಿದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಅವರು, ‘ನಿಯಮ ಮೀರಿ ವಿಧಾನಸಭಾ ಅಧ್ಯಕ್ಷರು ಈ ಭಾಷಣದ ಪ್ರತಿಗಳನ್ನು ಈ ಸದನಕ್ಕೆ ಕಳುಹಿಸಿದ್ದಾರೆ’ ಎಂದು ಕಿಡಿಕಾರಿದರು.

‘ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿಧಾನ ಪರಿಷತ್‌ನ 25 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕೋಟ್ಯಂತರ ರೂಪಾಯಿ ವೆಚ್ಚ ಮಾಡಲಾಗಿದೆ. ಈ ಚುನಾವಣೆಗೆ ಮಾಡಿರುವ ವೆಚ್ಚದಲ್ಲಿ ಒಂದು ಚಿಕ್ಕ ರಾಜ್ಯವನ್ನು ಅಭಿವೃದ್ಧಿಪಡಿಸಬಹುದು ಎಂದು ಸ್ಪೀಕರ್ ಅವರು ಭಾಷಣದಲ್ಲಿ ಉಲ್ಲೇಖಿಸಿದ್ದಾರೆ. ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ಪುರಸಭೆ ಮತ್ತು ಪಾಲಿಕೆ ಚುನಾಯಿತ ಪ್ರತಿನಿಧಿಗಳೇ ಇಲ್ಲಿ ಮತದಾರರಾಗಿದ್ದರು. ಸ್ಪೀಕರ್ ಅವರು ವಿಧಾನ ಪರಿಷತ್ ಸದಸ್ಯರಿಗೂ ಮತ್ತು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೂ ಅವಮಾನ ಮಾಡಿದ್ದಾರೆ’ ಎಂದು ದೂರಿದರು.

‘ಸ್ಪೀಕರ್ ಅವರ ಭಾಷಣದಲ್ಲಿ ಅಂಶಗಳನ್ನು ಗಮನಿಸಿದರೆ ನಾವೆಲ್ಲರೂ ಭ್ರಷ್ಟಾಚಾರದಲ್ಲಿ ಮುಳುಗಿದ್ದೇವೆಯೇ? ಭಾಷಣದ ಪ್ರತಿಗಳ ಮುಖಪುಟದಲ್ಲಿರುವ ರಾಷ್ಟ್ರಧ್ವಜದ ಮೇಲೆಯೇ ವಿದ್ಯುನ್ಮಾನ ಯಂತ್ರದ ಚಿತ್ರ ಪ್ರಕಟಿಸಿ ಅವಮಾನ ಮಾಡಲಾಗಿದೆ. ಈ ಮೂಲಕ ಧ್ವಜ ಸಂಹಿತೆಯನ್ನು ಉಲ್ಲಂಘಿಸಲಾಗಿದೆ. ಸದನಕ್ಕೆ ಅಗೌರವ ತಂದಿರುವ ಈ ಪ್ರತಿಗಳನ್ನು ವಾಪಸ್ ಪಡೆದುಕೊಳ್ಳಿ’ ಎಂದು ಅವರು ಒತ್ತಾಯಿಸಿದರು.

ಸಚಿವ ಕೋಟ ಶ್ರೀನಿವಾಸ ಪೂಜಾರಿ, ‘ಚುನಾವಣೆ ವ್ಯವಸ್ಥೆಯಲ್ಲಿ ಸುಧಾರಣೆಗಳಾಗಬೇಕು ಎನ್ನುವ ಉದ್ದೇಶದಿಂದ ಸ್ಪೀಕರ್ ಅವರು ತಮ್ಮ ಭಾಷಣದ ಸಂದೇಶಗಳನ್ನು ಮುಖ್ಯ ಸಚೇತಕರ ಮೂಲಕ ಕಳುಹಿಸಿದ್ದಾರೆ ಅಷ್ಟೇ. ಅನಗತ್ಯ ಗೊಂದಲ ಸೃಷ್ಟಿಸುವುದು ಬೇಡ’ ಎಂದರು.

ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ‘ಸದನದ ಕಾರ್ಯಸೂಚಿಯಲ್ಲಿ ಈ ವಿಷಯ ಇಲ್ಲ. ಹೀಗಾಗಿ, ಸದನದಲ್ಲಿ ಈ ಬಗ್ಗೆ ವಿಷಯ ಪ್ರಸ್ತಾಪಿಸುವ ಅಗತ್ಯ ಇಲ್ಲ’ ಎಂದು ಚರ್ಚೆಗೆ ತೆರೆ ಎಳೆದರು.



ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ನಡೆದಿಲ್ಲ: ಆರಗ

ಬೆಂಗಳೂರು: ‘ಪಿಎಸ್‌ಐಗಳ ನೇಮಕಾತಿಯಲ್ಲಿ ಯಾವುದೇ ರೀತಿಯ ಅಕ್ರಮ ನಡೆದಿಲ್ಲ. ಹೈದರಾಬಾದ್ ಕರ್ನಾಟಕ ಮೀಸಲಾತಿಗೆ ಸಂಬಂಧಿಸಿದಂತೆ ಪರಿಶೀಲನೆ ನಡೆಸಲು ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಬುಧವಾರ ಸ್ಪಷ್ಟಪಡಿಸಿದರು.

ವಿಧಾನ ಪರಿಷತ್‌ನಲ್ಲಿ ಶೂನ್ಯ ವೇಳೆಯಲ್ಲಿ ಅರವಿಂದ ಕುಮಾರ್ ಅರಳಿ ಅವರು ‘ಪ್ರಜಾವಾಣಿ’ಯಲ್ಲಿ ಈ ಬಗ್ಗೆ ಪ್ರಕಟವಾದ ಅಂಶಗಳನ್ನು ಉಲ್ಲೇಖಿಸಿ, ‘ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ. ಒಂದೇ ಜಿಲ್ಲೆಯ ಒಂದೇ ಕೇಂದ್ರದವರು ಆಯ್ಕೆಯಾಗಿದ್ದಾರೆ’ ಎಂದು ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಯಾವ ಕೇಂದ್ರದಲ್ಲಿ ಎಷ್ಟು ಜನ ಆಯ್ಕೆಯಾಗಿದ್ದಾರೆ ಎನ್ನುವ ಬಗ್ಗೆ ಸಮಗ್ರವಾದ ವಿವರ ನೀಡಲು ಸಿದ್ಧ. ಪರೀಕ್ಷೆಯಲ್ಲಿ ಬ್ಲ್ಯೂಟೂತ್ ಬಳಸಿ ಅಕ್ರಮ ನಡೆಸಲು ಯತ್ನಿಸುತ್ತಿದ್ದವರನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಲಾಗಿದೆ. ಬೆಳಗಾವಿ, ಕಲಬುರಗಿಯಲ್ಲಿ ಹೋಟೆಲ್ ಮೇಲೆ ದಾಳಿ ನಡೆಸಿ ಹತ್ತು ಮಂದಿಯನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

‘ಆದರೆ, ಪರೀಕ್ಷೆಯಲ್ಲಿ ಬ್ಲ್ಯೂಟೂತ್ ಬಳಕೆಯಾಗಿಲ್ಲ.ಕೇಂದ್ರದ ಸುತ್ತ ಎರಡು ಹಂತದ ಬಿಗಿ ಕಾವಲು ಇತ್ತು. ಹೀಗಾಗಿ, ಯಾವುದೇ ರೀತಿಯ ಅಕ್ರಮಗಳು ನಡೆಯಲು ಸಾಧ್ಯವಿಲ್ಲ. ಹೈದರಾಬಾದ್ ಕರ್ನಾಟಕ ಭಾಗಕ್ಕೆ ಮೀಸಲಾತಿ ಸಿಕ್ಕಿಲ್ಲ ಎಂದು ಆ ಭಾಗದ ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಈ ಬಗ್ಗೆ ಪರಿಶೀಲಿಸಲು ನೇಮಕಾತಿ ಪಟ್ಟಿಗೆ ತಡೆ ನೀಡಲಾಗಿದೆ’ ಎಂದರು.

2.96 ಲಕ್ಷ ಮನೆಗಳ ನಿರ್ಮಾಣ: ಸೋಮಣ್ಣ

ಬೆಂಗಳೂರು: ‘ರಾಜ್ಯದಲ್ಲಿ 2017-18ರಿಂದ ಇಲ್ಲಿಯವರೆಗೆ 2.96 ಲಕ್ಷ ಮನೆಗಳನ್ನು ನಿರ್ಮಿಸಲಾಗಿದ್ದು, 4 ಲಕ್ಷ ಮನೆಗಳ ನಿರ್ಮಾಣ ವಿವಿಧ ಹಂತದಲ್ಲಿವೆ’ ಎಂದು ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಮಂಜುನಾಥ್ ಭಂಡಾರಿ ಅವರ ಪ್ರಶ್ನೆಗೆ, ‘ಯೋಜನೆಗಳ ಸಹಾಯ ಧನ ಹೆಚ್ಚಿಸಲಾಗಿದೆ’ ಎಂದು ಉತ್ತರಿಸಿದರು.

‘ಸರ್ಕಾರ ಫಲಾನುಭವಿಗಳಿಗೆ 1.20 ಲಕ್ಷ ಸಹಾಯ ಧನ ನೀಡುತ್ತದೆ. ಬೆಂಗಳೂರಿನಲ್ಲಿ 3 ಲಕ್ಷ ಸಹಾಯ ಧನ , ಉಳಿದ ನಗರಗಳಲ್ಲಿ ಸಹಾಯ ಧನವನ್ನು 87 ಸಾವಿರದಿಂದ 2 ಲಕ್ಷಕ್ಕೆ ಹೆಚ್ಚಿಸಲಾಗಿದೆ’ ಎಂದು ಹೇಳಿದರು.

‘ಕೇಂದ್ರ ಸರ್ಕಾರ 1.50 ಲಕ್ಷ ಮನೆಗಳನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆ ಅಡಿ ಮಂಜೂರು ಮಾಡಿದೆ. ದಕ್ಷಿಣ ಕನ್ನಡ ಭಾಗದಲ್ಲಿ ಸರ್ಕಾರ ರೂಪಿಸುವ ಹೊಸ ಕಾನೂನುಗಳು ತಕ್ಷಣವೇ ಜಾರಿಗೆ ಬರುತ್ತವೆ. ಉಳಿದ ಜಿಲ್ಲೆಗಳಲ್ಲಿ ಇದೇ ರೀತಿ ಜಾರಿಯಾಗಬೇಕಾಗಿದೆ’ ಎಂದರು.

‘ಅವಧಿಪೂರ್ವ ಚುನಾವಣೆ: ಸದ್ಯ ಚಿಂತನೆ ಇಲ್ಲ’

ಪ್ರಜಾವಾಣಿ ವಾರ್ತೆ

ಮೈಸೂರು: ‘ರಾಜ್ಯದಲ್ಲಿ ಅವಧಿಗೂ ಮುಂಚಿತವಾಗಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯುವ ಸೂಚನೆಗಳಿಲ್ಲ’ ಎಂದು ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

‘ಅಮಿತ್ ಶಾ ಅವರು ರಾಜ್ಯಕ್ಕೆ ಬಂದ ನಂತರ ಅವಧಿಪೂರ್ವ ಚುನಾವಣೆ ಘೋಷಣೆಯಾಗುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅಂಥ ಬೆಳವಣಿಗೆಗಳು ಇದ್ದಲ್ಲಿ ತಿಳಿಸುವೆ’ ಎಂದು ಇಲ್ಲಿನ ಸುತ್ತೂರು ಮಠದಲ್ಲಿ ಬುಧವಾರ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಏಪ್ರಿಲ್ 1ರ ನಂತರ ಮೂರರಿಂದ ನಾಲ್ಕು ತಂಡಗಳಲ್ಲಿ ರಾಜ್ಯ ಪ್ರವಾಸ ಮಾಡುವೆ. ಬಸವರಾಜ ಬೊಮ್ಮಾಯಿ ನಾಯಕತ್ವದಲ್ಲೇ ಮುಂಬರುವ ಚುನಾವಣೆ ನಡೆಯುತ್ತದೆ. 140 ಸ್ಥಾನ ಗೆಲ್ಲುವುದು ನಿಶ್ಚಿತ’ ಎಂದು ಪ್ರತಿಪಾದಿಸಿದರು.

‘ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತರು ಬಿಜೆಪಿ ಪರವಾಗಿಯೇ ಇದ್ದಾರೆ. ಮುಂದೆಯೂ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುತ್ತೇವೆ’ ಎಂದರು.

‘ಬಿ.ವೈ.ವಿಜಯೇಂದ್ರ ಸಂಪುಟ ಸೇರ್ಪಡೆ ಬಗ್ಗೆ ನಾನು ಯಾರ ಜೊತೆಗೂ ಚರ್ಚೆ ಮಾಡಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಅವಧಿಗೆ ಮುನ್ನ ಚುನಾವಣೆ ಬರಬಹುದು: ಎಚ್‌.ಡಿ. ಕುಮಾರಸ್ವಾಮಿ

ರಾಮನಗರ: ‘ಸದ್ಯದ ಪರಿಸ್ಥಿತಿ ನೋಡಿದರೆ ಕರ್ನಾಟಕದಲ್ಲಿ ಅವಧಿಗೆ ಮುನ್ನವೇ ಚುನಾವಣೆ ಬರಬಹುದು. ಗುಜರಾತ್ ಜೊತೆಗೆ ಇಲ್ಲಿಯೂ ಚುನಾವಣೆ ನಡೆಯಬಹುದು. ಎಲ್ಲದಕ್ಕೂ ನಾವು ಸಿದ್ಧರಿದ್ದೇವೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ರಾಷ್ಟ್ರೀಯ ಪಕ್ಷಗಳು ಕರ್ನಾಟಕವನ್ನು ನಿರ್ಲಕ್ಷ್ಯ ಧೋರಣೆಯಿಂದ ಕಂಡಿವೆ. ಇದೇ ವಿಷಯ ಮುಂದಿಟ್ಟುಕೊಂಡು ಇದೇ 10ರಿಂದ ಜೆಡಿಎಸ್ ಜನರ ಮುಂದೆ ಹೋಗುತ್ತಿದೆ ಎಂದು ಬುಧವಾರ ಇಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ ಹೇಳಿದರು.

‘ರಾಷ್ಟ್ರೀಯ ಪಕ್ಷಗಳ ನಾಯಕರು ಕರ್ನಾಟಕಕ್ಕೆ ಕಾಲಿಡುವ ಮುನ್ನ ರಾಜ್ಯದ ನದಿ ನೀರಿನ ಸಮಸ್ಯೆ ಬಗೆಹರಿಸಿ ಕೊಂಡು ಬರಲಿ’ ಎಂದು ರಾಜ್ಯಕ್ಕೆ ರಾಹುಲ್ ಗಾಂಧಿ, ಅಮಿತ್ ಶಾ ಭೇಟಿ ಕುರಿತು ಪ್ರತಿಕ್ರಿಯಿಸಿದರು.

ವಿಧಾನಸಭೆಯಲ್ಲಿ ಎಚ್‌.ಡಿ. ಕುಮಾರಸ್ವಾಮಿ ಆರೋಪ

‘ಮಾಧ್ಯಮಗಳು ಟಿಆರ್‌ಪಿಗಾಗಿ ಸಮಾಜ ಒಡೆಯುತ್ತಿವೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಿಆರ್‌ಪಿ ಹೆಚ್ಚಿಸಿಕೊಳ್ಳಲು ಮಾಧ್ಯಮಗಳು ಸಮಾಜ ಒಡೆಯುವ ಕೆಲಸ ಮಾಡುತ್ತಿವೆ. ಸಾಮಾಜಿಕ ಸ್ವಾಸ್ಥ್ಯ ಉಂಟುಮಾಡುವ ಸೂಕ್ಷ್ಮ ವಿಷಯಗಳನ್ನು ವೈಭವೀಕರಿಸಿ ಪ್ರಸಾರ ಮಾಡುತ್ತಿವೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹರಿಹಾಯ್ದರು.

ವಿಧಾನಸಭೆಯಲ್ಲಿ ಬುಧವಾರ ಚುನಾವಣಾ ಸುಧಾರಣೆ ಕುರಿತ ಚರ್ಚೆಯ ವೇಳೆ ಮಾಧ್ಯಮಗಳ ವಿಷಯವನ್ನೂ ಪ್ರಸ್ತಾಪಿಸಿದ ಅವರು, ‘ಶಾಲಾ ಮಕ್ಕಳ ಸಮವಸ್ತ್ರದ ವಿಷಯದಲ್ಲಿ ಮಾಧ್ಯಮಗಳು ಪ್ರಸಾರ ಮಾಡಿದ ವರದಿಗಳಿಂದ ಸಮಾಜ ಕಲುಷಿತವಾಗಿದೆ. ಹಿಜಾಬ್, ಜಾತ್ರೆ ಅಂಗಡಿ ವಿಚಾರ ಮುಗಿಸಿ ಈಗ ಹಲಾಲ್ ಹಿಡಿದುಕೊಂಡಿದ್ದಾರೆ. ಚಾನೆಲ್‌ಗಳ ಪ್ರತಿನಿತ್ಯದ ಎಪಿಸೋಡುಗಳಿಗಾಗಿ ಈ ರಾಜ್ಯವನ್ನು ಎಲ್ಲಿಗೆ ಕೊಂಡೊಯ್ದು ನಿಲ್ಲಿಸುತ್ತೀರಿ’ ಎಂದು ಪ್ರಶ್ನಿಸಿದರು.

‘ದೂರು ಹೇಳುವವರು, ವಿಚಾರಣೆ ನಡೆಸುವವರು, ವಾದ ಮಂಡಿಸುವವರು, ತೀರ್ಪು ಕೊಡುವವರು ಎಲ್ಲರ ಕೆಲಸವನ್ನೂ ಟಿ.ವಿ. ಚಾನೆಲ್‌ಗಳೇ ಮಾಡುತ್ತವೆ. ಯಾರನ್ನು ಬೇಕಾದರೂ ಮೇಲಕ್ಕೆ ಎತ್ತುತ್ತವೆ, ಯಾರನ್ನು ಬೇಕಾದರೂ ಕೆಳಕ್ಕೆ ತಳ್ಳುತ್ತವೆ. ಇವತ್ತು ರಾಜ್ಯದಲ್ಲಿ ಪರಿಸ್ಥಿತಿ ಹದಗೆಡುತ್ತಿರುವುದಕ್ಕೆ ಮಾಧ್ಯಮಗಳೇ ಕಾರಣ’ ಎಂದು ವಾಗ್ದಾಳಿ ನಡೆಸಿದರು.

‘ಯುಗಾದಿ ಮರುದಿನ ವರ್ಷ ತೊಡಕು ಆಚರಿಸುವವರು ನಾವು. ಹಲಾಲ್ ಮಾಂಸ, ಗುಡ್ಡೆ ಮಾಂಸ ಎಂದೆಲ್ಲ ನೋಡದೆ ಮಾಂಸ ತಂದು ಭಕ್ಷ್ಯ ತಯಾರಿಸಿ ಸೇವಿಸುತ್ತೇವೆ. ನಮ್ಮ ಹಿಂದೂ ಸಮಾಜದಲ್ಲಿನ ಕೆಲವು ಕಿಡಿಗೇಡಿಗಳು ಅದನ್ನೂ ಈಗ ರಾಜಕೀಯಕ್ಕೆ ಬಳಸುತ್ತಿದ್ದಾರೆ. ಇಂತಹ ಪ್ರಚೋದನಕಾರಿ ಸುದ್ದಿಗಳನ್ನು ಮಾಧ್ಯಮಗಳು ಪ್ರಸಾರ ಮಾಡಬಾರದು’ ಎಂದು ಕೋರಿದರು.

ಹಲಾಲ್ ಮಾಂಸ ಖರೀದಿಸದಂತೆ ಹಾಗೂ ಮುಸ್ಲಿಮರ ಬಳಿ ವ್ಯಾಪಾರ ವಹಿವಾಟು ನಡೆಸದಂತೆ ವಾಟ್ಸ್ ಆ್ಯಪ್‌ಗಳಲ್ಲಿ ಹರಿಯಬಿಟ್ಟಿರುವ ಸಂದೇಶವನ್ನು ಸದನದಲ್ಲಿ ಓದಿದರು.

ಕುಮಾರಸ್ವಾಮಿ ಅವರು ಮಾಧ್ಯಮಗಳ ವಿರುದ್ಧ ಟೀಕಾಪ್ರಹಾರ ನಡೆಸುತ್ತಿರುವಾಗ ಮಧ್ಯ ಪ್ರವೇಶಿಸಿದ ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ, ‘ನೀವು ಜನ ಮಾನಸದ ಅಭಿಪ್ರಾಯ ಹೇಳುತ್ತಿದ್ದೀರಿ’ ಎಂದು ಸಹಮತ ವ್ಯಕ್ತಪಡಿಸಿದರು.

ರಾಜಾ ಹುಲಿ, ಬೆಟ್ಟದ ಹುಲಿ, ಆ ಇಲಿ...!

‘ಮಾಧ್ಯಮಗಳು ನಮ್ಮ ಬಳಿ ಬಂದು ನಿಮ್ಮ ಬಗ್ಗೆ ಬರೆಯುತ್ತೇವೆ ಎಂದು ಹೇಳಿ ನಾವು ಮಾಡಿದ್ದು, ಮಾಡದೇ ಇದ್ದದ್ದು ಸೇರಿ ಬರೆಯುತ್ತಾರೆ. ‘ಧರೆಗಿಳಿದು ಬಂದ ಯತ್ನಾಳ‘, ‘ಅಭಿವೃದ್ಧಿ ಹರಿಕಾರ‘, ‘ರಾಜಾಹುಲಿ, ಬೆಟ್ಟದ ಹುಲಿ, ಆ ಇಲಿ, ಈ ಇಲಿ’ ಎಂದೆಲ್ಲ ಹೆಡ್‌ಲೈನ್ ಹಾಕ್ತಾರೆ. ಅದಕ್ಕಾಗಿ ₹10 ಲಕ್ಷ ಕೇಳ್ತಾರೆ. ಅದರಲ್ಲಿ ಶೇ 10 ರಷ್ಟು ಡಿಸ್ಕೌಂಟ್ ಕೊಡ್ತೇವೆ ಎನ್ನುತ್ತಾರೆ’ ಎಂದು ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

‘ಚುನಾವಣೆ ವೇಳೆ ಒಂದು ಸುದ್ದಿ ವಾಹಿನಿಯು ‘ಯತ್ನಾಳ ಆಟಕ್ಕುಂಟು ಲೆಕ್ಕಕ್ಕಿಲ್ಲ’ ಎಂದು ಕಾರ್ಯಕ್ರಮ ಮಾಡಿದರು. ‘ಈ ರೀತಿ ಹೇಳಲು ನೀನು ಯಾರು’ ಎಂದು ದೂರವಾಣಿ ಮಾಡಿ ಪ್ರಶ್ನಿಸಿದಾಗ, ‘ನಾನು ಸಂಪಾದಕನಿದ್ದೇನೆ’ ಎಂದ. ‘ಅದು ಹೇಗೆ ಹೇಳುತ್ತೀಯಾ’ ಎಂದು ಪ್ರಶ್ನಿಸಿದೆ. ಅಷ್ಟೇ ಅಲ್ಲ ‘ನಾನು ಗೆದ್ದು ಬಂದ ಮೇಲೆ ಫೋನ್ ಮಾಡುತ್ತೇನೆ’ ಎಂದೆ. ಚುನಾವಣೆಯಲ್ಲಿ ಗೆದ್ದ ಮೇಲೆ ಆ ಸಂಪಾದಕನಿಗೆ ಫೋನ್ ಮಾಡಿದೆ. ಆಗ ಆತ ‘ನಿಮ್ಮ ಬಗ್ಗೆ ಒಂದು ವಿಸ್ತೃತ ಕಾರ್ಯಕ್ರಮ ಮಾಡೋಣ’ ಎಂದ. ಮಾಧ್ಯಮದ ಸ್ಥಿತಿ ಹೀಗಿದೆ ನೋಡಿ’ ಎಂದು ಯತ್ನಾಳ ವಿವರಿಸಿದರು.

ಸಂಸದ ತೇಜಸ್ವಿ ಸೂರ್ಯ ನೇತೃತ್ವದ ಪ್ರತಿಭಟನೆ ವೇಳೆ ಗದ್ದಲ • ಬ್ಯಾರಿಯರ್, ಸಿ.ಸಿ.ಟಿ.ವಿ. ಕ್ಯಾಮೆರಾಗಳ ಧ್ವಂಸ

ಕೇಜ್ರಿವಾಲ್ ಮನೆ ಎದುರು ಬಿಜೆಪಿ ದಾಂದಲೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಜೆಪಿ ಸಂಸದ ಮತ್ತು ಬಿಜೆಪಿ ಯುವಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಮನೆಮುಂದೆ ಬುಧವಾರ ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಅಲ್ಲಿದ್ದ ಬ್ಯಾರಿಯರ್ ಮತ್ತು ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಧ್ವಂಸ ಮಾಡಿದ್ದಾರೆ. ಜತೆಗೆ ಮುಖ್ಯಮಂತ್ರಿಗಳ ಮನೆಯ ಕಬ್ಬಿಣದ ಗೇಟಿಗೆ ಕೇಸರಿ ಬಣ್ಣ ಬಳಿದಿದ್ದಾರೆ.

'ದಿ ಕಾಶ್ಮೀರ್ ಫೈಲ್ಸ್' ಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡುವುದಕ್ಕಿಂತ, ಅದನ್ನು ಯುಟ್ಯೂಬ್‌ಗೆ ಹಾಕಿಬಿಟ್ಟರೆ ಎಲ್ಲಾ ಜನ ಉಚಿತವಾಗಿ ನೋಡುತ್ತಾರೆ' ಎಂದು ಕೇಜ್ರಿವಾಲ್ ಹಿಂದಿನ ವಾರ ಹೇಳಿಕೆ ನೀಡಿದ್ದರು. ಈ ಹೇಳಿಕೆಗೆ ಕ್ಷಮೆಯಾಚಿಸುವಂತೆ ಒತ್ತಾಯಿಸಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಬಿಜೆಪಿಯ ಹಲವು ಕಾರ್ಯಕರ್ತರು ಪೊಲೀಸ್ ಭದ್ರತೆಯನ್ನು ಬೇಧಿಸಿ, ದಾಂದಲೆ ನಡೆಸಿದ್ದಾರೆ.

> **ಬಿಜೆಪಿ ಹೆದರುವುದು ಎಎಪಿ ಮತ್ತು ಕೇಜ್ರಿವಾಲ್ ಅವರಿಗೆ ಎಂಬುದು ಸಾಬೀತಾಗಿದೆ. ಚುನಾವಣೆಯಲ್ಲಿ ಎದುರಿಸಲಾಗದೆ ಹೇಡಿಗಳಂತೆ ದಾಳಿ ನಡೆಸಿದ್ದಾರೆ**
> **ಭಗವಂತ್ ಮಾನ್**, ಪಂಜಾಬ್ ಮುಖ್ಯಮಂತ್ರಿ

> **ಎಎಪಿ ಆರೋಪ ಕಪೋಲಕಲ್ಪಿತವಾದದ್ದು. ಕೇಜ್ರಿವಾಲ್ ಅವರ ನೀತಿ ಮತ್ತು ಯೋಜನೆಗಳೆಲ್ಲವೂ ಭಯೋತ್ಪಾದಕರನ್ನೇ ಓಲೈಸುತ್ತವೆ**
> **ತೇಜಸ್ವಿ ಸೂರ್ಯ,** ಬಿಜೆಪಿ ಸಂಸದ ಮತ್ತು ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ



ಪ್ರತಿಭಟನೆ ವೇಳೆ ಸಂಸದ ತೇಜಸ್ವಿ ಸೂರ್ಯ ಅವರು ಪೊಲೀಸರೊಂದಿಗೆ ವಾಗ್ವಾದ ನಡೆಸಿದರು –ಪಿಟಿಐ ಚಿತ್ರ

ಕೇಸರಿ ಮಾಸ್ಕ್‌ಗಳಿಂದ ಮುಖ ಮುಚ್ಚಿಕೊಂಡ ಹಲವು ಕಾರ್ಯಕರ್ತರು ಕೇಜ್ರಿವಾಲ್ ಅವರ ಅಧಿಕೃತ ನಿವಾಸದ ಹೊರಗೆ ಜಮಾಯಿಸುವ ಮತ್ತು ಅಲ್ಲಿದ್ದ ಭದ್ರತಾ ಸಿಬ್ಬಂದಿ ಜತೆಗೆ ವಾಗ್ವಾದ ನಡೆಸುವ ದೃಶ್ಯಗಳು ಸಿ.ಸಿ.ಟಿ.ವಿ. ಕ್ಯಾಮೆರಾಗಳಲ್ಲಿ ದಾಖಲಾಗಿದೆ. ಹೀಗೆ ಜಮಾಯಿಸಿದ ಕಾರ್ಯಕರ್ತರ ಸಂಖ್ಯೆ ಹೆಚ್ಚಾದ ತಕ್ಷಣ ಅವರೆಲ್ಲಾ ಭದ್ರತಾ ಸಿಬ್ಬಂದಿ ಮೇಲೆ ಮುಗಿಬಿದಿದ್ದಾರೆ. ಅವರನ್ನು ತಳ್ಳಿ, ಕಬ್ಬಿಣದ ಗೇಟನ್ನು ಬೀಳಿಸಲು ಯತ್ನಿಸಿದ್ದಾರೆ. ಅದೇ ವೇಳೆ ಅಲ್ಲಿದ್ದ ಬ್ಯಾರಿಕೇಡ್ ಅನ್ನು ಮುರಿದಿದ್ದಾರೆ. ನಂತರ ಸಿ.ಸಿ.ಟಿ.ವಿ. ವಿಡಿಯೊ ಬಂದ್ ಆಗಿದೆ. ಈ ವೇಳೆ ತೇಜಸ್ವಿ ಸೂರ್ಯ ಅವರೂ ಅಲ್ಲಿದ್ದರೆ ಎಂಬುದು ಈ ವಿಡಿಯೊದಲ್ಲಿ ಗೊತ್ತಾಗಿಲ್ಲ.

ಬಿಜೆಪಿ ಕಾರ್ಯಕರ್ತರ ಮತ್ತೊಂದು ಗುಂಪು ಭಾರಿ ಸಂಖ್ಯೆಯಲ್ಲಿ ಕೇಜ್ರಿವಾಲ್ ನಿವಾಸದ ಎದುರಿನ ರಸ್ತೆಯಲ್ಲಿ ಜಮಾಯಿಸಿದ್ದಾರೆ. ಅಲ್ಲಿದ್ದ ಪೊಲೀಸರು ಬ್ಯಾರಿಕೇಡ್‌ಗಳಿಂದ ಅವರನ್ನು ತಡೆದಿದ್ದಾರೆ. ಆದರೆ ಹಲವರು ಪೊಲೀಸರನ್ನು ತಳ್ಳಿಕೊಂಡು ಹೋಗಿದ್ದಾರೆ. ಮನೆಯ ಗೇಟಿನ ಮುಂದೆ ಜಮಾಯಿಸಿದ್ದ ಹಲವರು, ಅಲ್ಲಿದ್ದ ಭದ್ರತಾ ಕೊಠಡಿಯ ಗೋಡೆಯ ಮೇಲೆ ಕೇಸರಿ ಬಣ್ಣದ ಹಸ್ತದ ಮುದ್ರೆಯನ್ನು ಹಾಕಿದ್ದಾರೆ.

ಕೇಜ್ರಿವಾಲ್ ಹತ್ಯೆಗೆ ಯತ್ನ: ಎಎಪಿ

'ಚುನಾವಣೆಗಳಲ್ಲಿ ಎಎಪಿಯನ್ನು ಸೋಲಿಸಲು ಬಿಜೆಪಿಗೆ ಸಾಧ್ಯವಿಲ್ಲ. ಹೀಗಾಗಿ ಬಿಜೆಪಿಯ ಕಾರ್ಯಕರ್ತರು ಅರವಿಂದ ಕೇಜ್ರಿವಾಲ್ ಅವರನ್ನು ಕೊಲ್ಲಲು ಯತ್ನಿಸಿದ್ದಾರೆ' ಎಂದು ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಹೇಳಿದ್ದಾರೆ.

'ದೆಹಲಿ ಪೊಲೀಸರ ನೆರವಿನೊಂದಿಗೆ ಬಿಜೆಪಿ ಕಾರ್ಯಕರ್ತರು, ಕೇಜ್ರಿವಾಲ್ ಅವರನ್ನು ಕೊಲ್ಲುವ ಉದ್ದೇಶದೊಂದಿಗೆ ಇಲ್ಲಿಗೆ ನುಗ್ಗಿದ್ದಾರೆ. ಬಿಜೆಪಿ ಕಾರ್ಯಕರ್ತರನ್ನು, ಪೊಲೀಸರು ರಸ್ತೆಯಲ್ಲೇ ತಡೆಯುವ ಬದಲು ಮನೆಯ ಗೇಟಿನವರೆಗೂ ಕರೆತಂದಿದ್ದಾರೆ. ಇದು ಪೂರ್ವಯೋಜಿತ ಕೊಲೆ ಸಂಚು. ಇದರ ವಿರುದ್ಧ ನಾವು ದೂರು ದಾಖಲಿಸುತ್ತೇವೆ' ಎಂದು ಹೇಳಿದ್ದಾರೆ.

'ನಾಗರಿಕ ಸೇವಾ ಪರೀಕ್ಷೆ ಹೆಚ್ಚುವರಿ ಅವಕಾಶ ಇಲ್ಲ'

ನವದೆಹಲಿ (ಪಿಟಿಐ): ಕೇಂದ್ರ ನಾಗರಿಕ ಸೇವಾ ಪರೀಕ್ಷೆಗಳನ್ನು (ಯುಪಿಎಸ್‌ಸಿ) ಎದುರಿಸಲು ಪ್ರಸ್ತುತ ಇರುವ ಒಟ್ಟು ಪ್ರಯತ್ನಗಳ ಸಂಖ್ಯೆಯನ್ನು ಬದಲಿಸುವುದು ಸೂಕ್ತವಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ವಯೋಮಿತಿ ಸಡಿಲಿಕೆ ಅವಕಾಶ ಪಡೆದ ಅಭ್ಯರ್ಥಿಗಳಿಗೆ ಅನುಕಂಪದ ದೃಷ್ಟಿಯಿಂದ ಪರೀಕ್ಷೆಗೆ ಹೆಚ್ಚುವರಿ ಅವಕಾಶವನ್ನು ಕಲ್ಪಿಸುವುದನ್ನು ಪರಿ ಗಣಿಸಬೇಕು ಎಂದು ಸಂಸದೀಯ ಸಮಿತಿಯು ಮಾರ್ಚ್ 24ರಂದು ಸಲಹೆ ಮಾಡಿತ್ತು.

ಲೋಕಸಭೆಯಲ್ಲಿ ಸಿಬ್ಬಂದಿ ಸಚಿವಾಲಯದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಈ ಕುರಿತ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ್ದು, ಕೋವಿಡ್ ಕಾರಣದಿಂದಲೂ ಆಕಾಂಕ್ಷಿಗಳು ಹೆಚ್ಚುವರಿ ಅವಕಾಶ ಕೋರಿದ್ದರು. ಕೆಲವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು ಎಂಬುದನ್ನು ಉಲ್ಲೇಖಿಸಿದ್ದಾರೆ. ಸುಪ್ರೀಂ ಕೋರ್ಟ್ ಈ ಸಂಬಂಧ ನೀಡಿದ ತೀರ್ಪುಗಳ ಆಧಾರದಲ್ಲಿ ಮನವಿಗಳನ್ನು ಪರಿಶೀಲಿಸಲಾಗಿದೆ. ಯುಪಿಎಸ್‌ಸಿ ಪರೀಕ್ಷೆಗೆ ಈಗ ಇರುವ ಅವಕಾಶಗಳ ಸಂಖ್ಯೆ ಪರಿಷ್ಕರಿಸುವುದು ಸೂಕ್ತವಲ್ಲ ಎಂದು ತೀರ್ಮಾನಿಸಲಾಗಿದೆ ಎಂದರು.

ಸುಪ್ರಿಂ ಕೋರ್ಟ್ ಏಪ್ರಿಲ್ 4ರಿಂದ ಭೌತಿಕ ವಿಚಾರಣೆ

ನವದೆಹಲಿ(ಪಿಟಿಐ): ಸುಪ್ರೀಂ ಕೋರ್ಟ್‌ನಲ್ಲಿ ಏಪ್ರಿಲ್ 4ರಿಂದ ಪ್ರಕರಣಗಳ ಭೌತಿಕ ವಿಚಾರಣೆ ಆರಂಭವಾಗಲಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಬುಧವಾರ ತಿಳಿಸಿದರು.

ಸುಪ್ರೀಂ ಕೋರ್ಟ್‌ನ ವಕೀಲರ ಸಂಘದ ಅಧ್ಯಕ್ಷ ವಿಕಾಸ್ ಸಿಂಗ್ ಅವರು ಈ ನಿರ್ಧಾರವನ್ನು ಸ್ವಾಗತಿಸಿದ್ದಾರೆ.

ವಕೀಲರು ಬಯಸಿದರೆ ಸೋಮವಾರ ಮತ್ತು ಶುಕ್ರವಾರದ ವಿಚಾರಣೆಯನ್ನು ವರ್ಚುವಲ್ ರೂಪದಲ್ಲಿ ನಡೆಸಲು ಲಿಂಕ್ ಕಳುಹಿಸಿ ಕೊಡಲಾಗುವುದು ಎಂದು ರಮಣ ತಿಳಿಸಿದರು.

'ಇಂಧನ ದರ ಏರಿಕೆಯೂ ಪ್ರಧಾನಿ ದಿನಚರಿಯ ಪಟ್ಟಿಗೆ'

ನವದೆಹಲಿ(ಪಿಟಿಐ): ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ(ಎಲ್‌ಪಿಜಿ ಸಿಲಿಂಡರ್) ದರ ಏರಿಕೆ, ರೈತರು ಅಸಹಾಯಕರಾಗುವಂತೆ ಮಾಡುವುದು ಹಾಗೂ ಯುವಕರಿಗೆ ಉದ್ಯೋಗದ ಕುರಿತು ಸುಳ್ಳು ಕನಸುಗಳನ್ನು ತೋರಿಸುವುದು ಸೇರಿದಂತೆ ಇನ್ನಿತರ ವಿಚಾರಗಳು ಪ್ರಧಾನಿ ನರೇಂದ್ರ ಮೋದಿ ಅವರ ದಿನಚರಿಯ ಪಟ್ಟಿಯಲ್ಲಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಾಗ್ದಾಳಿ ನಡೆಸಿದ್ದಾರೆ.

ಈ ಸಂಬಂಧ ಬುಧವಾರ 'ರೋಜ್‌ಸುಭಾಕೀಬಾತ್' ಎಂಬ ಹ್ಯಾಷ್‌ಟ್ಯಾಗ್ ಬಳಸಿ ಟ್ವೀಟ್ ಮಾಡಿರುವ ರಾಹುಲ್ ಗಾಂಧಿ, ಪ್ರಧಾನಿ ಮೋದಿ ವಿರುದ್ಧ ಟೀಕಾ ಪ್ರಹಾರ ನಡೆಸಿದ್ದಾರೆ.

'ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ಸಿಲಿಂಡರ್ ದರಗಳನ್ನು ಎಷ್ಟು ಪ್ರಮಾಣದಲ್ಲಿ ಏರಿಸಬೇಕು. ಜನರ ಖರ್ಚುಗಳ ಬಗ್ಗೆ ಚರ್ಚೆಗಳನ್ನು ಹೇಗೆ ನಿಲ್ಲಿಸಬೇಕು. ಯುವಕರಲ್ಲಿ ಹೇಗೆಲ್ಲಾ ಸುಳ್ಳು ಕನಸುಗಳನ್ನು ಬಿತ್ತಬೇಕು. ಸರ್ಕಾರಿ ಸ್ವಾಮ್ಯದ ಯಾವ ಕಂಪನಿಯನ್ನು ಮಾರಾಟ ಮಾಡಬೇಕು ಹಾಗೂ ರೈತರನ್ನು ಹೇಗೆ ಮತ್ತಷ್ಟು ಅಸಹಾಯಕರನ್ನಾಗಿ ಮಾಡಬೇಕು ಎಂಬ ವಿಚಾರಗಳು ಪ್ರಧಾನಿಯವರ ದಿನಚರಿಯ ಪಟ್ಟಿಯಲ್ಲಿವೆ' ಎಂದು ಕಿಡಿಕಾರಿದ್ದಾರೆ.

15 ಲಘು ಯುದ್ಧ ಹೆಲಿಕಾಪ್ಟರ್ ಖರೀದಿಗೆ ಸಿಸಿಎಸ್ ಒಪ್ಪಿಗೆ

ನವದೆಹಲಿ (ಪಿಟಿಐ): ದೇಶೀಯವಾಗಿ ಅಭಿವೃದ್ಧಿಪಡಿಸಿದ 15 ಲಘು ಯುದ್ಧ ಹೆಲಿಕಾಪ್ಟರ್‌ಗಳನ್ನು (ಎಲ್‌ಸಿಎಚ್) ₹3,887 ಕೋಟಿ ವೆಚ್ಚದಲ್ಲಿ ಖರೀದಿಸಲು ಪ್ರಧಾನಿ ನೇತೃತ್ವದ ಭದ್ರತೆ ಕುರಿತ ಸಂಪುಟ ಸಮಿತಿಯು (ಸಿಸಿಎಸ್) ಬುಧವಾರ ಅನುಮೋದನೆ ನೀಡಿದೆ.


ಇವುಗಳಲ್ಲಿ 10 ಹೆಲಿಕಾಪ್ಟರ್ ಭಾರತೀಯ ವಾಯುಪಡೆಗೆ ಮತ್ತು ಐದು ಭಾರತೀಯ ಸೇನೆಗೆ ನೀಡಲಾಗುವುದು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ ಏರೊನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಈ ಹೆಲಿಕಾಪ್ಟರ್‌ಗಳನ್ನು ತಯಾರಿಸಲಿದೆ.

'ಆತ್ಮನಿರ್ಭರ್ ಭಾರತ'ದ ಭಾಗವಾಗಿ ಈ ಹೆಲಿಕಾಪ್ಟರ್‌ಗಳನ್ನು ಎಚ್‌ಎಎಲ್‌ನಿಂದ ಖರೀದಿಸಲಾಗುತ್ತದೆ. ಇದು ರಕ್ಷಣಾ ಸಲಕರಣೆಗಳನ್ನು ದೇಶೀಯವಾಗಿ ಉತ್ಪಾದಿಸಲು ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ



ಈ ಭಾವಚಿತ್ರದಲ್ಲಿರುವ ಸುಮಾರು 12 ವರ್ಷದ ಬುದ್ಧಿಮಾಂದ್ಯ ಬಾಲಕಿ (ಹೆಸರು ತಿಳಿದಿರುವುದಿಲ್ಲ) ದಿನಾಂಕ: 02-03-2022ರಂದು ಕುಣಿಗಲ್ ತಾಲ್ಲೂಕಿನ ಬಿದನಗೆರೆ ಗ್ರಾಮದ ಸತ್ಯ ಶನೇಶ್ವರ ಸ್ವಾಮಿ ದೇವಸ್ಥಾನದ ಹತ್ತಿರ ರಕ್ಷಣೆ ಮಾಡಲಾಗಿರುತ್ತದೆ. ಸದರಿ ಬಾಲಕಿಯು ಬುದ್ಧಿಮಾಂದ್ಯತೆ ಹೊಂದಿದ್ದು, 4 ಅಡಿ ಎತ್ತರ, ಕಂದು ಬಣ್ಣ, ಕೋಲು ಮುಖವುಳ್ಳದ್ದಾಗಿದ್ದು, ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಬಾಲಕಿಯ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, 5ನೇ ಅಡ್ಡರಸ್ತೆ, ಅಶೋಕನಗರ, ತುಮಕೂರು. ದೂರವಾಣಿ ಸಂಖ್ಯೆ: 0816-2956699, ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು
ದಿನಾಂಕ: 25-03-2022

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/779/MCA/2021-22

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080-26961928 ಫ್ಯಾಕ್ಸ್–080-26961929

ಸಂಖ್ಯೆ: ರಾಗಾವಿ/ಎಡಿವಿ.ಆರ್‌ಇಎಸ್/ಎಫ್‌ಆರ್/122/2022-23 ದಿನಾಂಕ: 30.03.2022

ಪ್ರಕಟಣೆ

ವಿಷಯ: ಸಂಶೋಧನ ಅನುದಾನಗಳು 2022-23 ಪ್ರಶಸ್ತಿಗಾಗಿ ಅರ್ಜಿಗಳ ಆಹ್ವಾನ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಂಯೋಜಿತ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂಧಿಗಳಿಗೆ ಸಂಶೋಧನ ಅನುದಾನಗಳು 2022-23 ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿದಾರರು ವಿವರಗಳನ್ನು ಮತ್ತು ಇನ್ನಿತರೆ ಮಾಹಿತಿಗಳನ್ನು ರಾಗಾಆವಿವಿಯ ಅಧಿಕೃತ ವೆಬ್‌ಸೈಟ್ http://www.rguhs.ac.in/AdvancedResearch.html ನಲ್ಲಿ ದಿನಾಂಕ: 01.04.2022ರಿಂದ ಪಡೆದುಕೊಳ್ಳಬಹುದು. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.06.2022ರವರೆಗೆ.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/3986/2021–22

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಕಲ್ಯಾಣ ಸುರಕ್ಷಾ ಭವನ, ಐಟಿಐ ಕಾಲೇಜು ಆವರಣ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029.
ದೂ.: 080–26644312/313/314, ಇ–ಮೇಲ್: karbuildworkerswelfare@gmail.com

No.: KBOCWWB/Transit/Obadenahalli/2021-22 Date: 29.03.2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಅಧಿಸೂಚನೆಯಲ್ಲಿ ವಿವರಿಸಿದ ಉಲ್ಲೇಖದ ನಿಯಮಗಳ ಪ್ರಕಾರ ಟೆಂಡರ್‌ಗಳನ್ನು (ಎರಡು ಬಿಡ್ ವ್ಯವಸ್ಥೆ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳು) ಈ ಕೆಳಗಿನ ಕಾಮಗಾರಿಗಳಿಗೆ ಮತ್ತು ನಿಗದಿಪಡಿಸಿದ ಅವಧಿಗಾಗಿ ಆಸಕ್ತಿವುಳ್ಳ ಕ್ಲಾಸ್–1 ಮತ್ತು ಮೇಲ್ದರ್ಜೆ ಗುತ್ತಿಗೆದಾರರನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಟೆಂಡರ್‌ನ ಸಂಖ್ಯೆ	ಟೆಂಡರ್‌ನ ಹೆಸರು	ಟೆಂಡರ್ ಅಂದಾಜು ಮೊತ್ತ ರೂ.	ಇ.ಎಮ್.ಡಿ ಠೇವಣಿ ಮೊತ್ತ ರೂ.
1	DOL/2021-22/BD/WORK_INDENT15	ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೊಡ್ಡಬಳ್ಳಾಪುರ ತಾಲ್ಲೂಕಿನ, ಒಬದೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಕಟ್ಟಡ ಕಾರ್ಮಿಕರ ವಸತಿ ಸಮುಚ್ಚಯ ನಿರ್ಮಿಸುವ ಕಾಮಗಾರಿ.	750.58 ಲಕ್ಷಗಳು	11.26 ಲಕ್ಷಗಳು

ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ **https://eproc.karnataka.gov.in** ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಇ–ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ: **18.04.2022**ರಂದು **ಸಂಜೆ 5:30 ಗಂಟೆ**ಯವರೆಗೆ ಇರುತ್ತದೆ. ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಜಂಟಿ ಕಾರ್ಯದರ್ಶಿಗಳು, ಕ.ಕ&ಇ.ನಿ.ಕಾ.ಕ.ಮಂಡಳಿ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ಜಂಟಿ ಕಾರ್ಯದರ್ಶಿ, ಕ.ಕ.&ಇ.ನಿ.ಕಾ.ಕ.ಮಂ.

ವಾಸಾಸಂಇ/ವಾ.ಪ್ರ./ಎಲ್‌ಸಿ/3978/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ GOVERNMENT OF KARNATAKA

ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ

VIJAYANAGAR INSTITUTE OF MEDICAL SCIENCES, BALLARI Cantonment Area, Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
Director: 8147796529, Principal :8147796527, CAO:8147796526 PA : 8147796539,
e-mail-ids : directorvimsbellary@gmail.com, principalvimsbellary@gmail.com

No.VIMS/Est(2)/188/2021-22 Date: 28.03.2022.

WALK-IN –INTERVIEW NOTIFICATION – PART-A
(LOCAL PERSON FROM KALYANA KARNATAKA-(HK)-371-J/ RESIDUAL PARENT CADRE-(NHK)

Application are invited by Director VIMS,Ballarifrom eligible candidates from Kalyana Karnataka (HK) local persons under 371J for the post of Professor/Associate Professor/ Assistant Professorand RESIDUAL PARENT CADRE-(NHK) Assistant Professorfor Anaesthesiology Department for Super specialty Hospital VIMS, Ballari. The candidates are required to attend the Interview before the selection committee at the Director, VIMS campus, Cantonment, Ballari along with the original documents, 2 sets of documents duly attested by gazette officer and 2 passport size photos. The candidates are requested to report before the scrutinizing committee before 09:00 am on 12.04.2022.

For the smooth conduct of Walk-in-interview the candidates are requested to submit the application along with necessary documents and DD for Rs.500/- (Non refundable) drawn in favour of Director Vijayanagar Institute of Medical Sciences Ballari. payable at Ballari,The other details are in the college website: **www.directorvimsbellary@gmail.com**

Sl No	Designation	No of Posts	Department	Local Cadre (HK)	No of Posts in the RPC (NHK)
01	Professor	01	Anaesthesiology	SC(M)-1	-
02	Associate Professor	02		SC(M)-1, GM(M)-1	-
03	Assistant Professor	04		SC(M)-1, GM(M)-1 , ST(M)-1	SC(M)-1,

DIPR/Ballari/922/MCA/2021-22 Sd/- Director,VIMS, Ballari

ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ

ಆಯುಕ್ತರ ಕಾರ್ಯಾಲಯ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18. ದೂರವಾಣಿ: 26709689/ 26706775, ಫ್ಯಾಕ್ಸ್: 26700801/
Email: endowmentcommissioner@gmail.com.

ಸಂಖ್ಯೆ: ಎಡಿಎಂ–8/ಸಿಆರ್/20/2017–18 ದಿನಾಂಕ: 29.03.2022.

–: ಪ್ರಕಟಣೆ :–

ಬೆಂಗಳೂರು ನಗರದ ಜಯನಗರ 4ನೇ ಬ್ಲಾಕ್‌ನಲ್ಲಿರುವ ಶ್ರೀ ವಿನಾಯಕ ದೇವಾಲಯದ ಆಡಳಿತವನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 87 ಮುಆಟಿ 2013, ದಿನಾಂಕ: 02.01.2014 ಮತ್ತು ಕಂಇ 42 ಮುಆಟಿ 2013, ದಿನಾಂಕ: 03.08.2016 ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಅಧಿನಿಯಮ 42 ಮತ್ತು 43ರನ್ವಯ ಘೋಷಿತ ಸಂಸ್ಥೆಯೆಂದು ಘೋಷಿಸಿ ಆದೇಶ ಹೊರಡಿಸಲಾಗಿರುತ್ತದೆ.

ಈ ದೇವಾಲಯವನ್ನು ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ವಹಿಸಿ 5 ವರ್ಷಗಳು ಪೂರ್ಣಗೊಂಡಿದ್ದು, ಸದರಿ ದೇವಾಲಯಕ್ಕೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 1997ರ ಅಧ್ಯಾಯ 8ರ ಕಲಂ 43(8)ರನ್ವಯ 9 ಸದಸ್ಯರಿರುವ ವ್ಯವಸ್ಥಾಪನಾ ಸಮಿತಿಯನ್ನು ಮೂರು ವರ್ಷಗಳ ಅವಧಿಗೆ ರಚಿಸಬೇಕಾಗಿರುತ್ತದೆ.

ಸರ್ಕಾರದ ಪತ್ರ ಸಂಖ್ಯೆ:ಕಂಇ 13 ಮುಆಟಿ 2019, ದಿನಾಂಕ:29.12.2021ರನ್ವಯ ಬೆಂಗಳೂರು ನಗರದ ಜಯನಗರ 4ನೇ ಬ್ಲಾಕ್‌ನಲ್ಲಿರುವ ಶ್ರೀ ವಿನಾಯಕ ದೇವಾಲಯಕ್ಕೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಅಧಿನಿಯಮ 1997ರ ಅಧ್ಯಾಯ 8ರ ಕಲಂ 43(8)ರನ್ವಯ 9 ಮಂದಿ ಸದಸ್ಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಅನುಮೋದನೆ ನೀಡಲಾಗಿರುತ್ತದೆ.

ಆದುದರಿಂದ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಅಧ್ಯಾಯ 8ರ ಕಲಂ 43(8)ರನ್ವಯ ಹಾಗೂ ತಿದ್ದುಪಡಿ ಅಧಿನಿಯಮ 2011ರ ಕಲಂ 25ರನ್ವಯ ಪ್ರಸ್ತಾಪಿತ ಅಧಿಸೂಚಿತ ದೇವಾಲಯಕ್ಕೆ ವ್ಯವಸ್ಥಾಪನಾ ಸಮಿತಿಯನ್ನು ರಚಿಸಲು ಆಸಕ್ತ ಭಕ್ತಾಧಿಗಳಿಂದ/ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. ದೇವಾಲಯದ ಪ್ರಕರಣದಲ್ಲಿ ಪ್ರಧಾನ ಅರ್ಚಕರು ಅಥವಾ ಅರ್ಚಕ.
2. ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಕನಿಷ್ಟ ಒಬ್ಬ ಸದಸ್ಯ.
3. ಇಬ್ಬರು ಮಹಿಳೆಯರು.
4. ಅರ್ಜಿದಾರನು (i) ದೇವರಲ್ಲಿ ನಂಬಿಕೆಯುಳ್ಳವನಾಗಿರತಕ್ಕದ್ದು. (ii) 25 ವರ್ಷದವನಾಗಿರತಕ್ಕದ್ದು. (iii) ಒಳ್ಳೆಯ ನಡತೆ ಮತ್ತು ಖ್ಯಾತಿಯನ್ನು ಹೊಂದಿರತಕ್ಕದ್ದು ಹಾಗೂ ಆ ಸ್ಥಳೀಯವಾಗಿ ಗೌರವವುಳ್ಳವನಾಗಿರತಕ್ಕದ್ದು. (iv) ಅಧಿನಿಯಮದ 25 ನೇ ಯ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ.
5. ಅರ್ಜಿಗಳನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಈ ಕೆಳಗೆ ಸಹಿ ಮಾಡಿರುವವರಿಗೆ ನಿಯಮಿಸಲಾದ ನಮೂನೆಯಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸತಕ್ಕದ್ದು. ಆನಂತರ ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

"ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಹಾಗೂ ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ತು, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು –560018" ನಿಗಧಿತ ಅರ್ಜಿ ನಮೂನೆಯು ಇಲಾಖಾ ವೆಬ್ ಸೈಟ್ **https://itms.kar.nic.in** ನಲ್ಲಿ ಹಾಗೂ ಈ ಕಛೇರಿಯಲ್ಲಿ ಲಭ್ಯವಿರುತ್ತದೆ.

ಸಹಿ/– ರೋಹಿಣಿ ಸಿಂಧೂರಿ ದಾಸರಿ ಭಾ.ಆ.ಸೇ.,
ಸದಸ್ಯ ಕಾರ್ಯದರ್ಶಿ, ರಾಜ್ಯ ಧಾರ್ಮಿಕ ಪರಿಷತ್ ಹಾಗೂ ಆಯುಕ್ತರು,
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಬೆಂಗಳೂರು

ವಾಸಾಸಂಇ/ವಾಪ್ರ/ಶಿರಡಿಸಾಯಿ/3973/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್ ಗದಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ,

ಕೊಠಡಿ ಸಂಖ್ಯೆ–101, ಜಿಲ್ಲಾ ಆಡಳಿತ ಭವನ, ಗದಗ.

ಸಂಖ್ಯೆ: ಬಜೆಟ್/ಟೆಂಡರ/ಸಾರಿಗೆ/447/2022–23 ದಿನಾಂಕ:30.03.2022

ಇ–ಟೆಂಡರ್ ಪ್ರಕಟಣೆ

ಸನ್ 2022–23 ನೇ ಸಾಲಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಗದಗ ಅಡಿಯಲ್ಲಿಯ ಅಧೀನ ಅಧಿಕಾರಿಗಳಿಗೆ ವಾಹನ ಚಾಲಕರೊಂದಿಗಿನ ವಾಹನಗಳ ಸೇವೆಯನ್ನು ಹೊರಗುತ್ತಿಗೆ ಮುಖಾಂತರ ಪಡೆಯಲು ನೊಂದಾಯಿತ ಸಂಸ್ಥೆಗಳಿಂದ ಇ–ಪ್ರೊಕ್ಯುರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರ್ಮಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಅಲ್ಪಾವಧಿ ಟೆಂಡರ್ ಪುಸ್ತಕವನ್ನು ದಿನಾಂಕ: **30-03-2022** ರಿಂದ ಇ–ಪ್ರೊಕ್ಯುರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ದಲ್ಲಿ ಇ–ಪೋರ್ಟಲ್‌ನಲ್ಲಿ ನಿಗದಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರ್ಮ್‌ಗಳನ್ನು ದಿನಾಂಕ : **14-04-2022** ರಂದು ಸಾಯಂಕಾಲ **5-00** ಗಂಟೆಯೊಳಗೆ ಇ–ಪೋರ್ಟಲ್‌ದಲ್ಲಿ ಅಪ್‌ಲೋಡ್ ಮಾಡಬಹುದು. ಸ್ವೀಕರಿಸಿದ ಟೆಂಡರ್‌ಗಳನ್ನು ದಿನಾಂಕ : **16-04-2022** ರಂದು ಬೆಳಿಗ್ಗೆ **11-00** ಗಂಟೆಗೆ ತಾಂತ್ರಿಕ ಬಿಡ್‌ನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್‌ನಲ್ಲಿ ಯಶಸ್ವಿಯಾದಂತಹ ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ದಿನಾಂಕ: **18-04-2022** ರಂದು ಬೆಳಿಗ್ಗೆ **11-00** ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಗದಗ ಇಲ್ಲಿ ಕೆಲಸದ ದಿನಗಳಂದು ಪಡೆಯಬಹುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಗದಗ.

ವಾ.ಸಾ.ಇ/ಗದಗ/637/2021–22/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರಕಾರ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

Phone No: 08372-238782 Fax No. 08372-237268 E.Mail : eepwdgad@gmail.com

ನಂ:ಕಾನಿಇಂಗ:ಲೋಇ:ಪಿಬಿ :5054ಎಸ್‌ಡಿಪಿ:&ಅಪೆಂಡಿಕ್ಸ್‌ಇ:2021–22/6675 ದಿನಾಂಕ: 29–03–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅಡಿಯಲ್ಲಿಯ **ಒಟ್ಟು 3270.00 ಲಕ್ಷ** ಮೊತ್ತದಲ್ಲಿ **ಒಟ್ಟು 14 ಕಾಮಗಾರಿಗೆ** (ಕನಿಷ್ಠ ಮೊತ್ತ ರೂ: 100.00 ಲಕ್ಷ ಗರಿಷ್ಠ ಮೊತ್ತ ರೂ: 450.00 ಲಕ್ಷ) ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರಮೆಂಟ್ (E- Procurement) ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ– 3 ಹಾಗೂ 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.eproc.Karnataka. gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No: 151266, 151267, 151268 ,151269, 150329, 150330, 150332, 150603, 150604 150655, 151280, 151281, 151282 and 151283

ಮೇಲಿನ ಕಾಮಗಾರಿಗೆ ಟೆಂಡರ ವಿವರ ಪಶ್ನೋತ್ತರ **ದಿನಾಂಕ: 12–04–2022,** ಟೆಂಡರ್ ಸಲ್ಲಿಸುವ **ದಿನಾಂಕ: 18–04–2022** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 19–4–2022** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 20–04–2022**

GST of 12% shall be added separately in the estimate as per Govt. Letter No PWD 65 RDF 2017, dated 11-10-2018. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/– ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ ಗದಗ ವಿಭಾಗ ಗದಗ

ವಾಸಾಇ/ಗದಗ/640/2021–22 ದೇಶಪಾಂಡೆಪಬ್ಲಿಸಿಟಿ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ

ಧಾರವಾಡ ವಿಭಾಗ,ಧಾರವಾಡ.
Phone No:0836-2747944 Fax No.0836-2747944
Email.ID:eepwddha@gmail.com

ಸಂ.ಕ್ರಸಂ : ಕಾನಿಇಂ/ಲೋಇ/ಧಾ/ಪಿಬಿ–4/ಟೆಂಡರ/2021–22/11126 ದಿ:29/03/2022

ಅಲ್ಪಾವಧಿ ಟೆಂಡರ ಪ್ರಕಟಣೆ–2 ನೇ ಕರೆ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಧಾರವಾಡರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ 2000 ರನ್ವಯ ಮತ್ತು ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಕೆ ಡಬ್ಲ್ಯೂ–3 ರ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ (e-Procurement) ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮಾಡಿದ ಅರ್ಹ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ದತಿಯಲ್ಲಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. **ಧಾರವಾಡ ವಿಭಾಗ ವ್ಯಾಪ್ತಿಯಲ್ಲಿ ಕುಂದಗೋಳ ತಾಲೂಕಿಗೆ ಸಂಬಂದಿಸಿದಂತೆ ರೂ.60.00 ಲಕ್ಷದಿಂದ ರೂ.99.00 ಲಕ್ಷಗಳ ವರೆಗಿನ ಒಟ್ಟು 05 ಕಾಮಗಾರಿಗಳಿಗೆ ಟೆಂಡರ ಪ್ರಕಟಣೆ ಹೊರಡಿಸಲಾಗಿರುತ್ತದೆ.** ಟೆಂಡರ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ **ದಿನಾಂಕ: 08/04/2022 (ಸಾಯಂಕಾಲ 5:30 ಗಂಟೆಯವರೆಗೆ)**
2) ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 11/04/2022 (ಸಾಯಂಕಾಲ 4:00 ಗಂಟೆಯವರೆಗೆ)**
3) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 12/04/2022 (ಸಾಯಂಕಾಲ 4:30 ಗಂಟೆಯ ನಂತರ)**
4) ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 13/04/2022 (ಸಾಯಂಕಾಲ 4:30 ಗಂಟೆಯ ನಂತರ)**

ಕಾಮಗಾರಿಗೆ ಸಂಬಂದಿಸಿದ ಎಲ್ಲಾ ವಿವರಗಳನ್ನು ಅಂತರ್‌ಜಾಲ ವಿಳಾಸ http://www.eproc.karnataka.gov.in ದಲ್ಲಿ ಹಾಗೂ ಲೋಕೋಪಯೋಗಿ ಇಲಾಖೆ ಧಾರವಾಡ ವಿಭಾಗ ಕಛೇರಿಯಿಂದ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– (ಶ್ರೀ.ಎಸ್.ಬಿ.ಚೌಡಣ್ಣವರ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ಧಾರವಾಡ ವಿಭಾಗ, ಧಾರವಾಡ.

ವಾ.ಸಾ.ಇ/ಧಾ/1214/2021–22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಎಡಿಎಂ/ಎಪಿಪಿಟಿ. ಸಿಎಸ್/2021–22 ದಿನಾಂಕ: 30.03.2022

ಉದ್ಯೋಗ ಪ್ರಕಟಣೆ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಕಂಪೆನಿ ಸೆಕ್ರೆಟರಿ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ **www.kridl.org** ಗೆ ಲಾಗಿನ್ ಆಗುವುದು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **30.04.2022 ಸಂಜೆ 5.00 ಗಂಟೆ**ವರೆಗೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು

ವಾಸಾಸಂಇ/ಉನಿ-ಸಿ.ಪಿ/3988/ಎಂಸಿಎ/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eepwdmys21@gmail.com ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಟೆಂಡರ್ ಪ್ರಕಟಣೆ ಸಂಖ್ಯೆ: 27/2021–22 ದಿನಾಂಕ: 30.03.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ Providing Wayside Amenities to the Bridge Constructed across Kabini River near Hejjige Village in Nanjangud Taluk (Balance Work) ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ 1ನೇ ದರ್ಜೆ ಗುತ್ತಿಗೆದಾರರು ಭಾಗವಹಿಸಬಹುದು. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(http://eproc.karnataka.gov.in)** ಸಂಜೆ 4:00ರ ವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಗಿಟ್ಟ ಮೊತ್ತ ರೂ. 847.51 ಲಕ್ಷಗಳು ಹಾಗೂ ಇ.ಎಂ.ಡಿ ರೂ. 12,71,300.00ಗಳಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ,
ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ, ಬಾಗಲಕೋಟ – 587104.

ಸಂ : ಆ.ಅ./ತೋವಿವಿಬಾ/ಸಖಕ/ಟೆ.ನಂ–153/2021–22 ದಿನಾಂಕ : 30–03–2022

ಮರುಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮುಖಾಂತರ)

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಅಡಿಯಲ್ಲಿ **laboratory equipments** ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರಮೆಂಟ್ ಮುಖಾಂತರ ಮರುಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ **https://eproc.karnataka.gov.in** ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು.

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ	09-04-2022	@	14.00 ಘಂ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	16-04-2022	@	16.00 ಘಂ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	18-04-2022	@	10.00 ಘಂ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	20-04-2022	@	12.00 ಘಂ

ಬಿಡ್‌ದಾರರು ಇ–ಪ್ರೊಕ್ಯೂರಮೆಂಟ್‌ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು.

ಸಹಿ/– ಆಸ್ತಿ ಅಧಿಕಾರಿಗಳು
ತೋ.ವಿ.ವಿ ಬಾಗಲಕೋಟ

ವಾ.ಸಾ.ಇ/ಬಾಗಲಕೋಟ/646/2021–22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು(ಯೋಜನೆ)ರವರ ಕಛೇರಿ,
ಮಹದೇವಪುರ ವಲಯ, ಬೆಂಗಳೂರು–560036.

ಸಂ: ಬಿಬಿಎಂಪಿ/ಕಾಪಾಅ/ಮವಿ/ಟೆಂಡ್/02/2021–22 ದಿನಾಂಕ: 30.03.2022

ಟೆಂಡರ್‌ಗಾಗಿ ಆಹ್ವಾನ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು(ಯೋಜನೆ), ಮಹದೇವಪುರ ವಲಯ ಇವರು ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ (ರೂ. ಲಕ್ಷಗಳಲ್ಲಿ)
1	ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಪಿಲ್ಲಹಳ್ಳಿ ಗ್ರಾಮದಲ್ಲಿ ಇವಿಎಂ ಮತ್ತು ವಿವಿಪ್ಯಾಟ್‌ಗಳ ಶೇಖರಣೆಗಾಗಿ ಉಗ್ರಾಣದ (ಬಿಬಿಎಂಪಿ, ಬೆಂಗಳೂರು ಉತ್ತರ) ನಿರ್ಮಾಣ ಕಾಮಗಾರಿ.	510.00	10.20 (1.00 ಲಕ್ಷ ಇ–ಪೇಮೆಂಟ್ ಮೂಲಕ ಹಾಗೂ ಉಳಿದದ್ದು ಬ್ಯಾಂಕ್ ಗ್ಯಾರಂಟಿ ಮುಖಾಂತರ ತಾಂತ್ರಿಕ ಬಿಡ್ ತೆರೆಯುವ ಮುನ್ನ ಸಲ್ಲಿಸಬೇಕು.)

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದಿನಾಂಕ **05.04.2022, ಸಂಜೆ 4.00 ಗಂಟೆಯಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **08.04.2022ರ ಮಧ್ಯಾಹ್ನ 3.00 ಗಂಟೆಗೆ.** 3) ವಿಚಾರಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **11.04.2022 ಸಂಜೆ 4.00 ಗಂಟೆಯವರೆಗೆ.** 4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **18.04.2022ರ ಸಂಜೆ 4.00 ಗಂಟೆಯವರೆಗೆ 5)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : **18.04.2022ರ ಸಂಜೆ 4.30 ಗಂಟೆಗೆ** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಅಥವಾ ಹೆಚ್‌ಪಿ ಸಹಾಯವಾಣಿ : 22485927, 22485867 ಹಾಗೂ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು(ಯೋಜನೆ), ಮಹದೇವಪುರ ವಲಯ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ

ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಮೂಅಬ&ಒಜಸಾಇ)

ಕೊಠಡಿ ಸಂ.8, ವಿಕಾಸಸೌಧ, ಬೆಂಗಳೂರು–560001
ದೂರವಾಣಿ: 080–22034069/70, ಇ–ಮೇಲ್: director.idd@gmail.com

ಸಂ: ಐಡಿಡಿ 120 ಐಟಿಎಸ್ 2021 ದಿ: 30.03.2022

ಪಿಪಿಪಿ ಮಾದರಿಯಲ್ಲಿ ಸಣ್ಣ ಗಾತ್ರದ ಮೂಲಸೌಕರ್ಯ ಯೋಜನೆಗಳ ಅನುಷ್ಠಾನಕ್ಕಾಗಿ ಸಮಾಲೋಚಕ ಸಲಹೆಗಾರರನ್ನು (TA) ಎಂಪಾನಲ್‌ಮೆಂಟ್ ಮಾಡಲು ಅರ್ಹತೆಗಾಗಿ ಆರ್.ಎಫ್.ಕ್ಯೂ. ಆಹ್ವಾನ

ಮೂಲಸೌಕರ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯು (ಮೂಅ,ಬಂ&ಒಜಸಾಇ), ಪಿಪಿಪಿ ಮಾದರಿಯಲ್ಲಿ ಸಣ್ಣ ಗಾತ್ರದ ಮೂಲಸೌಕರ್ಯ ಯೋಜನೆಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳು/ಏಜೆನ್ಸಿಗಳಿಂದ ಅಗತ್ಯವಿರುವ TA ಸೇವೆಗಳನ್ನು ಒದಗಿಸಲು ಸಮಾಲೋಚಕ ಸಲಹೆಗಾರರನ್ನು ಎಂಪಾನಲ್‌ಮೆಂಟ್ ಮಾಡಿಕೊಳ್ಳಲು ಪ್ರಸ್ತಾಪಿಸಿದೆ. TA ಎಂಪಾನಲ್‌ಮೆಂಟ್‌ಗಾಗಿ ಅನುಭವವುಳ್ಳ ಸಲಹಾ ಸಂಸ್ಥೆಗಳಿಂದ ಆರ್‌ಎಫ್‌ಕ್ಯೂ ಅನ್ನು ಆಹ್ವಾನಿಸಲಾಗಿದೆ. ಸಲಹಾ ಸಂಸ್ಥೆಗಳು ಎಂಪಾನಲ್‌ಮೆಂಟ್‌ಗಾಗಿ ಆರ್‌ಎಫ್‌ಕ್ಯೂನಲ್ಲಿ ನಿರ್ದಿಷ್ಟಪಡಿಸಿದ ಎಲ್ಲಾ ಅರ್ಹತಾ ಅಗತ್ಯತೆಗಳನ್ನು ಪೂರೈಸಬೇಕಾಗಿರುತ್ತದೆ.

ಅರ್ಜಿದಾರರಿಗೆ ಸೂಚನೆಗಳು, ಅರ್ಹತಾ ಅಗತ್ಯತೆಗಳು, ಮೌಲ್ಯಮಾಪನದ ಮಾನದಂಡಗಳು ಮತ್ತು ಇತರೆ ನಿಯಮ ಹಾಗೂ ನಿಬಂಧನೆಗಳು ಇತ್ಯಾದಿಗಳನ್ನು ಒಳಗೊಂಡಿರುವ ಆರ್‌ಎಫ್‌ಕ್ಯೂ ದಸ್ತಾವೇಜುಗಳನ್ನು ಮೇಲೆ ತಿಳಿಸಿದ ವಿಳಾಸದ ಮೂಅ,ಬಂ&ಒಜಸಾಇ ಕಛೇರಿಯಿಂದ ಅಥವಾ ಮೂಅ,ಬಂ&ಒಜಸಾಇ ವೆಬ್‌ಸೈಟ್ **(https://idd.karnataka.gov.in)** ನಿಂದ ಡೌನ್‌ಲೋಡ್ ಮಾಡುವ ಮೂಲಕ ಪಡೆಯಬಹುದು. ಪೂರ್ಣಗೊಂಡ ಆರ್‌ಎಫ್‌ಕ್ಯೂ ಅನ್ನು ಸಲ್ಲಿಸಲು ಕೊನೆಯ ದಿನಾಂಕ: **30.04.2022, ಸಂಜೆ 5.00 ಗಂಟೆವರೆಗೆ.** ಹೆಚ್ಚಿನ ಮಾಹಿತಿ / ಸ್ಪಷ್ಟೀಕರಣಕ್ಕಾಗಿ ಶ್ರೀ ಸತ್ಯನಾರಾಯಣ ಭಟ್, ಟೆಕ್ಸಾಕ್ 9945802607 ರವರನ್ನು ಸಂಪರ್ಕಿಸಬಹುದು.

ಮೂಅ,ಬಂ&ಒಜಸಾಇ ಯು ಯಾವುದೇ ಕಾರಣವನ್ನು ನೀಡದೆ ಸ್ವೀಕರಿಸಿದ ಯಾವುದೇ ಅಥವಾ ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ. ಮೂಅ, ಬಂ&ಒಜಸಾಇ ಯ ನಿರ್ಧಾರವು ಅಂತಿಮವಾಗಿರುತ್ತದೆ ಮತ್ತು ಅರ್ಜಿದಾರರ ಮೇಲೆ ಬದ್ಧವಾಗಿರುತ್ತದೆ.

ಸಹಿ/- ನಿರ್ದೇಶಕರು (ಪಿಪಿಪಿ ಕೋಶ)

ಟಿಪ್ಪಣಿ-ಯಶಸ್ಸಿನ ಏಣಿ

ಗುರುರಾಜ್ ಎಸ್. ದಾವಣಗೆರೆ

ಸಿವಿಲ್ ಸರ್ವೀಸಸ್ ಪೂರ್ವಭಾವಿ ಪರೀಕ್ಷೆಗೂ ಮುನ್ನ ಅಣಕು ಪರೀಕ್ಷೆಗಳನ್ನು ಎದುರಿಸಬೇಕು. ಇದರಿಂದ ವೇಗವಾಗಿ ಉತ್ತರಿಸುವುದು, ಕಡಿಮೆ ಸಮಯದಲ್ಲಿ ಸೂಕ್ತ ಉತ್ತರಗಳನ್ನು ಆಯ್ಕೆ ಮಾಡಿಕೊಳ್ಳುವುದು ಹೇಗೆಂದು ಅಭ್ಯಾಸವಾಗುತ್ತದೆ.

ಸಿವಿಲ್ ಸರ್ವೀಸಸ್ ಪರೀಕ್ಷೆ ಪಾಠ-3

ಸಿವಿಲ್ ಸರ್ವೀಸಸ್ ಹುದ್ದೆಗಳಿಗಾಗಿ ನಡೆಯುವ ಪೂರ್ವಭಾವಿ ಪರೀಕ್ಷೆಯಲ್ಲಿ ಪ್ರಚಲಿತ ವಿದ್ಯಮಾನಗಳ(Current Affairs) ಕುರಿತು ಪ್ರಶ್ನೆಗಳಿರುತ್ತವೆ. ಅವುಗಳನ್ನು ಸುಲಭವಾಗಿ ಎದುರಿಸಲು ಯಾವ ದಿನಪತ್ರಿಕೆ, ವಾರ-ಮಾಸಪತ್ರಿಕೆ, ಯಾವ ಬುಕ್‌ಗಳನ್ನು ಓದಬೇಕು ಎಂಬುದು ಬಹುತೇಕ ಐಎಎಸ್, ಐಪಿಎಸ್ ಆಕಾಂಕ್ಷಿಗಳಲ್ಲಿರುವ ಪ್ರಶ್ನೆ.

ಜಗತ್ತಿನ ಯಾವುದೇ ಭಾಗದಲ್ಲಿ ಯಾವುದೇ ವಿದ್ಯಮಾನ ನಡೆದರೂ ಅದನ್ನು ಗಮನಿಸಬೇಕು. ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಕ್ರೀಡೆ, ವಿಜ್ಞಾನ, ಸಂಶೋಧನೆ, ಕೃಷಿ, ರಕ್ಷಣೆ, ಸಂವಹನ, ತಂತ್ರಜ್ಞಾನ, ಸಂಪರ್ಕ, ಶಿಕ್ಷಣ, ಹಣಕಾಸು, ಸಂವಿಧಾನ, ನ್ಯಾಯಾಂಗ, ಹವಾಮಾನ, ಆರೋಗ್ಯ... ಹೀಗೆ ಯಾವುದೇ ಕ್ಷೇತ್ರವಿರಲಿ, ಅಲ್ಲಿನ ವಿದ್ಯಮಾನಗಳು ಪೂರ್ವಭಾವಿ ಪರೀಕ್ಷೆಯ ಬಹು ಮುಖ್ಯ ಭಾಗ.


ಈವರೆಗೆ ಯಶಸ್ಸು ಗಳಿಸಿದ ಬಹುತೇಕರು ಪ್ರಚಲಿತ ವಿದ್ಯಮಾನಗಳಿಗಾಗಿ ಪತ್ರಿಕೆಗಳು, ಇಯರ್ ಬುಕ್ ಓದಿದ್ದಾಗಿ ಹೇಳಿದ್ದಾರೆ. ಕೆಲವರು ಪರಿಸರ ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳ ಮಾಹಿತಿಗಾಗಿ 'ಡೌನ್ ಟು ಅರ್ಥ್' ಪತ್ರಿಕೆಯ ವಾರ್ಷಿಕ ಪುಸ್ತಕದ ಓದು ಹೆಚ್ಚು ಪರಿಣಾಮಕಾರಿ ಎನ್ನುತ್ತಾರೆ. ಪತ್ರಿಕೆಗಳನ್ನು ಓದುವುದರ ಜೊತೆಗೆ, ರಾಜ್ಯಸಭಾ ಟಿವಿ ಚಾನೆಲ್, ನಿತ್ಯದ ಸುದ್ದಿ ವಿಶ್ಲೇಷಣೆ, ಪ್ರೆಸ್ ಇನ್ಫರ್ಮೇಶನ್ ಬ್ಯುರೊದ ಸುದ್ದಿ ಮತ್ತು ವಾಹಿನಿಗಳಲ್ಲಿ ಪ್ರಸಾರಗೊಳ್ಳುವ ರಸಪ್ರಶ್ನೆ ಕಾರ್ಯಕ್ರಮಗಳನ್ನು ತಪ್ಪದೇ ನೋಡಬೇಕು. ನಿರಂತರವಾಗಿ ಇವುಗಳನ್ನು ಹಿಂಬಾಲಿಸಬೇಕು.

ಯಾವುದಾದರೊಂದು ನಿಶ್ಚಿತವಾದ ದಿನಪತ್ರಿಕೆ, ವಾರಪತ್ರಿಕೆ, ಮಾಸಿಕಪತ್ರಿಕೆ, ಇಯರ್ ಬುಕ್, ನೀತಿ ಆಯೋಗದ ಪ್ರಕಟಣೆ, ಆರ್ಥಿಕ ಸಮೀಕ್ಷಾ ವರದಿ, ಬಜೆಟ್, ಕಾಂಪಿಟೇಷನ್ ವಿಝಾರ್ಡ್, ಕುರುಕ್ಷೇತ್ರ, ಯೋಜನಾ, ಸೈನ್ಸ್ ರಿಪೋರ್ಟರ್, ಡೌನ್ ಟು ಅರ್ಥ್‌ನಂತಹ ವಿಶ್ವಾಸಾರ್ಹ ನಿಯತಕಾಲಿಕೆಗಳನ್ನು ಓದಿ. ಭಾರತ ಸರ್ಕಾರದ ವೆಬ್‌ಸೈಟ್‌ಗಳಿಗೂ ಆಗಾಗ ಭೇಟಿ ನೀಡುತ್ತಿರಿ. ಹಲವು ತರಬೇತಿ ಕೇಂದ್ರಗಳು 'ಪ್ರಚಲಿತ ವಿದ್ಯಮಾನಗಳ' ತರಬೇತಿ ಕುರಿತು ಕೋರ್ಸ್‌ಗಳನ್ನೇ ಆರಂಭಿಸಿವೆ. ನೀವು ಶಿಸ್ತಿನಿಂದ ಅಭ್ಯಾಸ ಮಾಡಿದರೆ ಅಂಥ ಕೋರ್ಸ್‌ಗಳ ಅವಶ್ಯಕತೆ ಇರುವುದಿಲ್ಲ. ಮಾರುಕಟ್ಟೆಯಲ್ಲಿ ತರಹೇವಾರಿ ಅಧ್ಯಯನ ಸಾಮಗ್ರಿಗಳಿವೆ. ಹಾಗೆಂದು ಸಿಕ್ಕ ಸಿಕ್ಕ ಪುಸ್ತಕಗಳನ್ನು ಖರೀದಿಸಬೇಡಿ.

ಅಣಕು (Mock) ಪರೀಕ್ಷೆ

ಪೂರ್ವಭಾವಿ ಪರೀಕ್ಷೆಗೂ ಮುಂಚೆ ಅಣಕು ಪರೀಕ್ಷೆಗಳನ್ನು ಎದುರಿಸಬೇಕು. ಇದರಿಂದ ಇರುವ ಸಮಯದಲ್ಲೇ ಹೇಗೆ ಸರಿ ಉತ್ತರಗಳನ್ನು ಆಯ್ಕೆ ಮಾಡಿಕೊಳ್ಳುವುದು ಎಂದು ಗೊತ್ತಾಗುತ್ತದೆ. ಪ್ರಶ್ನೆ ಪತ್ರಿಕೆಯ ಮಾದರಿ ತಿಳಿಯುತ್ತದೆ. ಉತ್ತರಿಸುವ ವೇಗ ಹೆಚ್ಚಿಸಿಕೊಳ್ಳಲು ನೆರವಾಗುತ್ತದೆ. ಅಲ್ಲದೆ ತಾವು ಯಾವ ವಿಷಯಗಳಲ್ಲಿ ದುರ್ಬಲರು ಎಂಬುದು ಅಭ್ಯರ್ಥಿಗಳಿಗೆ ತಿಳಿಯುತ್ತದೆ.

ಅಂದ ಹಾಗೆ, 10 ರಿಂದ 15 ಅಣಕು ಪರೀಕ್ಷೆಗಳನ್ನು ತೆಗೆದುಕೊಂಡರೆ ಸಾಕು. 'ನಾನು 40 ಪರೀಕ್ಷೆ ಬರೆಯುತ್ತೇನೆ' ಎಂಬ ಹುಂಬತನ ಒಳ್ಳೆಯದಲ್ಲ. ಹೀಗೆ ಮಾಡಿದರೆ, ನಿಮ್ಮ ಶಕ್ತಿಯೆಲ್ಲಾ ಪ್ರಿಲಿಮ್ಸ್‌ಗೇ ಮುಗಿದು ಹೋಗುವ ಅಪಾಯವಿರುತ್ತದೆ. ಪರೀಕ್ಷೆಯ ನಂತರ ಬರೆದಿರುವ ಉತ್ತರ ಮತ್ತು ಗಳಿಸಿದ ಅಂಕಗಳ ವಿಶ್ಲೇಷಣೆ ಮಾಡಿ. ಅಣಕು ಪರೀಕ್ಷೆಗಳನ್ನು ನೈಜ ಪರೀಕ್ಷೆಯಂತೆಯೇ ಎದುರಿಸಬೇಕು. ಅದಕ್ಕಾಗಿ ಯಾವುದಾದರೂ ಸಂಸ್ಥೆಯಲ್ಲಿ ನಿಗದಿತವಾಗಿ ಪರೀಕ್ಷೆ ತೆಗೆದುಕೊಳ್ಳಬೇಕು. ಅಣಕು ಪರೀಕ್ಷೆಯಲ್ಲಿ ಹೆಚ್ಚು ಅಂಕ ಬಂದಾಗ ಬೀಗದೇ, ಕಡಿಮೆ ಅಂಕ ಬಂದಾಗ ಕುಸಿಯದೇ ಫಲಿತಾಂಶವನ್ನು ಸಮಚಿತ್ತದಿಂದ ಸ್ವೀಕರಿಸುವುದನ್ನು ಕಲಿಯಬೇಕು.



ಟಿಪ್ಪಣಿ ಯಶಸ್ಸಿಗೆ ಹಾದಿ

ಪ್ರಿಲಿಮ್ಸ್ ಹಾಗೂ ಮೇನ್ಸ್ ಎರಡೂ ಪರೀಕ್ಷೆ ತಯಾರಿಗೆ ಓದಿದ್ದರ ಬಗ್ಗೆ ಸರಿಯಾದ ಟಿಪ್ಪಣಿ ಮಾಡಿಕೊಳ್ಳಬೇಕು. ಟಿಪ್ಪಣಿ ಚಿಕ್ಕದಾಗಿರಲಿ. ಪ್ರತಿ ವಿಷಯಕ್ಕೂ ಪ್ರತ್ಯೇಕ ನೋಟ್‌ಬುಕ್ ಅಥವಾ ಡೈರಿ ಹಾಳೆಗಳಲ್ಲಿ ಬರೆದುಕೊಳ್ಳಬೇಕು. ಆನ್‌ಲೈನ್‌ನಲ್ಲಿ, ಮೊಬೈಲ್, ಲ್ಯಾಪ್‌ಟಾಪ್ ಸ್ಕ್ರೀನ್‌ನಲ್ಲಿ ಓದಿದರೆ ಸಾಕು ಎಂಬ ಪದ್ಧತಿ ಬಿಡಿ. ಯಾವುದಾದರೂ ವಿಷಯವನ್ನು ನೆನಪಿಟ್ಟುಕೊಳ್ಳಲು ಒಂದು ಸಾರಿಯಾದರೂ ಬರೆಯಬೇಕು. ಟಿಪ್ಪಣಿ ಬುಲೆಟ್ ಪಾಯಿಂಟ್‌ಗಳ ರೂಪದಲ್ಲಿರಲಿ. ದೀರ್ಘ ನೋಟ್ಸ್ ಬೇಡ. ಇದರಿಂದ ಮುಖ್ಯ ಪರೀಕ್ಷೆಗೂ ಸಹಾಯವಾಗುತ್ತದೆ.

ಪಠ್ಯಕ್ರಮ ಅಭ್ಯಸಿಸಿ

ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಿಗದಿಪಡಿಸಿರುವ ಪಠ್ಯಕ್ರಮದ ವಿಷಯಗಳನ್ನು ಸಮಗ್ರವಾಗಿ ಅಭ್ಯಸಿಸಬೇಕು. ಹಿಂದಿನ ವರ್ಷ ಇಂಥ ವಿಷಯಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು ಅದನ್ನೇ ಈ ಬಾರಿಯೂ ಗಮನಹರಿಸುತ್ತೇನೆ ಎನ್ನುವುದು ನೆರವಿಗೆ ಬರಲಾರದು. ಪ್ರತಿ ವರ್ಷವೂ ಒಂದೊಂದು ವಿಷಯವನ್ನು ಪ್ರಮುಖವಾಗಿಸಿ ಪ್ರಶ್ನೆಗಳಿರುತ್ತವೆ. ಪುರಾತನ ಮತ್ತು ಮಧ್ಯಕಾಲೀನ ಭಾರತದ ವ್ಯವಸ್ಥೆ, ಸಂಸ್ಕೃತಿ, ಆಚರಣೆ, ಪದ್ಧತಿಗಳ ಬಗ್ಗೆ ಸಾಮಾನ್ಯವಾಗಿ ಹೆಚ್ಚಿನ ಪ್ರಶ್ನೆಗಳಿರುತ್ತವೆ.

ಪುನರ್‌ಮನನ ಮಾಡಿ

ಪರೀಕ್ಷೆಗೆ ಕೇವಲ ಒಂದು ತಿಂಗಳಿದೆ ಎನ್ನುವಾಗ ಹೊಸ ವಿಷಯ ಕೈಗೆತ್ತಿಕೊಳ್ಳಬೇಡಿ. ವಿಷಯ ಅತ್ಯಂತ ಸಕಾಲಿಕ ಮತ್ತು ಮಹತ್ವದ್ದು ಎನ್ನಿಸಿದರೆ ಮಾತ್ರ ಗಮನ ಹರಿಸಿ. ಅದುವರೆಗೂ ಓದಿದ್ದನ್ನು ರಿವಿಷನ್ ಮಾಡಲು ಕೊನೆಯ ತಿಂಗಳನ್ನು ಮೀಸಲಿಡಿ.

ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳ ಮೇಲೆ ಗಮನ ಹರಿಸಿರಿ. ಅಲ್ಲಿನ ಪ್ರಶ್ನೆಗಳಿಗಿಂತ ಇಡೀ ಪ್ರಶ್ನೆ ಪತ್ರಿಕೆ ಹೇಗಿರುತ್ತದೆ ಎಂಬುದರ ಬಗ್ಗೆ ತೀಕ್ಷ್ಣ ಗಮನವಿರಲಿ.

(ಮುಂದಿನ ವಾರ: ಪಾಠ: 4 - ಸ್ವಯಂ ಕಲಿಕೆ ಅಥವಾ ಸ್ಪೆಷಲ್ ಕೋಚಿಂಗ್ - ಯಾವುದು ಸೂಕ್ತ?)

ಕೆಪಿಎಸ್‌ಸಿ ವಿವಿಧ ಹುದ್ದೆಗಳಿಗೆ ಅರ್ಜಿ

ಕರ್ನಾಟಕ ಲೋಕಸೇವಾ ಆಯೋಗವು(ಕೆಪಿಎಸ್‌ಸಿ) ಪೌರಾಡಳಿತ ನಿರ್ದೇಶನಾಲಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ (ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ) ಖಾಲಿ ಇರುವ ಗ್ರೂಪ್ 'ಸಿ' ವೃಂದದ ವಿವಿಧ ಹುದ್ದೆಗಳ ಭರ್ತಿಗಾಗಿ ಅರ್ಜಿ ಆಹ್ವಾನಿಸಿದೆ.

ಕಿರಿಯ ಎಂಜಿನಿಯರ್(ಸಿವಿಲ್), ಕಿರಿಯ ಆರೋಗ್ಯ ನಿರೀಕ್ಷಕರು, ಎಲೆಕ್ಟ್ರೀಷಿಯನ್ ಗ್ರೇಡ್-1 ಮತ್ತು ಗ್ರೇಡ್ 2, ನೀರು ಸರಬರಾಜು ಆಫರೇಟರ್, ಸಹಾಯಕ ನೀರು ಸರಬರಾಜು ಆಪರೇಟರ್ ಸೇರಿದಂತೆ ಒಟ್ಟು 410 ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವುದಾಗಿ ಆಯೋಗ ಇತ್ತೀಚೆಗೆ ಅಧಿಸೂಚನೆ ಹೊರಡಿಸಿದೆ.

ವಿದ್ಯಾರ್ಹತೆ: ಕಿರಿಯ ಎಂಜಿನಿಯರ್ ಹುದ್ದೆಗೆ ಮೂರು ವರ್ಷಗಳ ಅವಧಿಯ ಸಿವಿಲ್ ಎಂಜಿನಿಯರಿಂಗ್ ವಿಷಯದಲ್ಲಿ ಡಿಪ್ಲೊಮಾ ಪಾಸಾಗಿರಬೇಕು. ಎಲೆಕ್ಟ್ರಿಲ್ ಎಂಜಿನಿಯರ್ ಹುದ್ದೆಗೆ ಎರಡು ವರ್ಷಗಳ ಅವಧಿಯ ಎಲೆಕ್ಟ್ರಿಕಲ್ ಅಥವಾ ಫಿಟರ್‌ನಲ್ಲಿ ಐಟಿಐ ಜೊತೆಗೆ, ಒಂದು ವರ್ಷ ಅಪ್ರೆಂಟಿಷಿಪ್ ಟ್ರೈನಿಂಗ್ ಪೂರ್ಣಗೊಳಿಸಿರಬೇಕು. ಕಿರಿಯ ಆರೋಗ್ಯ ನಿರೀಕ್ಷಕರ ಹುದ್ದೆಗೆ ಎರಡು ವರ್ಷಗಳ ಅವಧಿಯ ಹೆಲ್ತ್ ಇನ್‌ಸ್ಪೆಕ್ಟರ್ ಡಿಪ್ಲೊಮಾ ಪೂರ್ಣಗೊಳಿಸಿರುವವರು ಅರ್ಜಿ ಸಲ್ಲಿಸಬಹುದು.

ವಯೋಮಿತಿ: ಎಲ್ಲ ಹುದ್ದೆಗಳಿಗೆ ಕನಿಷ್ಠ 18 ವರ್ಷ, ಗರಿಷ್ಠ 35 ವರ್ಷ ವಯೋಮಿತಿ ನಿಗದಿಪಡಿಸಲಾಗಿದೆ. ಎಸ್.ಸಿ, ಎಸ್.ಟಿ ಅಭ್ಯರ್ಥಿಗಳಿಗೆ 5 ವರ್ಷಗಳು ಮತ್ತು ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 3 ವರ್ಷಗಳು ಹಾಗೂ ಅಂಗವಿಕಲರಿಗೆ 10 ವರ್ಷಗಳಷ್ಟು ವಯೋಮಿತಿ ಸಡಿಲಿಸಲಾಗಿದೆ.

ಅರ್ಜಿ ಸಲ್ಲಿಕೆ ವಿವರ: ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ಇಂದಿನಿಂದ(ಮಾ. 31) ಅರ್ಜಿ ಸಲ್ಲಿಕೆ ಆರಂಭ. ಏ. 29 ಅರ್ಜಿ ಸಲ್ಲಿಕೆಗೆ ಕೊನೆ ದಿನ.

ಎರಡು ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ಅಧಿಸೂಚನೆ ಮಾಹಿತಿಗಾಗಿ https://kpsc.kar.nic.in/Notification%20DEPT%20OF%20MUNICIPAL%20ADMN%2019... ಲಿಂಕ್ ನೋಡಿ.

188 ಸಹಾಯಕ ಎಂಜಿನಿಯರ್ ನೇಮಕಾತಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಎಂಜಿನಿಯರ್ (ಗ್ರೂಪ್ ಬಿ) ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಏ.18 ಕೊನೆಯ ದಿನ.

ಹುದ್ದೆಗಳ ಸಂಖ್ಯೆ: 188 ಹುದ್ದೆಗಳು

ವಿದ್ಯಾರ್ಹತೆ: ಬಿ.ಇ ಪದವಿ ಪಡೆದಿರಬೇಕು. ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡುವುದು.

ವಯೋಮಿತಿ: ಕನಿಷ್ಠ 18 ವರ್ಷ ಹಾಗೂ ಗರಿಷ್ಠ 35 ವರ್ಷ ವಯಸ್ಸಾಗಿರಬೇಕು. ವಯೋಮಿತಿ ಮಾಹಿತಿಗೆ ವೆಬ್‌ಸೈಟ್: https://www.kpsc.kar.nic.in ನೋಡಿ.

ನೇಮಕಾತಿ ವಿಧಾನ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ನೇಮಕಾತಿ ನಡೆಯಲಿದೆ.

ಅಭ್ಯರ್ಥಿಗಳು ಅರ್ಜಿಯನ್ನು ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಇತರೆ ವಿಧಾನದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಜೂನಿಯರ್ ಎಂಜಿನಿಯರ್ ಹುದ್ದೆ

ರಾಜ್ಯದ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಖಾಲಿ ಇರುವ ಜೂನಿಯರ್ ಎಂಜಿನಿಯರ್ ಹುದ್ದೆಗಳ ನೇಮಕಾತಿಗಾಗಿ ಕರ್ನಾಟಕ ಲೋಕಸೇವಾ ಆಯೋಗ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳ ಸಂಖ್ಯೆ: 136 ಹುದ್ದೆಗಳು


ವಿದ್ಯಾರ್ಹತೆ: ಡಿಪ್ಲೊಮಾ ಅಥವಾ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿ.ಇ ಪದವಿ ಪಡೆದಿರಬೇಕು.

ವಯೋಮಿತಿ: ಕನಿಷ್ಠ 18 ವರ್ಷ ಹಾಗೂ ಗರಿಷ್ಠ 35 ವರ್ಷ ವಯಸ್ಸಾಗಿರಬೇಕು.

ನೇಮಕಾತಿ ವಿಧಾನ: ಲಿಖಿತ ಪರೀಕ್ಷೆ ಹಾಗೂ ಸಂದರ್ಶನ

ಅರ್ಜಿ ಸಲ್ಲಿಕೆ ಕೊನೆಯ ದಿನಾಂಕ: ಏಪ್ರಿಲ್ 27, 2022

ವೆಬ್‌ಸೈಟ್: https://www.kpsc.kar.nic.in



ಪ್ರಜಾವಾಣಿ ಉದ್ಯೋಗ ವಾರ್ತೆ

ಕರ್ನಾಟಕ ಅಪೆಕ್ಸ್ ಬ್ಯಾಂಕ್: 79 ಸಹಾಯಕರು ಹುದ್ದೆಗಳಿಗೆ ಅರ್ಜಿ

ಕರ್ನಾಟಕ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ ಸಹಾಯಕ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

- ಹುದ್ದೆಗಳ ಸಂಖ್ಯೆ: 79
- ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ ಪದವಿ ಪಡೆದಿರಬೇಕು.
- ವಯೋಮಿತಿ: ಕನಿಷ್ಠ 18 ವರ್ಷ, ಗರಿಷ್ಠ 35
- ಅರ್ಜಿ ಶುಲ್ಕ: ಸಾಮಾನ್ಯ ವರ್ಗ, ಒಬಿಸಿ ಅಭ್ಯರ್ಥಿಗಳಿಗೆ ₹1000, ಎಸ್‌ಸಿ, ಎಸ್‌ಟಿ ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ ₹500
- ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ, ಸಂದರ್ಶನದ ಮೂಲಕ ನೇಮಕ ನಡೆಯಲಿದೆ.
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಏಪ್ರಿಲ್ 16, 2022
- **ವೆಬ್‌ಸೈಟ್:** https://www.karnatakaapex.com

ಕರ್ನಾಟಕ ಹೈಕೋರ್ಟ್‌ನಲ್ಲಿ ಅಸಿಸ್ಟೆಂಟ್ ಸೆಕ್ರೆಟರಿ ಹುದ್ದೆಗಳು

ಹೈಕೋರ್ಟ್‌ನಲ್ಲಿ ಖಾಲಿ ಇರುವ 54 ಅಸಿಸ್ಟೆಂಟ್ ಕೋರ್ಟ್ ಸೆಕ್ರೆಟರಿ (ಶೀಘ್ರಲಿಪಿಗಾರರು) ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು.

- ವಿದ್ಯಾರ್ಹತೆ: ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಅಥವಾ ಡಿಪ್ಲೊಮಾ ಮುಗಿಸಿರಬೇಕು. ಪದವಿ ಮುಗಿಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ವಯೋಮಿತಿ: ಅರ್ಜಿ ಸಲ್ಲಿಸುವ ಅಭ್ಯರ್ಥಿಗಳ ವಯಸ್ಸು 18 ವರ್ಷ ದಾಟಿರಬೇಕು, 35 ವರ್ಷ ಮೀರಿರಬಾರದು. ಇತರೆ ಹಿಂದುಳಿದ ವರ್ಗಗಳಿಗೆ 3 ವರ್ಷ ಹಾಗೂ ಎಸ್‌ಸಿ-ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷ ವಯೋಮಿತಿ ಸಡಿಲಿಕೆ ಇದೆ.
- ಅರ್ಜಿ ಸಲ್ಲಿಕೆ ಕಡೆಯ ದಿನಾಂಕ: ಏಪ್ರಿಲ್ 7, 2022
- **ಹೆಚ್ಚಿನ ಮಾಹಿತಿಗೆ:** https://recruitmenthck.kar.nic.in/hck/acs/home.php

ಗಣಿತ, ವಿಜ್ಞಾನ ಪತ್ರಿಕೆಗೆ ಹೀಗಿರಲಿ ತಯಾರಿ

ಆರ್.ಬಿ. ಗುರುಬಸವರಾಜ

ಪ್ರಾಥಮಿಕ ಶಾಲಾ ಸಹಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆ

ವಿಜ್ಞಾನ ಪದವೀಧರ ಶಿಕ್ಷಕರಾಗಲು ಸಹಶಿಕ್ಷಕರ ನೇಮಕಾತಿಗಾಗಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯ ಪತ್ರಿಕೆ-2 (ಗಣಿತ ಮತ್ತು ವಿಜ್ಞಾನ)ರಲ್ಲಿ ಉತ್ತಮ ಅಂಕಗಳಿಸಬೇಕು. ಇದು 150 ಅಂಕಗಳ ಪತ್ರಿಕೆಯಾ ಗಿದ್ದು, ಅಭ್ಯರ್ಥಿಗಳು ಶೇ 45 ಅಂಕ ಗಳಿಕೆ ಕಡ್ಡಾಯ. ಅಲ್ಲದೇ ಇಲ್ಲಿ ಗಳಿಸಿದ ಅಂಕಗಳನ್ನು ಮೆರಿಟ್‌ಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಈ ಪತ್ರಿಕೆಯಲ್ಲಿ ಹೆಚ್ಚು ಅಂಕಗಳಿಸುವುದು ಬಹು ದೊಡ್ಡ ಸವಾಲು.

ಈಗ ಸಮಯ ಕಡಿಮೆ ಇರುವುದರಿಂದ, ಹೆಚ್ಚು ಅಧ್ಯಯನ ಮಾಡಬೇಕು. ಹಾಗಂತ ಅಭ್ಯರ್ಥಿಗಳು ಭಯ ಬೀಳುವ ಅಗತ್ಯವಿಲ್ಲ. ಅದಕ್ಕೊಂದಿಷ್ಟು ಪೂರ್ವಯೋಜಿತ ತಯಾರಿ ಅಗತ್ಯ.

ನಿರ್ದಿಷ್ಟ ವೇಳಾಪಟ್ಟಿ ಇರಲಿ: ಗಣಿತ ಮತ್ತು ವಿಜ್ಞಾನ ಶಿಕ್ಷಕರು ಮೂರು ಪತ್ರಿಕೆ (ಪತ್ರಿಕೆ-1, 2 ಮತ್ತು 3)ಗಳಿಗೆ ಸಿದ್ಧತೆ ಮಾಡಿಕೊಳ್ಳಬೇಕಿದೆ. ಈ ಆಧಾರದಲ್ಲಿ ನಿರ್ದಿಷ್ಟ ವೇಳಾಪಟ್ಟಿ ತಯಾರಿಸಿಕೊಳ್ಳಿ. ಅದರಲ್ಲಿ ಪತ್ರಿಕೆ-1ಕ್ಕೆ 4 ಗಂಟೆ, ಪತ್ರಿಕೆ-2ಕ್ಕೆ 6 ಗಂಟೆ ಹಾಗೂ ಪತ್ರಿಕೆ-3ಕ್ಕೆ 2 ಗಂಟೆಗಳ ಸಮಯ ಮೀಸಲಿಡಿ. ಪತ್ರಿಕೆ-2 ಕ್ಕೆ ಮೀಸಲಾದ 6 ಗಂಟೆಗಳಲ್ಲಿ ಗಣಿತ ಹಾಗೂ ವಿಜ್ಞಾನ ಅಧ್ಯಯನಕ್ಕೆ ತಲಾ 3 ಗಂಟೆ ಮೀಸಲಿಡಿ.

ಪತ್ರಿಕೆಯ ಸ್ವರೂಪ ಗಮನಿಸಿ: ಮೇಲೆ ತಿಳಿಸಿದಂತೆ ಗಣಿತ ಮತ್ತು ವಿಜ್ಞಾನ ಪತ್ರಿಕೆಯು 150 ಅಂಕಗಳಿಗೆ ಮೀಸಲಾಗಿದ್ದು, ಇದರಲ್ಲಿ 50 ಅಂಕಗಳಿಗೆ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ 100 ಅಂಕಗಳಿಗೆ ವಿವರಾಣಾತ್ಮಕ ಪ್ರಶ್ನೆಗಳಿರುತ್ತವೆ. ಇದರಲ್ಲಿ ಪ್ರತಿ ವಿಷಯದಲ್ಲೂ ಬೋಧನಾ ಪದ್ಧತಿಗೆ ಅನುಗುಣವಾಗಿ ಶೇ 8 ರಿಂದ10 ಅಂಕಗಳ ಪ್ರಶ್ನೆಗಳಿರುತ್ತವೆ. ಒಟ್ಟಾರೆ ಪ್ರತಿ ವಿಷಯದಲ್ಲೂ ಅಂದರೆ ಗಣಿತಕ್ಕೆ 75 ಹಾಗೂ ವಿಜ್ಞಾನಕ್ಕೆ 75 ಅಂಕಗಳಿಗೆ ಪ್ರಶ್ನೆಗಳಿರುತ್ತವೆ.

ಪಠ್ಯದ ಖಚಿತತೆ ಇರಲಿ: ಈಗಾಗಲೇ ಇಲಾಖೆಯು ಸಹಶಿಕ್ಷಕರ ನೇಮಕಾತಿ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದ ಪಠ್ಯಕ್ರಮವನ್ನು ಬಿಡುಗಡೆ ಮಾಡಿದೆ. ಅದರನ್ವಯ ವಿಷಯವನ್ನು ಅಧ್ಯಯನ ಮಾಡಿ. ಇದಕ್ಕಾಗಿ 4 ರಿಂದ 12 ನೇ ತರಗತಿವರೆಗಿನ ಎನ್.ಸಿ.ಇ.ಆರ್.ಟಿ ಹಾಗೂ ಕರ್ನಾಟಕ ರಾಜ್ಯ ಪಠ್ಯ ಪುಸ್ತಕ ಮಂಡಳಿಯ ಪಠ್ಯಪುಸ್ತಕಗಳನ್ನು ಅಧ್ಯಯನ ಮಾಡಿ.

ಅಧ್ಯಯನದ ಸುಲಭರೂಪಕ್ಕಾಗಿ ಗಣಿತದಲ್ಲಿ ಅಂಕಗಣಿತ, ಬೀಜಗಣಿತ ಹಾಗೂ ರೇಖಾಗಣಿತದ ಮೂಲಾಂಶಗಳನ್ನು ಅರ್ಥೈಸಿಕೊಳ್ಳಿ. ಮೂರೂ ವಿಭಾಗಗಳಲ್ಲಿ ಗಣಿತದ ಮೂಲಾಂಶಗಳಾದ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರಗಳನ್ನು ವಿವಿಧ ಹಂತಗಳಲ್ಲಿ ಅನ್ವಯಿಸುವ ಹಾಗೂ ಸಮಸ್ಯೆ ಬಿಡಿಸುವ ವಿಧಾನಗಳನ್ನು ತಿಳಿದುಕೊಳ್ಳಿ. ಅದರಂತೆ ವಿಜ್ಞಾನದಲ್ಲಿ ಭೌತವಿಜ್ಞಾನ ರಸಾಯನವಿಜ್ಞಾನ ಹಾಗೂ ಜೀವವಿಜ್ಞಾನ ಪ್ರತ್ಯೇಕವಾಗಿ ಅಧ್ಯಯನ ಮಾಡಿ. ಪ್ರತಿ ವಿಭಾಗದ ಮೂಲ ಪರಿಕಲ್ಪನೆಯನ್ನು ಅರ್ಥೈಸಿಕೊಂಡರೆ ಯಾವುದೇ ಪ್ರಶ್ನೆಗೂ ಉತ್ತರಿಸುವ ಸಾಮರ್ಥ್ಯ ಬೆಳೆಯುತ್ತದೆ.

ಟಿಪ್ಪಣಿ ಮಾಡಿಕೊಳ್ಳಿ: ಗಣಿತ ಹಾಗೂ ವಿಜ್ಞಾನ ವಿಷಯದಲ್ಲಿ ತತ್ವಗಳು, ಸಿದ್ಧಾಂತಗಳು ಹಾಗೂ ಸೂತ್ರಗಳ ಸಂಖ್ಯೆ ಸಾಕಷ್ಟಿರುತ್ತವೆ. ಪ್ರತಿ ವಿಭಾಗದಲ್ಲಿನ ತತ್ವ, ಸಿದ್ಧಾಂತ ಹಾಗೂ ಸೂತ್ರಗಳನ್ನು ಪ್ರತ್ಯೇಕವಾಗಿ ಟಿಪ್ಪಣಿ ಮಾಡಿಕೊಳ್ಳಿ. ಪರಿಕಲ್ಪನೆ ಅರ್ಥೈಸಿಕೊಳ್ಳಲು ಇದು ತುಂಬಾ ಸಹಕಾರಿ. ಪರಿಕಲ್ಪನೆಯ ಸ್ಪಷ್ಟ ಚಿತ್ರಣಕ್ಕಾಗಿ ಮೈಂಡ್‌ಮ್ಯಾಪ್ ತಂತ್ರವನ್ನು ಬಳಸಿ ಟಿಪ್ಪಣಿ ಮಾಡಿಕೊಳ್ಳಿ.

ಬರವಣಿಗೆಗೆ ಒತ್ತು ಕೊಡಿ: ಪತ್ರಿಕೆ-2 ರಲ್ಲಿ 100 ಅಂಕಗಳ ಪ್ರಶ್ನೆಗಳಿಗೆ ವಿವರಣಾತ್ಮಕವಾಗಿ ಉತ್ತರ ಬರೆಯುವುದೇ ಬಹುದೊಡ್ಡ ಸವಾಲು. ಇದನ್ನು ಸುಲಭಗೊಳಿಸಲು ಪ್ರತಿದಿನ ಕನಿಷ್ಠ 3 ರಿಂದ 4 ಗಂಟೆಗಳ ಕಾಲ ಬರವಣಿಗೆ ತಾಲೀಮು ಮಾಡಿ. ಗಣಿತದಲ್ಲಿ ಸಮಸ್ಯೆಗಳನ್ನು ಹಂತಹಂತವಾಗಿ ಬಿಡಿಸುವುದನ್ನು ರೂಢಿಸಿಕೊಳ್ಳಿ. ವಿಜ್ಞಾನದಲ್ಲಿ ನಿರ್ದಿಷ್ಟ ವಿಷಯವನ್ನು ಪ್ರಶ್ನೆಯ ಪ್ರಸ್ತುತತೆ ಮತ್ತು ಅಂಕಕ್ಕೆ ತಕ್ಕಂತೆ ವಿವರಿಸುವ, ವಿಶ್ಲೇಷಿಸುವ ಹಾಗೂ ತಾರ್ಕಿಕವಾಗಿ ಉತ್ತರ ಬರೆಯುವ ಕೌಶಲ ಬೆಳೆಸಿಕೊಳ್ಳಿ.



ಹಳೆಯ ಪ್ರಶ್ನೆಪತ್ರಿಕೆ ಬಿಡಿಸಿ: ಪ್ರಶ್ನೆಗಳಿಗೆ ಉತ್ತರಿಸುವ ಕೌಶಲ ಬೆಳೆಸಿಕೊಳ್ಳಲು ಹಾಗೂ ಪ್ರಶ್ನೆಗಳ ಸ್ವರೂಪ ಅರಿಯಲು ಹಳೆಯ ಪ್ರಶ್ನೆಪತ್ರಿಕೆಗಳು ಹೆಚ್ಚು ಸಹಕಾರಿಯಾಗಿವೆ. ಅವುಗಳ ಸ್ವರೂಪ ಗಮನಿಸಿದರೆ ನಿಮ್ಮ ಓದಿಗೊಂದು ಸ್ಪಷ್ಟತೆ ಸಿಗುತ್ತದೆ.

ಪರಿಣಿತರ ಸಲಹೆ ಪಡೆಯಿರಿ: ಪ್ರತಿ ವಿಷಯದ ಬಗ್ಗೆ ಹೆಚ್ಚುವರಿ ಹಾಗೂ ಪ್ರಸ್ತುತ ಮಾಹಿತಿ ಪಡೆಯಲು ವಿಷಯ ಪರಿಣಿತರ ಸಲಹೆ ಪಡೆಯಿರಿ. ಶಿಕ್ಷಣ ಇಲಾಖೆಯು ಏಪ್ರಿಲ್ 1 ರಿಂದ ಪ್ರತಿ ಬ್ಲಾಕ್ ಹಂತದಲ್ಲಿ ವಿಷಯ ಪರಿಣಿತರ ತಂಡದೊಂದಿಗೆ ಉಚಿತ ಪರೀಕ್ಷಾ ತರಬೇತಿ ನೀಡಲು ಸಿದ್ಧತೆ ಮಾಡಿಕೊಂಡಿದೆ. ಇದರ ಸದುಪಯೋಗ ಪಡೆದುಕೊಳ್ಳಿ.

ಇನ್ನೂ ಏನೇನು ಓದಬೇಕು?

ಸಹ ಶಿಕ್ಷಕರ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ವಿಜ್ಞಾನ, ಸಮಾಜ ವಿಜ್ಞಾನ ಮತ್ತು ಗಣಿತ ಪುಸ್ತಕಗಳ ಜೊತೆಗೆ, 6 ರಿಂದ 10ನೇ ತರಗತಿ ವರೆಗಿನ ಕನ್ನಡ ಭಾಷೆ ಮತ್ತು ಸಾಹಿತ್ಯ ಚರಿತ್ರೆಯ ಪ್ರಾಥಮಿಕ ಜ್ಞಾನದ ಜೊತೆಗೆ ವ್ಯಾಕರಣ ಓದಿಕೊಳ್ಳಬೇಕು. 6, 7, 8ನೇ ತರಗತಿಯ ಪ್ರಥಮ ಭಾಷೆ ಕನ್ನಡ ಪುಸ್ತಕಗಳು ಮತ್ತು ಇಂಗ್ಲಿಷ್ ಭಾಷೆಯ ಪಠ್ಯಪುಸ್ತಕಗಳ ಅಧ್ಯಾಯದ ಕೊನೆಯಲ್ಲಿ ನೀಡಲಾಗುವ ವ್ಯಾಕರಣದ ಭಾಗ, ಕವಿ, ಕೃತಿ ಪರಿಚಯ ಓದಿಕೊಳ್ಳಬೇಕು. ಶಿಶು ಮನೋವಿಜ್ಞಾನ ಮತ್ತು ವಿಕಸನಕ್ಕೆ ಸಂಬಂಧಿಸಿದಂತೆ ಡಿ.ಇಡಿ ಪದವಿಯಲ್ಲಿರುವ ಪಠ್ಯಗಳನ್ನು ಓದಬಹುದು.

(ಗಣಿತ ಮತ್ತು ವಿಜ್ಞಾನ ಪತ್ರಿಕೆಗಳನ್ನು ಬರೆಯುವ ಅಭ್ಯರ್ಥಿಗಳು 1 ರಿಂದ 10ನೇ ತರಗತಿಯ ಪಠ್ಯಪುಸ್ತಕ ಗಳಿಗಾಗಿ https://ktbs.kar.nic.in/New/index.html#!/textbook ಈ ಲಿಂಕ್ ಕ್ಲಿಕ್ ಮಾಡಿ ಮತ್ತು ಪಿಯುಸಿ ಕನ್ನಡ ಮಾಧ್ಯಮದ ಪಠ್ಯ ಪುಸ್ತಕಗಳಿಗಾಗಿ https://www.governmentexams.co.in/1st-puc-textbooks/ ಈ ಲಿಂಕ್ ಕ್ಲಿಕ್ ಮಾಡಿ.)

ಪಿಯುಸಿ ದಿಕ್ಸೂಚಿ

ಮಾದರಿ ಪ್ರಶ್ನೋತ್ತರ ಆಲ್ಕೋಹಾಲ್

ರಸಾಯನ ಶಾಸ್ತ್ರ

52) ಮಿಥೆನೊಲ್ ಮತ್ತು ಈಥೆನೊಲ್ ಆಲ್ಕೋಹಾಲ್‌ಗಳಲ್ಲಿ ಎರಡು ಮುಖ್ಯವಾದ ವಾಣಿಜ್ಯಕ ಆಲ್ಕೋಹಾಲ್‌ಗಳಾಗಿವೆ. ಇವುಗಳ ಬಗ್ಗೆ ಬರೆಯಿರಿ

ಉತ್ತರ:- ಮಿಥೆನೊಲ್ : CH_3OH ಕಟ್ಟಿಗೆಯ ಅಸವನ ಭಟ್ಟಿ ಇಳಿಸುವಿಕೆಯಿಂದ ಉತ್ಪತ್ತಿಯಾಗುವ ಮಿಥೆನೋಲ್ ಅನ್ನು CH_3OH ವುಡ್‌ಸ್ಪಿರಿಟ್ ಎಂದು ಸಹ ಕರೆಯುತ್ತಾರೆ. ಈ ದಿನಗಳಲ್ಲಿ ಹೆಚ್ಚಿನ ಒತ್ತಡ ಮತ್ತು ಉಷ್ಣತೆಯಲ್ಲಿ ಮತ್ತು ಕ್ರಿಯಾವರ್ಧಕಗಳಾದ $ZnO-CrO_3$ ಗಳ ಉಪಸ್ಥಿತಿಯಲ್ಲಿ ಇಂಗಾಲದ ಮೊನೋಆಕ್ಸೈಡ್‌ನ ಕ್ರಿಯಾವರ್ಧಿತ ಹೈಡ್ರೋಜನೀಕರಣದಿಂದ ಹೆಚ್ಚಾಗಿ ಮಿಥೆನೊಲ್ ಅನ್ನು ತಯಾರಿಸಲಾಗುತ್ತದೆ.

ಮಿಥೆನೊಲ್ ಒಂದು ವರ್ಣರಹಿತ ದ್ರವ ಮತ್ತು ಅದು 337K ಉಷ್ಣತೆಯಲ್ಲಿ ಕುದಿಯುತ್ತದೆ. ಇದು ಅತೀ ವಿಷಕಾರಿ ಸ್ವಭಾವ ಹೊಂದಿದೆ. ಮಿಥೆನೊಲ್‌ನ ಕಡಿಮೆ ಪ್ರಮಾಣದ ಸೇವನೆಯೂ ಸಹ ಕುರುಡುತನವನ್ನು ಉಂಟುಮಾಡುತ್ತದೆ ಮತ್ತು ಹೆಚ್ಚಿನ ಪ್ರಮಾಣದ ಸೇವನೆಯು ಮಾರಣಾಂತಿಕವಾಗಿದೆ. ಮಿಥೆನೊಲ್ ಅನ್ನು ಪೇಂಟ್‌ಗಳು, ಮೆರುಗೆಣ್ಣೆಗಳು ಮತ್ತು ಮುಖ್ಯವಾಗಿ ಪಾರಮಾಲ್ಡಿಹೈಡ್‌ಗಳನ್ನು ತಯಾರಿಸಲು ದ್ರಾವಕವಾಗಿ ಉಪಯೋಗಿಸಲಾಗುತ್ತದೆ.



ಈಥೆನೊಲ್: ವಾಣಿಜ್ಯಕವಾಗಿ ಈಥೇನೊಲ್ ಅನ್ನು ಕಿಣ್ವನ ಕ್ರಿಯೆಯಿಂದ ಪಡೆಯಲಾಗುತ್ತೆ. ಸಕ್ಕರೆಯಿಂದ ಪಡೆಯುವುದು ಅತ್ಯಂತ ಪ್ರಾಚೀನ ವಿಧಾನ ಕಾಕಂಬಿ, ಕಬ್ಬು, ದ್ರಾಕ್ಷಿ ಅಥವಾ ಮುಂತಾದ ಹಣ್ಣುಗಳಲ್ಲಿರುವ ಸಕ್ಕರೆಯೂ ಇನ್ವರ್ಟೇಸ್ ಕಿಣ್ವದ ಉಪಸ್ಥಿತಿಯಲ್ಲಿ ಗ್ಲೂಕೋಸ್ ಮತ್ತು ಫ್ರಕ್ಟೋಸ್ (ಎರಡೂ ಕೂಡ ಅಣುಸೂತ್ರ $C_6H_{12}O_6$ ಹೊಂದಿವೆ) ಆಗಿ ಪರಿವರ್ತನೆಯಾಗುತ್ತದೆ. ಯೀಸ್ಟ್‌ನಲ್ಲಿ ಕಂಡು ಬರುವ ಕಿಣ್ವವಾದ ಝೈಮೇಸ್ ಉಪಸ್ಥಿತಿಯಲ್ಲಿ ಗ್ಲೂಕೋಸ್ ಮತ್ತು ಫ್ರಕ್ಟೋಸ್ ಕಿಣ್ವನ ಕ್ರಿಯೆಗೆ ಒಳಪಡುತ್ತವೆ.

ದ್ರಾಕ್ಷಾರಸ(wine) ತಯಾರಿಕೆಯಲ್ಲಿ, ದ್ರಾಕ್ಷಿಯು, ಸಕ್ಕರೆ ಮತ್ತು ಯೀಸ್ಟನ್ ಆಕರವಾಗಿದೆ. ದ್ರಾಕ್ಷಿಯು ಮಾಗಿದಂತೆ ಸಕ್ಕರೆಯ ಪ್ರಮಾಣ ಹೆಚ್ಚುತ್ತದೆ ಮತ್ತು ಹೊರಗಿನ ಸಿಪ್ಪೆಯ ಮೇಲೆ ಯೀಸ್ಟ್ ಬೆಳೆಯುತ್ತದೆ. ದ್ರಾಕ್ಷಿಯನ್ನು ಜಜ್ಜಿದಾಗ ಸಕ್ಕರೆ ಮತ್ತು ಕಿಣ್ವಗಳು ಸಂಪರ್ಕಕ್ಕೆ ಬರುತ್ತವೆ ಮತ್ತು ಕಿಣ್ವನ ಕ್ರಿಯೆ ಆರಂಭವಾಗುತ್ತದೆ. ಕಿಣ್ವನ ಕ್ರಿಯೆಯು ಅವಾಯುವಿಕ ಸ್ಥಿತಿಯಲ್ಲಿ ಅಂದರೆ ಗಾಳಿಯ ಅನುಪಸ್ಥಿತಿಯಲ್ಲಿ ನಡೆಯುತ್ತದೆ. ಕಿಣ್ವನ ಕ್ರಿಯೆಯಲ್ಲಿ ಇಂಗಾಲದಡೈ ಆಕ್ಸೈಡ್ ಬಿಡುಗಡೆಯಾಗುತ್ತದೆ ಒಮ್ಮೆ ಆಲ್ಕೋಹಾಲ್‌ನ ಉತ್ಪತ್ತಿಯ ಪ್ರಮಾಣವು ಶೇ 14 ಗಿಂತ ಹೆಚ್ಚಿದಾಗ ಝೈಮೇಸ್‌ನ ವರ್ತನೆಯು ಪ್ರತಿಬಂಧಿಸಲ್ಪಡುತ್ತದೆ. ಗಾಳಿಯು ಕಿಣ್ವನ ಮಿಶ್ರಣವನ್ನು ಪ್ರವೇಶಿಸಿದರೆ ಆಗ ಗಾಳಿಯಲ್ಲಿರುವ ಆಮ್ಲಜನಕವು ಎಥೆನೋಲ್ ಅನ್ನು ಎಥೆನೋಯಿಕ್ ಆಮ್ಲವಾಗಿ ಉತ್ಕರ್ಷಿಸಿ, ನಂತರ ಆಲ್ಕೋಹಾಲಿಕ್ ಪಾನೀಯಗಳ ರುಚಿಯನ್ನು ಕೆಡಿಸುತ್ತದೆ.

ಎಥೆನೋಲ್ ಒಂದು ವರ್ಣರಹಿತ ದ್ರವವಾಗಿದ್ದು, ಅದರ ಕುದಿಯುವ ಬಿಂದು 351K ಆಗಿದೆ. ಅದು ಪೇಂಟ್ ಕಾರ್ಖಾನೆ ಮತ್ತು ಅಸಂಖ್ಯಾತ ಇಂಗಾಲದ ಸಂಯುಕ್ತಗಳ ತಯಾರಿಕೆಯಲ್ಲಿ ದ್ರಾವಕವಾಗಿ ಉಪಯೋಗಿಸಲ್ಪಡುತ್ತದೆ. ತಾಮ್ರದ ಸಲ್ಫೇಟ್ (ಬಣ್ಣ ಕೊಡಲು) ಪಿರಿಡೀನ್ (ದುರ್ವಾಸನೆ ದ್ರವ)ಗಳನ್ನು ವಾಣಿಜ್ಯಕ ಆಲ್ಕೋಹಾಲಿಗೆ ಮಿಶ್ರಣ ಮಾಡಿ ಕುಡಿಯಲು ಯೋಗ್ಯವಾಗದಂತೆ ಮಾಡುತ್ತಾರೆ. ಇದನ್ನು ಆಲ್ಕೋಹಾಲ್‌ಗಳ ಗುಣನಾಶ (Denaturation) ಎಂದು ಕರೆಯುತ್ತಾರೆ.

53) ಈಥರ್‌ಗಳ ತಯಾರಿಕೆ ಬಗ್ಗೆ ಬರೆಯಿರಿ

ಉತ್ತರ: ಆಲ್ಕೋಹಾಲ್‌ಗಳು ಪ್ರೊಟಿಕ್ ಆಮ್ಲಗಳ (H_2SO_4 H_3PO_4) ಉಪಸ್ಥಿತಿಯಲ್ಲಿ ನಿರ್ಜಲೀಕರಣ ಕ್ರಿಯೆಗೆ ಒಳಪಡುತ್ತವೆ. ಕ್ರಿಯೆಯ ನಿಬಂಧನೆಗಳ ಅವಲಂಬಿಸಿ ಕ್ರಿಯೋತ್ಪನ್ನಗಳಾದ ಆಲ್ಕೀನ್ ಅಥವಾ ಈಥರ್‌ಗಳು ಉತ್ಪತ್ತಿಯಾಗುವವು.

ಆಲ್ಕೀನ್ ಅನ್ನು ಕೊಡುವ ಆಲ್ಕೋಹಾಲ್‌ಗಳ ಆಮ್ಲೀಯ ನಿಜರ್ಲೀಕರಣ ಕ್ರಿಯೆಯು ಕೂಡ ಈಥರ್‌ನ್ನು ಕೊಡುವ ಆದೇಶ ಕ್ರಿಯೆಯೊಂದಿಗೆ ಸಂಯೋಜಿತವಾಗಿದೆ. ಈ ವಿಧಾನ ಪ್ರಾಥಮಿಕ ಆಲ್ಕೈಲ್ ಗುಂಪುಗಳನ್ನು ಹೊಂದಿರುವ ಈಥರ್‌ಗಳನ್ನು ಮಾತ್ರ ತಯಾರಿಸಲು ಸೂಕ್ತವಾಗಿದೆ. ಆಲ್ಕೈಲ್ ಗುಂಪು ಪ್ರತಿಬಂಧಿಸಲ್ಪಡಲೇಬಾರದು ಮತ್ತು ತಾಪವು ಕಡಿಮೆಯಾಗಿರಬೇಕು, ಹಾಗಾಗದಿದ್ದರೆ ಆಲ್ಕೀನ್‌ಗಳ ಉತ್ಪತ್ತಿಯನ್ನು ಉತ್ತೇಜಿಸುತ್ತದೆ. ಆಲ್ಕೋಹಾಲ್‌ಗಳು ದ್ವಿತೀಯಕ ಮತ್ತು ತೃತೀಯಕಗಳಾದಾಗ ಕ್ರಿಯೆಯು SN1 ಪಥವನ್ನು ಪಾಲಿಸುತ್ತದೆ.

ಸಹಕಾರ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ ಬೆಂಗಳೂರು

35ನೇ ದಿನದ ಬೆಳವಣಿಗೆಗಳು

- ರಷ್ಯಾದ ಪಡೆಗಳು ಉಕ್ರೇನ್ ಮತ್ತು ರಷ್ಯಾದ ನಿಯಂತ್ರಿತ ಪ್ರದೇಶಗಳನ್ನು ಪ್ರತ್ಯೇಕಿಸುವ ಗಡಿಯಲ್ಲಿನ ಹಲವು ಪಟ್ಟಣಗಳು ಮತ್ತು ನಗರಗಳ ಮೇಲೆ ಬುಧವಾರ ಶೆಲ್ ದಾಳಿ ನಡೆಸಿವೆ– ಡೊನೆಟ್ಸ್ಕ್ ಪ್ರಾಂತ್ಯದ ಗವರ್ನರ್
- ಉಕ್ರೇನ್ ಸಶಸ್ತ್ರ ಪಡೆಗಳ ಎಸ್-300 ವಾಯು ರಕ್ಷಣಾ ವ್ಯವಸ್ಥೆಯನ್ನು ನಾಶಪಡಿಸಿರುವ ದೃಶ್ಯದ ತುಣುಕನ್ನು ರಷ್ಯಾ ಬಿಡುಗಡೆ ಮಾಡಿದೆ
- ಉಕ್ರೇನ್‌ನಲ್ಲಿ ನಾಗರಿಕರ ಮೇಲೆ ವಿವೇಚನಾರಹಿತ ಬಾಂಬ್ ದಾಳಿ ನಡೆಸಿದ ಮತ್ತು ಯುದ್ಧಾಪರಾಧಗಳ ಆರೋಪದ ತನಿಖೆಗೆ ವಿಶ್ವಸಂಸ್ಥೆಯು ನಾರ್ವೆಯ ಸುಪ್ರೀಂಕೋರ್ಟ್ ವಿಶ್ರಾಂತ ನ್ಯಾಯಮೂರ್ತಿ ಎರಿಕ್ ಮೊಸೆ ನೇತೃತ್ವದಲ್ಲಿ ಮೂವರು ಮಾನವ ಹಕ್ಕುಗಳ ತಜ್ಞರ ಸ್ವತಂತ್ರ ಸಮಿತಿ ನೇಮಿಸಿದೆ
- ರಷ್ಯಾದಿಂದ ತೈಲ ಆಮದನ್ನು ಈ ವರ್ಷಾಂತ್ಯದೊಳಗೆ ಕಡಿತಗೊಳಿಸಲಾಗುವುದು –ಪೋಲೆಂಡ್ ಪ್ರಧಾನಿ ಮತೇವ್ಸ್ ಮೊರಾವಿಯಸ್ಕಿ
- ಪೂರ್ವ ಉಕ್ರೇನಿನಲ್ಲಿನ ಪ್ರತ್ಯೇಕತಾವಾದಿ ಪ್ರದೇಶಗಳ ಮೇಲೆ ಗಮನ ಕೇಂದ್ರೀಕರಿಸಿರುವ ರಷ್ಯಾದ ನಡೆ, ರಷ್ಯಾ ಸೇನೆಯು ಭಾರೀ ನಷ್ಟದಿಂದ ಬಳಲುತ್ತಿರುವ ಸೂಚಕವಾಗಿದೆ– ಬ್ರಿಟನ್ ರಕ್ಷಣಾ ಸಚಿವಾಲಯ
- ಯುರೋಪಿನ ವಿದ್ಯುತ್ ಗ್ರಿಡ್ ಸಂಪರ್ಕ ಸಾಧಿಸುವ ಮೂಲಕ ಉಕ್ರೇನ್, ಐರೋಪ್ಯ ಒಕ್ಕೂಟ ಸೇರುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ ಇರಿಸಿದೆ
- ಜಾಗತಿಕ ಪರಿಣಾಮವನ್ನು ಬೀರಲಿದೆ. ಗೋಧಿ ಬೆಳೆಯುವ ಉಕ್ರೇನ್ ರೈತರು ಈಗ ರಷ್ಯನ್ನರ ವಿರುದ್ಧ ಹೋರಾಡುತ್ತಿದ್ದಾರೆ. ಈಗಾಗಲೇ ಹೆಚ್ಚಿನ ಆಹಾರಗಳ ಬೆಲೆಗಳು ಗಗನಕ್ಕೇರುತ್ತಿವೆ– ವಿಶ್ವಸಂಸ್ಥೆಯ ವಿಶ್ವ ಆಹಾರ ಕಾರ್ಯಕ್ರಮದ ಕಾರ್ಯನಿರ್ವಾಹಕ ನಿರ್ದೇಶಕ ಡೇವಿಡ್ ಬೀಸ್ಲಿ
- ಉಕ್ರೇನ್ ಯುದ್ಧವು ಏಷ್ಯಾ ಪೆಸಿಫಿಕ್ ಮೇಲೂ ಪರಿಣಾಮ ಬೀರುತ್ತದೆ. ಈ ಪ್ರದೇಶ ಈಗಾಗಲೇ ಸಾಕಷ್ಟು ವಿವಾದಾತ್ಮಕ ವಿಷಯಗಳು ಹಾಗೂ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಜಾಗತಿಕ ಸಮುದಾಯ ಅರಿಯಬೇಕು –ಸಿಂಗಪುರದ ಪ್ರಧಾನಿ ಲೀ ಸಿಯೆನ್ ಲೂಂಗ್
- 40 ಲಕ್ಷಕ್ಕೂ ಹೆಚ್ಚು ನಾಗರಿಕರು ಉಕ್ರೇನ್ ತೊರೆದಿದ್ದಾರೆ. ಎರಡನೇ ವಿಶ್ವ ಸಮರದ ನಂತರ ಯುರೋಪಿನಲ್ಲಿ ಸಂಭವಿಸಿದ ಅತಿದೊಡ್ಡ ನಿರಾಶ್ರಿತರ ಬಿಕ್ಕಟ್ಟು ಇದು– ವಿಶ್ವಸಂಸ್ಥೆಯ ನಿರಾಶ್ರಿತರ ಏಜೆನ್ಸಿ
- ಇಸ್ತಾಂಬುಲ್ ಮಾತುಕತೆಯ ನಂತರ ಉಕ್ರೇನ್ ಮತ್ತು ರಷ್ಯಾದ ನಿಯೋಗಗಳು ತಮ್ಮ ನಾಯಕರ ಜತೆಗೆ ಸಮಾಲೋಚನೆಗಾಗಿ ಸ್ವದೇಶಗಳಿಗೆ ಹೋಗಿವೆ. 2ನೇ ದಿನ ಮುಖಾಮುಖಿ ಮಾತುಕತೆ ನಡೆದಿಲ್ಲ– ಟರ್ಕಿ
- ಜೋ ಬೈಡನ್ ಅವರ ಪುತ್ರ ಹಂಟರ್ ಬೈಡನ್ ನಡೆಸಿರುವ ಅವ್ಯವಹಾರಗಳ ಮಾಹಿತಿ ಬಹಿರಂಗಪಡಿಸುವಂತೆ ರಷ್ಯಾ ಅಧ್ಯಕ್ಷ ಪುಟಿನ್ ಅವರಿಗೆ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒತ್ತಾಯ
- ಪೋಲೆಂಡ್‌ನಲ್ಲಿ ನಿಯೋಜಿಸಿರುವ ಅಮೆರಿಕ ಪಡೆಗಳು ಉಕ್ರೇನ್ ಪಡೆಗಳಿಗೆ ನೆರವು ನೀಡುತ್ತಿವೆ. ಎಫ್–18 ಹತ್ತು ಯುದ್ಧವಿಮಾನಗಳನ್ನು ಉಕ್ರೇನ್‌ಗೆ ಹಸ್ತಾಂತರಿಸಲಾಗಿದೆ: ಅಮೆರಿಕ
- ಉಕ್ರೇನ್ ಮೇಲಿನ ರಷ್ಯಾದ ದಾಳಿಯನ್ನು ಕೊನೆಗೊಳಿಸುವ ನಿಟ್ಟಿನಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಮಧ್ಯಸ್ಥಿಕೆವಹಿಸಿದರೆ ಸ್ವಾಗತಿಸುತ್ತೇವೆ – ಎನ್‌ಡಿಟಿವಿಗೆ ನೀಡಿದ ಸಂದರ್ಶನದಲ್ಲಿ ಉಕ್ರೇನಿನ ವಿದೇಶಾಂಗ ಸಚಿವ ಡಿಮಿಟ್ರಿ ಕುಲೆಬಾ ಹೇಳಿಕೆ

ಮಿಲಿಟರಿ ಕಾರ್ಯಾಚರಣೆ ತಗ್ಗಿಸುವ ಭರವಸೆಯೇ ಸಂದೇಹಾಸ್ಪದ: ವೊಲೊಡಿಮಿರ್ ಝೆಲೆನ್‌ಸ್ಕಿ

ರಷ್ಯಾದಿಂದ ಭಾರಿ ದಾಳಿ ಸಾಧ್ಯತೆ: ಅಮೆರಿಕ

ಲುವಿವ್ / ಕೀವ್ / ಮಾಸ್ಕೊ (ರಾಯಿಟರ್ಸ್/ಎಎಫ್‌ಪಿ/ಪಿಟಿಐ): ಕೀವ್ ನಗರ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಸೇನಾ ಕಾರ್ಯಾಚರಣೆಯನ್ನು ತಗ್ಗಿಸಲಾಗುವುದು ಎಂಬ ರಷ್ಯಾ ಹೇಳಿಕೆ ಬಗ್ಗೆ ಉಕ್ರೇನ್ ಹಾಗೂ ಕೆಲ ಪಾಶ್ಚಿಮಾತ್ಯ ರಾಷ್ಟ್ರಗಳು ಸಂದೇಹಪಟ್ಟಿವೆ. ಉಕ್ರೇನ್ ಇತರ ಭಾಗಗಳ ಮೇಲೆ ರಷ್ಯಾದಿಂದ ಭಾರಿ ದಾಳಿ ನಡೆಯುವ ಸಾಧ್ಯತೆಗಳಿವೆ ಎಂದು ಅಮೆರಿಕ ಎಚ್ಚರಿಸಿದೆ.

'ಮಿಲಿಟರಿ ಕಾರ್ಯಾಚರಣೆ ತಗ್ಗಿಸುವ ಕುರಿತು ರಷ್ಯಾ ಹೇಳಿಕೆ ನಮಗೆ ಮನದಟ್ಟಾಗಿಲ್ಲ. ಅದು ಕೃತಿಯಲ್ಲಿ ವ್ಯಕ್ತವಾಗಬೇಕು' ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಪ್ರತಿಕ್ರಿಯಿಸಿದ್ದಾರೆ.

'ಕಳೆದ 34 ದಿನಗಳಿಂದ ನಡೆಯುತ್ತಿರುವ ದಾಳಿ, 8 ವರ್ಷಗಳಿಂದ ಡಾನ್‌ಬೋಸ್‌ನಲ್ಲಿನ ವಿದ್ಯಮಾನಗಳಿಂದ ಉಕ್ರೇನ್ ಜನರು ಸಾಕಷ್ಟು ಕಲಿತಿದ್ದಾರೆ. ಮುಂದಿನ ದಿನಗಳಲ್ಲಿ ಏನಾಗಬಹುದು ಎಂಬುದನ್ನು ಊಹಿಸದಷ್ಟು ಮುಗ್ಧರೂ ಅಲ್ಲ. ಮಾತುಕತೆ ನಂತರ ಏನು ಫಲಿತಾಂಶ ಸಿಗಲಿದೆ ಎಂಬುದನ್ನು ಮಾತ್ರ ಉಕ್ರೇನ್ ಜನ ನಂಬುತ್ತಾರೆ' ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಇಸ್ತಾಂಬುಲ್‌ನಲ್ಲಿ ರಷ್ಯಾ ಮತ್ತು ಉಕ್ರೇನ್ ನಡುವಿನ ಶಾಂತಿ ಮಾತುಕತೆಯಿಂದ ಯಾವುದೇ ಮಹತ್ತರ ಪ್ರಗತಿಯಾಗಿಲ್ಲ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೊವ್ ಅವರು ಮಾಸ್ಕೊದಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಉಕ್ರೇನ್ ಇತರ ಪ್ರದೇಶಗಳ ಮೇಲೆ ರಷ್ಯಾ ದಾಳಿ ನಡೆಸುವ ಸಾಧ್ಯತೆಗಳಿದ್ದು, ಇದಕ್ಕೆ ನಾವೆಲ್ಲ ಸಿದ್ಧರಾಗಬೇಕು' ಎಂದು ಅಮೆರಿಕ ರಕ್ಷಣಾ ಇಲಾಖೆ ವಕ್ತಾರ ಜಾನ್ ಕಿರ್ಬಿ ಹೇಳಿದ್ದಾರೆ.



ಡೊನೆಟ್ಸ್ಕ್ ಪೀಪಲ್ಸ್ ರಿಪಬ್ಲಿಕ್ ನಿಯಂತ್ರಣದ ಪೂರ್ವ ಉಕ್ರೇನಿನ ಡೊನೆಟ್ಸ್ಕ್‌ನಲ್ಲಿ ಬುಧವಾರ ಶೆಲ್ ದಾಳಿಯಿಂದ ಬಹುಮಹಡಿ ಕಟ್ಟಡ ಹಾನಿಗೀಡಾಗಿದೆ –ಪಿಟಿಐ ಚಿತ್ರ

'ಕೀವ್ ಸುತ್ತಮುತ್ತ ಜಮಾವಣೆ ಮಾಡಲಾಗಿದ್ದ ಪಡೆಗಳನ್ನು ರಷ್ಯಾ ಹಿಂದಕ್ಕೆ ಕರೆಸಿಕೊಳ್ಳಲು ಆರಂಭಿಸಿದೆ. ರಷ್ಯಾ ಯುದ್ಧವನ್ನು ನಿಲ್ಲಿಸಲಿದೆ ಅಥವಾ ತನ್ನ ಪಡೆಗಳನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳುತ್ತಿದೆ ಎಂಬುದನ್ನು ಇದು ಸೂಚಿಸುವುದಿಲ್ಲ. ಆದು, ತನ್ನ ಪಡೆಗಳನ್ನು ಬೇರೆ ಸ್ಥಳಗಳಲ್ಲಿ ನಿಯೋಜನೆ ಮಾಡುತ್ತಿದೆ ಎಂದರ್ಥ' ಎಂದೂ ಕಿರ್ಬಿ ಪ್ರತಿಪಾದಿಸಿದ್ದಾರೆ.

'ಪರಸ್ಪರ ವಿಶ್ವಾಸ ವೃದ್ಧಿ ಹಾಗೂ ಸಂಧಾನ ಪ್ರಕ್ರಿಯೆಯನ್ನು ಮತ್ತೊಂದು ಮಜಲಿಗೆ ಒಯ್ಯುವ ಸಂಬಂಧ ಕೀವ್ ಹಾಗೂ ಚೆರ್ನಿವ್‌ನಲ್ಲಿ ಸೇನಾ ಕಾರ್ಯಾಚರಣೆ ಕಡಿಮೆಗೊಳಿಸಲು ತೀರ್ಮಾನಿಸಲಾಗಿದೆ' ಎಂದು ರಷ್ಯಾದ ರಕ್ಷಣಾ ಉಪ ಸಚಿವ ಅಲೆಕ್ಸಾಂಡರ್ ಫೊಮಿನ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಆದರೆ, ಮರಿಯುಪೋಲ್ ಸೇರಿದಂತೆ ಇತರ ನಗರಗಳ ಮೇಲೆ ನಡೆಯುತ್ತಿರುವ ದಾಳಿ ಬಗ್ಗೆ ಫೊಮಿನ್ ಪ್ರತಿಕ್ರಿಯೆ ನೀಡಿಲ್ಲ.

ಉಕ್ರೇನ್‌ನ ಉತ್ತರ ಭಾಗದಲ್ಲಿ ನಿಯೋಜಿಸಿದ್ದ ಪಡೆಗಳನ್ನು ಡೊನೆಟ್ಸ್ಕ್ ಮತ್ತು ಲುಹಾನ್ಸ್ಕ್ ಬಳಿ ನಿಯೋಜಿಸುತ್ತಿರುವ ರಷ್ಯಾ, ಆ ಪ್ರದೇಶಗಳ ಮೇಲೆ ದಾಳಿ ನಡೆಸಲಿದೆ ಎಂದು ಬ್ರಿಟನ್ ರಕ್ಷಣಾ ಸಚಿವಾಲಯ ಎಚ್ಚರಿಸಿದೆ.

ಮೈಕೊಲೈವ್ ಪ್ರಾದೇಶಿಕ ಸರ್ಕಾರಿ ಆಡಳಿತ ಕಚೇರಿ ಮೇಲೆ ರಷ್ಯಾ ಪಡೆಗಳು ನಡೆಸಿದ ಕ್ರೂಸ್ ಕ್ಷಿಪಣಿ ದಾಳಿ ಗವರ್ನರ್ ವಿಟಾಲಿ ಕಿಮ್ ಅವರನ್ನು ಗುರಿಯಾಗಿರಿಸಿತ್ತು. ಅದೃಷ್ಟವಶಾತ್ ಅವರು ಅಪಾಯದಿಂದ ಪಾರಾದರು. ಆದರೆ, ಕ್ಷಿಪಣಿ ದಾಳಿಗೆ ಕಚೇರಿಯಲ್ಲಿದ್ದ 15 ಸಿಬ್ಬಂದಿ ಬಲಿಯಾದರು ಎಂದು ನಗರದ ಮೇಯರ್ ಸೆಂಕಿವಿಚ್ ತಿಳಿಸಿದರು.

ಶಸ್ತ್ರ ತ್ಯಜಿಸಲಿ– ಪುಟಿನ್: ಮರಿಯುಪೋಲ್‌ನಲ್ಲಿ ರಾಷ್ಟ್ರೀಯವಾದಿಗಳು ಶಸ್ತ್ರ ತ್ಯಜಿಸಬೇಕೆಂಬ ಬೇಡಿಕೆಯನ್ನು ರಷ್ಯಾ ಅಧ್ಯಕ್ಷ ಪುಟಿನ್ ಅವರು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರಾನ್ ಅವರ ಜತೆಗಿನ ದೂರವಾಣಿ ಸಂಭಾಷಣೆಯಲ್ಲಿ ಪುನರುಚ್ಚರಿಸಿದ್ದಾರೆ ಎಂದು ಪುಟಿನ್ ಆಡಳಿತ ಕಚೇರಿ ಕ್ರೆಮ್ಲಿನ್ ಹೇಳಿದೆ.

'ಸಂಘರ್ಷ ಶಮನದ ಭರವಸೆ ಮೂಡಿದೆ'

ವಿಶ್ವಸಂಸ್ಥೆ (ಪಿಟಿಐ): ರಷ್ಯಾ ಮತ್ತು ಉಕ್ರೇನ್ ನಡುವೆ ಫಲಪ್ರದದಾಯಕ ಒಡಂಬಡಿಕೆಗೆ ಕರೆ ನೀಡಿರುವ ಭಾರತವು, ಸದ್ಯ ಉಭಯ ರಾಷ್ಟ್ರಗಳ ನಡುವಿನ ಮಾತುಕತೆಗಳು ಈ ಸಂಘರ್ಷ ಉಲ್ಬಣಿಸದಂತೆ ತಡೆಯುವ ಮತ್ತು ಬಿಕ್ಕಟ್ಟು ಶೀಘ್ರ ಶಮನಗೊಳಿಸುವ ಭರವಸೆ ಮೂಡಿಸಿದೆ ಎಂದು ಅಭಿಪ್ರಾಯಪಟ್ಟಿದೆ.

'ಯುದ್ಧಾರಂಭದಿಂದಲೂ ಉಕ್ರೇನ್‌ನಲ್ಲಿ ಹದಗೆಡುತ್ತಲೇ ಇರುವ ಪರಿಸ್ಥಿತಿಯ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ' ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಟಿ.ಎಸ್. ತಿರುಮೂರ್ತಿ ಹೇಳಿದರು.

ಮಂಗಳವಾರ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, 'ಶಸ್ತ್ರಾಸ್ತ್ರ ಸಂಘರ್ಷಪೀಡಿತ ಉಕ್ರೇನಿನ ಪ್ರದೇಶಗಳಿಗೆ ಯಾವುದೇ ಅಡೆತಡೆ ಇಲ್ಲದೇ ಮಾನವೀಯ ಪರಿಹಾರ ಲಭಿಸಬೇಕೆಂದು ಭಾರತ ಒತ್ತಾಯಿಸುತ್ತಲೇ ಬಂದಿದೆ' ಎಂದು ಪುನರುಚ್ಚರಿಸಿದರು.

ಉಕ್ರೇನ್ ಉತ್ತರದಲ್ಲಿ ಮತ್ತಷ್ಟು ದಾಳಿ

ಕೀವ್ (ಎಪಿ): ಇಸ್ತಾಂಬುಲ್ ಶಾಂತಿಮಾತುಕತೆಯ ಫಲವಾಗಿ ಉಕ್ರೇನಿನ ಪ್ರಮುಖ ನಗರಗಳಿಂದ ಸೇನಾ ಕಾರ್ಯಾಚರಣೆಯನ್ನು ಆಮೂಲಾಗ್ರವಾಗಿ ಕಡಿತಗೊಳಿಸುವುದಾಗಿ ಹೇಳಿದ್ದ ರಷ್ಯಾ, ಮಂಗಳವಾರ ತಡರಾತ್ರಿವರೆಗೂ ಮತ್ತಷ್ಟು ನಿರಂತರ ದಾಳಿ ನಡೆಸಿತು ಎಂದು ಉಕ್ರೇನಿನ ಉತ್ತರ ಚೆರ್ನಿವ್ ಪ್ರಾದೇಶಿಕ ಗವರ್ನರ್ ಹೇಳಿದ್ದಾರೆ.

ಚೆರ್ನಿವ್ ಮತ್ತು ನಿಜಿನ್ ನಗರಗಳಲ್ಲಿ ಗ್ರಂಥಾಲಯಗಳು ಮತ್ತು ಶಾಪಿಂಗ್ ಕೇಂದ್ರಗಳು, ಮನೆಗಳು ಹಾನಿಗೀಡಾಗಿವೆ ಎಂದು ಗವರ್ನರ್ ವಿಯಾಚೆಸ್ಲಾವ್ ಕೌಸ್ ಸಾಮಾಜಿಕ ಮಾಧ್ಯಮದಲ್ಲಿ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ತಿಳಿಸಿದ್ದಾರೆ.

ರಷ್ಯಾದ ಮೇಲೆ ಪ್ರತಿದಾಳಿ

ಬೆಲ್‌ಗೊರೊಡ್‌ನಲ್ಲಿರುವ ರಷ್ಯಾದ ಶಸ್ತ್ರಾಸ್ತ್ರ ಸಂಗ್ರಹಾಗಾರ ಮತ್ತು ಸೇನಾ ಶಿಬಿರ ಗುರಿಯಾಗಿಸಿಕೊಂಡು ಉಕ್ರೇನ್ ಮಂಗಳವಾರ ತಡರಾತ್ರಿ ಬ್ಯಾಲೆಸ್ಟಿಕ್ ಕ್ಷಿಪಣಿ ದಾಳಿ ನಡೆಸಿದೆ. ಉಕ್ರೇನ್‌ನ ಗಡಿಯುದ್ದಕ್ಕೂ ಸ್ಫೋಟಗಳು ನಡೆದಿವೆ. ನಾಲ್ವರು ರಷ್ಯಾದ ಯೋಧರು ಗಾಯಗೊಂಡಿದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

ಉಕ್ರೇನಿನ 'ಒಟಿಆರ್–21 ಟೋಚ್ಕಾ– ಯು' ಬ್ಯಾಲೆಸ್ಟಿಕ್ ಕ್ಷಿಪಣಿ ಅಪ್ಪಳಿಸಿರುವ ದೃಶ್ಯಾವಳಿಗಳು ಪಶ್ಚಿಮ ರಷ್ಯಾದ ಬೆಲ್‌ಗೊರೊಡ್‌ನಿಂದ ಹೊರಬಿದ್ದಿವೆ ಎಂದು 'ದಿ ಡೈಲಿ ಮೇಲ್' ವರದಿ ಮಾಡಿದೆ.

ಬಿಜೆಪಿ ಸತ್ಯಶೋಧನಾ ಸಮಿತಿ ವರದಿ

'ಬಂಗಾಳದಲ್ಲಿ ಮಾಫಿಯಾ ಆಡಳಿತ'

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದ ಬಿರ್‌ಭೂಮ್ ಜಿಲ್ಲೆಯ ಬೋಗ್‌ತುಇ ಗ್ರಾಮದಲ್ಲಿ ನಡೆದಿದ್ದ ಸಜೀವ ದಹನ ಪ್ರಕರಣದ ತನಿಖೆಯನ್ನು ಸಿಬಿಐ ನಡೆಸುತ್ತಿರುವ ನಡುವೆಯೇ, ಬಿಜೆಪಿಯ ಸತ್ಯಶೋಧನಾ ಸಮಿತಿಯು ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಬುಧವಾರ ಸಲ್ಲಿಸಿದೆ.

'ಟಿಎಂಸಿ ಆಡಳಿತದಲ್ಲಿ ಪಶ್ಚಿಮ ಬಂಗಾಳದಲ್ಲಿ ಕಾನೂನು, ಸುವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ಪೊಲೀಸರು ಮತ್ತು ರಾಜಕಾರಣಿಗಳ ಸಹಯೋಗದಲ್ಲಿ ರಾಜ್ಯದಲ್ಲಿ ಮಾಫಿಯಾ ಆಡಳಿತ ಇದೆ. ಇಲ್ಲಿ ಕಾನೂನು, ಸುವ್ಯವಸ್ಥೆ ಮರು ಸ್ಥಾಪಿಸಲು ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು' ಎಂದು ವರದಿಯಲ್ಲಿ ಹೇಳಲಾಗಿದೆ.

'ಘಟನೆ ನಡೆದ ಸ್ಥಳಕ್ಕೆ ಅಗ್ನಿಶಾಮಕ ದಳವನ್ನು ಕೂಡಲೇ ಕಳಿಸಿಲ್ಲ. ಒಂದು ವೇಳೆ ಅಗ್ನಿಶಾಮಕ ದಳವು ತಕ್ಷಣ ಗ್ರಾಮಕ್ಕೆ ತೆರಳಿ ಬೆಂಕಿ ನಂದಿಸುವ ಕೆಲಸ ಮಾಡಿದ್ದರೆ ಜನರ ಪ್ರಾಣ ಉಳಿಯುತ್ತಿತ್ತು. ಸರ್ಕಾರ ನೇತೃತ್ವದಲ್ಲಿ ನಡೆಯುತ್ತಿರುವ ವಸೂಲಿ, ಗೂಂಡಾ ತೆರಿಗೆ, ಭ್ರಷ್ಟಾಚಾರವು ಈ ಹಿಂಸಾಚಾರಕ್ಕೆ ಕಾರಣವಾದ ಪ್ರಮುಖ ಅಂಶಗಳು. ಐಪಿಎಸ್ ಮತ್ತು ಐಎಎಸ್ ಅಧಿಕಾರಿಗಳಿಗೆ ಕಾನೂನನ್ನು ಪಾಲಿಸಲು ಕೇಂದ್ರ ಸರ್ಕಾರ ಸೂಚಿಸಬೇಕು' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.



ಬಿಜೆಪಿ ಸತ್ಯಶೋಧನಾ ಸಮಿತಿ ಸದಸ್ಯರು ದೆಹಲಿಯಲ್ಲಿ ಬುಧವಾರ ಮಾಧ್ಯಮಗೋಷ್ಠಿ ನಡೆಸಿದರು –ಪಿಟಿಐ ಚಿತ್ರ

ಸಿಬಿಐ ತನಿಖೆ ಮೇಲೆ ಪ್ರಭಾವ: ಮಮತಾ

'ಸಿಬಿಐ ನಡೆಸುತ್ತಿರುವ ತನಿಖೆಯನ್ನು ಬಿಜೆಪಿಯ ಈ ವರದಿಯು ಪ್ರಭಾವಿಸುತ್ತದೆ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕಳವಳ ವ್ಯಕ್ತಪಡಿಸಿದ್ದಾರೆ.

ಸತ್ಯಶೋಧನಾ ತಂಡದ ವರದಿಗೆ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

ಜೊತೆಗೆ, ತಮ್ಮ ಮೇಲೆ ದಾಳಿಗಳು ನಡೆದಿರುವುದಾಗಿಯೂ ಸಮಿತಿಯ ಸದಸ್ಯರು ಆರೋಪಿಸಿದ್ದಾರೆ. ದಾಳಿ ನಡೆವ ವೇಳೆ ಪಶ್ಚಿಮ ಬಂಗಾಳದ ಯಾವುದೇ ಪೊಲೀಸ್ ಅಧಿಕಾರಿ ಅಥವಾ ಪೊಲೀಸ್ ಪೇದೆ ತಮ್ಮ ರಕ್ಷಣೆಗೆ ಧಾವಿಸಿಲ್ಲ. ಆಡಳಿತಾರೂಢ ಟಿಎಂಸಿ ಜೊತೆ ಪೊಲೀಸ್ ಇಲಾಖೆ ಶಾಮೀಲಾಗಿದೆ ಎಂದು ಹೇಳಿದ್ದಾರೆ.

ಬಿಜೆಪಿ ಸಂಸದರು ಮತ್ತು ಮಾಜಿ ಐಪಿಎಸ್ ಅಧಿಕಾರಿಗಳನ್ನು ಈ ಸಮಿತಿ ಒಳಗೊಂಡಿತ್ತು. ಸತ್ಯಶೋಧನೆಗಾಗಿ ಬಿರ್‌ಭೂಮ್‌ಗೆ ಭೇಟಿ ನೀಡುವ ವೇಳೆ, ಈ ಸಮಿತಿಯ ಸದಸ್ಯರು ರಸ್ತೆಯ ಅಂಗಡಿಯೊಂದರಲ್ಲಿ ಸಿಹಿ ತಿನಿಸಿ ತಿಂದಿದ್ದರು. ಇದಕ್ಕೆ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

ಮೂವರ ಬಂಧನ: ಪಶ್ಚಿಮ ಬಂಗಾಳದ ಭಿರ್‌ಭೂಮ್ ಜಿಲ್ಲೆಯಲ್ಲಿ ನಡೆದಿದ್ದ ಟಿಎಂಸಿಯ ಸ್ಥಳೀಯ ನಾಯಕನ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನು ಮೂವರನ್ನು ಬಂಧಿಸಲಾಗಿದೆ ಪೊಲೀಸರು ಬುಧವಾರ ಹೇಳಿದ್ದಾರೆ.

ಮಿಶ್ರಾ ಜಾಮೀನು ರದ್ದತಿ ಶಿಫಾರಸು: ನಿಲುವು ಕೇಳಿದ ಸುಪ್ರೀಂಕೋರ್ಟ್

ನವದೆಹಲಿ: ಲಖಿಂಪುರ ಖೇರಿ ಹಿಂಸಾಚಾರದ ಪ್ರಮುಖ ಆರೋಪಿ ಆಶಿಶ್ ಮಿಶ್ರಾಗೆ ನೀಡಿರುವ ಜಾಮೀನು ರದ್ದುಪಡಿಸುವಂತೆ ಎಸ್‌ಐಟಿ ತನಿಖೆಯ ಮೇಲ್ವಿಚಾರಣೆ ನಡೆಸುತ್ತಿದ್ದ ನಿವೃತ್ತ ನ್ಯಾಯಮೂರ್ತಿ ಮಾಡಿರುವ ಶಿಫಾರಸಿನ ಕುರಿತು ಪ್ರತಿಕ್ರಿಯೆ ನೀಡುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಬುಧವಾರ ಸೂಚಿಸಿದೆ.

ಎಸ್‌ಐಟಿ ಮುಖ್ಯಸ್ಥ ನ್ಯಾಯಮೂರ್ತಿ ರಾಕೇಶ್ ಕುಮಾರ್ ಜೈನ್ ಅವರು ಮಿಶ್ರಾಗೆ ನೀಡಿರುವ ಜಾಮೀನು ಆದೇಶ ರದ್ದತಿಗೆ ಶಿಫಾರಸು ಮಾಡಿದ್ದಾರೆ ಎಂದು ನ್ಯಾಯಪೀಠ ಹೇಳಿತು. ಜೈನ್ ಅವರನ್ನು ಕೋರ್ಟ್ ನೇಮಕ ಮಾಡಿತ್ತು.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಮತ್ತು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಹಿಮಾ ಕೊಹ್ಲಿ ಅವರಿದ್ದ ಪೀಠವು, ಜಾಮೀನು ರದ್ದತಿ ಕುರಿತು ಉತ್ತರ ಪ್ರದೇಶ ಸರ್ಕಾರದ ನಿಲುವು ಏನು ಎಂದು ಪ್ರಶ್ನಿಸಿತು. ರಾಜ್ಯ ಸರ್ಕಾರದ ಪರವಾಗಿ ವಕೀಲ ಮಹೇಶ್ ಜೇಠ್ಮಲಾನಿ ಅವರು ಹಾಜರಾಗಿದ್ದರು.

ಈ ಕುರಿತು ಉತ್ತರ ಪ್ರದೇಶದ ಗೃಹ ಸಚಿವಾಲಯದ ಮುಖ್ಯ ಕಾರ್ಯದರ್ಶಿ ಅವರಿಗೆ ಎಸ್‌ಐಟಿ ಎರಡು ಪತ್ರಗಳನ್ನು ಬರೆದಿದೆ ಎಂದು ಪೀಠ ಹೇಳಿತು. ಆದರೆ ಈ ಪತ್ರಗಳ ಬಗ್ಗೆ ತಮಗೆ ಮಾಹಿತಿ ಇಲ್ಲ ಎಂದ ಜೇಠ್ಮಲಾನಿ, ಉತ್ತರಿಸಲು ಸಮಯ ಬೇಕು ಎಂದು ಕೋರಿದರು. ಸ್ವಲ್ಪ ಸಮಯದ ಬಳಿಕ ಉತ್ತರಿಸಿದ ಜೇಠ್ಮಲಾನಿ, ಎಸ್‌ಐಟಿಯಿಂದ ಯಾವುದೇ ಪತ್ರ ಬಂದಿಲ್ಲ ಎಂಬುದಾಗಿ ಮುಖ್ಯ ಕಾರ್ಯದರ್ಶಿ ಮಾಹಿತಿ ನೀಡಿದರು ಎಂದು ಕೋರ್ಟ್‌ಗೆ ತಿಳಿಸಿದರು.

> **ಅಲಹಾಬಾದ್ ಹೈಕೋರ್ಟ್ ಫೆ.10ರಂದು ನೀಡಿದ್ದ ಆದೇಶಕ್ಕೆ ತಡೆ ನೀಡಬೇಕು ಅಥವಾ ಮಿಶ್ರಾಗೆ ನೀಡಿರುವ ಜಾಮೀನು ರದ್ದುಪಡಿಸಬೇಕು**
> **ದುಷ್ಯಂತ್ ದವೆ,** ಸಂತ್ರಸ್ತರ ಪರ ವಕೀಲ

> **ಹೈಕೋರ್ಟ್‌ನ ಆದೇಶದಲ್ಲಿ ಇಲ್ಲದ ದಾಖಲೆಗಳನ್ನು ಒದಗಿಸುವ ಮೂಲಕ ಸಂತ್ರಸ್ತರ ಪರ ವಕೀಲರ ತಂಡವು ಸುಳ್ಳು ಹೇಳಿಕೆಗಳನ್ನು ನೀಡುತ್ತಿದೆ**
> **ರಂಜಿತ್ ಕುಮಾರ್**
> ಆರೋಪಿಗಳ ಪರ ವಕೀಲ

ನ್ಯಾಯಮೂರ್ತಿಗಳ ಪತ್ರ ಹಾಗೂ ಎಸ್‌ಐಟಿ ವರದಿಯನ್ನು ರಾಜ್ಯ ಸರ್ಕಾರ, ಸಂತ್ರಸ್ತರು ಸೇರಿದಂತೆ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲರಿಗೂ ಒದಗಿಸಬೇಕು ಎಂದು ಪೀಠ ನಿರ್ದೇಶನ ನೀಡಿತು. ಮುಂದಿನ ವಿಚಾರಣೆಯನ್ನು ಏಪ್ರಿಲ್ 4ಕ್ಕೆ ಮುಂದೂಡಲಾಯಿತು.

ಮಿಶ್ರಾ ಜಾಮೀನು ತೀರ್ಪು ಪ್ರಶ್ನಿಸುವ ವಿಚಾರವು ಪರಿಶೀಲನೆಯಲ್ಲಿದೆ ಎಂಬುದಾಗಿ ಉತ್ತರ ಪ್ರದೇಶ ಸರ್ಕಾರವು ಇತ್ತೀಚೆಗೆ ಕೋರ್ಟ್‌ಗೆ ತಿಳಿಸಿತ್ತು.

ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಪ್ರಧಾನಿ ಪ್ರತಿಪಾದನೆ

'ಪ್ರಾದೇಶಿಕ ಭದ್ರತೆ ಈಗಿನ ತುರ್ತು'

ನವದೆಹಲಿ (ಪಿಟಿಐ): ಉಕ್ರೇನ್ ಮೇಲೆ ರಷ್ಯಾ ಸಾರಿರುವ ಯುದ್ಧ ಹಾಗೂ ಇತ್ತೀಚಿನ ಕೆಲವು ಬೆಳವಣಿಗೆಗಳು ಅಂತರರಾಷ್ಟ್ರೀಯ ಶಾಂತಿ ಹಾಗೂ ಸ್ಥಿರತೆಯ ಬಗ್ಗೆ ಪ್ರಶ್ನೆಗಳನ್ನು ಎತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಕಳವಳ ವ್ಯಕ್ತಪಡಿಸಿದ್ದಾರೆ. ಈ ಹೊತ್ತಿನಲ್ಲಿ ಬಿಮ್‌ಸ್ಟೆಕ್ (ಬಂಗಾಳ ಕೊಲ್ಲಿಯಲ್ಲಿ ಬಹುವಲಯ ತಾಂತ್ರಿಕ ಮತ್ತು ಆರ್ಥಿಕ ಸಹಕಾರ ಸಂಘಟನೆ) ದೇಶಗಳ ನಡುವಿನ ಸಹಕಾರ ಹಾಗೂ ಪ್ರಾದೇಶಿಕ ಭದ್ರತೆಗೆ ನೀಡಬೇಕಿರುವ ಆದ್ಯತೆಯನ್ನು ಪ್ರಧಾನಿ ಒತ್ತಿ ಹೇಳಿದ್ದಾರೆ.

ವರ್ಚ್ಯುವಲ್ ರೂಪದಲ್ಲಿ ನಡೆದ ಬಿಮ್‌ಸ್ಟೆಕ್‌ನ ಐದನೇ ಶೃಂಗಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಆರೋಗ್ಯ ಮತ್ತು ಆರ್ಥಿಕ ಭದ್ರತೆ ಸವಾಲುಗಳನ್ನು ಎದುರಿಸುತ್ತಿರುವ ಈ ವಲಯದಲ್ಲಿ, ಒಗ್ಗಟ್ಟು ಹಾಗೂ ಸಹಕಾರ ಈ ಹೊತ್ತಿನ ತುರ್ತು ಎಂದರು.

ಭಾರತ, ಶ್ರೀಲಂಕಾ, ಬಾಂಗ್ಲಾದೇಶ, ಮ್ಯಾನ್ಮಾರ್, ಥಾಯ್ಲೆಂಡ್, ನೇಪಾಳ ಹಾಗೂ ಭೂತಾನ್ ದೇಶಗಳು ಬಿಮ್‌ಸ್ಟೆಕ್‌ನ ಸದಸ್ಯ ದೇಶಗಳಾಗಿವೆ. ಶ್ರೀಲಂಕಾ ಆಯೋಜಿಸಿದ್ದ ಐದನೇ ಬಿಮ್‌ಸ್ಟೆಕ್ ಶೃಂಗಸಭೆಯಲ್ಲಿ ಭಾಗವಹಿಸಿದ್ದು ಸಂತಸ ನೀಡಿದೆ ಎಂದು ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ಮಾತಿನ ಪ್ರಮುಖ ಅಂಶಗಳು

- ಸದಸ್ಯ ದೇಶಗಳ ನಡುವೆ ಪರಸ್ಪರ ವ್ಯಾಪಾರ ಹೆಚ್ಚಿಸಲು ಬಿಮ್‌ಸ್ಟೆಕ್ ಎಫ್‌ಟಿಎ ಪ್ರಸ್ತಾವನೆಗೆ ಆದಷ್ಟು ಬೇಗ ಚಾಲನೆ ನೀಡುವ ಅಗತ್ಯವಿದೆ
- ಕಾನೂನು ಜಾರಿ ಸಂಸ್ಥೆಗಳ ನಡುವಿನ ಸಹಕಾರವನ್ನು ಹೆಚ್ಚಿಸಲು ನಿರ್ಧರಿಸಿದ್ದೇವೆ. ಈ ಶೃಂಗಸಭೆಯಲ್ಲಿ, ಕ್ರಿಮಿನಲ್ ವಿಷಯಗಳಲ್ಲಿ ಪರಸ್ಪರ ಕಾನೂನು ನೆರವು ಒಪ್ಪಂದಕ್ಕೆ ಸಹಿ ಹಾಕಲಾಗಿದೆ
- ಬಿಮ್‌ಸ್ಟೆಕ್ ಹವಾಮಾನ ಬದಲಾವಣೆ ಕೇಂದ್ರವನ್ನು ಇನ್ನಷ್ಟು ಸಕ್ರಿಯವಾಗಿಸುವ ನಿಟ್ಟಿನಲ್ಲಿ ಸದಸ್ಯ ದೇಶಗಳ ನಡುವಿನ ಸಮನ್ವಯ ಅಗತ್ಯವಾಗಿದೆ. ಈ ಕೇಂದ್ರದ ಮರು ಆರಂಭಕ್ಕೆ 30 ಲಕ್ಷ ಡಾಲರ್ (₹22.5 ಕೋಟಿ) ನೆರವು ನೀಡಲು ಭಾರತ ಸಿದ್ಧವಿದೆ

ಸಂಪರ್ಕ ವೃದ್ಧಿಯ ಮಾಸ್ಟರ್ ಪ್ಲಾನ್

'ಬಿಮ್‌ಸ್ಟೆಕ್ ಸದಸ್ಯ ದೇಶಗಳ ನಡುವೆ ಜನರ ಸಂಪರ್ಕ, ಪರಸ್ಪರ ವ್ಯವಹಾರ ಹಾಗೂ ಒಗ್ಗಟ್ಟು ಸಾಧ್ಯವಾಗಿಸಲು ಉತ್ತಮ ಸಂಪರ್ಕ ವ್ಯವಸ್ಥೆಯಿಂದ ಮಾತ್ರ ಸಾಧ್ಯ. ಸಂಪರ್ಕ ಸುಧಾರಣೆಗಾಗಿ ನಾವಿಂದು ಬಿಮ್‌ಸ್ಟೆಕ್ ಮಾಸ್ಟರ್ ಪ್ಲಾನ್ ಅನ್ನು ಅಳವಡಿಸಿಕೊಂಡಿದ್ದೇವೆ' ಎಂದು ಮೋದಿ ಅವರು ಹೇಳಿದರು.

ರಷ್ಯಾ ವಿದೇಶಾಂಗ ಸಚಿವ ಇಂದು ಭಾರತಕ್ಕೆ

ನವದೆಹಲಿ(ಪಿಟಿಐ): ರಷ್ಯಾದ ವಿದೇಶಾಂಗ ಸಚಿವ ಸರ್ಗೈ ಲಾವ್ರೊವ್ ಗುರುವಾರದಿಂದ 2 ದಿನಗಳ ಕಾಲ ಭಾರತ ಪ್ರವಾಸ ಕೈಗೊಳ್ಳಲಿದ್ದಾರೆ ಎಂದು ವಿದೇಶಾಂಗ ಇಲಾಖೆ ಹೇಳಿದೆ.

ಇದೇ 31ರಿಂದ ಏಪ್ರಿಲ್ 1ರವರೆಗೆ ಭಾರತದ ಪ್ರವಾಸದಲ್ಲಿ ಇರುತ್ತಾರೆ. ರಷ್ಯಾವು ಭಾರತಕ್ಕೆ ರಿಯಾಯಿತಿ ದರದಲ್ಲಿ ತೈಲ ಮಾರಾಟ ಮತ್ತು ರಷ್ಯಾದ ಮೇಲೆ ಪಶ್ಚಿಮ ದೇಶಗಳು ನಿರ್ಬಂಧ ವಿಧಿಸಿದ ಹಿನ್ನೆಲೆಯಲ್ಲಿ ಉಭಯ ದೇಶಗಳ ವ್ಯಾಪಾರ–ವಹಿವಾಟಿಗೆ ಸಂಬಂಧಿಸಿದಂತೆ ಚರ್ಚೆ ನಡೆಯುವ ಸಾಧ್ಯತೆ ಇದೆ.

ಸಂಕ್ಷಿಪ್ತ ಸುದ್ದಿ

ಸರ್ಕಾರಿ ಬಂಗಲೆ ತೆರವು ಮಾಡಿದ ಚಿರಾಗ್ ಪಾಸ್ವಾನ್

ನವದೆಹಲಿ(ಪಿಟಿಐ): ದೆಹಲಿಯ ಪ್ರತಿಷ್ಠಿತ ಜನಪಥ್‌ನ ನಂ 12 ಸರ್ಕಾರಿ ಬಂಗಲೆಯಲ್ಲಿ ವಾಸವಿದ್ದ ಸಂಸದ ಚಿರಾಗ್ ಪಾಸ್ವಾನ್ ಅವರನ್ನು ಕೇಂದ್ರ ಸರ್ಕಾರದ ವಿಶೇಷ ತಂಡ ಬುಧವಾರ ಖಾಲಿ ಮಾಡಿಸಿದೆ ಎಂದು ಮೂಲಗಳು ತಿಳಿಸಿವೆ. ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ನಿವಾಸದ ಬಳಿಯೇ ಇರುವ ಈ ಸರ್ಕಾರಿ ಬಂಗಲೆಯನ್ನು ಕೇಂದ್ರ ಸಚಿವರಿಗೆ ನೀಡಲಾಗುತ್ತದೆ.

ಪ್ರಧಾನಿ ಮೋದಿ ಅವರ ಕ್ಯಾಬಿನೆಟ್‌ನಲ್ಲಿ ಸಚಿವರಾಗಿದ್ದ ರಾಮ್ ವಿಲಾಸ್ ಪಾಸ್ವಾನ್ ಅವರಿಗೆ ಈ ಬಂಗಲೆ ನೀಡಲಾಗಿತ್ತು. ಅವರ ನಿಧನದ ಬಳಿಕ ಈ ನಿವಾಸ ಖಾಲಿ ಮಾಡುವಂತೆ ಚಿರಾಗ್ ಅವರಿಗೆ ಕಳೆದ ವರ್ಷ ನೋಟಿಸ್ ನೀಡಲಾಗಿತ್ತು ಎನ್ನಲಾಗಿದೆ.



ಚಿರಾಗ್ ಪಾಸ್ವಾನ್

ಕೇಂದ್ರ ವಸತಿ ಮತ್ತು ನಗರಾಭಿವೃದ್ಧಿ ಸಚಿವಾಲಯದ ಅಡಿ ಬರುವ ಎಸ್ಟೇಟ್ಸ್ ನಿರ್ದೇಶನಾಲಯವು ಅಧಿಕಾರಿಗಳ ತಂಡವನ್ನು ರವಾನಿಸಿ, ಚಿರಾಗ್ ಅವರನ್ನು ಸರ್ಕಾರಿ ಬಂಗಲೆಯಿಂದ ಖಾಲಿ ಮಾಡಿಸಿದೆ.

ಲೆಕ್ಕಪರಿಶೋಧನೆ: ತಿದ್ದುಪಡಿ ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ಲೆಕ್ಕಪರಿಶೋಧಕರು, ವೆಚ್ಚ ಪರಿಶೋಧಕರು ಹಾಗೂ ಕಂಪನಿ ಕಾರ್ಯದರ್ಶಿಗಳ ಸಂಸ್ಥೆಗಳ ಕಾರ್ಯವಿಧಾನ ಪರಿಷ್ಕರಿಸುವ ಮಸೂದೆಯನ್ನು ಲೋಕಸಭೆ ಬುಧವಾರ ಅಂಗೀಕರಿಸಿತು

ಐಸಿಎಐ, ಐಸಿಡಬ್ಲ್ಯುಎಐ ಹಾಗೂ ಐಸಿಎಸ್‌ಐ ಸಂಸ್ಥೆಗಳಿಗೆ ಈ ತಿದ್ದುಪಡಿಗಳು ಅನ್ವಯವಾಗಲಿವೆ. 'ಲೆಕ್ಕ ಪರಿಶೋಧಕರಲ್ಲದ ಹಾಗೂ ವೆಚ್ಚ ಪರಿಶೋಧಕರಲ್ಲದ ಹಾಗೂ ಕಂಪನಿ ಕಾರ್ಯದರ್ಶಿಯಲ್ಲದ ವ್ಯಕ್ತಿಯನ್ನು ಈ ಸಂಸ್ಥೆಗಳ ಶಿಸ್ತು ಸಮಿತಿಗಳಿಗೆ ಅಧ್ಯಕ್ಷರನ್ನಾಗಿ ನೇಮಿಸಲು ಈ ತಿದ್ದುಪಡಿ ಮಸೂದೆ ಅವಕಾಶ ಕಲ್ಪಿಸುತ್ತದೆ.

ಮಸೂದೆ ಮಂಡಿಸಿ ಮಾತನಾಡಿದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 'ಪ್ರಸ್ತುತ ಕಾಯ್ದೆಯಲ್ಲಿ ಮಾಡಲಾಗುವ ಬದಲಾವಣೆಗಳಿಂದ ಈ ಮೂರು ಸಂಸ್ಥೆಗಳ ಸ್ವಾಯತ್ತತೆಗೆ ಯಾವುದೇ ಧಕ್ಕೆಯಾಗುವುದಿಲ್ಲ' ಎಂದು ಹೇಳಿದರು.

'ತಿದ್ದುಪಡಿಗಳಿಂದಾಗಿ ಈ ಸಂಸ್ಥೆಗಳ ಜವಾಬ್ದಾರಿ ಹಾಗೂ ಉತ್ತರದಾಯಿತ್ವ ಹೆಚ್ಚಲಿದೆ' ಎಂದೂ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದರು.

ಮರೈನ್ ಬೋಟ್ ಮೋಟರ್ ಕ್ಷೇತ್ರಕ್ಕೆ ಹೋಂಡಾ ಪವರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಂಡಾ ಇಂಡಿಯಾ ಪವರ್ ಪ್ರಾಡಕ್ಟ್ಸ್ (ಎಚ್ಐಪಿಪಿ) ಕಂಪನಿಯು ಮರೈನ್ ಔಟ್‌ಬೋರ್ಡ್ (ಪವರ್ ಬೋಟ್) ವ್ಯಾಪಾರ ಕ್ಷೇತ್ರವನ್ನು ಪ್ರವೇಶಿಸುವುದಾಗಿ ಬುಧವಾರ ಹೇಳಿದೆ.

6 ಎಚ್‌ಪಿ ಮೋಟರ್ ಬೆಲೆಯು ₹ 1.8 ಲಕ್ಷ ಹಾಗೂ 250 ಎಚ್‌ಪಿ ಬೆಲೆಯು ₹ 23 ಲಕ್ಷ ಇರಲಿದೆ ಎಂದು ಕಂಪನಿ ಹೇಳಿದೆ.

'ಹೋಂಡಾ 4 ಸ್ಟ್ರೋಕ್ ಮರೈನ್ ಔಟ್‌ಬೋರ್ಡ್ ಮೋಟರ್ ಸರಣಿಗಳನ್ನು ಏಪ್ರಿಲ್‌ನಿಂದ ಬಿಡುಗಡೆ ಮಾಡುವುದಾಗಿ ಹೇಳಿದೆ. ಕಡಲ ರಕ್ಷಣೆಯಲ್ಲಿ ತೊಡಗಿರುವ ಸರ್ಕಾರದ ಹಲವು ಸಂಸ್ಥೆಗಳು, ಕೋಸ್ಟಲ್ ಗಾರ್ಡ್, ಗ್ರಾಹಕರು ಮತ್ತು ಪ್ರವಾಸಿಗರಿಗೆ ಟ್ಯಾಕ್ಸಿ ಬೋಟ್ ಸೇವೆ ನೀಡುವವರು, ವಾಣಿಜ್ಯ ಉದ್ದೇಶದ ಮೀನುಗಾರಿಕೆ ನಡೆಸುವವರನ್ನು ಗಮನದಲ್ಲಿ ಇಟ್ಟುಕೊಂಡು ಈ ಮೋಟರ್‌ಗಳನ್ನು ಬಿಡುಗಡೆ ಮಾಡಲಾಗುತ್ತಿದೆ' ಎಂದು ಕಂಪನಿಯ ಅಧ್ಯಕ್ಷ ಟಕಹಿರೊ ಉಯೇಡಾ ಹೇಳಿದರು.

ಪ್ರವಾಸ, ಕಡಲ ಸುರಕ್ಷತೆ ಮತ್ತು ಮೀನುಗಾರಿಕೆಗೆ ಬಳಸುವ ಬೋಟ್‌ಗಳು 2 ಸ್ಟ್ರೋಕ್‌ನಿಂದ 4 ಸ್ಟ್ರೋಕ್ ತಂತ್ರಜ್ಞಾನದೆಡೆಗೆ ಸಾಗುತ್ತಿವೆ. ಈ ಅವಕಾಶವನ್ನು ಬಳಸಿಕೊಳ್ಳಲು ಕಂಪನಿಯು ಯೋಜನೆ ರೂಪಿಸಿದೆ ಎಂದು ಅವರು ತಿಳಿಸಿದರು.


ಚಿನ್ನ ₹ 573, ಬೆಳ್ಳಿ ₹ 1,287ರಷ್ಟು ಹೆಚ್ಚಳ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನ, ಬೆಳ್ಳಿ ದರ ಹೆಚ್ಚಾಗಿದೆ. 10 ಗ್ರಾಂ ಚಿನ್ನದ ದರ ₹ 573ರಷ್ಟು ಹೆಚ್ಚಾಗಿ ₹ 51,470ಕ್ಕೆ ಏರಿಕೆ ಆಗಿದೆ.

ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,287 ರಷ್ಟು ಏರಿಕೆ ಕಂಡು ₹ 67,257ರಂತೆ ಮಾರಾಟವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿಯೂ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,325
ಇಂದಿನ ಅಂತ್ಯ	17,498
▲	173
ದಿನದ ಗರಿಷ್ಠ	17,522

ವಿನಿಮಯ ದರ

$ ಡಾಲರ್	75.94
£ ಪೌಂಡ್	99.84
€ ಯುರೊ	84.62
¥ ಯೆನ್ (100ಕ್ಕೆ)	62

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹400
12 ಮೊಟ್ಟೆಗೆ	₹56
ಮೈಸೂರು	
100 ಮೊಟ್ಟೆಗೆ	₹400

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1610)
ಸೋಯಾ (ರಿಫೈನ್ಡ್)	₹1470 (1575)
ಸೂರ್ಯಕಾಂತಿ (ರಿಫೈನ್ಡ್)	₹1715 (1725)
ಪಾಮೋಲಿನ್	₹1440 (1450)

ಕ್ಯೂರ್‌ವೇದಾ ಬ್ರ್ಯಾಂಡ್‌ಗೆ ಪ್ರಧಾನಿ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಗಳಾದ ಭಾವನಾ ಮತ್ತು ಸಿದ್ಧೇಶ್ ಶರ್ಮಾ ದಂಪತಿ ಆರಂಭಿಸಿದ ಕ್ಯೂರ್‌ವೇದಾ ಬ್ರ್ಯಾಂಡ್‌ಗೆ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 87ನೆಯ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಕಂಪನಿ ಹೇಳಿದೆ. ಕ್ಯೂರ್‌ವೇದಾ ಮೂರು ವರ್ಷಗಳ ಹಿಂದೆ ಆರಂಭವಾದ ಕಂಪನಿ.

ಆಯುರ್ವೇದದ ಬಗ್ಗೆ ವಿಶ್ವದೆಲ್ಲೆಡೆ ಮೂಡುತ್ತಿರುವ ಆಸಕ್ತಿಯನ್ನು, ಆಯುಷ್ ಉತ್ಪನ್ನ ತಯಾರಿಕಾ ಉದ್ಯಮವು ಆರು ವರ್ಷಗಳ ಹಿಂದೆ ₹ 22 ಸಾವಿರ ಕೋಟಿ ಇದ್ದಿದ್ದು ಈಗ ₹ 1.40 ಲಕ್ಷ ಕೋಟಿಗೆ ಏರಿಕೆ ಆಗಿದ್ದನ್ನು ಪ್ರಧಾನಿಯವರು ಉಲ್ಲೇಖಿಸಿದ್ದಾರೆ.

ಸಾಂಪ್ರದಾಯಿಕ ಜ್ಞಾನ ಹಾಗೂ ಆಧುನಿಕ ಸಂಶೋಧನೆಯ ಮೂಲಕ ಪೌಷ್ಟಿಕಾಂಶಯುಕ್ತ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಿದ್ದಕ್ಕಾಗಿ ಪ್ರಧಾನಿಯವರು ಕ್ಯೂರ್‌ವೇದಾ ಕಂಪನಿಗೆ ಅಭಿನಂದನೆ ಹೇಳಿದ್ದಾರೆ. 'ನಮಗೆ ಉತ್ತೇಜನ ನೀಡಿದ್ದಕ್ಕಾಗಿ ಪ್ರಧಾನಿಯವರಿಗೆ ಧನ್ಯವಾದ ಅರ್ಪಿಸುತ್ತೇವೆ' ಎಂದು ಕಂಪನಿಯ ಸಿಇಒ ಭಾವನಾ ಶರ್ಮಾ ಹೇಳಿದ್ದಾರೆ.

ಸಿಟಿಬ್ಯಾಂಕ್ ಗ್ರಾಹಕರ ಹಾಲಿ ಸೌಲಭ್ಯಗಳಿಗೆ ಇಲ್ಲ ಅಡ್ಡಿ

ಎಕ್ಸಿಸ್ ಬ್ಯಾಂಕ್ ತೆಕ್ಕೆಗೆ ಸಿಟಿಬ್ಯಾಂಕ್

ನವದೆಹಲಿ (ಪಿಟಿಐ/ರಾಯಿಟರ್ಸ್): ಸಿಟಿ ಗ್ರೂಪ್‌ನ ಕ್ರೆಡಿಟ್ ಕಾರ್ಡ್ ವಹಿವಾಟು, ರಿಟೇಲ್ ಬ್ಯಾಂಕಿಂಗ್, ಗ್ರಾಹಕ ಸಾಲ ಮತ್ತು ಆಸ್ತಿ ನಿರ್ವಹಣೆ ಸೇರಿದಂತೆ ಗ್ರಾಹಕ ಬ್ಯಾಂಕಿಂಗ್ ವಹಿವಾಟುಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿರುವುದಾಗಿ ಎಕ್ಸಿಸ್ ಬ್ಯಾಂಕ್ ಬುಧವಾರ ಪ್ರಕಟಿಸಿದೆ. ಈ ಸ್ವಾಧೀನದ ಮೊತ್ತ ₹ 12,325 ಕೋಟಿ.

ಕ್ರೆಡಿಟ್ ಕಾರ್ಡ್‌ಗಳ ವಿತರಣೆಯಲ್ಲಿ ಎಕ್ಸಿಸ್ ಬ್ಯಾಂಕ್ ದೇಶದಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಎಕ್ಸಿಸ್ ಬ್ಯಾಂಕ್ ಇದುವರೆಗೆ 86 ಲಕ್ಷ ಕ್ರೆಡಿಟ್ ಕಾರ್ಡ್ ವಿತರಣೆ ಮಾಡಿದ್ದು, ಸ್ವಾಧೀನದ ನಂತರದಲ್ಲಿ ಸಿಟಿಬ್ಯಾಂಕ್‌ನ ಅಂದಾಜು 25 ಲಕ್ಷ ಕ್ರೆಡಿಟ್ ಕಾರ್ಡ್ ಗ್ರಾಹಕರು ದೊರೆಯಲಿದ್ದಾರೆ. ಆಗ ಎಕ್ಸಿಸ್ ಬ್ಯಾಂಕ್, ಕ್ರೆಡಿಟ್ ಕಾರ್ಡ್ ವಹಿವಾಟಿನಲ್ಲಿ ದೇಶದ ಮುಂಚೂಣಿ ಮೂರು ಕಂಪನಿಗಳ ಸಾಲಿನಲ್ಲಿ ಸೇರಲಿದೆ.

ಮುಖ್ಯಾಂಶಗಳು

- ಕ್ರೆಡಿಟ್ ಕಾರ್ಡ್ ವಹಿವಾಟಿನಲ್ಲಿ ಮುಂಚೂಣಿ ಸ್ಥಾನ ಪಡೆಯಲಿರುವ ಎಕ್ಸಿಸ್
- 2023ರ ಮೊದಲಾರ್ಧದಲ್ಲಿ ಸ್ವಾಧೀನ ಪೂರ್ಣ

ಈ ಸ್ವಾಧೀನದಿಂದಾಗಿ ಎಕ್ಸಿಸ್ ಬ್ಯಾಂಕ್‌ಗೆ 18 ನಗರಗಳಲ್ಲಿ ಇರುವ ಏಳು ಕಚೇರಿಗಳು, 21 ಶಾಖೆಗಳು, 499 ಎಟಿಎಂ ಕೇಂದ್ರಗಳು ಸಿಗಲಿವೆ. ಸಿಟಿಬ್ಯಾಂಕ್‌ನ ಅಂದಾಜು 3,600 ನೌಕರರು, 30 ಲಕ್ಷ ಗ್ರಾಹಕರು ಎಕ್ಸಿಸ್ ಬ್ಯಾಂಕ್‌ಗೆ ವರ್ಗಾವಣೆ ಆಗಲಿದ್ದಾರೆ.



ಸಿಟಿಬ್ಯಾಂಕ್ ಗ್ರಾಹಕರಿಗೆ ಈಗ ಸಿಗುತ್ತಿರುವ ರಿವಾರ್ಡ್ ಅಂಕಗಳು, ಸೌಲಭ್ಯಗಳು, ಕೊಡುಗೆಗಳು ಮುಂದೆಯೂ ಸಿಗಲಿವೆ ಎಂದು ಎಕ್ಸಿಸ್ ಬ್ಯಾಂಕ್ ಹೇಳಿದೆ.

2021ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ ಸಿಟಿಬ್ಯಾಂಕ್ ₹ 4,093 ಕೋಟಿ ನಿವ್ವಳ ಲಾಭ ಗಳಿಸಿತ್ತು. 2020ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷದಲ್ಲಿ ಬ್ಯಾಂಕ್ ₹ 4,918 ಕೋಟಿ ಲಾಭ ಕಂಡಿತ್ತು.

ಭಾರತದಲ್ಲಿನ ಗ್ರಾಹಕ ಬ್ಯಾಂಕಿಂಗ್ ಸೇವೆಗಳಿಂದ ಹೊರನಡೆಯುವ ತೀರ್ಮಾನವನ್ನು ಸಿಟಿ ಗ್ರೂಪ್ 2021ರ ಏಪ್ರಿಲ್‌ನಲ್ಲಿ ಪ್ರಕಟಿಸಿತ್ತು.

ಗ್ರಾಹಕ ಬ್ಯಾಂಕಿಂಗ್ ಸೇವೆಗಳನ್ನು ಸಿಟಿ ಬ್ಯಾಂಕ್ ಭಾರತದಲ್ಲಿ 1985ರಲ್ಲಿ ಆರಂಭಿಸಿತ್ತು. ಸಿಟಿ ಬ್ಯಾಂಕ್ ದೇಶದಲ್ಲಿ ಒಟ್ಟು 26 ಲಕ್ಷ ಜನರಿಗೆ ಕ್ರೆಡಿಟ್ ಕಾರ್ಡ್ ಸೇವೆ ಒದಗಿಸಿದೆ. ಸಿಟಿ ಬ್ಯಾಂಕ್‌ನ ಸಾಂಸ್ಥಿಕ ಗ್ರಾಹಕ ವ್ಯವಹಾರಗಳನ್ನು ಎಕ್ಸಿಸ್ ಬ್ಯಾಂಕ್‌ಗೆ ಮಾರಾಟ ಮಾಡುತ್ತಿಲ್ಲ. 2023ರ ಮೊದಲಾರ್ಧದಲ್ಲಿ ಸ್ವಾಧೀನವು ಪೂರ್ಣಗೊಳ್ಳಲಿದೆ.

ಅಪೋಲೊ, ಸಿಯೆಟ್ ಮೇಲೆ ಸಿಸಿಐ ದಾಳಿ

ನವದೆಹಲಿ (ರಾಯಿಟರ್ಸ್): ಭಾರತೀಯ ಸ್ಪರ್ಧಾ ಆಯೋಗವು (ಸಿಸಿಐ) ಟೈರ್ ತಯಾರಿಕಾ ಕಂಪನಿಗಳಾದ ಕಾಂಟಿನೆಂಟಲ್ ಎಜಿ, ಅಪೋಲೊ ಟೈರ್ಸ್ ಮತ್ತು ಸಿಯೆಟ್ ಮೇಲೆ ಬುಧವಾರ ದಾಳಿ ನಡೆಸಿದೆ.

ದಾಳಿಯ ವರದಿ ಪ್ರಕಟವಾದ ನಂತರದಲ್ಲಿ ಅಪೋಲೊ ಟೈರ್ಸ್ ಷೇರು ಮೌಲ್ಯವು ಶೇಕಡ 3ರವರೆಗೆ, ಸಿಯೆಟ್ ಷೇರು ಮೌಲ್ಯವು ಶೇ 2.2ರವರೆಗೆ ಇಳಿಕೆ ಕಂಡಿತು.

ಕಾಂಟಿನೆಂಟಲ್ ಕಂಪನಿಯು ತನ್ನ ದೆಹಲಿ ಕಚೇರಿಗೆ ಸಿಸಿಐ ಅಧಿಕಾರಿಗಳು ಭೇಟಿ ನೀಡಿದ್ದನ್ನು ಖಚಿತಪಡಿಸಿದೆ.

ಹರಿಯಾಣದ ಸಾರ್ವಜನಿಕ ಸಾರಿಗೆ ವಾಹನಗಳಿಗೆ ಟೈರ್ ಪೂರೈಕೆ ಮಾಡುವುದಕ್ಕೆ ಸಂಬಂಧಿಸಿದ ಬಿಡ್ಡಿಂಗ್‌ನಲ್ಲಿ ನಿಯಮ ಉಲ್ಲಂಘಿಸಿದ್ದ ವಿಚಾರವಾಗಿ ದಾಳಿ ನಡೆದಿದೆ ಎಂದು ಮೂಲವೊಂದು ತಿಳಿಸಿದೆ.

ಆಧಾರ್ ಜೊತೆ ಜೋಡಣೆ ಆಗದ ಪ್ಯಾನ್ 2023ರ ಮಾರ್ಚ್ ನಂತರ ನಿಷ್ಕ್ರಿಯ

ನವದೆಹಲಿ (ಪಿಟಿಐ): ಪ್ಯಾನ್ ಸಂಖ್ಯೆಯನ್ನು ಆಧಾರ್ ಜೊತೆ ಗುರುವಾರದ ಅಂತ್ಯದೊಳಗೆ (ಮಾರ್ಚ್ 31) ಜೋಡಣೆ ಮಾಡದೆ ಇದ್ದರೆ, ₹ 1,000ವರೆಗೆ ದಂಡ ಪಾವತಿಸಬೇಕಾಗಬಹುದು ಎಂದು ಆದಾಯ ತೆರಿಗೆ ಇಲಾಖೆ ಬುಧವಾರ ಹೇಳಿದೆ.

ಆಧಾರ್ ಜೊತೆ ಜೋಡಣೆ ಮಾಡದೆ ಇದ್ದರೆ ಅಂತಹ ಪ್ಯಾನ್ ಸಂಖ್ಯೆಗಳು 2023ರ ಮಾರ್ಚ್‌ವರೆಗೆ ಚಾಲ್ತಿಯಲ್ಲಿ ಇರುತ್ತವೆ ಎಂದೂ ಹೇಳಿದೆ.

ಪ್ಯಾನ್–ಆಧಾರ್ ಜೋಡಣೆಯ ಗಡುವನ್ನು ನೇರ ತೆರಿಗೆಗಳ ಕೇಂದ್ರ ಮಂಡಳಿಯು (ಸಿಬಿಡಿಟಿ) ಹಲವು ಬಾರಿ ವಿಸ್ತರಣೆ ಮಾಡಿದೆ. ಗಡುವು ಗುರುವಾರಕ್ಕೆ ಕೊನೆಗೊಳ್ಳಲಿದೆ.



ಗುರುವಾರದ ನಂತರ, ಈ ವರ್ಷದ ಜೂನ್ 30ರೊಳಗೆ ಪ್ಯಾನ್–ಆಧಾರ್ ಜೋಡಣೆ ಮಾಡುವವರು ₹ 500 ದಂಡ ಪಾವತಿಸಬೇಕು. ಆ ತಾರೀಕಿನ ನಂತರದಲ್ಲಿ ದಂಡದ ಮೊತ್ತವು ₹ 1,000ಕ್ಕೆ ಹೆಚ್ಚಳ ಆಗಲಿದೆ ಎಂದು ಸಿಬಿಡಿಟಿ ಹೇಳಿದೆ.

ಪ್ಯಾನ್–ಆಧಾರ್ ಜೋಡಣೆ ಮಾಡದೆ ಇರುವವರು 2023ರ ಮಾರ್ಚ್ 31ರವರೆಗೆ ಪ್ಯಾನ್ ಸಂಖ್ಯೆ ಬಳಸಿ ಆದಾಯ ವಿವರ ಸಲ್ಲಿಸಬಹುದು, ತೆರಿಗೆ ರೀಫಂಡ್ ಪಡೆದುಕೊಳ್ಳಬಹುದು. 2023ರ ಮಾರ್ಚ್ 31ರವರೆಗೂ ಜೋಡಣೆ ಮಾಡದೆ ಇದ್ದರೆ, ಪ್ಯಾನ್ ಸಂಖ್ಯೆ ನಿಷ್ಕ್ರಿಯವಾಗುತ್ತದೆ. ಪ್ಯಾನ್ ಸಂಖ್ಯೆಯನ್ನು ಅಗತ್ಯ ಇರುವಲ್ಲಿ ಉಲ್ಲೇಖಿಸದೆ ಇದ್ದರೆ ಸಂಬಂಧಪಟ್ಟ ಕಾನೂನುಗಳ ಅಡಿ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಸಿಬಿಡಿಟಿ ಎಚ್ಚರಿಸಿದೆ.

ಜನವರಿ 24ರವರೆಗಿನ ಮಾಹಿತಿ ಅನ್ವಯ 43.34 ಕೋಟಿಗೂ ಹೆಚ್ಚಿನ ಪ್ಯಾನ್ ಸಂಖ್ಯೆಗಳು ಆಧಾರ್ ಜೊತೆ ಜೋಡಣೆ ಆಗಿವೆ. ಆಧಾರ್ ಜೊತೆ ಜೋಡಣೆಯಿಂದ ನಕಲಿ ಪ್ಯಾನ್ ಸಂಖ್ಯೆ ಪತ್ತೆ ಮಾಡಲು, ತೆರಿಗೆ ವಂಚನೆ ತಪ್ಪಿಸಲು ಆಗುತ್ತದೆ.

ಸೆನ್ಸೆಕ್ಸ್ 740 ಅಂಶ ಹೆಚ್ಚಳ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಮೂರನೇ ದಿನವೂ ಸಕಾರಾತ್ಮಕ ವಹಿವಾಟು ನಡೆಯಿತು. ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್, ಎಚ್‌ಡಿಎಫ್‌ಸಿ, ಐಸಿಐಸಿಐ ಬ್ಯಾಂಕ್ ಷೇರುಗಳ ಗಳಿಕೆಯಿಂದಾಗಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇಕಡ 1ಕ್ಕೂ ಹೆಚ್ಚಿನ ಏರಿಕೆ ಕಂಡು ಆರು ವಾರಗಳ ಗರಿಷ್ಠ ಮಟ್ಟದಲ್ಲಿ ವಹಿವಾಟು ಅಂತ್ಯವಾಯಿತು.

ರಷ್ಯಾ–ಉಕ್ರೇನ್ ಶಾಂತಿ ಮಾತುಕತೆಯಲ್ಲಿ ಪ್ರಗತಿ ಕಾಣುವ ವಿಶ್ವಾಸ ವ್ಯಕ್ತವಾಗಿರುವುದು ಏಷ್ಯಾದ ಷೇರುಪೇಟೆಗಳ ಗಳಿಕೆಗೆ ಕಾರಣವಾಯಿತು. ದೇಶದ ಷೇರುಪೇಟೆಗಳ ಮೇಲೆಯೂ ಅದರ ಪ್ರಭಾವ ಕಂಡುಬಂತು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 740 ಅಂಶ ಹೆಚ್ಚಾಗಿ 58,683 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 173 ಅಂಶ ಹೆಚ್ಚಾಗಿ 17,498 ಅಂಶಗಳಿಗೆ ತಲುಪಿತು.

ಮೂರು ದಿನಗಳ ವಹಿವಾಟಿನಲ್ಲಿ ಸೆನ್ಸೆಕ್ಸ್ 1,321 ಅಂಶ, ನಿಫ್ಟಿ 345 ಅಂಶ ಏರಿಕೆ ಆಗಿದೆ. ಬಿಎಸ್‌ಇನಲ್ಲಿ ಸ್ಮಾಲ್‌ಕ್ಯಾಪ್ ಶೇ 1.09ರಷ್ಟು ಮತ್ತು ಮಿಡ್‌ಕ್ಯಾಪ್ ಶೇ 0.78ರಷ್ಟು ಏರಿಕೆ ಆಗಿದೆ.

ರೂಪಾಯಿ ಮೌಲ್ಯ ಇಳಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 21 ಪೈಸೆ ಇಳಿಕೆ ಆಗಿದ್ದು, ಒಂದು ಡಾಲರ್‌ಗೆ ₹ 75.94ರಂತೆ ವಿನಿಮಯಗೊಂಡಿತು.

ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 112.7 ಡಾಲರ್‌ಗೆ ಏರಿಕೆ ಆಗಿದೆ.

ಏಪ್ರಿಲ್ 1ರಿಂದ ಈ ಬದಲಾವಣೆಗಳು

- ವಾರ್ಷಿಕ ₹ 20 ಕೋಟಿಗೂ ಅಧಿಕ ಮೊತ್ತದ ವಹಿವಾಟು ನಡೆಸುವ ಉದ್ದಿಮೆಗಳು ಇ–ಇನ್‌ವಾಯ್ಸ್ ಪಡೆಯುವುದು ಕಡ್ಡಾಯ
- ಆದಾಯ ತೆರಿಗೆ ವಿವರ ಸಲ್ಲಿಸಿದ ಎರಡು ವರ್ಷಗಳ ಒಳಗಾಗಿ ಪರಿಷ್ಕೃತ ವಿವರ ಸಲ್ಲಿಕೆ ಅವಕಾಶ ಸಿಗಲಿದೆ. ನಿರ್ದಿಷ್ಟ ಅಂದಾಜು ವರ್ಷಕ್ಕೆ ಸಂಬಂಧಿಸಿದಂತೆ ಒಂದು ಬಾರಿ ಮಾತ್ರ ಪರಿಷ್ಕೃತ ವಿವರ ಸಲ್ಲಿಸಲು ಅವಕಾಶ ಇರಲಿದೆ.

ಕ್ರಿಪ್ಟೊಕರೆನ್ಸಿಗಳ ವರ್ಗಾವಣೆಯಿಂದ ಬರುವ ಆದಾಯಕ್ಕೆ ಶೇಕಡ 30ರಷ್ಟು ತೆರಿಗೆ.

ಕ್ರಿಪ್ಟೊ ಕರೆನ್ಸಿ ಮೈನಿಂಗ್ ಚಟುವಟಿಕೆಗೆ ಮಾಡಿದ ವೆಚ್ಚಗಳ ಲೆಕ್ಕ ನೀಡಿ, ಆದಾಯ ತೆರಿಗೆ ವಿನಾಯಿತಿ ಪಡೆಯಲು ಅವಕಾಶ ಇಲ್ಲ

ಒಂದು ವರ್ಷದಲ್ಲಿ ₹ 10 ಸಾವಿರಕ್ಕಿಂತ ಹೆಚ್ಚಿನ ಮೊತ್ತದ ವರ್ಚುವಲ್ ಕರೆನ್ಸಿಗಳ ವರ್ಗಾವಣೆಯ ಮೇಲೆ ಶೇ 1ರಷ್ಟು ಟಿಡಿಎಸ್ (ಮೂಲದಲ್ಲೇ ತೆರಿಗೆ ಕಡಿತ)

ಇವು ತುಟ್ಟಿ

- ಆಮದು ಮಾಡಿಕೊಂಡ ಹೆಡ್‌ಫೋನ್, ಸ್ಪೀಕರ್ ಮತ್ತು ಇಯರ್ ಫೋನ್.
- ಕ್ಷಕಿರಣ ಯಂತ್ರಗಳು, ಛತ್ರಿಗಳು, ಅನ್‌ಬ್ಲೆಂಡೆಡ್ ಇಂಧನ, ಕೃತಕ ಆಭರಣ

ಇವು ತುಸು ಅಗ್ಗವಾಗಬಹುದು

ಚಾರ್ಜರ್‌ಗಳು, ಫೋನ್ ಕ್ಯಾಮೆರಾ ಉಪಕರಣಗಳು, ಕೃಷಿ ಉಪಕರಣಗಳು ಮತ್ತು ಸ್ಮಾರ್ಟ್ ಮೀಟರ್, ಸ್ಮಾರ್ಟ್ ವಾಚ್, ಸಂಸ್ಕರಿಸಿದ ಸ್ಕ್ವಿಡ್, ಕೋಕೊ ಬೀನ್ಸ್ ಮತ್ತು ಇಂಗು, ಆಮದು ಮಾಡಿಕೊಳ್ಳಲಾದ ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರ, ಗುಜರಿ ಉಕ್ಕು ಮತ್ತು ಕಬ್ಬಿಣ

ಪೆಟ್ರೋಲ್, ಡೀಸೆಲ್ ದರ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಬುಧವಾರ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರಿಗೆ ತಲಾ 80 ಪೈಸೆಯಷ್ಟು ಹೆಚ್ಚಿಸಿವೆ. ಇದರಿಂದಾಗಿ ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 101.01 ಮತ್ತು ಡೀಸೆಲ್ ದರ ಲೀಟರಿಗೆ ₹ 92.27ಕ್ಕೆ ಏರಿಕೆ ಆಗಿದೆ.

ಸ್ಥಳೀಯ ಮಾರಾಟ ದರಕ್ಕೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ತೈಲ ದರದಲ್ಲಿ ವ್ಯತ್ಯಾಸ ಆಗುತ್ತದೆ. ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 106.44 ಮತ್ತು ₹ 90.47ಕ್ಕೆ ತಲುಪಿದೆ.

ಮಾರ್ಚ್ 22ರಿಂದ ದರ ಪರಿಷ್ಕರಣೆ ಆರಂಭ ಆಗಿದ್ದು, ಬುಧವಾರದವರೆಗೆ, ಬೆಂಗಳೂರಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 5.86ರಷ್ಟು ಮತ್ತು ಡೀಸೆಲ್ ದರ ₹ 5.46 ರಷ್ಟು ಹೆಚ್ಚಳ ಆಗಿದೆ.

ತೊಗರಿ, ಉದ್ದಿನ ಬೇಳೆ ಮುಕ್ತ ಆಮದು ವಿಸ್ತರಣೆ

ನವದೆಹಲಿ (ಪಿಟಿಐ): ತೊಗರಿ ಬೇಳೆ ಮತ್ತು ಉದ್ದಿನ ಬೇಳೆಯ ಆಮದನ್ನು 2023ರ ಮಾರ್ಚ್ 31ರವರೆಗೆ 'ಮುಕ್ತ'ವಾಗಿ ಇರಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ದೇಶಿ ಮಾರುಕಟ್ಟೆಯಲ್ಲಿ ಇವುಗಳ ಪೂರೈಕೆ ಕೊರತೆ ಆಗದಂತೆ ನೋಡಿಕೊಳ್ಳಲು, ಬೆಲೆಯನ್ನು ನಿಯಂತ್ರಣದಲ್ಲಿ ಇರಿಸಲು ಈ ಕ್ರಮ ಕೈಗೊಂಡಿದೆ. 'ಸರ್ಕಾರದ ತೀರ್ಮಾನದಿಂದಾಗಿ ಈ ಬೇಳೆಗಳ ಆಮದು ಸರಾಗವಾಗಿ ಆಗಲಿದೆ. ಇವು ಅಗತ್ಯ ಪ್ರಮಾಣದಲ್ಲಿ ಲಭ್ಯವಾಗಿ, ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಸಿಗುವ ನಿರೀಕ್ಷೆ ಇದೆ' ಎಂದು ಪ್ರಕಟಣೆ ತಿಳಿಸಿದೆ.

'ಕೋವಿಡ್ ಸಾವಿನ ಸಂಖ್ಯೆ ಶೇ 40ರಷ್ಟು ಹೆಚ್ಚಳ'

ಜಿನಿವಾ (ಎಪಿ): ಕಳೆದ ವಾರವೊಂದರಲ್ಲಿ ಕೊರೊನಾ ಸೋಂಕಿಗೆ ಬಲಿಯಾದವರ ಪ್ರಮಾಣ ಶೇ 40ಕ್ಕಿಂತ ಹೆಚ್ಚಾಗಿದೆ. ಆದರೆ, ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಮುಖವಾಗಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ.

ಅಮೆರಿಕದಲ್ಲಿ ಕೋವಿಡ್‌ಗೆ ಬಲಿಯಾದವರ ಸಂಖ್ಯೆಯಲ್ಲಿ ಬದಲಾವಣೆ ಮತ್ತು ಭಾರತದಲ್ಲಿ ಸಾವಿಗೀಡಾದವರ ಸಂಖ್ಯೆಯ ಪರಿಷ್ಕರಣೆಯಿಂದಾಗಿ ಸಾವಿನ ಪ್ರಮಾಣ ಹೆಚ್ಚಾಗಿರಬಹುದು ಎಂದು ಹೇಳಲಾಗಿದೆ.

ಸಂಕ್ಷಿಪ್ತ ಸುದ್ದಿ

'ಸ್ಮಿತ್ ವಿರುದ್ಧ ಕ್ರಮ'

ಲಾಸ್ ಏಂಜಲೀಸ್ (ಪಿಟಿಐ): 2022ನೇ ಸಾಲಿನ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭದ ವೇದಿಕೆಯಲ್ಲಿ ನಟ ಹಾಗೂ ಹಾಸ್ಯ ಕಲಾವಿದ ಕ್ರಿಸ್ ರಾಕ್ ಅವರಿಗೆ ಕಪಾಳ ಮೋಕ್ಷ ಮಾಡಿದ ಹಾಲಿವುಡ್ ಸ್ಟಾರ್ ವಿಲ್ ಸ್ಮಿತ್ ಅವರ ನಡವಳಿಕೆ ಖಂಡನೀಯ. ಘಟನೆ ಬಗ್ಗೆ ಸಂಸ್ಥೆ ಕ್ರಮ ಕೈಗೊಳ್ಳಲಿದೆ ಎಂದು 'ದಿ ಅಕಾಡೆಮಿ ಆಫ್ ಮೋಷನ್ ಪಿಕ್ಚರ್ಸ್ ಆರ್ಟ್ಸ್ ಅಂಡ್ ಸೈನ್ಸಸ್ (ಎಎಂಪಿಎಎಸ್)' ಹೇಳಿದೆ.

ಈ ಸಂಬಂಧ ಅಕಾಡೆಮಿ ಸದಸ್ಯರಿಗೆ ಪತ್ರ ರವಾನಿಸಿರುವ ಎಎಂಪಿಎಎಸ್ ಅಧ್ಯಕ್ಷ ಹಾಗೂ ಸಿಇಒ ಡೇವಿಡ್ ರುಬಿನ್ ಅವರು, 'ಈ ಕುರಿತ ಪ್ರಕ್ರಿಯೆ ಶೀಘ್ರವೇ ಆರಂಭವಾಗುವುದು' ಎಂದು ಭರವಸೆ ನೀಡಿದ್ದಾರೆ.

ಶ್ರೀಲಂಕಾ: ದಿನಕ್ಕೆ 10 ಗಂಟೆ ವಿದ್ಯುತ್ ಪೂರೈಕೆ ಸ್ಥಗಿತ

ಕೊಲಂಬೊ (ಪಿಟಿಐ): ತೀವ್ರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿರುವ ಶ್ರೀಲಂಕಾ ಸರ್ಕಾರ ದೇಶದಾದ್ಯಂತ ದಿನಕ್ಕೆ 7-10 ಗಂಟೆಗಳ ಕಾಲ ವಿದ್ಯುತ್ ಪೂರೈಕೆ ಸ್ಥಗಿತಗೊಳಿಸುವ ಕ್ರಮವನ್ನು ಮತ್ತಷ್ಟು ದಿನಗಳ ಕಾಲ ವಿಸ್ತರಣೆ ಮಾಡಿದೆ. ಇದರಿಂದಾಗಿ ಜನ ಸಾಮಾನ್ಯರು ರಾತ್ರಿ ವೇಳೆ ಕತ್ತಲಲ್ಲೇ ಕಾಲ ಕಳೆಯುವ ಅನಿವಾರ್ಯತೆ ಎದುರಾಗಿದೆ.

ಪ್ಲುಟೊ ಗ್ರಹದಲ್ಲಿ ಹಿಮದ ದಿಬ್ಬಗಳು ಪತ್ತೆ

ಪ್ಯಾರಿಸ್ (ಎಎಫ್‌ಪಿ): ಸೌರಮಂಡಲದ ಕೊನೆಯ ಗ್ರಹ ಪ್ಲುಟೊದಲ್ಲಿ ಭಾರಿಗಾತ್ರದ ಹಿಮದ ದಿಬ್ಬಗಳಿದ್ದವು. ಗ್ರಹದ ಮೇಲ್ಮೈಯಲ್ಲಿ ಕಂಡುಬರುವ ಹಿಮದ ರಾಶಿಗಳು ಇಂಥ ದಿಬ್ಬಗಳು ಇದ್ದವು ಎಂಬುದನ್ನು ಸೂಚಿಸುತ್ತವೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	430-450
ನಡುಗೋಲು	500-550
ರಾಶಿ	600-650
ರಾಶಿ ಉತ್ತಮ	650-700
ಜರಡಿ	750-800
ಹೆರಕಿದ್ದು	1100-1150
ಹಸಿರು ಸಾಧಾರಣ	600-700
ಹಸಿರು ಉತ್ತಮ	900-950
ಹಸಿರು ಅತಿ ಉತ್ತಮ	1200-1250
ಕಾಳು ಮೆಣಸು	490
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-53000

ಶಿರಸಿ	
ಬೆಟ್ಟೆ	30099-45018
ಬಿಳಿಗೋಟು	23099-34399
ಚಾಲಿ	32699-40391
ರಾಶಿ	24218-47809
ಶಿವಮೊಗ್ಗ	
ಗೊರಬಲು	20569-27009
ಸರಕು	68600-71800

ತಿಪಟೂರು ಕೊಬ್ಬರಿ	
ಕನಿಷ್ಠ	15800
ಗರಿಷ್ಠ	17300
ಮಾದರಿ	16500
ಒಟ್ಟು ಆವಕ (ಕ್ವಿಂಟಲ್)	1182.93
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	240-999
ದ್ವಿತಳಿ	255-816

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15600	15400	15200	214.55 ಸೆಂಟ್ಸ್
ಎಸಿ	8120	7900	8000	
ಆರ್‌ಪಿ	8900	8900	9000	ಲಂಡನ್
ಆರ್‌ಸಿ	4000	3950	4000	2140 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

30-3-2022

ಜಾವಾ 70/80(ಹೊಸ)	106500-10700
ಜಾವಾ 80/90(ಹೊಸ)	10350-10400
ದಪ್ಪ ಮಧ್ಯಪ್ರದೇಶ(ಹೊಸ)	10600-10650
ದಪ್ಪ ಗುಜರಾತ್(ಹೊಸ)	9600-9650

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1620)
ಒಂದು ವಾರದ ಡೆಲಿವರಿ	1610 (1615)
ಸೋಯಾ ಕಚ್ಚಾ	1437 (1457)
ಪಾಮ್ ವಾರದ ಡೆಲಿವರಿ	1438 (1448)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

51,350 (51,000)

ಬೆಳ್ಳಿ ಕೆ.ಜಿ 67,050 (66,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ಡುಪ್ಲೆಸಿ ಬಳಗದ ಸಂಘಟಿತ ಹೋರಾಟ: ಹಸರಂಗ ದಾಳಿಗೆ ಕೋಲ್ಕತ್ತ ತಬ್ಬಿಬ್ಬು; ಆಕಾಶ್‌ಗೆ 3 ವಿಕೆಟ್

ಬೆಂಗಳೂರಿಗೆ ಗೆಲುವಿನ ಸಂಭ್ರಮ

ನವಿ ಮುಂಬೈ (ಪಿಟಿಐ): ಸಾಧಾರಣ ಗುರಿ ಬೆನ್ನತ್ತಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಆತಂಕದ ಕ್ಷಣಗಳನ್ನು ದಿಟ್ಟವಾಗಿ ಮೀರಿನಿಂತು ಗೆಲುವಿನ ಸಂಭ್ರಮದಲ್ಲಿ ಮಿಂದಿತು. ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಬೆಂಗಳೂರು ಮೂರು ವಿಕೆಟ್‌ಗಳಿಂದ ಮಣಿಸಿತು.

ವಾಣಿಂದು ಹಸರಂಗ ಮತ್ತು ಆಕಾಶ್ ದೀಪ್ ದಾಳಿಗೆ ನಲುಗಿದ ಕೋಲ್ಕತ್ತ 128 ರನ್‌ಗಳಿಗೆ ಪತನಗೊಂಡಿತ್ತು. ಗುರಿ ಬೆನ್ನತ್ತಿದ ಬೆಂಗಳೂರು ನಾಲ್ಕು ಎಸೆತ ಬಾಕಿ ಉಳಿದಿರುವಾಗ 7 ವಿಕೆಟ್ ಕಳೆದುಕೊಂಡು 132 ರನ್ ಗಳಿಸಿತು. ನಾಯಕ ಫಫ್ ಡುಪ್ಲೆಸಿ ಮತ್ತು ಮಾಜಿ ನಾಯಕ ವಿರಾಟ್ ಕೊಹ್ಲಿ ಸೇರಿದಂತೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ವೈಫಲ್ಯ ಕಂಡರು.

ಮಧ್ಯಮ ಕ್ರಮಾಂಕದ ಶೆರ್ಫಾನ್ ರೂಥರ್‌ಫಾರ್ಡ್ ಮತ್ತು ಶಹಬಾಜ್ ಅಹಮ್ಮದ್ 38 ರನ್‌ಗಳ ಜೊತೆಯಾಟದ ಮೂಲಕ ಭರವಸೆ ಮೂಡಿಸಿದರು. ಮುರಿಯದ 8ನೇ ವಿಕೆಟ್‌ಗೆ ದಿನೇಶ್ ಕಾರ್ತಿಕ್ ಮತ್ತು ಹರ್ಷಲ್ ಪಟೇಲ್ 22 ರನ್ ಗಳಿಸಿ ತಂಡವನ್ನು ಜಯದ ದಡ ಸೇರಿಸಿದರು. 20ನೇ ಓವರ್‌ನ ಮೊದಲ ಎರಡು ಎಸೆತಗಳಲ್ಲಿ ಕ್ರಮವಾಗಿ ಸಿಕ್ಸರ್ ಮತ್ತು ಬೌಂಡರಿ ಸಿಡಿಸಿದ ಕಾರ್ತಿಕ್ 7 ಎಸೆತಗಳಲ್ಲಿ 14 ರನ್ ಗಳಿಸಿದರು.

ಹಸರಂಗ ದಾಳಿಗೆ ತಬ್ಬಿಬ್ಬಾದ ಕೋಲ್ಕತ್ತ

ಲೆಗ್ ಬ್ರೇಕ್ ಮತ್ತು ಗೂಗ್ಲಿ ದಾಳಿಯ ಮೂಲಕ ಬ್ಯಾಟರ್‌ಗಳ ಲಯ ತಪ್ಪಿಸಿದ ಶ್ರೀಲಂಕಾ ಬೌಲರ್ ವಾಣಿಂದು ಹಸರಂಗ ಡಿ'ಸಿಲ್ವಾ ಅವರು ಕೋಲ್ಕತ್ತ ನೈಟ್ ರೈಡರ್ಸ್ ತಂಡ ಸಾಧಾರಣ ಮೊತ್ತಕ್ಕೆ ಆಲೌಟಾಗಲು ಕಾರಣರಾದರು. ವಾಣಿಂದು ಅವರಿಗೆ ಆಕಾಶ್ ದೀಪ್ ಉತ್ತಮ ಸಹಕಾರ ನೀಡಿದರು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಬೆಂಗಳೂರು ತಂಡದ ನಾಯಕ ಫಫ್ ಡುಪ್ಲೆಸಿ ಅವರಿಗೆ ನಾಲ್ಕನೇ ಓವರ್‌ನಲ್ಲಿ ಆಕಾಶ್ ದೀಪ್ ವಿಕೆಟ್ ಉಡುಗೊರೆ ನೀಡಿದರು. ಎಡಗೈ ಬ್ಯಾಟರ್ ವೆಂಕಟೇಶ್ ಅಯ್ಯರ್ ಅವರನ್ನು ತಮ್ಮದೇ ಎಸೆತದಲ್ಲಿ ಕ್ಯಾಚ್ ಮಾಡಿ ಆಕಾಶ್ ಸಂಭ್ರಮಿಸಿದರು. ಮೊಹಮ್ಮದ್ ಸಿರಾಜ್‌ಗೆ ಅಜಿಂಕ್ಯ ರಹಾನೆ ವಿಕೆಟ್ ಒಪ್ಪಿಸಿದರು. ಸ್ಫೋಟಕ ಬ್ಯಾಟರ್ ನಿತೀಶ್ ರಾಣಾ ಕೂಡ ಆಕಾಶ್ ಬೌಲಿಂಗ್‌ನಲ್ಲಿ ವಿಕೆಟ್ ಕಳೆದುಕೊಂಡರು.

ನಂತರ ವಾಣಿಂದು ಮಣಿಗಂಟಿನ ಚಳಕ ಶುರುವಾಯಿತು. ನಾಯಕ ಶ್ರೇಯಸ್ ಅಯ್ಯರ್ ಅವರನ್ನು ವಾಪಸ್ ಕಳುಹಿಸಿ ವಾಣಿಂದು ವಿಕೆಟ್ ಬೇಟೆ ಆರಂಭಿಸಿದರು. ಲೆಗ್‌ಬ್ರೇಕ್ ಎಸೆತದಲ್ಲಿ ಶ್ರೇಯಸ್ ವಿಕೆಟ್ ಕಳೆದುಕೊಂಡರು. ತಮ್ಮ ಮುಂದಿನ ಓವರ್‌ನಲ್ಲಿ ಹಸರಂಗ ಗೂಗ್ಲಿ ಎಸೆತದ ಮೂಲಕ ಸುನಿಲ್ ನಾರಾಯಣ್ ವಿಕೆಟ್ ಕಬಳಿಸಿದರು. ವಿಕೆಟ್ ಕೀಪರ್ ಶೆಲ್ಡನ್ ಜಾಕ್ಸನ್ ಕೂಡ ಹಸರಂಗ ಅವರ ಗೂಗ್ಲಿಗೆ ಬಲಿಯಾದರು. ಟಿಮ್ ಸೌಥಿ ಅವರು ಡುಪ್ಲೆಸಿ ಪಡೆದ ಮೋಹಕ ಕ್ಯಾಚ್‌ಗೆ ವಿಕೆಟ್ ಕಳೆದುಕೊಂಡರು.

ಆ್ಯಂಡ್ರೆ ರಸೆಲ್ ಸ್ವಲ್ಪ ಹೋರಾಟ ಮಾಡಿದರು. ಮೂರು ಸಿಕ್ಸರ್ ಮತ್ತು ಒಂದು ಬೌಂಡರಿ ಸಿಡಿಸಿದ ಅವರು 18 ಎಸೆತಗಳಲ್ಲಿ 25 ರನ್ ಗಳಿಸಿದರು. ಉಮೇಶ್ ಯಾದವ್ ಮತ್ತು ವರುಣ್ ಚಕ್ರವರ್ತಿ ಕೊನೆಯ ವಿಕೆಟ್‌ಗೆ 27 ರನ್ ಸೇರಿಸಿದರು.



ಶ್ರೇಯಸ್ ಅಯ್ಯರ್ ವಿಕೆಟ್ ಉರುಳಿದಾಗ ವಾಣಿಂದು ಹಸರಂಗ ಸಂಭ್ರಮಿಸಿದ ಪರಿ

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 128 (18.5 ಓವರ್)

ಅಜಿಂಕ್ಯ ಸಿ ಶಹಬಾಜ್ ಬಿ ಸಿರಾಜ್ 9 (10 ಎ, 4x1), ವೆಂಕಟೇಶ್ ಸಿ ಮತ್ತು ಬಿ ಆಕಾಶ್ 10 (14 ಎ, 4x1), ಶ್ರೇಯಸ್ ಸಿ ಡುಪ್ಲೆಸಿ ಬಿ ಹಸರಂಗ 13 (10 ಎ, 4x2), ನಿತೀಶ್ ಸಿ ವಿಲ್ಲಿ ಬಿ ಆಕಾಶ್ 10 (5 ಎ, 4x1, 6x1), ಸುನಿಲ್ ಸಿ ಆಕಾಶ್ ಬಿ ಹಸರಂಗ 12 (8 ಎ, 4x1, 6x1), ಬಿಲಿಂಗ್ಸ್ ಸಿ ವಿರಾಟ್ ಬಿ ಹರ್ಷಲ್ 14 (15 ಎ, 6x1), ಶೆಲ್ಡನ್ ಬಿ ಹಸರಂಗ 0 (1 ಎ), ರಸೆಲ್ ಸಿ ಕಾರ್ತಿಕ್ ಬಿ ಹರ್ಷಲ್ 25 (18 ಎ, 4x1, 6x3), ಸೌಥಿ ಸಿ ಡುಪ್ಲೆಸಿ ಬಿ ಹಸರಂಗ 1 (5 ಎ), ಉಮೇಶ್ ಬಿ ಆಕಾಶ್ 18 (12 ಎ, 4x2, 6x1), ವರುಣ್ ಔಟಾಗದೆ 10 (16 ಎ, 4x2)

ಇತರೆ (ಬೈ 2, ಲೆಗ್‌ಬೈ 2, ನೋಬಾಲ್ 1, ವೈಡ್ 1) 6

ವಿಕೆಟ್ ಪತನ: 1-14 (ವೆಂಕಟೇಶ್ ಅಯ್ಯರ್, 3.1), 2-32 (ಅಜಿಂಕ್ಯ ರಹಾನೆ, 4.6), 3-44 (ನಿತೀಶ್ ರಾಣಾ, 5.5), 4-46 (ಶ್ರೇಯಸ್ ಅಯ್ಯರ್, 6.4), 5-67 (ಸುನಿಲ್ ನಾರಾಯಣ್, 8.5), 6-67 (ಶೆಲ್ಡನ್ ಜಾಕ್ಸನ್, 8.6), 7-83 (ಸ್ಯಾಮ್ ಬಿಲಿಂಗ್ಸ್, 11.4), 8-99 (ಆ್ಯಂಡ್ರೆ ರಸೆಲ್, 13.5), 9-101 (ಟಿಮ್ ಸೌಥಿ, 14.3), 10-128 (ಉಮೇಶ್ ಯಾದವ್, 18.5)

ಬೌಲಿಂಗ್: ಡೇವಿಡ್ ವಿಲ್ಲಿ 2-0-7-0, ಮೊಹಮ್ಮದ್ ಸಿರಾಜ್ 4-0-25-1, ಆಕಾಶ್ ದೀಪ್ 3.5-0-45-3, ವಾಣಿಂದು ಹಸರಂಗ 4-0-20-4, ಹರ್ಷಲ್ ಪಟೇಲ್ 4-2-11-2, ಶಹಬಾಜ್ ಅಹಮ್ಮದ್ 1-0-16-0

ರಾಯಲ್ ಚಾಲೆಂಜರ್ಸ್ ಬೆಂಗಳೂರು 7ಕ್ಕೆ 132 (19.2 ಓವರ್)

ಡುಪ್ಲೆಸಿ ಸಿ ರಹಾನೆ ಬಿ ಸೌಥಿ 5 (4ಎ, 4X1), ಅನುಜ್ ಸಿ ಜಾಕ್ಸನ್ ಬಿ ಉಮೇಶ್ 0 (2ಎ), ವಿರಾಟ್ ಸಿ ಜಾಕ್ಸನ್ ಬಿ ಉಮೇಶ್ 12 (7ಎ, 4X2), ವಿಲ್ಲಿ ಸಿ ರಾಣಾ ಬಿ ನಾರಾಯಣ್ 18 (28ಎ, 4X3), ರುದರ್‌ಫೋರ್ಡ್ ಸಿ ಜಾಕ್ಸನ್ ಬಿ ಸೌಥಿ 28 (40ಎ, 4X1, 6X1), ಶಹಬಾಜ್ ಸ್ಟಂಪ್ಡ್ ಜಾಕ್ಸನ್ ಬಿ ವರುಣ್ 27 (20ಎ, 6X3), ಕಾರ್ತಿಕ್ ಔಟಾಗದೆ 14 (7ಎ, 4X1, 6X1), ಹಸರಂಗ ಸಿ ರಸೆಲ್ ಬಿ ಸೌಥಿ 4 (3ಎ, 4X1), ಹರ್ಷಲ್ ಔಟಾಗದೆ 10 (6ಎ, 5X22)

ಇತರೆ (ಬೈ 4, ಲೆಗ್‌ಬೈ 1, ನೋಬಾಲ್ 1, ವೈಡ್ 8) 14

ವಿಕೆಟ್ ಪತನ: 1-1 (ಅನುಜ್ ರಾವತ್, 0.3), 2-17 (ಫಫ್ ಡುಪ್ಲೆಸಿ, 1.6), 3-17 (ವಿರಾಟ್ ಕೊಹ್ಲಿ, 2.1), 4-62 (ಡೇವಿಡ್ ವಿಲ್ಲಿ, 10.6), 5-101 (ಶಹಬಾಜ್ ಅಹಮ್ಮದ್, 15.6), 6-107 (ಶೆರ್ಫೆನ್ ರುದರ್‌ಫೋರ್ಡ್, 17.2), 7-111 (ವನಿಂದು ಹಸರಂಗ, 17.5)

ಬೌಲಿಂಗ್: ಉಮೇಶ್ ಯಾದವ್ 4-0-16-0, ಟಿಮ್ ಸೌಥಿ 4-0-20-1, ಆ್ಯಂಡ್ರೆ ರಸೆಲ್ 2.2-0-36-0, ಸುನಿಲ್ ನಾರಾಯಣ್ 4-0-12-1, ವರುಣ್ ಚಕ್ರವರ್ತಿ 4-0-33-1, ವೆಂಕಟೇಶ್ ಅಯ್ಯರ್ 1-0-10-0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಮೂರು ವಿಕೆಟ್‌ಗಳ ಜಯ

ಐಪಿಎಲ್‌ನಲ್ಲಿ ನಾಯಕರ ಬಲಾಬಲ

ಆಟಗಾರ	ತಂಡ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ	ಸಿಕ್ಸರ್	ಬೌಂಡರಿ
ರವೀಂದ್ರ ಜಡೇಜ	ಚೆನ್ನೈ	201	2,412	62*	-	2	86	176
ಕೆ.ಎಲ್.ರಾಹುಲ್	ಲಖನೌ	95	3,273	132	2	27	134	282

ಆರಂಭ: ರಾತ್ರಿ 7.30 | **ಸ್ಥಳ:** ಬ್ರೆಬೋರ್ನ್ ಕ್ರೀಡಾಂಗಣ, ಮುಂಬೈ | **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಚೆನ್ನೈ, ಲಖನೌಗೆ ಜಯದ ತವಕ


ಮುಂಬೈ (ಪಿಟಿಐ): ಮೊದಲ ಪಂದ್ಯದಲ್ಲೇ ಸೋಲಿನ ಕಹಿ ಅನುಭವಿಸಿರುವ ಹಾಲಿ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಪದಾರ್ಪಣೆ ಪಂದ್ಯದಲ್ಲಿ ನಿರಾಸೆ ಕಂಡಿರುವ ಲಖನೌ ಸೂಪರ್ ಜೈಂಟ್ಸ್ ತಂಡಗಳು ಗುರುವಾರ ಮುಖಾಮುಖಿಯಾಗಲಿವೆ.

ಮಹೇಂದ್ರ ಸಿಂಗ್ ಧೋನಿ ಅವರು ನಾಯಕತ್ವ ಬಿಟ್ಟುಕೊಟ್ಟ ನಂತರ ರವೀಂದ್ರ ಜಡೇಜ ಅವರು ಚೆನ್ನೈ ತಂಡದ ಚುಕ್ಕಾಣಿ ಹಿಡಿದಿದ್ದರು. ಅವರು ಮುನ್ನಡೆಸಿದ ಮೊದಲ ಪಂದ್ಯದಲ್ಲೇ ಕೋಲ್ಕತ್ತ ನೈಟ್ ರೈಡರ್ಸ್‌ಗೆ ತಂಡ ಮಣಿದಿತ್ತು. ಪಂಜಾಬ್ ಕಿಂಗ್ಸ್‌ನಿಂದ ಹೊಸ ತಂಡವಾದ ಲಖನೌ ಸೂಪರ್ ಜೈಂಟ್ಸ್ ಸೇರಿದ ರಾಹುಲ್ ಕೂಡ 'ಮೊದಲ' ಪ್ರಯತ್ನದಲ್ಲಿ ಸೋತಿದ್ದರು.

ಹೀಗಾಗಿ ಗುರುವಾರದ ಪಂದ್ಯ ತಂಡಗಳಿಗೂ ನಾಯಕರಿಗೂ ಮಹತ್ವದ್ದು. ಅಗ್ರ ಕ್ರಮಾಂಕದ ಬ್ಯಾಟರ್‌ಗಳ ವೈಫಲ್ಯ ಎರಡೂ ತಂಡಗಳ ಮೊದಲ ಸೋಲಿಗೆ ಕಾರಣವಾಗಿತ್ತು. ಆದ್ದರಿಂದ ಬ್ರೆಬೋರ್ನ್ ಅಂಗಣದಲ್ಲಿ ಪುಟಿದೇಳಲು ಬ್ಯಾಟರ್‌ಗಳು ಪ್ರಯತ್ನಿಸಲಿದ್ದಾರೆ.

ಟೂರ್ನಿಯ ಆರಂಭದಲ್ಲೇ ಟಾಸ್ ಮಹತ್ವದ ಪಾತ್ರ ವಹಿಸುತ್ತಿದೆ. ಚೆನ್ನೈ ಮತ್ತು ಲಖನೌ ತಂಡಗಳು ಮೊದಲ ಬ್ಯಾಟಿಂಗ್ ಮಾಡಿ ಸೋತಿವೆ. ಕೆ.ಎಲ್. ರಾಹುಲ್, ಕ್ವಿಂಟನ್ ಡಿ ಕಾಕ್ ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳಬೇಕಾಗಿದೆ. ಮನೀಷ್ ಪಾಂಡೆ ಮತ್ತು ಎವಿನ್ ಲೂಯಿಸ್ ಯಾವುದೇ ಬಗೆಯ ಬೌಲಿಂಗ್ ದಾಳಿಯನ್ನು ಎದುರಿಸುವ ಸಾಮರ್ಥ್ಯ ಹೊಂದಿದ್ದಾರೆ. ದೀಪಕ್ ಹೂಡಾ, ಆಯುಷ್ ಬಡೋನಿ ಮತ್ತು ಕೃಣಾಲ್ ಪಾಂಡ್ಯ ಮೊದಲ ಪಂದ್ಯದಲ್ಲಿ ಮಿಂಚಿದ್ದಾರೆ ಆದ್ದರಿಂದ ಭರವಸೆ ಮೂಡಿಸಿದ್ದಾರೆ.

ಮೋಯಿನ್ ಲಭ್ಯ: ಮೋಯಿನ್ ಅಲಿ ಮತ್ತು ಡ್ವೇನ್ ಪ್ರಿಟೋರಿಯಸ್ ಗುರುವಾರದ ಪಂದ್ಯಕ್ಕೆ ಲಭ್ಯ ಇರುವುದರಿಂದ ಚೆನ್ನೈ ತಂಡದ ಬ್ಯಾಟಿಂಗ್ ವಿಭಾಗದಲ್ಲಿ ಭರವಸೆ ಮೂಡಿದೆ. ಋತುರಾಜ್ ಗಾಯಕವಾಡ್, ರಾಬಿನ್ ಉತ್ತಪ್ಪ, ಡೇವಾನ್ ಕಾನ್ವೆ ಮತ್ತು ಅಂಬಟಿ ರಾಯುಡು ಮಿಂಚಬೇಕಾಗಿದೆ. ರವೀಂದ್ರ ಜಡೇಜ ಮೇಲೆಯೂ ನಿರೀಕ್ಷೆ ಮೂಡಿದೆ.



ಕೆ.ಎಲ್. ರಾಹುಲ್ –ಟ್ವಿಟರ್ ಚಿತ್ರ



ರವೀಂದ್ರ ಜಡೇಜ –ಪಿಟಿಐ ಚಿತ್ರ

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಫಫ್ ಡುಪ್ಲೆಸಿ	ಬೆಂಗಳೂರು	93
ಇಶಾನ್ ಕಿಶನ್	ಮುಂಬೈ	81
ಮರ್ಕರಂ	ಹೈದರಾಬಾದ್	57

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹಸರಂಗ	ಬೆಂಗಳೂರು	5
ಉಮೇಶ್	ಕೋಲ್ಕತ್ತ	4
ಆಕಾಶ್	ಬೆಂಗಳೂರು	4

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಜಸ್ಥಾನ	1	1	0	0	0	2
ಡೆಲ್ಲಿ	1	1	0	0	0	2
ಪಂಜಾಬ್	1	1	0	0	0	2
ಗುಜರಾತ್	1	1	0	0	0	2
ಕೋಲ್ಕತ್ತ	2	1	1	0	0	2
ಬೆಂಗಳೂರು	2	1	1	0	0	2
ಲಖನೌ	1	0	1	0	0	0
ಚೆನ್ನೈ	1	0	1	0	0	0
ಮುಂಬೈ	1	0	1	0	0	0
ಹೈದರಾಬಾದ್	1	0	1	0	0	0

* ಬುಧವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಕ್ರಿಕೆಟ್: ಕರ್ನಾಟಕಕ್ಕೆ ಭಾರಿ ಮುನ್ನಡೆ

ಬೆಂಗಳೂರು: ಕಿಶನ್ ಬೆದರೆ ಮತ್ತು ಅನೀಶ್ ಕೆ.ವಿ ಅವರ ಅಮೋಘ ಶತಕದ ನೆರವಿನಿಂದ ಕರ್ನಾಟಕ ತಂಡ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಹರಿಯಾಣ ವಿರುದ್ಧ ಭಾರಿ ಮುನ್ನಡೆ ಸಾಧಿಸಿದೆ.

ಜೈಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟದ ಮುಕ್ತಾಯಕ್ಕೆ ಕರ್ನಾಟಕ 6 ವಿಕೆಟ್‌ಗಳಿಗೆ 484 ರನ್ ಗಳಿಸಿದ್ದು 411 ರನ್‌ಗಳ ಮುನ್ನಡೆ ಗಳಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಹರಿಯಾಣವನ್ನು 73 ರನ್‌ಗಳಿಗೆ ಆಲೌಟ್ ಮಾಡಿದ ತಂಡದ ಪರ ಕಿಶನ್ 127 ರನ್ ಗಳಿಸಿದರು. 286 ಎಸೆತ ಎದುರಿಸಿದ ಅವರು 12 ಬೌಂಡರಿ ಸಿಡಿಸಿದ್ದರು. ಅನೀಶ್ 310 ಎಸೆತಗಳಲ್ಲಿ 179 ರನ್ ಕಲೆ ಹಾಕಿದರು. 18 ಬೌಂಡರಿ ಮತ್ತು 2 ಸಿಕ್ಸರ್‌ಗಳು ಅವರ ಇನಿಂಗ್ಸ್‌ನಲ್ಲಿದ್ದವು. ಕಾರ್ತಿಕ್ ಅವರು ಅಜೇಯ 51 ರನ್ ಗಳಿಸಿದ್ದಾರೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಹರಿಯಾಣ: 30.4 ಓವರ್‌ಗಳಲ್ಲಿ 73; ಕರ್ನಾಟಕ: 146 ಓವರ್‌ಗಳಲ್ಲಿ 6ಕ್ಕೆ484 (ಕಿಶನ್ ಬೆದರೆ 127, ಅನೀಶ್ ಕೆ.ವಿ 179, ಕೃತಿಕ್ ಕೃಷ್ಣ ಬ್ಯಾಟಿಂಗ್ 51; ಶಿವಂ ಶರ್ಮಾ 104ಕ್ಕೆ2).

ಆರ್ಲಿಯನ್ಸ್ ಮಾಸ್ಟರ್ಸ್: ಪ್ರಣೀತ್‌ಗೆ ಜಯ

ಆರ್ಲಿಯನ್ಸ್, ಫ್ರಾನ್ಸ್ (ಪಿಟಿಐ): ಭಾರತದ ಬಿ.ಸಾಯ್ ಪ್ರಣೀತ್ ಇಲ್ಲಿ ನಡೆಯುತ್ತಿರುವ ಆರ್ಲಿಯನ್ಸ್ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯ ಮೂರನೇ ಸುತ್ತು ಪ್ರವೇಶಿಸಿದ್ದಾರೆ. ಬುಧವಾರ ನಡೆದ ಪಂದ್ಯದಲ್ಲಿ ಅವರು ಜೆಕ್ ಗಣರಾಜ್ಯದ ಜ್ಯಾನ್ ಲೊಡ ವಿರುದ್ಧ 21-19, 21-12ರಲ್ಲಿ ಜಯ ಗಳಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅನುಪಮಾ ಉಪಾಧ್ಯಾಯ ಮತ್ತು ಇರಾ ಶರ್ಮಾ ಎರಡನೇ ಸುತ್ತು ಪ್ರವೇಶಿಸಿದರು. ಅನುಪಮಾ 21-12, 21-18ರಲ್ಲಿ ಸ್ವಿಟ್ಜರ್ಲೆಂಡ್‌ನ ಜೆಂಜಿರಾ ಸ್ಟಾಡೆಲ್‌ಮ್ಯಾನ್ ವಿರುದ್ಧ ಜಯ ಗಳಿಸಿದರೆ ಇರಾ 21-14, 21-17ರಲ್ಲಿ ಫ್ರಾನ್ಸ್‌ನ ಕ್ಯುಯಿ ಕ್ಸ್ವೆಫಿ ಎದುರು ಗೆದ್ದರು.

ಮಿಶ್ರ ಡಬಲ್ಸ್ ವಿಭಾಗದಲ್ಲಿ ಇಶಾನ್ ಭಟ್ನಾಗರ್ ಮತ್ತು ತನಿಶಾ ಕ್ರಾಸ್ಟೊ ಭಾರತದವರೇ ಆದ ಅಶಿತ್ ಸೂರ್ಯ ಮತ್ತು ಶ್ವೇತಪರ್ಣ ಪಂಡಾ ಅವರನ್ನು 21-8, 21-10ರಲ್ಲಿ ಸೋಲಿಸಿದರು.

ಡೆಲ್ಲಿ ಕ್ಯಾಪಿಟಲ್ಸ್ ಸೇರಲಿರುವ ಮಿಚೆಲ್ ಮಾರ್ಷ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾದ ಆಲ್‌ರೌಂಡರ್ ಮಿಚೆಲ್ ಮಾರ್ಷ್ ಅವರು ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸೇರಿಕೊಳ್ಳಲಿದ್ದಾರೆ. ಪಾಕಿಸ್ತಾನ ಪ್ರವಾಸದಲ್ಲಿರುವ ಆಸ್ಟ್ರೇಲಿಯಾ ತಂಡದ ಜೊತೆಗಿರುವ ಅವರು ಗಾಯಗೊಂಡಿರುವ ಕಾರಣ ಏಕದಿನ ಮತ್ತು ಟ್ವೆಂಟಿ20 ಸರಣಿಯಿಂದ ಕೈಬಿಡಲಾಗಿದೆ.

₹ 6.5 ಕೋಟಿ ಮೊತ್ತಕ್ಕೆ ಮಾರ್ಷ್ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ಹರಾಜಿನಲ್ಲಿ ತನ್ನತ್ತ ಸೆಳೆದುಕೊಂಡಿತ್ತು. 30 ವರ್ಷದ ಈ ಆಟಗಾರ ಕಳೆದ ಭಾನುವಾರ ಆಸ್ಟ್ರೇಲಿಯಾ ತಂಡದೊಂದಿಗೆ ಅಭ್ಯಾಸದಲ್ಲಿ ತೊಡಗಿದ್ದ ವೇಳೆ ಗಾಯಗೊಂಡಿದ್ದರು. ಡೆಲ್ಲಿ ಕ್ಯಾಪಿಟಲ್ಸ್‌ನ ಫಿಜಿಯೊಥೆರಪಿಸ್ಟ್ ಪ್ಯಾಟ್ರಿಕ್ ಫರ್‌ಹರ್ಟ್ ಅವರ ಬಳಿ ಮಾರ್ಷ್ ಚಿಕಿತ್ಸೆ ಪಡೆದುಕೊಳ್ಳಲಿದ್ದು ಅವರ ಸಲಹೆಯ ಮೇರೆಗೆ ಮುಂದಿನ ನಿರ್ಧಾರ ಕೈಗೊಳ್ಳಲಿದ್ದಾರೆ.



ಅಮಿತ್ ರೋಹಿದಾಸ್– ಎಎಫ್‌ಪಿ ಚಿತ್ರ

ಭಾರತ ಹಾಕಿ ತಂಡಕ್ಕೆ ಅಮಿತ್ ಸಾರಥ್ಯ

ಭುವನೇಶ್ವರ (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯ ಇಂಗ್ಲೆಂಡ್ ಎದುರಿನ ಎರಡು ಪಂದ್ಯಗಳಿಗೆ ಭಾರತ ಹಾಕಿ ತಂಡವನ್ನು ಪ್ರಕಟಿಸಲಾಗಿದ್ದು, ಅಮಿತ್ ರೋಹಿದಾಸ್ ಅವರಿಗೆ ಮತ್ತೆ ತಂಡದ ನಾಯಕತ್ವ ನೀಡಲಾಗಿದೆ.

ತಂಡದಲ್ಲಿ ನೀಲಂ ಸಂಜೀಪ್ ಕ್ಸೆಸ್ ಅವರಿಗೆ ಸ್ಥಾನ ನೀಡಲಾಗಿದೆ. ಇಂಗ್ಲೆಂಡ್ ವಿರುದ್ಧದ ಪಂದ್ಯಗಳು ಏಪ್ರಿಲ್ 2 ಮತ್ತು 3ರಂದು ಇಲ್ಲಿಯ ಕಳಿಂಗ ಕ್ರೀಡಾಂಗಣದಲ್ಲಿ ನಿಗದಿಯಾಗಿವೆ.

ಭಾರತ ತಂಡ: ಗೋಲಕೀಪರ್ಸ್: ಕೃಷ್ಣ ಬಹದ್ದೂರ್ ಪಾಠಕ್, ಪಿ.ಆರ್. ಶ್ರೀಜೇಶ್. ಡಿಫೆಂಡರ್ಸ್: ಸುರೇಂದರ್ ಕುಮಾರ್, ಹರ್ಮನ್‌ಪ್ರೀತ್ ಸಿಂಗ್ (ಉಪ ನಾಯಕ), ನಿಲಂ ಸಂಜೀಪ್, ವರುಣ್, ಅಮಿತ್ ರೋಹಿದಾಸ್ (ನಾಯಕ), ಜುಗರಾಜ್ ಸಿಂಗ್. ಮಿಡ್‌ಫೀಲ್ಡರ್ಸ್: ಜಸ್ಕರನ್ ಸಿಂಗ್, ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ನೀಲಕಂಠ ಶರ್ಮ, ಶಂಷೇರ್ ಸಿಂಗ್, ರಾಜ್ ಕುಮಾರ್ ಪಾಲ್, ಸುಮಿತ್, ವಿವೇಕ್ ಸಾಗರ್ ಪ್ರಸಾದ್. ಫಾರ್ವರ್ಡ್ಸ್: ಗುರ್ಜಂತ್ ಸಿಂಗ್, ಮನದೀಪ್ ಸಿಂಗ್, ಸುಖಜೀತ್, ಅಭಿಷೇಕ್, ಗುರುಸಾಹಿಬ್‌ಜೀತ್ ಸಿಂಗ್, ಶೀಲಾನಂದ್ ಲಾಕ್ರಾ.

ಕ್ರಿಕೆಟ್: ಏಪ್ರಿಲ್ 3ರಿಂದ ತರಬೇತಿ ಶಿಬಿರ

ಬೆಂಗಳೂರು: ಹೆರಾನ್ಸ್ ಕ್ರಿಕೆಟ್ ಕ್ಲಬ್ ಏಪ್ರಿಲ್ 3ರಿಂದ ಮೇ 30ರವರೆಗೆ ತರಬೇತಿ ಶಿಬಿರ ಆಯೋಜಿಸಲಿದೆ. ಹೆಚ್ಚಿನ ಮಾಹಿತಿಗಾಗಿ ಕ್ಲಬ್‌ನ ಸಂಘಟನಾ ಕಾರ್ಯದರ್ಶಿ ಕೆ.ಮುರಳೀಧರ (ಮೊಬೈಲ್ ಸಂಖ್ಯೆ 9845096056) ಅವರನ್ನು ಅಥವಾ 9845374453 ಮತ್ತು 080-41620300 ಸಂಪರ್ಕಿಸಬೇಕೆಂದು ಕ್ಲಬ್‌ನ ಪ್ರಕಟಣೆ ತಿಳಿಸಿದೆ.



ಬೆಂಗಳೂರಿನ ಜೆ.ಪಿ ನಗರದಲ್ಲಿ ನಡೆದ ಜಿಲ್ಲಾ ಬಾಲ್ ಬ್ಯಾಡ್ಮಿಂಟನ್ ಸಂಸ್ಥೆ ಆಶ್ರಯದ ಜಿಲ್ಲಾ ಲೀಗ್ ಚಾಂಪಿಯನ್‌ಷಿನ ಮಹಿಳೆಯರ ವಿಭಾಗದ ಪ್ರಶಸ್ತಿ ಗೆದ್ದ ಜಯ ಸ್ಪೋರ್ಟ್ಸ್ ಕ್ಲಬ್ ತಂಡ. ನಿಂತವರು (ಎಡದಿಂದ): ಮುಕ್ತಾ ಜಿ.ಆರ್, ಚೈತನ್ಯಾ ಬಿ.ಎಸ್, ಭಾವನಾ ಸಾವಂತ್, ಮೇಘನಾ, ಯಶಸ್ವಿನಿ ಎಚ್, ಸಹನಾ ಎನ್, ಲಿಖಿತಾ; ಕುಳಿತವರು: ಅರುಣ್ ಜ್ಯೋತಿ, ಪಲ್ಲವಿ ಜಿ, ಕೋಚ್ ಎನ್.ಪಿ. ಶಿವಕುಮಾರ್, ಅನುರಾಧಾ ಸಿ.ಜೆ, ಪವಿತ್ರಾ ಕೆ. ಫೈನಲ್ ಪಂದ್ಯದಲ್ಲಿ ಜಯ ಸ್ಪೋರ್ಟ್ಸ್ ಕ್ಲಬ್ 35–26, 35–27ರಲ್ಲಿ ಕಾಮಧೇನು ತಂಡದ ವಿರುದ್ಧ ಜಯ ಗಳಿಸಿತು.

ಮರುಕಳಿಸಿದ ಸ್ಪಿನ್ ಮಾಂತ್ರಿಕನ ನೆನಪು

ಮೆಲ್ಬರ್ನ್ ಕ್ರೀಡಾಂಗಣದಲ್ಲಿ ಶೇನ್ ವಾರ್ನ್‌ಗೆ ವಿದಾಯ


ಮೆಲ್ಬರ್ನ್ (ಎಪಿ): ವಾರ್ನಿ.. ವಾರ್ನಿ..ವಾರ್ನಿ...ಕ್ರಿಕೆಟ್ ಪಂದ್ಯದಲ್ಲಿ 'ಫೀಲ್ಡ್'ನಲ್ಲಿ ಕಾಣಿಸಿಕೊಂಡಾಗ ಅಥವಾ ಬ್ಯಾಟ್ ಹಿಡಿದು ಕ್ರೀಸ್‌ನತ್ತ ಹೆಜ್ಜೆ ಹಾಕುವಾಗ ಕೇಳಿಬರುತ್ತಿದ್ದ ಘೋಷಣೆ. ಮೆಲ್ಬರ್ನ್ ಅಂಗಣದಲ್ಲಿ ಬುಧವಾರ ರಾತ್ರಿಯೂ ಈ ಘೋಷಣೆ ಮಾರ್ದನಿಸಿತು. ಅಂದು ಅಭಿಮಾನಿಗಳನ್ನು ಹುರಿದುಂಬಿಸಲು ಶೇನ್ ವಾರ್ನ್ ಇದ್ದರು. ಆದರೆ ಬುಧವಾರ ಅವರಿರಲಿಲ್ಲ.

ಈ ತಿಂಗಳ ನಾಲ್ಕರಂದು ಥಾಯ್ಲೆಂಡ್‌ನಲ್ಲಿ ಹೃದಯಾಘಾತಕ್ಕೆ ಒಳಗಾಗಿ ಸಾವಿಗೀಡಾದ ಸ್ಪಿನ್ ಮಾಂತ್ರಿಕ, ಆಸ್ಟ್ರೇಲಿಯಾದ ಶೇನ್ ವಾರ್ನ್ ಅವರಿಗೆ ಅಂತಿಮ ನಮನ ಸಲ್ಲಿಸಲು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೆಚ್ಚಿನ ಆಟಗಾರನನ್ನು ಸಾವಿರಾರು ಮಂದಿ ನೆನಪಿಸಿಕೊಂಡರು. ಗಾಯಕ ಎಲ್ಟನ್ ಜಾನ್, ಗಾಲ್ಫ್ ದಿಗ್ಗಜ ಗ್ರೆಗ್ ನಾರ್ಮನ್ ಮತ್ತು ಸರ್ಫಿಂಗ್ ಚಾಂಪಿಯನ್ ಕೆಲಿ ಸ್ಲೇಟರ್ ಸೇರಿದಂತೆ ನೂರಾರು ಗಣ್ಯರು ಪಾಲ್ಗೊಂಡಿದ್ದ ಕಾರ್ಯಕ್ರಮದಲ್ಲಿ ವಾರ್ನ್ ನೆನಪು ಅಲೆಅಲೆಯಾಗಿ ತೇಲಿಬಂತು.

ವಾರ್ನ್ ಅವರ ನೆಚ್ಚಿನ ಮೆಲ್ಬರ್ನ್ ಕ್ರಿಕೆಟ್ ಮೈದಾನದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ತವರು ಅಂಗಣವಾಗಿರುವ ಇಲ್ಲಿ ಅವರು 2006ರಲ್ಲಿ 700ನೇ ಟೆಸ್ಟ್ ವಿಕೆಟ್ ಪಡೆದು ದಾಖಲೆ ನಿರ್ಮಿಸಿದ್ದರು. 52ನೇ ವಯಸ್ಸಿನಲ್ಲಿ ಸಾವಿಗೀಡಾದ ಚಾಂಪಿಯನ್ ಕ್ರಿಕೆಟಿಗನಿಗೆ ವಿವಿಧ ಕ್ಷೇತ್ರಗಳ ದಿಗ್ಗಜರು ನಮನ ಸಲ್ಲಿಸಿದರು. ವಿಶ್ವದ ಮೂಲೆಮೂಲೆಗಳಿಂದ ಶೋಕ ಸಂದೇಶಗಳು ಹರಿದುಬಂದವು.

'ಶೇನ್ ವಾರ್ನ್ ಸಾವಿನೊಂದಿಗೆ ಅಭಿಮಾನಿಗಳು ಸಿಂಹದ ಆಲಿಂಗನದ ಅವಕಾಶವನ್ನು ಕಳೆದುಕೊಂಡಿದ್ದಾರೆ. ಇದು ಅತ್ಯಂತ ಕಠೋರ' ಎಂದು ವಾರ್ನ್ ಅವರ ಮಾಜಿ ಪ್ರೇಯಸಿ, ಬ್ರಿಟನ್ ಚಿತ್ರನಟಿ ಮತ್ತು ರೂಪದರ್ಶಿ ಎಲಿಜಬೆತ್ ಹರ್ಲಿ ಸಾಮಾಜಿಕ ತಾಣದಲ್ಲಿ ಬರೆದುಕೊಂಡಿದ್ದಾರೆ. ಕಾರ್ಯಕ್ರಮದಲ್ಲಿ ಅವರು ಪಾಲ್ಗೊಂಡಿರಲಿಲ್ಲ.

ವಿಡಿಯೊ ಮೂಲಕ ಸಂಗೀತ ಕಾರ್ಯಕ್ರಮ: ಎಲ್ಟನ್ ಜಾನ್ ಮತ್ತು ಕ್ರಿಸ್ ಮಾರ್ಟಿನ್ ಅವರು ವಿಡಿಯೊ ಲಿಂಕ್ ಮೂಲಕ ಗಾಯನದ ಮೋಡಿ ಮಾಡಿದರು. ಸಂಗೀತದ ಹಿನ್ನೆಲೆಯಲ್ಲಿ ಮೂಡಿಬಂದ ಬೆಳಕಿನ ವಿನ್ಯಾಸ ಮೋಹಕವಾಗಿತ್ತು. ಕ್ರೀಡಾಂಗಣದ ರಂಗು ರಂಗಿನ ಬೆಳಕಿನ ಕಿರಣಗಳು ಚಿತ್ತಾರ ಬಿಡಿಸಿದವು. ಅವುಗಳ ನಡುವೆ ಒಮ್ಮೆ ಶೇನ್ ವಾರ್ನ್ ಚಿತ್ರ ಬೆಳಗಿದರೆ ಮತ್ತೊಮ್ಮೆ ಅವರ ಹೆಸರು ಕಂಡುಬಂತು.



ಮೆಲ್ಬರ್ನ್ ಕ್ರೀಡಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಳಕಿನ ಚಿತ್ತಾರದ ನಡುವೆ ಮೂಡಿಬಂದ ಶೇನ್ ವಾರ್ನ್ ಚಿತ್ರ –ಪಿಟಿಐ ಚಿತ್ರ

ಮಹಿಳೆಯರ ವಿಶ್ವಕಪ್: ವಿಂಡೀಸ್ ವಿರುದ್ಧ ಗೆಲುವು

ಸೆಮಿಫೈನಲ್‌ಗೆ ಆಸ್ಟ್ರೇಲಿಯಾ

ವೆಲಿಂಗ್ಟನ್ (ಪಿಟಿಐ): ವೆಸ್ಟ್ ಇಂಡೀಸ್ ಎದುರು ಸಂಪೂರ್ಣ ಪಾರಮ್ಯ ಮೆರೆದ ಆಸ್ಟ್ರೇಲಿಯಾ ತಂಡ ಮಹಿಳೆಯರ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್ ಪ್ರವೇಶಿಸಿತು. ಬೇಸಿನ್ ರಸರ್ವ್‌ನಲ್ಲಿ ಬುಧವಾರ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ 157 ರನ್‌ಗಳಿಂದ ಜಯ ಗಳಿಸಿತು.

ಆರಂಭಿಕ ಬ್ಯಾಟರ್ ಅಲಿಸಾ ಹೀಲಿ (129; 107 ಎಸೆತ, 17 ಬೌಂಡರಿ, 1 ಸಿಕ್ಸರ್) ಅವರ ಸ್ಫೋಟಕ ಶತಕ ಮತ್ತು ರಚೆಲ್ ಹೇನ್ಸ್ (85; 100 ಎ, 9 ಬೌಂ) ಅವರೊಂದಿಗೆ ಮೊದಲ ವಿಕೆಟ್‌ಗೆ ಸೇರಿಸಿದ 216 ರನ್‌ಗಳು ತಂಡಕ್ಕೆ ಭರ್ಜರಿ ಗೆಲುವಿಗೆ ಕಾರಣವಾಯಿತು.

ಮಳೆಯಿಂದಾಗಿ 45 ಓವರ್‌ಗಳಿಗೆ ಸೀಮಿತಗೊಳಿಸಲಾಗಿದ್ದ ಪಂದ್ಯದಲ್ಲಿ ಟಾಸ್ ಗೆದ್ದ ವೆಸ್ಟ್ ಇಂಡೀಸ್ ನಾಯಕಿ ಸ್ಟೆಫಾನಿ ಟೇಲರ್ ಎದುರಾಳಿ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ಎಲ್ಲ ಬೌಲರ್‌ಗಳನ್ನೂ ಆಸ್ಟ್ರೇಲಿಯಾ ಬ್ಯಾಟರ್‌ಗಳು ದಂಡಿಸಿದರು. ಹೀಗಾಗಿ ಕೇವಲ ಮೂರು ವಿಕೆಟ್ ಕಳೆದುಕೊಂಡು ತಂಡ 305 ರನ್ ಕಲೆ ಹಾಕಿತು.

ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ 37 ಓವರ್‌ಗಳಲ್ಲಿ ಸೋಲೊಪ್ಪಿಕೊಂಡಿತು. ತಂಡ ಎಂಟು ವಿಕೆಟ್ ಕಳೆದುಕೊಂಡು 148 ರನ್ ಗಳಿಸಿತು. ಕೊನೆಯ ಇಬ್ಬರು ಬ್ಯಾಟರ್‌ಗಳು ಗಾಯಗೊಂಡಿದ್ದ ಕಾರಣ ಕ್ರೀಸ್‌ಗೆ ಇಳಿಯಲಿಲ್ಲ.

ಎರಡನೇ ಸೆಮಿಫೈನಲ್ ಇಂದು: ದಕ್ಷಿಣ ಆಫ್ರಿಕಾ– ಇಂಗ್ಲೆಂಡ್

ಆರಂಭ: ಬೆಳಿಗ್ಗೆ 6.30 (ಭಾರತೀಯ ಕಾಲಮಾನ). **ನೇರ ಪ್ರಸಾರ:** ಸ್ಟಾರ್ ಸ್ಪೋರ್ಟ್ಸ್

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 45 ಓವರ್‌ಗಳಲ್ಲಿ 3 ವಿಕೆಟ್‌ಗೆ 305 (ರಚೆಲ್ ಹೇನ್ಸ್ 85, ಅಲಿಸಾ ಹೀಲಿ 129, ಬೆಥ್ ಮೂನಿ ಔಟಾಗದೆ 43; ಚಿನೆಲಿ ಹೆನ್ರಿ 51ಕ್ಕೆ 2, ಶಮಿಲಿಯಾ ಕಾನೆಲ್ 45ಕ್ಕೆ 1). ವೆಸ್ಟ್ ಇಂಡೀಸ್: 37 ಓವರ್‌ಗಳಲ್ಲಿ 148 (ಡಿಯಾಂಡ್ರ ದೊತಿನ್34, ಹಯೆಲಿ ಮ್ಯಾಥ್ಯೂಸ್ 34, ಸ್ಟೆಫಾನಿ ಟೇಲರ್ 48; ಮೇಗನ್ ಶುಟ್ 8ಕ್ಕೆ 1, ಆ್ಯಶ್ಲಿ ಗಾರ್ಡನರ್ 26ಕ್ಕೆ 1, ತಹಿಲಾ ಮೆಗ್ರಾ 17ಕ್ಕೆ 1, ಜೆಸ್ ಜೊನಾಸನ್ 14ಕ್ಕೆ 2). ಫಲಿತಾಂಶ: ಆಸ್ಟ್ರೇಲಿಯಾ ತಂಡಕ್ಕೆ 157 ರನ್‌ಗಳ ಜಯ.



ಆಸ್ಟ್ರೇಲಿಯಾದ ಅಲಿಸಾ ಹೀಲಿ ಶತಕ ಗಳಿಸಿ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಫುಟ್‌ಬಾಲ್: ಮಿಂಚಿದ ಸ್ಪರ್ಶ್ ದೇಸಾಯಿ

ಬೆಂಗಳೂರು: ಸ್ಪರ್ಶ್ ದೇಸಾಯಿ ಗಳಿಸಿದ ನಾಲ್ಕು ಗೋಲುಗಳ ಬಲದಿಂದ ಬಿಎಫ್‌ಸಿ ಜೂನಿಯರ್ಸ್ ತಂಡವು ಕೆಎಸ್‌ಎಫ್‌ಎ 'ಸಿ' ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಭರ್ಜರಿ ಜಯ ಗಳಿಸಿತು.

ಮಲ್ಲೇಶ್ವರಂ ಕ್ರೀಡಾಂಗಣದಲ್ಲಿ ಬುಧವಾರ ನಡೆದ 'ಇ' ಗುಂಪಿನ ಪಂದ್ಯದಲ್ಲಿ ಬಿಎಫ್‌ಸಿ ಜೂನಿಯರ್ಸ್ 8–1ರಿಂದ ಫ್ರಾನ್ಸಿಸ್ ಜೇವಿಯರ್ ಎಫ್‌ಸಿ ತಂಡಕ್ಕೆ ಸೋಲುಣಿಸಿತು. ಸ್ಪರ್ಶ್ 11, 17, 36 ಮತ್ತು 49ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರು. ವಿಜೇತ ತಂಡದ ಆಶಿಕ್ ಅಧಿಕಾರಿ (1ನೇ ನಿ.), ಲಾಲ್‌ಪೆಕ್ಲುವಾ (19 ಮತ್ತು 31ನೇ ನಿ.) ಮತ್ತು ವ್ಯಾನ್ ಲಾಲ್ತೆಪುಯಾ (40ನೇ ನಿ.) ಗೋಲು ಹೊಡೆದರು.

ಯುನೈಟೆಡ್ ರಾಜರಾಜೇಶ್ವರಿನಗರ ಎಫ್‌ಸಿ 2–1ರಿಂದ ಶುಭೋದಯ ಎಫ್‌ಸಿ ಎದುರು, ಪಯೋನಿಯರ್ಸ್ ಎಫ್‌ಸಿ 3–0ಯಿಂದ ಸ್ಟ್ರೈಡ್ ಎಫ್‌ಸಿ ಎದುರು ಜಯ ಸಾಧಿಸಿದವು.

ದಕ್ಷಿಣ ವಲಯ 'ಎಂ' ಗುಂಪಿನ ಪಂದ್ಯದಲ್ಲಿ ಬ್ಲ್ಯಾಕ್ ಮೂನ್ ಎಫ್‌ಸಿ 15–0ಯಿಂದ ಜೈರಾಜ್ ಎಫ್‌ಸಿ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡದ ಪರ ನಿತಿನ್ ಥಾಮಸ್ ನಾಲ್ಕು ಗೋಲು ದಾಖಲಿಸಿದರೆ, ರಾಹುಲ್ ಸಿಂಗ್ ಭಂಡಾರಿ, ವಿಮಲ್ ರಾಜ್, ಮಾರ್ಕ್ ಸ್ಟೀಫನ್ ಮತ್ತು ಶೇನ್ ಕ್ರಿಸ್ಟೋಫರ್ ತಲಾ ಎರಡು ಗೋಲು ದಾಖಲಿಸಿದರು.



ಬೆಳ್ಳಿ ಗೆದ್ದ ಕರ್ನಾಟಕ ಬಾಲಕಿಯರ ತಂಡ: ನಿಂತವರು: ಮೋನಿಶಾ, ಲಾವಣ್ಯ, ಸೃಷ್ಟಿ ಬಿ.ಜಿ. (ಉಪನಾಯಕಿ), ಗೀತಾ (ಹಿಸಾರ್ ಜಿಲ್ಲಾ ನೆಟ್‌ಬಾಲ್ ಸಂಸ್ಥೆಯ ಅಧ್ಯಕ್ಷೆ) ಅಶೋಕ್ ಕುಮಾರ್ (ಅಂಪೈರ್ ಮಂಡಳಿ ಸಂಚಾಲಕ), ಗಿರೀಶ್ ಸಿ. (ಕರ್ನಾಟಕ ನೆಟ್‌ಬಾಲ್ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ), ವಿಜೇಂದರ್ ಸಿಂಗ್ (ಭಾರತ ನೆಟ್‌ಬಾಲ್ ಫೆಡರೇಷನ್ ಕಾರ್ಯದರ್ಶಿ), ಅಮಿತ್ ಅರೋರಾ (ತಾಂತ್ರಿಕ ಸಮಿತಿ ಸಂಚಾಲಕ), ಗಗನಾ (ನಾಯಕಿ), ಶಿಪಾಲಿ (ಕೋಚ್), ಶರಣ್ಯಾ ಕೆ, ಮಹೇಶ್ವರಿ. ಕುಳಿತವರು– ಸೋನಾಲಿ, ಸ್ನೇಹಾ, ಸ್ವಾತಿ, ಆಲಿಯಾ, ಭೂಮಿಕಾ, ಶರಣ್ಯಾ ಡಿ.

5ನೇ ವಿಶ್ವಕಪ್ ಆಡಲಿರುವ ಕ್ರಿಸ್ಟಿಯಾನೊ ರೊನಾಲ್ಡೊ

ಲಂಡನ್ (ಎಪಿ): ಪೋರ್ಚುಗಲ್ ತಂಡದ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಐದನೇ ಬಾರಿ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಮಂಗಳವಾರ ರಾತ್ರಿ ನಡೆದ ಅರ್ಹತಾ ಪಂದ್ಯದಲ್ಲಿ ಪೋರ್ಚುಗಲ್ ತಂಡವು 2–0ಯಿಂದ ಮೆಸಿಡೋನಿಯಾ ತಂಡವನ್ನು ಮಣಿಸಿ ಕತಾರ್‌ನಲ್ಲಿ ನಡೆಯುವ ವಿಶ್ವಕಪ್‌ಗೆ ಅರ್ಹತೆ ಗಳಿಸಿತು.

ಈ ಹಿಂದೆ ಇಟಲಿಯ ಗಿಯಾನ್‌ಲುಗಿ ಬಫೋನ್, ಮೆಕ್ಸಿಕೊದ ರಫೆಲ್ ಮಾರ್ಕ್ವೆಜ್, ಜರ್ಮನಿಯ ಲೋಥಾರ್ ಮಥಾಯಿಸ್ ಮತ್ತು ಮೆಕ್ಸಿಕೊದ ಆ್ಯಂಟೊನಿಯೊ ಕರ್ಬಜಾಲ್ ಐದು ವಿಶ್ವಕಪ್ ಆಡಿದ್ದಾರೆ.

ಪೋಲೆಂಡ್ ಕೂಡ ವಿಶ್ವಕಪ್‌ಗೆ ಅರ್ಹತೆ ಗಳಿಸಿದೆ.



ರೊನಾಲ್ಡೊ

ನೆಟ್‌ಬಾಲ್: ಕರ್ನಾಟಕಕ್ಕೆ ಬೆಳ್ಳಿ

ಬೆಂಗಳೂರು: ಕರ್ನಾಟಕ ಬಾಲಕಿಯರ ತಂಡವು ರಾಷ್ಟ್ರೀಯ ಜೂನಿಯರ್ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದುಕೊಂಡಿದೆ.

ಹರಿಯಾಣದ ಭಿವಾನಿಯಲ್ಲಿ ನಡೆದ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮಂಗಳವಾರ ಕರ್ನಾಟಕ 24–31ರಿಂದ ಆತಿಥೇಯ ಹರಿಯಾಣ ವಿರುದ್ಧ ಸೋಲು ಅನುಭವಿಸಿತು.

ಸೆಮಿಫೈನಲ್ ಪಂದ್ಯದಲ್ಲಿ ಕರ್ನಾಟಕ 25–24ರಿಂದ ತೆಲಂಗಾಣ ತಂಡವನ್ನು ಸೋಲಿಸಿತ್ತು.

'ಲಲಿತ್ ಮೋದಿ ನಿರಪರಾಧಿ'

ಲಂಡನ್ (ಪಿಟಿಐ): ಗುತ್ತಿಗೆ ನಿಯಮ ಮೀರಿ ವರ್ತಿಸಿದ್ದಾರೆ ಎಂಬ ಆರೋಪಕ್ಕೆ ಒಳಗಾಗಿರುವ ಐಪಿಎಲ್ ಸ್ಥಾಪಕ ಲಲಿತ್ ಮೋದಿ ಅವರು ಬುಧವಾರ ನಿರಾಳವಾಗಿದ್ದಾರೆ. ಮೋದಿ ನಿರಪರಾಧಿ ಎಂದು ಲಂಡನ್ ಹೈಕೋರ್ಟ್ ತೀರ್ಪು ನೀಡಿದೆ.

ಬಂಡವಾಳ ಹೂಡಿಕೆದಾರ ಗುರುಪ್ರೀತ್ ಗಿಲ್ ಮಾಗ್, ಕ್ಯಾನ್ಸರ್ ಚಿಕಿತ್ಸಾ ಯೋಜನೆಯೊಂದಕ್ಕೆ ಸಂಬಂಧಿಸಿ 2018ರಲ್ಲಿ ಮಾಡಲಾದ ಗುತ್ತಿಗೆಯ ನಿಯಮವನ್ನು ಉಲ್ಲಂಘಿಸಿರುವುದಾಗಿ ದೂರು ದಾಖಲಿಸಿದ್ದರು. ಚಾನ್ಸರಿ ವಿಭಾಗದ ನ್ಯಾಯಾಧೀಶ ಮರೆ ರೋಸೆನ್ ಅವರು ವಾದ ಪ್ರತಿವಾದ ಆಲಿಸಿ ತೀರ್ಪು ನೀಡಿದ್ದಾರೆ.

ಟಿಟಿ: ಮಣಿಕಾ– ಅರ್ಚನಾಗೆ ಕಂಚು

ದೋಹಾ (ಪಿಟಿಐ): ಭಾರತದ ಮಣಿಕಾ ಬಾತ್ರಾ ಮತ್ತು ಅರ್ಚನಾ ಕಾಮತ್ ಅವರು ಡಬ್ಲ್ಯುಟಿಟಿ ಸ್ಟಾರ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕಂಚಿನ ಪದಕ ಗಳಿಸಿದರು.


ಮಣಿಕಾ ಬಾತ್ರಾ


ಅರ್ಚನಾ ಕಾಮತ್

ಬುಧವಾರ ನಡೆದ ಮಹಿಳಾ ಡಬಲ್ಸ್ ವಿಭಾಗದ ಸೆಮಿಫೈನಲ್ ಹಣಾಹಣಿಯಲ್ಲಿ ಕರ್ನಾಟಕದ ಅರ್ಚನಾ ಹಾಗೂ ಮಣಿಕಾ 8-11, 6-11, 7-11ರಿಂದ ಚೀನಾದ ಲಿ ಯು ಜುನ್ ಮತ್ತು ಚೆಂಗ್ ಐ ಚಿಂಗ್ ಎದುರು ಸೋಲನುಭವಿಸಿದರು.

ಆರನೇ ಕ್ರಮಾಂಕದ ಭಾರತದ ಆಟಗಾರ್ತಿಯರು ಮೊದಲ ಗೇಮ್‌ನಲ್ಲಿ ಎದುರಾಳಿಗಳಿಗೆ ಸ್ವಲ್ಪ ಪ್ರತಿರೋಧ ತೋರಿದರು. ಆದರೆ ಎರಡನೇ ಮತ್ತು ಮೂರನೇ ಗೇಮ್‌ನಲ್ಲಿ ಅರ್ಚನಾ ಮತ್ತು ಮಣಿಕಾ ಅವರ ಆಟದ ಶೈಲಿಯನ್ನು ಅರಿತುಕೊಂಡಂತೆ ಆಡಿದ ಜುನ್ ಮತ್ತು ಚೆಂಗ್ ಪಾರಮ್ಯ ಮೆರೆದರು.

ಪುರುಷರ ಸಿಂಗಲ್ಸ್ ವಿಭಾಗದ ಪ್ರೀ-ಕ್ವಾರ್ಟರ್‌ಫೈನಲ್‌ನಲ್ಲಿ ಸತ್ಯನ್ 11-5, 8-11, 7-11, 4-11ರಿಂದ ಸ್ವೀಡನ್‌ನ ಕ್ರಿಸ್ಟಿಯನ್ ಕಾರ್ಲ್‌ಸನ್ ಎದುರು ಎಡವಿದರು. ಮಹಿಳಾ ಸಿಂಗಲ್ಸ್ ಪ್ರೀ-ಕ್ವಾರ್ಟರ್‌ನಲ್ಲಿ ಜರ್ಮನಿಯ ಯಿಂಗ್ ಹಾನ್ 11-5, 11-2, 11-4ರಿಂದ ಮಣಿಕಾ ಅವರಿಗೆ ಸೋಲುಣಿಸಿದರು..

ಟೆನಿಸ್: ಬೋಪಣ್ಣ, ಸಾನಿಯಾಗೆ ನಿರಾಸೆ

ಮಿಯಾಮಿ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಸಾನಿಯಾ ಮಿರ್ಜಾ ಅವರು ಮಿಯಾಮಿ ಓಪನ್ ಟೆನಿಸ್ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಮಂಗಳವಾರ ತಡರಾತ್ರಿ ನಡೆದ ಪಂದ್ಯಗಳಲ್ಲಿ ಅವರು ಸೋತರು.

ಪುರುಷರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಮತ್ತು ಕೆನಡಾದ ಡೆನಿಸ್ ಶಪೊವಲೊವ್ ಜೋಡಿಯನ್ನು ವೆಸ್ಲಿ ಕೂಲಾಫ್ ಮತ್ತು ನೀಲ್ ಸ್ಕುಪ್‌ಸ್ಕಿ 6–2, 6–1ರಲ್ಲಿ ಮಣಿಸಿದರು. ವೆಸ್ಲಿ ನೆದರ್ಲೆಂಡ್ಸ್‌ನವರು ಮತ್ತು ನೀಲ್ ಬ್ರಿಟನ್ ಆಟಗಾರ.

2019ರಿಂದ ಆಗೊಮ್ಮೆ ಈಗೊಮ್ಮೆ ಜೊತೆಯಾಗಿ ಆಡುತ್ತಿರುವ ರೋಹನ್ ಮತ್ತು ಕೆನಡಾದ ಡೆನಿಸ್ ಅವರು ಇಲ್ಲಿ ಶ್ರೇಯಾಂಕ ರಹಿತ ಆಟಗಾರರಾಗಿದ್ದರು.

ಸಾನಿಯಾ ಮಿರ್ಜಾ ಮತ್ತು ಬೆಲ್ಜಿಯಂನ ಕರ್ಸ್ಟನ್ ಫ್ಲಿಪ್‌ಕೆನ್ಸ್ ಅವರನ್ನು ರಷ್ಯಾದ ಎಕಟೆರಿನಾ ಅಲೆಕ್ಸಾಂಡ್ರೋವಾ ಮತ್ತು ಚೀನಾದ ಜಾಂಕ್ಸ್ವಾನ್ ಯಾಂಗ್ 6–3, 7–6 (3) ರಲ್ಲಿ ಸೋಲಿಸಿದರು.

ಕ್ರಿಕೆಟಿಗ ರಾಹುಲ್ ಮಂಕಡ್ ನಿಧನ

ಮುಂಬೈ (ಪಿಟಿಐ): ಮಾಜಿ ಕ್ರಿಕೆಟಿಗ, ಮುಂಬೈ ತಂಡದ ಪರ ಆಡಿದ್ದ ರಾಹುಲ್ ಮಂಕಡ್ (66) ಲಂಡನ್‌ನಲ್ಲಿ ನಿಧನರಾದರು.

ಕ್ರಿಕೆಟ್ ದಂತಕತೆ ವಿನೂ ಮಂಕಡ್ ಅವರ ಪುತ್ರ ರಾಹುಲ್ ಕೆಲವು ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರಿಯರಿದ್ದಾರೆ.

ಮುಂಬೈ ತಂಡದ ಮಾಜಿ ಆಟಗಾರ ಶಿಶಿರ್ ಹಟ್ಟಂಗಡಿ ತಮ್ಮ ಫೇಸಬುಕ್ ಪೋಸ್ಟ್‌ನಲ್ಲಿ ರಾಹುಲ್ ಅವರ ನಿಧನದ ಸುದ್ದಿ ತಿಳಿಸಿದ್ದಾರೆ. ಬಲಗೈ ಬ್ಯಾಟರ್ ಮತ್ತು ಎಡಗೈ ಸ್ಪಿನ್ನರ್ ಆಗಿದ್ದ ರಾಹುಲ್, 47 ಪ್ರಥಮದರ್ಜೆ ಪಂದ್ಯಗಳನ್ನು ಆಡಿ 2,111 ರನ್ ಗಳಿಸಿದ್ದರು. ಅದರಲ್ಲಿ ಐದು ಶತಕ ಮತ್ತು 12 ಅರ್ಧಶತಕಗಳಿದ್ದವು. 1972–85ರ ಅವಧಿಯಲ್ಲಿ ಅವರು ಮುಂಬೈ ತಂಡವನ್ನು ಪ್ರತಿನಿಧಿಸಿದ್ದರು.